ಬುಧವಾರ, ಜುಲೈ 14, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 195 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ–ಅಗಲ: ಕೇರಳಕ್ಕೆ ಝಿಕಾ ಕಳವಳ

ಕೇರಳ: ಮತ್ತೆ 4 ಝಿಕಾ ವೈರಸ್ ಪ್ರಕರಣ ಪತ್ತೆ 6

‘ಭಯೋತ್ಪಾದನೆ ತಡೆ ಕಾಯ್ದೆ ಭಿನ್ನಮತ ದಮನಕ್ಕಲ್ಲ’ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,769 ▲	15,812 ▲	₹49,650 (ಬೆಂಗಳೂರು)	₹71,400 (ಬೆಂಗಳೂರು)	74.49 ▲

ಎಸ್ಸೆಸ್ಸೆಲ್ಸಿ ಪರೀಕ್ಷಾ ಸಮಯದಲ್ಲಿ ಖಾಸಗಿ ಶಾಲೆಗಳ ಹೊಸ ಅಸ್ತ್ರ • ವಿದ್ಯಾರ್ಥಿ–ಪೋಷಕರಿಗೆ ಸಂಕಟ

ಶುಲ್ಕ ಕಟ್ಟಿದರಷ್ಟೇ ಹಾಲ್ ಟಿಕೆಟ್

• ರಾಜೇಶ್ ರೈ ಚಟ್ಲ

ಬೆಂಗಳೂರು: ಶುಲ್ಕ ಪಾವತಿಸುವಂತೆ ಪೋಷಕರ ಮೇಲೆ ಒತ್ತಡ ಹೇರಲು ಆನ್‌ಲೈನ್ ತರಗತಿ ಸ್ಥಗಿತ, ವರ್ಗಾವಣೆ ಪ್ರಮಾಣಪತ್ರ ನಿರಾಕರಣೆ ಸೇರಿದಂತೆ ಹಲವು ತಂತ್ರಗಾರಿಕೆ ಬಳಸಿದ್ದ ಖಾಸಗಿ ಶಾಲಾ ಆಡಳಿತ ಮಂಡಳಿಗಳು, ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಹಾಲ್ ಟಿಕೆಟ್ (ಪರೀಕ್ಷಾ ಪ್ರವೇಶಪತ್ರ) ನಿರಾಕರಿಸುವ ಮೂಲಕ ಹೊಸ ಅಸ್ತ್ರ ಪ್ರಯೋಗಿಸುತ್ತಿವೆ.

ಇದೇ 19 ಮತ್ತು 22ರಂದು ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಲು ಸಾರ್ವಜನಿಕ ಶಿಕ್ಷಣ ಇಲಾಖೆ ನಿರ್ಧರಿಸಿದೆ. ಪರೀಕ್ಷೆಗೆ ನೋಂದಣಿ ಮಾಡಿಕೊಂಡಿರುವ ವಿದ್ಯಾರ್ಥಿಗಳಿಗೆ ಸೋಮವಾರದಿಂದ (ಜುಲೈ 12) ಹಾಲ್‌ಟಿಕೆಟ್ ನೀಡಲಾಗುತ್ತಿದೆ. ಆದರೆ, 2020–21ನೇ ಶೈಕ್ಷಣಿಕ ಸಾಲಿನ ಪೂರ್ಣ ಶುಲ್ಕ ಪಾವತಿಸಿದ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ಪತ್ರ ನೀಡಲಾಗುವುದು ಎಂದು ಕೆಲವು ಖಾಸಗಿ ಶಾಲಾ ಆಡಳಿತ ಮಂಡಳಿಗಳು ಷರತ್ತು ವಿಧಿಸಿವೆ.

ಇದು, ಪೋಷಕರನ್ನು ಸಂಕಷ್ಟಕ್ಕೆ ದೂಡಿದೆ. ಅಲ್ಲದೇ, ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಕೋವಿಡ್ ಕಾರಣದಿಂದ ಶಾಲೆಗಳು ಮುಚ್ಚಿದ್ದು, ಶುಲ್ಕದ ವಿಚಾರದಲ್ಲಿ ಉಂಟಾಗಿದ್ದ ಗೊಂದಲ ಪರಿಹರಿಸಲು ಕಳೆದ ಜ. 29ರಂದು ಸುತ್ತೋಲೆ ಹೊರಡಿಸಿದ್ದ ಸರ್ಕಾರ, 2020–21ನೇ ಸಾಲಿಗೆ ಮಾತ್ರ ಅನ್ವಯಿಸುವಂತೆ ಶೇ 70ರಷ್ಟು ಬೋಧನಾ ಶುಲ್ಕ ಮಾತ್ರ ಪಡೆಯಬೇಕು ಎಂದು ಆದೇಶಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಖಾಸಗಿ ಶಾಲಾ ಆಡಳಿತ ಮಂಡಳಿಗಳು ಹೈಕೋರ್ಟ್ ಮೆಟ್ಟಿಲೇರಿದ್ದು, ಪ್ರಕರಣ ವಿಚಾರಣೆ ಹಂತದಲ್ಲಿದೆ.

ಎಸ್ಸೆಸ್ಸೆಲ್ಸಿ ತರಗತಿಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸರಳೀಕೃತ ವ್ಯವಸ್ಥೆಯಲ್ಲಿ ಪರೀಕ್ಷೆ ನಡೆಸಲು ಶಿಕ್ಷಣ ಇಲಾಖೆ ಎಲ್ಲ ಸಿದ್ಧತೆ ಮಾಡಿಕೊಂಡಿದೆ. ಆದರೆ, ಪರೀಕ್ಷೆಯನ್ನೇ ಖಾಸಗಿ ಶಾಲೆಗಳು ಗುರಿ ಮಾಡಿಕೊಂಡಿವೆ. ವಿದ್ಯಾರ್ಥಿಗಳು ಪೂರ್ಣ ಶುಲ್ಕ ಪಾವತಿಸಿದರೆ ಮಾತ್ರ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡುವುದಾಗಿ ಬೆದರಿಕೆ ಒಡ್ಡಿವೆ.

‘ಶುಲ್ಕ ಕಡಿತಗೊಳಿಸಿದ ಪ್ರಕರಣದಲ್ಲಿ ಹೈಕೋರ್ಟ್ ಅಂತಿಮ ತೀರ್ಪು ನೀಡಿಲ್ಲ. ಬೋಧನಾ ಶುಲ್ಕದಲ್ಲಿ ಶೇ 30ರಷ್ಟು ಕಡಿತಗೊಳಿಸಿರುವ ಸರ್ಕಾರದ ಆದೇಶ ಪಾಲಿಸಬೇಕೇ ಅಥವಾ ಶಾಲೆಗಳು ನಿಗದಿಪಡಿಸಿದ ಶುಲ್ಕವನ್ನು ಪಡೆಯಬಹುದೇ ಎಂಬ ವಿಷಯದಲ್ಲಿ ಹೈಕೋರ್ಟ್ ಯಾವುದೇ ನಿರ್ದೇಶನ ನೀಡಿಲ್ಲ. ಪೂರ್ಣ ಶುಲ್ಕ ಪಾವತಿಸಲೇಬೇಕು. ಸರ್ಕಾರದ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದರೆ, ಹೆಚ್ಚುವರಿಯಾಗಿ ಪಡೆದ ಶುಲ್ಕ ಮರಳಿಸಲಾಗುವುದು’ ಎಂದೂ ಶಾಲಾಡಳಿತ ಮಂಡಳಿಗಳು ಹೇಳುತ್ತಿವೆ.

ವಿನಾಯಿತಿ ಕೊಟ್ಟರೂ ಕಟ್ಟಿಲ್ಲ: ‘ಶಿಕ್ಷಣ ಇಲಾಖೆ ಶುಲ್ಕ ಕಟ್ಟಿಸಿಕೊಳ್ಳದೆ ಪರೀಕ್ಷೆ ನಡೆಸುತ್ತಿದೆಯೇ? ಶಿಕ್ಷಕರು ಪಾಠ ಮಾಡಿಲ್ಲವೇ? ಸರ್ಕಾರ ನಿಗದಿಪಡಿಸಿರುವ ಕನಿಷ್ಠ ಶುಲ್ಕವನ್ನೂ ಬಹುತೇಕರು ಕಟ್ಟಿಲ್ಲ. ಶುಲ್ಕ ಕಟ್ಟದವರಿಗೆ ಕಟ್ಟಿ ಎಂದು ಹೇಳುತ್ತಿದ್ದೇವೆ. ವಿದ್ಯಾರ್ಥಿಗಳಿಂದ ಶುಲ್ಕ ಕೇಳುವುದೂ ತಪ್ಪೇ?’ ಎಂದು ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಹೇಳಿದರು.

‘ಸರ್ಕಾರ ಶೇ 30ರಷ್ಟು ವಿನಾಯಿತಿ ಕೊಟ್ಟರೂ ಅನೇಕರು ಶುಲ್ಕ ಪಾವತಿಸಿಲ್ಲ. ಭಾಗಶಃ ಕಟ್ಟಿದವರೂ, ಶುಲ್ಕವನ್ನೇ ಕಟ್ಟದವರೂ ಇದ್ದಾರೆ. ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿ ತೂಗುವುದು ಸರಿಯಲ್ಲ’ ಎಂದರು.

5ನೇ ಪುಟ ನೋಡಿ

ಎಲ್ಲಿಂದ ಕಟ್ಟಲಿ: ಪೋಷಕರ ಅಳಲು

‘ನನ್ನ ಮಗ ಎಸ್ಸೆಸ್ಸೆಲ್ಸಿ ಓದುತ್ತಿದ್ದು, ಶಾಲೆಯವರು ನಿಗದಿಪಡಿಸಿದ್ದ ₹ 41 ಸಾವಿರ ಶುಲ್ಕದಲ್ಲಿ ಈಗ ₹ 26,500 ಪಾವತಿಸಿದ್ದೇನೆ. ಸರ್ಕಾರದ ಆದೇಶದಂತೆ ಶೇ 70ರಷ್ಟು ಶುಲ್ಕ ಪಾವತಿಸಲು ಬದ್ಧ. ಆದರೆ, ಶಾಲೆಯವರು ಉಳಿದ ₹ 14,500 ಕಟ್ಟದಿದ್ದರೆ ಹಾಲ್‌ಟಿಕೆಟ್ ಕೊಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ’ ಎಂದು ಬೆಂಗಳೂರಿನ ಪ್ರತಿಷ್ಠಿತ ಶಾಲೆಯೊಂದರಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಯ ಪೋಷಕರೊಬ್ಬರು ನೋವು ತೋಡಿಕೊಂಡಿದ್ದಾರೆ.

‘ಶುಲ್ಕ ಕಡಿತಗೊಳಿಸಿದ ಆದೇಶ ಮಾಡಿದ ಶಿಕ್ಷಣ ಸಚಿವರನ್ನೇ ಕರೆದುಕೊಂಡು ಬಂದರೂ ಪೂರ್ಣ ಶುಲ್ಕ ಕಟ್ಟದಿದ್ದರೆ ಹಾಲ್‌ಟಿಕೆಟ್ ಕೊಡಲ್ಲ. ನಾವು ನಿಗದಿಪಡಿಸಿರುವ ಶುಲ್ಕದಲ್ಲಿ ನಯಾ ಪೈಸೆ ಕಡಿಮೆ ಮಾಡಲ್ಲವೆಂದು ಷರತ್ತು ಹಾಕಿದ್ದಾರೆ’ ಎಂದರು.

ಪ್ರಜಾವಾಣಿ ವಿಶೇಷ

ಪೂರ್ಣ ಶುಲ್ಕ ಪಾವತಿಸುವಂತೆ ಒತ್ತಡ ಹೇರುತ್ತಿರುವುದು ಗಮನಕ್ಕೆ ಬಂದಿದೆ. ಈ ಬಗ್ಗೆ ಬಿಇಒಗಳಿಗೆ ಪೋಷಕರು ದೂರು ನೀಡಿದರೆ ಡಿಡಿಪಿಐಗಳು ಕ್ರಮ ತೆಗೆದುಕೊಳ್ಳಲಿದ್ದಾರೆ

ಎಸ್. ಸುರೇಶ್‌ಕುಮಾರ್
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ

ಶಿಕ್ಷಣ ಸಚಿವರು, ಸರ್ಕಾರ ತಕ್ಷಣ ಮಧ್ಯ ಪ್ರವೇಶಿಸಿ ಅಂಥ ಶಾಲೆಗಳ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕು, ಸಹಾಯವಾಣಿ ಆರಂಭಿಸಿ ವಿದ್ಯಾರ್ಥಿಗಳು, ಪೋಷಕರ ನೆರವಿಗೆ ನಿಲ್ಲಬೇಕು

ವಿ.ಪಿ. ನಿರಂಜನಾರಾಧ್ಯ
ಶಿಕ್ಷಣ ತಜ್ಞ

ಜಾಗೃತಿ: ಬೆಂಗಳೂರಿನ ಕೇಂದ್ರ ಬಸ್ ನಿಲ್ದಾಣದಲ್ಲಿ ವೈದ್ಯಕೀಯ ಸಿಬ್ಬಂದಿಯೊಬ್ಬರು ಕೋವಿಡ್ ತಪಾಸಣೆ ಮಾಡಿಕೊಳ್ಳುವಂತೆ ಪ್ರಯಾಣಿಕರಲ್ಲಿ ಮಂಗಳವಾರ ಜಾಗೃತಿ ಮೂಡಿಸಿದರು

ಪ್ರಜಾವಾಣಿ ಚಿತ್ರ /ಪ್ರಶಾಂತ್ ಎಚ್. ಜಿ

ಮೇಕೆದಾಟು: ಕೇಂದ್ರ ಜಲಶಕ್ತಿ ಸಚಿವರ ಜತೆ ಸಿ.ಎಂ ಮಾತುಕತೆ

ರಾಜ್ಯಕ್ಕೆ ನ್ಯಾಯದ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಡಿಯುವ ನೀರಿನ ಉದ್ದೇಶದ ಮೇಕೆದಾಟು ಯೋಜನೆಗೆ ಸಂಬಂಧಿಸಿದ ಕರ್ನಾಟಕದ ಪ್ರಸ್ತಾವನೆಗೆ ನ್ಯಾಯ ಒದಗಿಸುವುದಾಗಿ ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರು ಭರವಸೆ ನೀಡಿದ್ದಾರೆ.

ಜಲ ಜೀವನ್ ಮಿಷನ್ ಯೋಜನೆಯ ಪ್ರಗತಿ ಪರಿಶೀಲನೆಗಾಗಿ ಬೆಂಗಳೂರಿಗೆ ಬಂದಿದ್ದ ಶೆಖಾವತ್ ಅವರ ಜತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮೇಕೆದಾಟು ಸೇರಿದಂತೆ ರಾಜ್ಯದ ವಿವಿಧ ನೀರಾವರಿ ಯೋಜನೆಗಳಿಗೆ ಕೇಂದ್ರದ ಅನುಮತಿ ಬಾಕಿ ಇರುವ ಬಗ್ಗೆ ಮಾತುಕತೆ ನಡೆಸಿದರು.

ರಾಜ್ಯಕ್ಕೆ ಹಂಚಿಕೆಯಾಗಿರುವ ಕಾವೇರಿ ನದಿ ನೀರಿನ ಪಾಲಿನಲ್ಲಿ ಕುಡಿಯುವ ನೀರು ಹಾಗೂ ವಿದ್ಯುತ್ ಉತ್ಪಾದನೆಗಾಗಿ ಮೇಕೆದಾಟು ಯೋಜನೆಯನ್ನು ರಾಜ್ಯ ಸರ್ಕಾರ ಕೈಗೆತ್ತಿಕೊಂಡಿದೆ. ಆದರೆ, ತಮಿಳುನಾಡು ಆಕ್ಷೇಪ ಎತ್ತಿದೆಯಲ್ಲದೇ, ಯೋಜನೆಗೆ ಅನುಮತಿ ನೀಡಬಾರದು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿರುವ ನಿರ್ಣಯವನ್ನು ತಮಿಳುನಾಡಿನ ಸರ್ವಪಕ್ಷ ಸಭೆ ಕೈಗೊಂಡಿದೆ. ಈ ಬೆಳವಣಿಗೆಯ ಬೆನ್ನಲ್ಲೇ, ಕೇಂದ್ರ ಜಲಶಕ್ತಿ ಸಚಿವರ ಹೇಳಿಕೆ ಮಹತ್ವ ಪಡೆದಿದೆ.

ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಶೆಖಾವತ್, ಮೇಕೆದಾಟು ಯೋಜನೆಯ ಬಗ್ಗೆ ಸಂಪೂರ್ಣ ಅರಿವಿದ್ದು, ಕರ್ನಾಟಕಕ್ಕೆ ನ್ಯಾಯ ಒದಗಿಸುವುದಾಗಿ ಹೇಳಿದರು.

5ನೇ ಪುಟ ನೋಡಿ

ನಿಯಮಗಳ ಸಲ್ಲಿಕೆ

ಮೇಕೆದಾಟು ಸಮತೋಲನ ಜಲಾಶಯ ನಿರ್ಮಾಣದ ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಸಿದ್ಧಪಡಿಸಲಾಗಿದ್ದ ನಿಯಮ–ನಿಬಂಧನೆಗಳ (ಟರ್ಮ್ಸ್ ಆಫ್ ರೆಫರೆನ್ಸ್) ಪ್ರತಿಯನ್ನು ಯೋಜನೆಗೆ ಪರಿಸರ ಅನುಮತಿ ಪಡೆಯುವುದಕ್ಕಾಗಿ ಕಳುಹಿಸಿಕೊಡಲಾಗಿದೆ ಎಂದು ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಇದಕ್ಕೆ ಕೇಂದ್ರ ಸರ್ಕಾರ ನೆರವು ನೀಡಲಿದೆ. ಈ ಯೋಜನೆಯಿಂದ ಚಿತ್ರದುರ್ಗ, ದಾವಣಗೆರೆ, ತುಮಕೂರು ಮತ್ತು ಚಿಕ್ಕಮಗಳೂರು ಜಿಲ್ಲೆಯ ಕೆಲವು ಭಾಗಗಳಿಗೆ ನೀರಾವರಿಗೆ ಅನುಕೂಲವಾಗಲಿದೆ. ಈ ಯೋಜನೆಗೆ ಕೇಂದ್ರ ಸರ್ಕಾರದ ಒಪ್ಪಿಗೆ ಸಿಗುವ ಅಂತಿಮ ಹಂತದಲ್ಲಿದೆ. ಯಾವುದೇ ಕ್ಷಣದಲ್ಲಾದರೂ ಆದೇಶ ಹೊರ ಬೀಳುವ ಸಾಧ್ಯತೆ ಇದೆ ಎಂದು ಜಲಸಂಪನ್ಮೂಲ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೇಕೆದಾಟು ವಿಚಾರವಾಗಿ ತಮಿಳುನಾಡು ತೆಗೆದುಕೊಂಡಿರುವ ನಿರ್ಧಾರಕ್ಕೂ ನಮಗೂ ಸಂಬಂಧವಿಲ್ಲ, ನಮ್ಮ ಯೋಜನೆ ಪೂರ್ಣಗೊಳಿಸುವುದು ನಮ್ಮ ಹಕ್ಕು ಮತ್ತು ಆದ್ಯತೆ

ಬಿ.ಎಸ್.ಯಡಿಯೂರಪ್ಪ
ಮುಖ್ಯಮಂತ್ರಿ

ಮೇಕೆದಾಟು ಕಾನೂನು ಬದ್ಧವಾದ ಯೋಜನೆ. ಸರ್ಕಾರ ಕೂಡಲೇ ಸರ್ವಪಕ್ಷಗಳ ಸಭೆ ಕರೆದು ಚರ್ಚಿಸಿ, ಅಡೆತಡೆ ಆಗದಂತೆ ಕೇಂದ್ರದ ಮೇಲೆ ಒತ್ತಡ ಹೇರಬೇಕು

ಎಂ.ಬಿ.ಪಾಟೀಲ
ಶಾಸಕ, ಮಾಜಿ ಜಲಸಂಪನ್ಮೂಲ ಸಚಿವ

ಒಳ ಪುಟಗಳು
ಧಾರಾಕಾರ ಮಳೆ: ಮಹಿಳೆ ಸಾವು 5

ಗಣಿಗಾರಿಕೆಯೇ ಪಕ್ಷಗಳ ಚುನಾವಣಾ ನಿಧಿ! 4
ಕೋವಿಡ್: 3 ತಿಂಗಳಲ್ಲಿ ಕನಿಷ್ಠ ಮರಣ ಪ್ರಕರಣ 5

ತೆರಿಗೆ ಪಾವತಿಗೆ ಹಿಂದೇಟು: ನಟ ವಿಜಯ್‌ಗೆ ತರಾಟೆ

ಚೆನ್ನೈ: ತೆರಿಗೆ ಪಾವತಿಸುವುದರಿಂದ ತಪ್ಪಿಸಿಕೊಳ್ಳುವ ಮೂಲಕ ನೀವು ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತೀರಿ ಎಂದು ಮದ್ರಾಸ್ ಹೈಕೋರ್ಟ್ ಜನಪ್ರಿಯ ನಟ ವಿಜಯ್ ಅವರನ್ನು ಮಂಗಳವಾರ ತರಾಟೆಗೆ ತೆಗೆದುಕೊಂಡಿತು.

ಸಿನಿಮಾದ ಹೀರೋ ಆಗಿ ಮಾತ್ರ ಉಳಿಯಬೇಡಿ, ನಿಜ ಜೀವನದಲ್ಲಿಯೂ ಹೀರೋ ತರ ವರ್ತಿಸಿ ಎಂದು ಸಲಹೆ ನೀಡಿತು.

ಬ್ರಿಟನ್‌ನಿಂದ 2012ರಲ್ಲಿ ತಾವು ತಂದಿದ್ದ ಐಷಾರಾಮಿ ‘ರೋಲ್ಸ್ ರಾಯ್ಸ್ ಘೋಸ್ಟ್ ಕಾರ್’ಗೆ ತಮಿಳುನಾಡು ಸರ್ಕಾರ ಪ್ರವೇಶ ತೆರಿಗೆ ವಿಧಿಸಿರುವುದರಿಂದ ವಿನಾಯಿತಿ ನೀಡುವಂತೆ ಕೋರಿ ವಿಜಯ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಎಂ.ಸುಬ್ರಮಣಿಯಂ ಮೇಲಿನಂತೆ ಹೇಳಿದ್ದಾರೆ.

5ನೇ ಪುಟ ನೋಡಿ

ಕೋವಿಡ್ ಮೂರನೇ ಅಲೆ ತಡೆಗೆ ಕೈಜೋಡಿಸಲು ಪ್ರಧಾನಿ ಮನವಿ

ಪ್ರವಾಸಿಗರ ಮೈಮರೆವು: ಕಳವಳ

ನವದೆಹಲಿ (ಪಿಟಿಐ): ಮಾರುಕಟ್ಟೆ, ಗಿರಿಧಾಮ ಹಾಗೂ ಪ್ರವಾಸಿ ತಾಣಗಳಲ್ಲಿ ಜನರು ಮಾಸ್ಕ್ ಧರಿಸದೇ, ಅಂತರ ಕಾಯ್ದುಕೊಳ್ಳದೇ ಗುಂಪು ಗುಂಪಾಗಿ ಸೇರುತ್ತಿರುವುದರ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಕಳವಳ ವ್ಯಕ್ತಪಡಿಸಿದರು. ಕೋವಿಡ್–19ರ ಮೂರನೇ ಅಲೆಯನ್ನು ತಡೆಯಲು ಎಲ್ಲರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಈಶಾನ್ಯ ರಾಜ್ಯಗಳಾದ ಅಸ್ಸಾಂ, ನಾಗಾಲ್ಯಾಂಡ್, ತ್ರಿಪುರಾ, ಸಿಕ್ಕಿಂ, ಮಣಿಪುರ, ಮೇಘಾಲಯ, ಅರುಣಾಚಲ ಪ್ರದೇಶ ಹಾಗೂ ಮಿಜೋರಾಂ ಮುಖ್ಯಮಂತ್ರಿಗಳೊಂದಿಗೆ ಮಂಗಳವಾರ ನಡೆದ ವರ್ಚುವಲ್ ಸಭೆಯಲ್ಲಿ ಮೋದಿ ಮಾತನಾಡಿದರು. ‘ಈ ಭಾಗದ ಕೆಲವು ಜಿಲ್ಲೆಗಳಲ್ಲಿ ಕೋವಿಡ್–19 ಸ್ಥಿತಿಯು ಗಂಭೀರವಾಗಿತ್ತು. ಆದ್ದರಿಂದ ಇಲ್ಲಿ ವೈರಸ್ ಸೋಂಕು ಮತ್ತೆ ವ್ಯಾಪಿಸದಂತೆ ನಿಗಾ ವಹಿಸಬೇಕು ಹಾಗೂ ಕಾರ್ಯತತ್ಪರರಾಗಬೇಕು’ ಎಂದು ಮುಖ್ಯಮಂತ್ರಿಗಳಿಗೆ ಸೂಚಿಸಿದರು.

ಕೊರೊನಾ ವೈರಸ್ ಕಾರಣದಿಂದಾಗಿ ಪ್ರವಾಸೋದ್ಯಮ, ವ್ಯಾಪಾರ–ವಹಿವಾಟಿಗೆ ತೀವ್ರ ಪೆಟ್ಟು ಬಿದ್ದಿದ್ದು ನಿಜ. ಆದರೆ, ಕೋವಿಡ್ ಮಾರ್ಗಸೂಚಿಯನ್ನು ಪಾಲಿಸದೇ ಪ್ರವಾಸಿತಾಣಗಳಲ್ಲಿ ಜಮಾಯಿಸುವುದು ಆತಂಕಕ್ಕೆ ಕಾರಣವಾಗಿದೆ ಎಂದ ಅವರು, ಇಂಥ ನಡೆ ಸರಿಯಲ್ಲ ಎಂದರು.

‘ಅಜಾಗರೂಕತೆ, ಗುಂಪಾಗಿ ಜಮಾಯಿಸುವುದು ಕೋವಿಡ್–19 ಪ್ರಕರಣಗಳ ಹೆಚ್ಚಳಕ್ಕೆ ಕಾರಣವಾಗುತ್ತದೆ ಎಂದು ತಜ್ಞರು ಪದೇ ಪದೇ ಎಚ್ಚರಿಕೆ ನೀಡುತ್ತಿದ್ದಾರೆ. ನಾವು ಕೂಡ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು’ ಎಂದರು.

ಭಾರತದ ಮೊದಲ ಕೋವಿಡ್ ರೋಗಿಯಲ್ಲಿ ಮತ್ತೊಮ್ಮೆ ಸೋಂಕು ದೃಢ

ತ್ರಿಶ್ಶೂರ್,ಕೇರಳ (ಪಿಟಿಐ): ‘ಭಾರತದ ಮೊದಲ ಕೋವಿಡ್ ರೋಗಿ, ವೈದ್ಯಕೀಯ ವಿದ್ಯಾರ್ಥಿನಿಗೆ ಮತ್ತೊಮ್ಮೆ ಸೋಂಕು ತಗುಲಿದೆ’ ಎಂದು ತ್ರಿಶ್ಶೂರ್ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಜೆ ರೀನಾ ತಿಳಿಸಿದ್ದಾರೆ.

‘ಅವರಿಗೆ ಕೋವಿಡ್–19 ತಗುಲಿರುವುದು ಆರ್‌ಟಿ–ಪಿಸಿಆರ್ ಪರೀಕ್ಷೆಯಲ್ಲಿ ದೃಢಪಟ್ಟಿದೆ. ಆದರೆ, ಆ್ಯಂಟಿಜನ್ ಪರೀಕ್ಷೆ ಫಲಿತಾಂಶ ನೆಗೆಟಿವ್ ಬಂದಿತ್ತು’ ಎಂದು ಅವರು ಮಾಹಿತಿ ನೀಡಿದ್ದಾರೆ.

‘ಹೆಚ್ಚಿನ ಅಧ್ಯಯನಕ್ಕಾಗಿ ನವದೆಹಲಿಗೆ ತೆರಳಲಿದ್ದ ಅವರು, ಆರ್‌ಟಿ–ಪಿಸಿಆರ್ ಪರೀಕ್ಷೆಗೆ ಒಳಗಾಗಿದ್ದರು. ಸೋಂಕು ದೃಢಪಟ್ಟ ಕಾರಣ ಸದ್ಯ ಅವರು ಮನೆಯಲ್ಲೇ ಪ್ರತ್ಯೇಕವಾಗಿ ಇದ್ದಾರೆ. ಅವರ ಆರೋಗ್ಯವೂ ಸ್ಥಿರವಾಗಿದೆ’ ಎಂದು ತಿಳಿಸಿದ್ದಾರೆ. ಚೀನಾದ ವುಹಾನ್‌ನಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದ ಈ ವಿದ್ಯಾರ್ಥಿನಿ ರಜೆಯಲ್ಲಿ ಭಾರತಕ್ಕೆ ಮರಳಿದ್ದರು. 2020ರ ಜನವರಿ 30ರಂದು ಅವರಿಗೆ ಕೋವಿಡ್ ದೃಢಪಟ್ಟಿತ್ತು.

ಕೋವಿಡ್‌ನ ಮೂರನೇ ಅಲೆ ಬರುವ ಮುನ್ನವೇ ಪ್ರವಾಸ, ಮೋಜು ಮುಗಿಸಿಬಿಡಬೇಕು ಎಂದು ಜನರು ತುದಿಗಾಲಿನಲ್ಲಿ ನಿಂತಿದ್ದಾರೆ. ಈ ಮನಸ್ಥಿತಿ ತಪ್ಪು

ನರೇಂದ್ರ ಮೋದಿ, ಪ್ರಧಾನಿ

ಐಬಿಪಿಎಸ್: ಪ್ರಾದೇಶಿಕ ಭಾಷೆಗೆ ಅವಕಾಶ; ಪರಿಶೀಲನೆಗೆ ಸಮಿತಿ

ಪರೀಕ್ಷಾ ಪ್ರಕ್ರಿಯೆ ತಡೆ ಹಿಡಿದ ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಬ್ಯಾಂಕಿಂಗ್ ಸಿಬ್ಬಂದಿ ನೇಮಕಾತಿ ಸಂಸ್ಥೆ (ಐಬಿಪಿಎಸ್) ಆಯೋಜಿಸುವ ನೇಮಕಾತಿ ಪರೀಕ್ಷೆಯನ್ನು ಪ್ರಾದೇಶಿಕ ಭಾಷೆಯಲ್ಲಿ ಬರೆಯಲು ಅವಕಾಶ ನೀಡುವಂತೆ ಬೇಡಿಕೆ ಹೆಚ್ಚಿರುವ ಕಾರಣ ಪರಿಶೀಲನಾ ಸಮಿತಿ ರಚಿಸಿರುವ ಕೇಂದ್ರ ಸರ್ಕಾರವು ಪರೀಕ್ಷಾ ಪ್ರಕ್ರಿಯೆಗೆ ತಡೆ ನೀಡಿದೆ.

15 ದಿನಗಳಲ್ಲಿ ವರದಿ ನೀಡುವಂತೆ ಪರಿಶೀಲನಾ ಸಮಿತಿಗೆ ಸೂಚಿಸಲಾಗಿದೆ. ವರದಿ ಸಲ್ಲಿಕೆ ಆಗುವವರೆಗೆ ಈಗ ಆಯೋಜಿಸಲಾಗುತ್ತಿರುವ ಪರೀಕ್ಷೆಯನ್ನು ತಡೆ ಹಿಡಿಯಲಾಗುತ್ತದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಮಂಗಳವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಗ್ರಾಮೀಣ ಬ್ಯಾಂಕ್ ಸಿಬ್ಬಂದಿ ನೇಮಕಾತಿ ಪರೀಕ್ಷೆಯನ್ನು ಕನ್ನಡದಲ್ಲಿ ಬರೆಯಲು ಅವಕಾಶ ನೀಡಿರುವಂತೆಯೇ, ಸಾರ್ವಜನಿಕ ವಲಯದ ರಾಷ್ಟ್ರೀಕೃತ ಬ್ಯಾಂಕ್ ಸಿಬ್ಬಂದಿ ನೇಮಕಾತಿಯ ಪರೀಕ್ಷೆಗಳನ್ನೂ ಕನ್ನಡದಲ್ಲಿ ಬರೆಯಲು ಅವಕಾಶ ನೀಡುವಂತೆ ರಾಜ್ಯದಿಂದಲೂ ಆಗ್ರಹ ಕೇಳಿಬಂದಿದೆ.

ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ (ಆರ್‌ಆರ್‌ಬಿ) ಸಿಬ್ಬಂದಿ ನೇಮಕಾತಿ ಪರೀಕ್ಷೆಯನ್ನು ಪ್ರಾದೇಶಿಕ ಭಾಷೆಗಳಲ್ಲಿ ಬರೆಯಲು ಅವಕಾಶ ನೀಡಲಾಗುವುದು ಎಂದು 2019ರಲ್ಲಿ ಸಂಸತ್‌ನಲ್ಲಿ ಹಣಕಾಸು ಸಚಿವರು ಹೇಳಿಕೆ ನೀಡಿ, ನಂತರ ಅವಕಾಶ ಕೊಟ್ಟರು.

ಆದರೆ, ‘ದೇಶದಲ್ಲಿ 22 ಅಧಿಕೃತ ಭಾಷೆಗಳಿದ್ದರೂ ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಬರೆಯಲು ಅವಕಾಶ ನೀಡುವ ಸಂಬಂಧ, ಪ್ರಾದೇಶಿಕ ಭಾಷೆಗಳಲ್ಲಿ ಐಬಿಪಿಎಸ್ ಪರೀಕ್ಷೆ ಬರೆಯಲು ನೀಡಿದ್ದ ಅವಕಾಶವನ್ನು ದಿಢೀರ್ ಬದಲಿಸಲಾಗಿದೆ ಎಂಬಂತೆ ಕೆಲವರು ತಪ್ಪು ಹೇಳಿಕೆ ನೀಡುತ್ತಿದ್ದಾರೆ. ಅದು ಸರಿಯಲ್ಲ ಎಂದು ಸಚಿವಾಲಯ ತಿಳಿಸಿದೆ.

ಕೇವಲ ಆರ್‌ಆರ್‌ಬಿಗಳ ಆಫೀಸ್ ಅಸಿಸ್ಟೆಂಟ್ ಹಾಗೂ ಆಫೀಸರ್ ಸ್ಕೇಲ್–I ನೇಮಕಾತಿಗಾಗಿ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲದೆ, ಕೊಂಕಣಿ ಮತ್ತು ಕನ್ನಡ ಸೇರಿದಂತೆ ಒಟ್ಟು 13 ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆಗೆ ಅವಕಾಶ ನೀಡಲಾಗಿತ್ತು. ಈಗಲೂ ಆ ನೇಮಕಾತಿ ಪರೀಕ್ಷೆಯನ್ನು ಪ್ರಾದೇಶಿಕ ಭಾಷೆಗಳಲ್ಲೇ ನಡೆಸಲಾಗುತ್ತಿದೆ ಎಂದು ಸ್ಪಷ್ಟಪಡಿಸಲಾಗಿದೆ.

ಗ್ರಾಮೀಣ ಬ್ಯಾಂಕ್‌ಗಳಲ್ಲಿ ನಡೆಯುವ ನೇಮಕಾತಿಗೆ ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ನಡೆಸಲಾಗುತ್ತಿದೆ. ಅದೇ ಪದ್ಧತಿಯನ್ನು ರಾಷ್ಟ್ರೀಕೃತ ಬ್ಯಾಂಕ್ ನೇಮಕಾತಿ ಪರೀಕ್ಷೆಗಳಲ್ಲೂ ಅನುಸರಿಸಬೇಕು ಎಂದು ಆಗ್ರಹಿಸಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮನು ಬಳಿಗಾರ್ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿ, ಕೇಂದ್ರ ಸರ್ಕಾರದ ಗಮನ ಸೆಳೆಯುವಂತೆ ಕೋರಿದ್ದರು.

ಬ್ಯಾಂಕಿಂಗ್ ಸಿಬ್ಬಂದಿ ನೇಮಕಾತಿ ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆಯಲು ಅವಕಾಶ ನೀಡದ ನರೇಂದ್ರ ಮೋದಿ ಸರ್ಕಾರ ಕನ್ನಡಿಗರಿಗೆ ದ್ರೋಹ ಬಗೆಯುತ್ತ ಬಂದಿದೆ. ಐಬಿಪಿಎಸ್‌ನ ಇತ್ತೀಚಿನ ಸುತ್ತೋಲೆಯ ಮೂಲಕ ಕನ್ನಡ ನಾಡಿಗೆ ದ್ರೋಹ ಎಸಗಲಾಗಿದೆ. ಕೂಡಲೇ ಈ ಅನ್ಯಾಯ ಸರಿಪಡಿಸಬೇಕು ಎಂದು ಕೋರಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟ್ವೀಟ್ ಮೂಲಕ ಆಗ್ರಹಿಸಿದ್ದರು.

ರಾಜ್ಯ ಕೋವಿಡ್ ಅಂಕಿ–ಅಂಶ

28,74,597 ▲	ಒಟ್ಟು ಸೋಂಕಿತರು (28,72,684 ನಿನ್ನೆಯ ವಿವರ)
34,234 ▼	ಸಕ್ರಿಯ ಪ್ರಕರಣಗಳು
28,04,396 ▲	ಗುಣಮುಖರಾದವರು
35,944 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,913	▲
ಗುಣಮುಖ	2,489	▼
ಸಾವು	48	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಇಂದಿನ ಪಾಡ್‌ಕಾಸ್ಟ್ ವಿಶೇಷ
ಝಣ ಝಣ ಕಾಂಚಾಣ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ಫೇಸ್‌ಬುಕ್‌ನಲ್ಲಿ ಐಪಿಎಸ್ ಅಧಿಕಾರಿ ಡಿ. ರೂಪಾ ಮೌದ್ಗಿಲ್ ಆರೋಪ

ಬಾಡಿಗೆ ಟ್ರೋಲರ್ ಬಳಸಿದ ರೋಹಿಣಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರು ತಮ್ಮ ವಿರೋಧಿಗಳ ಬಾಯಿ ಮುಚ್ಚಿಸಲು ಬಾಡಿಗೆ ಟ್ರೋಲರ್‌ಗಳನ್ನು ಬಳಸುತ್ತಾರೆ’ ಎಂದು ಐಪಿಎಸ್ ಅಧಿಕಾರಿ ರೂಪಾ ಮೌದ್ಗಿಲ್ ಅವರು ಫೇಸ್‌ಬುಕ್‌ನಲ್ಲಿ ಬರೆದುಕೊಂಡಿರುವ ಹೇಳಿಕೆ ಈಗ ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಯ ವಸ್ತುವಾಗಿದೆ.

ಜುಲೈ 3ರ ರಾತ್ರಿ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಹಾಕಿರುವ ರೂಪಾ, ವ್ಯಕ್ತಿಯೊಬ್ಬರು ತಮ್ಮೊಂದಿಗೆ ಜೂನ್ 25ರಂದು ವಾಟ್ಸ್ ಆ್ಯಪ್ ಮೂಲಕ ನಡೆಸಿದ ಸಂಭಾಷಣೆಯ ವಿವರಗಳನ್ನು ಹಂಚಿಕೊಂಡಿದ್ದಾರೆ. ಸಾರ್ವಜನಿಕ ಸಂಪರ್ಕ (ಪಿ.ಆರ್) ಏಜೆನ್ಸಿಯೊಂದರ ಮಾಜಿ ಉದ್ಯೋಗಿ ಎಂದು ಪರಿಚಯಿಸಿಕೊಂಡಿರುವ ಆ ವ್ಯಕ್ತಿ, ರೋಹಿಣಿ ಸಿಂಧೂರಿ ಮತ್ತು ಅವರ ಪತಿ ಬಾಡಿಗೆ ಟ್ರೋಲರ್‌ಗಳ ನೆರವು ಪಡೆದು ವಿರೋಧಿಗಳನ್ನು ಮಣಿಸುತ್ತಾರೆ ಎಂದು ಹೇಳಿರುವ ಸಂದೇಶವನ್ನು ರೂಪಾ ಬಹಿರಂಗಪಡಿಸಿದ್ದಾರೆ.

ರೋಹಿಣಿ ಸಿಂಧೂರಿ

ರೂಪಾ ಡಿ. ಮೌದ್ಗಿಲ್

‘ನಾನು ಒಂದು ಪಿ.ಆರ್ ಏಜೆನ್ಸಿಯಲ್ಲಿ ಹಿಂದೆ ಉದ್ಯೋಗಿಯಾಗಿದ್ದೆ. ಸಿಂಧೂರಿ ಅವರ ಪತಿ ಒಂದು ವರ್ಷದಿಂದ ಆ ಏಜೆನ್ಸಿಯ ಸೇವೆ ಪಡೆಯುತ್ತಿದ್ದಾರೆ. ತಮ್ಮ ವಿರೋಧಿಗಳ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ಟ್ರೋಲ್ ಮಾಡಲು ಬಳಸಿಕೊಳ್ಳುತ್ತಿದ್ದಾರೆ. ರೋಹಿಣಿ ಅವರ ವಿರುದ್ಧ ಮಾತನಾಡುವವರ ವಿರುದ್ಧ ಕೆಟ್ಟದಾಗಿ ದಾಳಿ ಮಾಡುತ್ತಿದ್ದಾರೆ. ನೀವು ಅವರ ತಂಟೆಗೆ ಹೋಗಬೇಡಿ. ಸುಮ್ಮನಿದ್ದುಬಿಡಿ ಮೇಡಂ’ ಎಂದು ಆ ವ್ಯಕ್ತಿ ಸಲಹೆ ನೀಡಿರುವುದನ್ನು ರೂಪಾ ಫೇಸ್‌ಬುಕ್‌ನಲ್ಲಿ ಪ್ರಕಟಿಸಿದ್ದಾರೆ.

ತಮ್ಮ ಸಂಬಂಧಿಯೊಬ್ಬರಿಗೆ ಕೋವಿಡ್ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಾಗಲು ನೆರವು ಕೋರಿದ್ದು, ರೂಪಾ ಅವರು ಆಸ್ಪತ್ರೆಯ ಹಾಸಿಗೆ ಪಡೆಯಲು ನೆರವಾಗಿದ್ದನ್ನು ಪ್ರಸ್ತಾಪಿಸಿ ಪರಿಚಯಿಸಿಕೊಂಡಿರುವ ವ್ಯಕ್ತಿ, ‘ರೋಹಿಣಿ ಅವರನ್ನು ಟೀಕಿಸುವವರ ವಿರುದ್ಧ ದಾಖಲಾಗುವ ಪ್ರತಿಕ್ರಿಯೆಗಳು ಬಾಡಿಗೆ ಟ್ರೋಲರ್‌ಗಳಿಂದ ಬರುತ್ತಿವೆ. ನಾನು ಕೂಡ ಆ ಸಂಸ್ಥೆಯಲ್ಲಿ ಕೆಲಕಾಲ ಕೆಲಸ ಮಾಡಿದ್ದೇನೆ. ಈಗಲೂ ಆ ರೀತಿ ಬಳಕೆಯಾಗುತ್ತಿರುವುದನ್ನು ಅಲ್ಲಿರುವ ನನ್ನ ಸ್ನೇಹಿತರು ತಿಳಿಸಿದ್ದಾರೆ’ ಎಂದು ಹೇಳಿದ್ದಾರೆ.

5ನೇ ಪುಟ ನೋಡಿ

ರೂಪಾ ಮೌದ್ಗಿಲ್ ತಮ್ಮ ಫೇಸ್‌ಬುಕ್ ಪುಟದಲ್ಲಿ ಹಂಚಿಕೊಂಡಿರುವ ವಾಟ್ಸ್ ಆ್ಯಪ್ ಸಂಭಾಷಣೆಯ ತುಣುಕು

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

‘ಶೈಕ್ಷಣಿಕ ಪ್ರವಾಸ ಕಡ್ಡಾಯಕ್ಕೆ ಚಿಂತನೆ’

ರಾಮನಗರ: ಶಾಲಾ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸ ಕಡ್ಡಾಯಗೊಳಿಸುವ ಜೊತೆಗೆ ಪ್ರವಾಸೋದ್ಯಮ ಇಲಾಖೆಯಿಂದಲೇ ಪ್ರವಾಸ ಕಾರ್ಯಕ್ರಮ ಹಮ್ಮಿಕೊಳ್ಳಲು ಚಿಂತನೆ ನಡೆದಿದೆ ಎಂದು ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ‘ಸದ್ಯ ಶಾಲಾ ಪ್ರವಾಸಗಳು ಒಂದು ದಿನಕ್ಕಷ್ಟೇ ಸೀಮಿತ ಆಗಿವೆ. ಹೀಗಾಗಿ ಶಾಲೆಗಳಲ್ಲಿ ಪ್ರವಾಸ ಕಡ್ಡಾಯ ಮಾಡಲಾಗುವುದು’ ಎಂದರು.

ನೈರುತ್ಯ ರೈಲ್ವೆ

ಆಸಕ್ತಿ ವ್ಯಕ್ತಪಡಿಸುವಿಕೆ (ಇಒಐ) ಪ್ರಕಟಣೆ ಸಂ. ಎಸ್‌ಡಬ್ಲ್ಯುಆರ್/ಎಂವೈಎಸ್/69/ಇಒಐ/2021, ದಿನಾಂಕ: 25.06.2021

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಿನ ಕಾಮಗಾರಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ವಿವರ	ಅಂದಾಜು ಮೊತ್ತ
ಎರಡು ವರ್ಷಗಳ ಅವಧಿಗೆ ಕಾರ್ಯಾದೇಶ ನೀಡಿದ ದಿನಾಂಕದಿಂದ ಮೈಸೂರು, ರೈಲ್ವೆ ಆಸ್ಪತ್ರೆಯ ಔಷಧಿ ಅಂಗಡಿಗಳಿಗೆ ತುರ್ತು ಖರೀದಿಸಲು ದಿನದಿಂದ ದಿನದ ಆಧಾರದ ಮೇಲೆ ಔಷಧಿಗಳನ್ನು ಸರಬರಾಜು ಮಾಡಲು ಲೈಸೆನ್ಸ್‌ಇರುವ ಡ್ರಗ್ ಚಿಲ್ಲರೆ/ಸಗಟು ವ್ಯಾಪಾರಿಗಳ ನೊಂದಾವಣೆಗೆ ಆಸಕ್ತಿ ವ್ಯಕ್ತಪಡಿಸುವಿಕೆ.	ರೂ. 37,00,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11.08.2021 ಸಮಯ: 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಲಾಗ್‌ಆನ್ ಮಾಡಿ

ಮುಖ್ಯ ವೈದ್ಯಕೀಯ ಅಧೀಕ್ಷಕರು, ಮೈಸೂರು

ಪಿಯುಬಿ/108/ಎಎಎಲ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021-22

ನೈರುತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ. 05/ಎಕ್ಸ್‌ಇಎನ್/ಡಬ್ಲ್ಯುಎಸ್/ಯುಬಿಎಲ್‌ಎಸ್/2021–22, ದಿನಾಂಕ: 09.07.2021

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಿನ ಕಾಮಗಾರಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ವಿವರ	ಅಂದಾಜು ಮೊತ್ತ
ಹುಬ್ಬಳ್ಳಿ, ಕ್ಯಾರೇಜ್ ದುರಸ್ತಿ ಕಾರ್ಯಾಗಾರದ ಶೌಚಾಲಯಗಳ ಕೆಳಭಾಗದ ಡ್ರೈನೇಜ್ ಮಾರ್ಗದ ಸ್ವಚ್ಛತೆ.	ರೂ. 23,13,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 09.08.2021 ಸಮಯ: 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಲಾಗ್‌ಆನ್ ಮಾಡಿ

ಅಭಿಯಂತರರು, ಕ್ಯಾರೇಜ್ ದುರಸ್ತಿ ಕಾಮಗಾರಿಗಳು ಹುಬ್ಬಳ್ಳಿ

ಪಿಯುಬಿ/107/ಎಎಎಲ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021-22

ನೈರುತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ. 03/2021 ದಿನಾಂಕ: 07.07.2021

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಿನ ಕಾಮಗಾರಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ವಿವರ	ಅಂದಾಜು ಮೊತ್ತ
ಆರ್‌ಡಿಎಸ್‌ಒ ಡಿಆರ್‌ಜಿ ನಂ. ಟಿ–4218–190 ಜೊತೆಯ ಪಿಎಸ್‌ಸಿ ಟರ್ನ್‌ಔಟ್ ಸ್ಲೀಪರ್ಸ್ 1 ಇನ್ 12ನ ತಯಾರಿಕೆ ಮತ್ತು ಸರಬರಾಜು.	ರೂ. 9,18,09,900/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29.07.2021 ಸಮಯ: 16:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಲಾಗ್‌ಆನ್ ಮಾಡಿ

ಪಿಯುಬಿ/106/ಎಎಎಲ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021-22 ಉಪ ಮುಖ್ಯ ಅಭಿಯಂತರರು/ಸಿಎನ್/ಉಗ್ರಾಣ ಬೆಂಗಳೂರು ದಂಡು

‘ಪೀಠಾಧಿಕಾರಿಗಳಿಗೆ ಏಕರೂಪದ ಅಧಿಕಾರ: ಶೀಘ್ರದಲ್ಲಿ ಕರಡು ಸಲ್ಲಿಕೆ’



ಬೆಂಗಳೂರು: ಶಾಸನ ಸಭೆಗಳ ಪೀಠಾಧಿಕಾರಿಗಳ ಅಧಿಕಾರದಲ್ಲಿ ಏಕರೂಪತೆ ಮತ್ತು ಸ್ಪಷ್ಟತೆ ತರುವುದಕ್ಕೆ ಸಂಬಂಧಿಸಿದಂತೆ ಸಂವಿಧಾನದ 10ನೇ ಪರಿಚ್ಛೇದದ ತಿದ್ದುಪಡಿಯ ಶಿಫಾರಸುಗಳ ಕರಡನ್ನು ಶೀಘ್ರದಲ್ಲಿ ಸಲ್ಲಿಸಲಾಗುವುದು ಎಂದು ಕರಡು ರಚನಾ ಸಮಿತಿ ಸದಸ್ಯರಾಗಿರುವ ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದ್ದಾರೆ.

ವಿಧಾನಸಭೆಯ ಅಧ್ಯಕ್ಷರ ಸಮಾವೇಶದಲ್ಲಿ ರಾಜಸ್ಥಾನ ವಿಧಾನಸಭೆಯ ಅಧ್ಯಕ್ಷ ಚಂದ್ರ ಪ್ರಕಾಶ್ ಜೋಶಿ ಅಧ್ಯಕ್ಷತೆಯ ಸಮಿತಿ ನೇಮಕ ಮಾಡಲಾಗಿತ್ತು. ವಿಶ್ವೇಶ್ವರ ಹೆಗಡೆ ಕಾಗೇರಿ, ಒಡಿಶಾ ಮತ್ತು ನಾಗಾಲ್ಯಾಂಡ್ ವಿಧಾನಸಭೆಗಳ ಅಧ್ಯಕ್ಷರೂ ಸಮಿತಿಯ ಸದಸ್ಯರಾಗಿದ್ದಾರೆ. ಸೋಮವಾರ ವರ್ಚ್ಯುಯಲ್ ಆಗಿ ಸಮಿತಿಯ ಸಭೆ ನಡೆದಿದೆ.

‘ಶಾಸನಸಭೆಗಳ ಪೀಠಾಧಿಕಾರಿಗಳ ಅಧಿಕಾರದಲ್ಲಿ ಏಕರೂಪತೆ ಇಲ್ಲದ ಕಾರಣದಿಂದ ನಿರ್ಣಯಗಳೂ ವಿಭಿನ್ನವಾಗಿರುತ್ತವೆ. ಈ ಕಾರಣದಿಂದಾಗಿ ಗೊಂದಲ ಉಂಟಾಗುತ್ತಿದೆ. ಆದ್ದರಿಂದ ಅಧಿಕಾರದಲ್ಲಿ ಏಕರೂಪತೆ ಮತ್ತು ಸ್ಪಷ್ಟತೆ ತರುವ ನಿಟ್ಟಿನಲ್ಲಿ ಚರ್ಚಿಸಲಾಗುತ್ತಿದೆ. ಈವರೆಗೆ ನಡೆದಿರುವ ಚರ್ಚೆಗಳ ಸ್ಫೂರ್ತಿಯ ಆಧಾರದಲ್ಲಿ ಕರಡನ್ನು ಅಂತಿಮಗೊಳಿಸುವಂತೆ ಪ್ರತಿಪಾದಿಸಿದ್ದೇನೆ’ ಎಂದು ಸ್ಪೀಕರ್ ತಿಳಿಸಿದ್ದಾರೆ.

ಚರ್ಚೆ ಅಂತಿಮ ಹಂತದಲ್ಲಿದೆ. ಸಮಿತಿಯ ಮುಂದಿನ ಸಭೆಯ ವೇಳೆಗೆ ಸಂವಿಧಾನದ 10ನೇ ಪರಿಚ್ಛೇದದ ಅಡಿಯಲ್ಲಿ ಶಾಸನಸಭೆಗಳ ಪೀಠಾಧಿಕಾರಿಗಳ ಅಧಿಕಾರಕ್ಕೆ ಸಂಬಂಧಿಸಿದಂತೆ ತರಬೇಕಿರುವ ತಿದ್ದುಪಡಿಗಳ ಕರಡನ್ನು ಸಲ್ಲಿಸಲಾಗುವುದು ಎಂದು ಹೇಳಿದ್ದಾರೆ.

ಚಾಲನಾ ಪರೀಕ್ಷೆ: ಪ್ರತಿಕ್ರಿಯೆ ಸಲ್ಲಿಸಲು ಕೋರ್ಟ್ ಸೂಚನೆ

ಬೆಂಗಳೂರು: ಚಾಲನಾ ಪರವಾನಗಿ ನೀಡಲು ಪರೀಕ್ಷೆ ನಡೆಸುವಾಗ ಸಾರಿಗೆ ಇಲಾಖೆ ಅಧಿಕಾರಿಗಳು ಕೇಂದ್ರ ಮೋಟಾರು ವಾಹನಗಳ ನಿಯಮ 15 ಅನ್ನು ಪಾಲಿಸುತ್ತಿಲ್ಲ ಎಂದು ಆರೋಪಿಸಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಬೆಂಗಳೂರಿನ ನಿವಾಸಿ ಎಸ್.ಗೌರಿಶಂಕರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ‘ಅರ್ಜಿದಾರರು ಅತ್ಯಂತ ಗಂಭೀರ ವಿಷಯ ಎತ್ತಿದ್ದಾರೆ’ ಎಂದು ಅಭಿಪ್ರಾಯಪಟ್ಟಿತು.

‘ಕೆಲವು ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ದಿನಕ್ಕೆ 75ರಿಂದ 100 ಜನರ ಪರೀಕ್ಷೆ ನಡೆಸಲಾಗುತ್ತಿದೆ. ಇದನ್ನು ಗಮನಿಸಿದರೆ ನಿಯಮ 15ನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿಲ್ಲ’ ಎಂದು ಅರ್ಜಿದಾರರು ದೂರಿದರು. ನಿಯಮ 15ರ ಪ್ರಕಾರ ಪ್ರತಿ ಪರೀಕ್ಷೆಯನ್ನೂ ಸೂಕ್ಷ್ಮವಾಗಿ ಪರಿಗಣಿಸಿ ಅಧಿಕಾರಿಗಳು ಅಭಿಪ್ರಾಯ ದಾಖಲಿಸಬೇಕು. ಅದೊಂದು ವಿಸ್ತೃತ ಪ್ರಕ್ರಿಯೆಯಾಗಿದ್ದು, ಅದನ್ನು ಕಟ್ಟುನಿಟ್ಟಾಗಿ ಪಾಲಿಸಲು ಸಾರಿಗೆ ಇಲಾಖೆಗೆ ಸೂಚನೆ ನೀಡಬೇಕು ಎಂದು ಅರ್ಜಿದಾರರು ಕೋರಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

TEACHERS WANTED 1st To 10th Std Teachers, English Medium in All Subjects SAGAR-CONVENT Kanakapura Main Road Bangalore-82 Near APS Engineer College: 9342552428

Brooklyn National Public School Jayanagar 7th Block **& Cambridge Public School** HSR Sector 1

AMC EDUCATION

REQUIRE

PRINCIPAL – Female: First Class Post Graduation with B.Ed./M.Ed, 3-5 years experience, should handle Academic & Administration work with pleasing personality of 30-45 years age group for Jayanagar-BNPS & HSR-1 - CPS. Candidates close to the school will be preferred.

TEACHERS - for our Schools at Jayanagar, HSR-1, Vijayanagar & Vasanthapura Near Doddakalsandra Metro Station: English, Kannada, Mathematics, Social Studies, Science, Sanskrit, History, Geography, Hindi (Graduates with B.Ed), Physical Education (BP.Ed / MP Ed.), Kindergarten, Art & Craft, Music, Dance & Yoga.

Send CV's to amccityrecruitment@gmail.com
WhatsApp: 7259 00 1266

THIRUMALA VIDYA NIKETHAN SCHOOL
#29, G.D Park Extn, Vyalikaval, Bangalore-560003
Ph: 080-23447560 / 23447570 E-mail: tvns1984@gmail.com

REQUIRES

Qualified / Trained / Experienced Teachers to teach- Pre-Nursery to High School

Subjects: - Kannada / English / Hindi / Maths / Science / Social Science / Sanskrit / PE teacher / MA / BA / M.Sc / B.Sc with B.Ed

Proficiency in the subject and good Communication in English is a must.

Applications with relevant qualification are welcomed. Please mail / submit the resume with recent photograph to the Principal within 15 days from the date of advertisement.

WANTED LECTURERS: Srinivasa Educational Institutions, No.42, Hosapalya Main Road, Kudlu Gate, Hosur Main Road, Bengaluru.COMMERCE-ECONOMICS- HISTORY- ENGLISH, Computers Operators. Interview on 26.7.2021. 9341948860, 9449979054

Accounts & Finance

WANTED ACCOUNTANT age 30+ with 5 years experience and very good knowledge of Tally & Computer Operation for a firm in Chamarajpet. Call: 080-26603729 for an interview. Email CV: office@mahendraperfumery.com

CA FIRM at Wilson Garden Needs Audit/Accounts Assistants. Fresher's/ 1 or 2years Experienced. Apply: Nagendran.co@gmail.com

NEED EXPERIENCED Female ACCOUNTANT/ SALES CO-ORDINATOR. Residing around Basavanagudi. Qualification B.Com/ B.Sc. Email: sridhar@vinayaka-Plumbing.com. Contact: 99807-99996

ACCOUNTS EXECUTIVE with over 5 yrs. Exp. In handling accounts, with good communication skills & excellent knowledge of excel and tally.ISME, Sarjapur Road, 28019800. jobs@isme.in

KARNATAKA REDDYJANA SANGHA®
REQUIRES for

I. Vemana Institute Of Technology
1) Administrative Officer - 1 Master Degree with 5 years Experience
2) Lab Instructor - 2; FDC - 4; Attenders - 2

II. RJS - Institute Of Management Studies
Asst. Professor - 1 B.E. (IS, CS) with MBA
Asst. Professor - 1 MBA (HR/Firnance)
Asst. Professor - 1 M.Sc. (Statistics)
Teaching Experience Must for all the above posts

III. RJS Polytechnic
Lecturer - 1 B.E. in E & CE with Teaching Exp.
Accountant - 1 B.Com. with Tally

IV. KRJS HEAD OFFICE
a) Admn. Manager - 1 Master Degree with 5 years Experience
b) Accounts Manager - 1; M.Com. with 10 years Experience
c) Civil Engineers - 4; B.E. in Civil with 5 years Experience
d) Electrical Engineer - 1 B.E. in Electrical

V. RJS First Grade College:
Lecturer - 1 M.A., B.Ed. in Hindi

VI. RJS PU College:
Computer Science Lecturer - 1 M.Sc. / M.C.A.
Maths Lecturer - 1 M.Sc. B.Ed. preferable

Salary as per KRJS Norms
Apply to The Secretary, Karnataka ReddyJana Sangha, No.1, Mahayogi Vemana Road, 3rd Block, Koramangala, Bangalore - 34. Ph: 080-25534194 by post or Email.
For more details: www.reddyjanasangha.org., krjsestablishment@gmail.com

REQUIRE A suitable candidate to work as PRINCIPAL in our First Grade College.Minimum qualification is M.Com.,with 10years experience as Professor or Reader in a Commerce College.Age preferably 55 years.Salary will be based on experience and performance in the interview.Bio-Data along with testimonials and a recent photograph may be sent. To, The Hon.Secretary, Wilson Garden Education Society, 10th Cross, Hombegowdanagar, Bangalore-27. within 15 days from the date of advertisement.

WANTED TEACHERS L.K.G U.K.G Primary & High School English BA/MA/Bed, D.Ed & Computer Teacher. New Cambridge High School Bommanahalli, Bengaluru-68. Contact: 9448312549, 7899992107

WANTED TRAINED Teachers for immediate appointment to Teach Maths, Science, Biology. Prepare & come for a Demo with resume & Original Certificates. CAMLIN HIGH SCHOOL, 4th Cross Hampinagar, Vijaynagar 2nd Stage, Bangalore. Phone: 080-23301363

FACULITIES FOR PUC and Degree with 2 years experience. Commerce-2 (PUC & B-Com), Computer Science-2 (BCA), Language-2. For Walk-in-Interview Call on Weekday's 9740070432.

VLS VIDYASAGARA/ MARUTHI VIDYAMANDIRA ENGLISH MEDIUM-SCHOOL, #58/22, Sharada Colony, Basaveshwaranagar, Bangalore-79. Ph:080-23586050/ 23282029/6366882313. REQUIRED: LADY-TEACHERS CLASS-I to X STD; ENGLISH/SOCIAL-B.A,M.A, B.Ed,M.Ed, MATHS/SCIENCE-BSc,B.Ed, M.Sc,M.Ed, HINDI-BA,B.Ed

"ST.JOSEPH'S BOYS' High School, Museum Road, Bengaluru requires Teachers for the ISC & High School Section: Economics (PG with B.Ed). Please send an email with your CV & recent photograph mentioning the post applied for in the subject line and also submit a hard copy to the school office at the earliest. 27, Museum Road, Bengaluru 560025 Phone: 8884200549 Email: recruitmentsjbhs@gmail.com /Website: www.sjbhs.edu.in"

SVN ENGLISH High School, Thanisandra Main Road,Nagawara, Bangalore-77, (opposite elements mall), Requires Experienced TEACHERS to teach English (BA/MA,BEd) for High School. Call:9686200200/ 9448462093

MORNING STAR School, Ramachandra Puram, (Rajajinagar Entrance) Bangalore, Require B.Sc/ M.Sc, B.Ed, (Mathematics) Lady Teachers, Contact: 9845018480

SWAN ENVIRONMENTAL PVT LTD.
(ISO 9001: 2015 Certified Company)
www.swanenviron.com
Require
SERVICE TECHNICIAN/ ENGINEER
Full time, Responsible for installation & maintenance of the given instruments.
Karnataka (All Districts)
Experience: FRESHERS-
Qualification: ITI/Diploma (Electronics, Instrumentation)
Ph: 9642225207 / 8095777799
Email: srhr@swanenviron.com or bangalore@swanenviron.com
Apply before 31-07-2021

Call Centre

JOBS FOR-WOMEN (Reliance) Age above 30 years (Degree) Fixed Salary - 18,000/- Contact: 9343349670

Engg/ Production Technical

WANTED at BSK II STAGE, BANGALORE
1. **TECHNICAL MARKETING EXECUTIVE-** Diploma/ Graduate-Fresher or 01/ 02 Years, Female only
2. **MARKETING EXECUTIVE-** Back Office- Diploma/ BE, Fresher or 1-2 Year Exp. Female only
3. **DESIGN ENGINEERS-** M/F- familiar with AutoCAD & 3D Software- DME/ BE- Mechanical/ DTDM
4. **QUALITY EXECUTIVE-** BE Fresher (Mech/EC/EEE), or 1 Year Exp or Diploma with 1-2 Years.
5. **Senior Quality Executive** - BE (EC/EEE) 4-5 Yrs Exp in Quality & QMS. Diploma (EC/EEE) 6-7 Yrs Exp in Quality & QMS. ISO 9001/IATF 16949 is preferable.
6. **Automatic assembly Machine operators,** Fresher/ Experienced, Diploma/ ITI Male only.

Good Salary + Perquisites.
For this post Call for direct Interview:
Pandu: 9448186139/ Vikram: 8792929767
Send resume to careers@protectron.in
For details please visit www.protectron.in

IMMEDIATE PLACEMENT
ITI Trained Soldering Technicians, Experience / Fresher's
Place of Work : Old Madras Road, Doorvaninagar Bangalore - 560016
Contact Person : Mr Peri
Contact No : 81977 39234

DESIGN ENGINEER. Mechanical (DME /BE) with proficiency in CAD having 3-5 years experience for our office in BTM layout. Walk-in interview at Firetech Boilers Pvt Ltd, 211, 2nd cross 38th main BTM 2nd stage Bangalore-68 Behind Central Silk Board between 10-1 PM. on any working' days Contact: 7338487934/ 9945860920/ 9845037934 Email: info@firetechboilers.com

"WANTED- DIPLOMA/ B.E- CANDIDATE" in Electrical and Electronics, with Experience of 0/2 Year only. Contact: Yukthi Datasoft Pvt. Ltd. on 9845704698, 9986934382, https://w3w.co/running.student.mixes

Multiple Vacancy

AMC GROUP INSTITUTIONS
REQUIRE

ADVOCATE: Full Time & Part Time LLB, 3-5 years experience with BAR membership. Retired also can apply.

CHARTERED ACCOUNTANT: AMC, Bhanergatta Road/Jayanagar. CA completed with 3-5 years experience

OFFICE MANAGER: M.Com / MBA with 3-5 years experience in General Administration with knowledge of Accounts, PF, ESI, PT etc.

ACCOUNT ASSISTANTS: B.Com well versed in Tally, 1-3 years experience.

OFFICE ASSISTANT: with Computer knowledge and good communication skills.

E.Mail: amccityrecruitment@gmail.com
WhatsApp: 7259 00 1266

UNIVERSAL GROUP OF INSTITUTIONS
A DEGREE COLLEGE NEAR KENGERI, KOLURU, RAMOHALLI POST, BANGALORE - 560074

WANTED	PREFERABLE QUALIFICATION
FRONT OFFICE EXECUTIVE	Any degree with good communication skills
ACCOUNTANT	B.Com with min. 3 years experience
ASST. PROF. GEOGRAPHY & POLITICAL SCIENCE	PhD/MSc with min. 5 years experience
PHYSICAL DIRECTOR	Yoga, MPEd with min. 5 years experience

SALARY AND PERKS AS PER NORMS SHALL MATCH THE BEST FOR THE RIGHT CANDIDATES
PLEASE SEND YOUR UPDATED RESUME IMMEDIATELY TO info@universalinstitutions.com
9686664985/3
WWW.UNIVERSALINSTITUTIONS.COM

CONNECT ಕ್ಲಾಸಿಫೈಡ್ಸ್

G.R.College of Arts, Science & Commerce
Kanakapura Road, Bangalore-560082
B.Com & BA
with Professional cerification courses, 100% Placement assistance. Admissions based on aptitude, not just marks.
Contact: +91 8971051111 | +91 9880481073
Email: info@grinstitutions.org

FLAT FOR SALE
3 BHK Luxury Apartment for Sale in Yadavagiri, Mysore.
RERA No.: PRM/KA/RERA/1268/378/PR/210401/004089
Call: 99722 75566 / 77900 88900

WANTED LADY COMPUTER OPERATOR Kannada, English Typing, With Experience, at SAPTHAGIRI, Opposite BDA Head Office. Kumarapark West, Bangalore. 9900268073, 9448068073.

Manager

SHEKAR EYE Hospital, J.P.Nagar is looking for Manager, Opticals. Graduate with Minimum 5years experience in Opticals Salary in par with experience send your CV to hr@shekareyehospital.com, Ph:9108431292

General

"REQUIRED QUALIFIED General Manager for Resort operations at Kabini. Interested candidates Contact ::9108372746 or Email ::manju_tmet@yahoo.co.in"

Marketing & Sales

WANTED ONLINE Marketing specialist, only experienced candidates contact-8867255121.

WANTED MARKETING Executives For Private Limited Company Bangalore with Good Communication Skill fluent In English, Kannada, Hindi Contact: 9108458798/ 23384085

Part-Time Jobs

WANTED EXPERIENCED TALLY OPERATOR/ ACCOUNTANT for Part Time Office work in Vasantnagar, Bangalore- 9845034688

***VACANCY IN** MNC* Company, Age 30-55, PUC+ pay 30-80k P/m.Contact: Srilatha-8431104300/ 7090022176

Walk-in

WALK IN Interview Sigma Industries leading chemical manufacturer in Maharashtra wanted Dispatch Executive for Bangalore Office. Fresher also Contact +91-9822747289

ಕಾಂಚೀಪುರಂ
ಎ.ಜಿ. ಬಾಬು ಸಾಹ್
ರೇಷ್ಮೆ ಸೀರೆ ವ್ಯಾಪಾರಿಗಳು
ವರಮಹಾಲಕ್ಷ್ಮೀ ಹಬ್ಬದ ಮಾರಾಟ
ಸ್ನೇಹಾ ಸಭಾ ಭವನ
ನಂ. 32, 2ನೇ ಕ್ರಾಸ್, ಬಿ.ಎಂ.ಟಿ.ಸಿ. ಬಸ್ ನಿಲ್ದಾಣ ಹಿಂದೆ, ಜೀವನ್ ಭೀಮ ನಗರ, ಬೆಂಗಳೂರು–560 075.
ಮೊ. : 7904413982
ದಿನಾಂಕ: 14,15,16,17,18,19 & 20th ಜುಲೈ 2021
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ – ಹಿಂತಿರಿಗಿಸುವುದಿಲ್ಲ
ಮಾಸ್ಕ್ ಕಡ್ಡಾಯ
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ
ಒಂದು ಬಾರಿಗೆ 50 ಜನರಿಗೆ ಮಾತ್ರ ಪ್ರವೇಶ
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ

RENTAL PROPERTIES

Accommodation Available

Godown

RENT @MAGADI ROAD, 6000SFT INDUSTRIAL SHED,53HP POWER,4KMS FROM CITY,PH:9845221555/ 9845015030

Accommodation Wanted

Industrial And Factory

REQUIRED FOR Rent- Industrial Shed (3500 SqFt) in KIADB Phase 2, 3 or 4 in Malur- 9980646588

BUILDERS ESSENTIAL

Building Materials

OLD FACTORY Shed items required (5000- 10000 sft.) and old steel rods 5 Ton needed, contact, SIMHA- 8867255121/ 8050580156.

REAL ESTATE SELLING

Commercial Land

Intl Airport Road

SALE 30,000SFT Full/Part Commercial Land on Whitefield to International Airport Road, Near Bodigere, Opp KIADB. Attached to up-coming Manyata Tech Park. Call Owner: 9606369933/ 9606559933

Mysore

PRIME COMMERCIAL PROPERTY 2.1 ACRES IS FOR SALE NEAR TO MYSORE ON EXPRESS HIGHWAY. CONTACT OWNER 7676770503

House

Sahakarnagar

NTI LAYOUT 2nd Phase Behind Raintree Apartment Built on 40x61 Site Four Flats each Carpet Area 1850 Sft For Sale 9986160115.

Industrial & Factory

Tumkur Road

AVAILABLE INDUSTRIAL, Commercial, Warehouse Property 1 to 100 acres, Nelamangala, Dobespet surrounding. CHANDRU: 9141326819, 9972636255

Sites

Hebbal

AVAILABLE/WANTED BDA Plots Arkavathy Layout, R.T.Nagar, Thanisandra, Hebbal, Jakkur, Yelahanka, HBR, Immediate settlement. "SPACELINKS" 9845129934.

Kumaraswamy Layout

BDA 30X40 Intermediate Vacant 2nd Stage, Near 15F/G Bus Stop, ISKCON South, Genuine Buyers Call 9972095359 Brokers Excuse.

Sarjapur Road

SARJAPUR ROAD NEAR WIPRO EAST FACING SITE 30X47 CLEAR TITLES FOR SALE PHONE 8660514834 /9342410224

BUSINESS

Business Offers

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PERSONAL

Change of Name

I, HARSHA Megharaj S/o. Nagusa Bhimasenasa Megharaj residing at No.103, BRB Mansion, No.16, 4th cross, Chikkabanaswadi, Bengaluru- 560043, have changed my name to HARSHA NAGUSA MEGHARAJ vide affidavit dated 13/07/2021 before notary C.V. Earappa, Bangalore.

I, NAGUSA Megharaj S/o. Bhimasenasa Megharaj residing at No.103, BRB Mansion, No.16, 4th cross, Chikkabanaswadi, Bengaluru- 560043, have changed my name to NAGUSA BHIMASENASA MEGHARAJ vide affidavit dated 13/07/2021 before notary C.V. Earappa, Bangalore.

I, KULKARNI SUDEEKSHA UDAYKUMAR, R/at Flat No.407, Siri Exotica Apt, Uttarahalli Main Road, Near Gowdanapalya Bus Stop, Bengaluru- 560061, have changed my name to SUDEEKSHA KULKARNI vide affidavit dated 12-07-2021 sworn before notary, L.Puttaraju, Bangalore.

I, SHASHI REKHA.B residing at No.172, Bharathi Nagar, Hunasamaranahalli, Jala Hobli, Hosahalli, Bangalore North, Karnataka-562157 have chagned my name to SHASHI REKHA vide affidavit dated 12/07/2021 sworn before notary Ambika.S, Bangalore

ASOKE MAITY F/o 6394295F- Hav/MUSN- AMIT MAITY, R/a Raghunathbari, Purba Medinipur, West Bengal changed name from ASOKE MAITY to ASOK KUMAR MAITY notary KV Mani Bangalore.

I, SHABARISH residing at No.52, 2nd cross, Hutchins road, St. Thomas Town, Bangalore- 560084, have changed my name to SHABRISH. S vide affidavit dated 13/07/2021 before notary L. Gopalakrishna, Bangalore.

SANTOSHI M/O 6394295F- Hav/MUSN- AMIT MAITY, R/a Raghunathbari, Purba Medinipur, West Bengal changed name from SANTOSHI to SHANTASHREE MAITY notary KV Mani Bangalore.

BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE · NAME CHANGE · EDUCATION · HEALTH · MATRI · ASTRO · JOB · AUTO
condition apply*
WWW.DHCLASSIFIEDS.COM
DH DECCAN HERALD
FOR MORE INFORMATION CONTACT 9880856233 | 9886213331
Email: santhoshkumar@deccanherald.co.in
ಪ್ರಜಾವಾಣಿ ಕ್ಲಾಸಿಫೈಡ್ಸ್

ಬೆನ್ನಿಗಾನಹಳ್ಳಿ ಕೆರೆ ಪಕ್ಕದಲ್ಲಿ ಮರಗಳ ಮರುನಾಟಿ ● ಬಿಎಂಆರ್‌ಸಿಎಲ್ ಕ್ರಮಕ್ಕೆ ಸ್ಥಳೀಯರ ಮೆಚ್ಚುಗೆ

ಮೆಟ್ರೊ: ತೆರವಾದ ಮರ ಕೆರೆ ದಂಡೆಗೆ ಸ್ಥಳಾಂತರ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬೆನ್ನಿಗಾನಹಳ್ಳಿ ಕೆರೆ ಸಮೀಪ 'ನಮ್ಮ ಮೆಟ್ರೊ' ನೂತನ ಮಾರ್ಗದ ಕಾಮಗಾರಿ ಸಲುವಾಗಿ ತೆರವುಗೊಳಿಸಬೇಕಾದ ಮರಗಳನ್ನು ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ಈ ಕೆರೆ ದಂಡೆಯ ಇನ್ನೊಂದು ಬದಿಗೆ ಸ್ಥಳಾಂತರ ಮಾಡುತ್ತಿದೆ.

ಕಾಮಗಾರಿಗೆ ಅಡ್ಡಿಯಾಗಿದ್ದ ಸುಮಾರು 60 ಮರಗಳನ್ನು ಮರುನಾಟಿ ಮಾಡುವ ಕಾರ್ಯವನ್ನು ನಿಗಮವು ಕಳೆದ ವಾರ ಆರಂಭಿಸಿದೆ. ಮರಗಳನ್ನು ಕಡಿಯುವ ಬದಲು ಕೆರೆ ದಂಡೆಯ ಇನ್ನೊಂದು ಬದಿಗೆ ಸ್ಥಳಾಂತರ ಮಾಡುವ ಮೂಲಕ ಅವುಗಳನ್ನು ಉಳಿಸಿಕೊಂಡಿದ್ದಕ್ಕೆ ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪ್ರಜಾವಾಣಿ ವಿಶೇಷ

'ಇಲ್ಲಿ ಮೆಟ್ರೊ ಮಾರ್ಗಕ್ಕಾಗಿ ಬೆನ್ನಿಗಾನಹಳ್ಳಿ ಕೆರೆ ಪರಿಸರದ 83 ಮರ ತೆರವುಗೊಳಿಸಲು ಬಿಎಂಆರ್‌ಸಿಎಲ್ ಮುಂದಾಗಿತ್ತು. ರಕ್ತಚಂದನ, ಆಕಾಶ ಮಲ್ಲಿಗೆ, ಮತ್ತಿ, ಹೊನ್ನೆ ಮೊದಲಾದ ಜಾತಿಯ 20 ವರ್ಷಗಳಿಗಿಂತ ಹಳೆಯ ಮರಗಳೂ ಇದರಲ್ಲಿದ್ದವು. ಇವೆಲ್ಲವೂ ಸ್ಥಳೀಯರೇ ಬೆಳೆಸಿದ ಮರಗಳು. ಇವುಗಳನ್ನು ನಮ್ಮ ಪರಿಸರದಲ್ಲೇ ಉಳಿಸಿಕೊಡಿ ಎಂದು ಬೆನ್ನಿಗಾನಹಳ್ಳಿ ಕೆರೆ ಅಭಿವೃದ್ಧಿ ಟ್ರಸ್ಟ್ ಹಾಗೂ ಸಿಟಿಜನ್ಸ್ ಫಾರ್ ಕೆ.ಆರ್.ಪುರ ವತಿಯಿಂದ ಬಿಎಂಆರ್‌ಸಿಎಲ್‌ಗೆ ಮನವಿ ಸಲ್ಲಿಸಿದ್ದೆವು. ಇದಕ್ಕೆ ಒಪ್ಪಿದ್ದ ನಿಗಮವು ಮರಗಳನ್ನು ಸ್ಥಳಾಂತರಿಸಿ ಮರುನಾಟಿ ಮಾಡುವ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದೆ' ಎಂದು ಸಿಟಿಜನ್ಸ್ ಫಾರ್ ಕೆ.ಆರ್.ಪುರ ಸಂಘಟನೆಯ ಬಾಲಾಜಿ ರಘೋತ್ತಮ್ ರಾವ್ 'ಪ್ರಜಾವಾಣಿ'ಗೆ ತಿಳಿಸಿದರು.

> ಮರಗಳ ಸ್ಥಳಾಂತರವು 'ಹಳೆ ಬೇರು ಹೊಸ ಚಿಗುರು' ಎಂಬ ಮಾತಿಗೆ ಅನ್ವರ್ಥ. 20 ವರ್ಷಗಳಷ್ಟು ಹಳೆ ಮರಗಳನ್ನು ಮರುನಾಟಿ ಮಾಡಿ ಉಳಿಸುವುದು ಸುಲಭವಲ್ಲ. ಕೆಲವು ಬದುಕುಳಿದರೂ ಈ ಕಾರ್ಯ ಸಾರ್ಥಕ
> **ಬಾಲಾಜಿ ರಘೋತ್ತಮ ರಾವ್,** ಸಿಟಿಜನ್ಸ್ ಫಾರ್ ಕೆ.ಆರ್.ಪುರ

'ಇಲ್ಲಿನ ಮರಗಳನ್ನು ದೇವನಹಳ್ಳಿಯ ವಿಮಾನ ನಿಲ್ದಾಣದ ಸಮೀಪ ಮರುನಾಟಿ ಮಾಡಲು ಬಿಎಂಆರ್‌ಸಿಎಲ್ ಬಯಸಿತ್ತು. ಬೆನ್ನಿಗಾನಹಳ್ಳಿ ಕೆರೆಯ ಪೂರ್ವ ಹಾಗೂ ಉತ್ತರ ದಿಕ್ಕಿನಲ್ಲಿ ಲಭ್ಯವಿದ್ದ ಜಾಗದಲ್ಲೇ ಮರಗಳನ್ನು ನಮ್ಮ ಕೋರಿಕೆ ಮೇರೆಗೆ ಮರುನಾಟಿ ಮಾಡಿದ್ದಾರೆ. ಇದುವರೆಗೆ 25 ಮರಗಳ ಸ್ಥಳಾಂತರ ಕಾರ್ಯ ಪೂರ್ಣಗೊಂಡಿದೆ. ಇನ್ನೂ ಸುಮಾರು 35 ಮರಗಳನ್ನು ಸ್ಥಳಾಂತರ ಮಾಡಲಾಗುತ್ತಿದೆ. ಸ್ಥಳೀಯರೇ ಬೆಳೆಸಿದ ಮರಗಳನ್ನು ಇಲ್ಲೇ ಉಳಿಸಿಕೊಂಡಿದ್ದು ಖುಷಿ ತಂದಿದೆ' ಎಂದರು.

'ನಮ್ಮ ಮೆಟ್ರೊ ಹೊಸ ಮಾರ್ಗಗಳ ಕಾಮಗಾರಿ ಸಲುವಾಗಿ ತೆರವುಗೊಳಿಸಬೇಕಾಗುವ ಬಹಳಷ್ಟು ಮರಗಳನ್ನು ಹೈಕೋರ್ಟ್ ನಿರ್ದೇಶನದ ಮೇರೆಗೆ ಸ್ಥಳಾಂತರ ಮಾಡಿ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ. ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ತಜ್ಞರ ಸಮಿತಿಯ ಸಲಹೆ ಆಧಾರದಲ್ಲಿ ಈ ಕ್ರಮ ಕೈಗೊಳ್ಳಲಾಗುತ್ತಿದೆ. ತಜ್ಞರ ಮಾರ್ಗದರ್ಶನದಂತೆ ಮರ ಸ್ಥಳಾಂತರ ಕಾರ್ಯವನ್ನು ಕೈಗೊಳ್ಳುತ್ತಿದ್ದೇವೆ. ಕೆಲವು ಸರ್ಕಾರೇತರ ಸಂಸ್ಥೆಗಳೂ ಈ ಕಾರ್ಯದಲ್ಲಿ ನೆರವಾಗುತ್ತಿವೆ' ಎಂದು ಬಿಎಂಆರ್‌ಸಿಎಲ್‌ನ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಕೇವಲ ಸ್ಥಳಾಂತರ ಮಾಡುವುದಷ್ಟೇ ಅಲ್ಲ. ಮೂರು ವರ್ಷಗಳ ಕಾಲ ಈ ಮರಗಳನ್ನು ಪೋಷಣೆಯ ಹೊಣೆಯನ್ನೂ ನಿಗಮವು ವಹಿಸಲಿದೆ. ಸ್ಥಳಾಂತರ ಕಾರ್ಯಕ್ಕೆ ತಗಲುವ ವೆಚ್ಚವನ್ನೂ ಭರಿಸಲಿದೆ' ಎಂದು ತಿಳಿಸಿದರು.

ಸ್ಥಳಾಂತರಗೊಳಿಸುವ ಮರಗಳ ಬುಡವನ್ನು ಬಿಡಿಸಿರುವುದು



ಸ್ಥಳಾಂತರಗೊಂಡ ಮರಗಳನ್ನು ಬೆನ್ನಿಗಾನಹಳ್ಳಿ ಕೆರೆ ದಂಡೆಯಲ್ಲಿ ಮರುನಾಟಿ ಮಾಡಿರುವುದು

'ಪರಿಶಿಷ್ಟರನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ರಾಜಕಾರಣದಲ್ಲಿ ಈವರೆಗೂ ಪರಿಶಿಷ್ಟರು ಮುಖ್ಯಮಂತ್ರಿ ಗಾದಿಗೆ ಏರಿಲ್ಲ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ಪರಿಶಿಷ್ಟರನ್ನೇ ಮುಖ್ಯಮಂತ್ರಿ ಅಭ್ಯರ್ಥಿಗಳನ್ನಾಗಿ ಘೋಷಿಸಬೇಕು' ಎಂದು ದಲಿತ ಸಂಘರ್ಷ ಸಮಿತಿ ಒತ್ತಾಯಿಸಿದೆ.

'ಇದುವರೆಗೆ ಲಿಂಗಾಯತರು, ಒಕ್ಕಲಿಗರು, ಬ್ರಾಹ್ಮಣರು, ಅರಸು, ರಜಪೂತ ಹಾಗೂ ಹಿಂದುಳಿದ ವರ್ಗಗಳ ನಾಯಕರೇ ಈ ರಾಜ್ಯದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ್ದಾರೆ. ಶೇ 23.5ರಷ್ಟು ಜನಸಂಖ್ಯೆ ಹೊಂದಿರುವ ಪರಿಶಿಷ್ಟರಿಗೆ ಈ ವಿಚಾರದಲ್ಲಿ ಅನ್ಯಾಯವಾಗಿದೆ. ಶೇ 12ರಷ್ಟು ಜನಸಂಖ್ಯೆ ಇರುವ ಮುಸ್ಲಿಂ ಸಮುದಾಯವೂ ಅವಕಾಶ ವಂಚಿತವಾಗಿದೆ' ಎಂದು ಸಮಿತಿಯ ರಾಜ್ಯ ಸಂಚಾಲಕ ಹೆಣ್ಣೂರು ಶ್ರೀನಿವಾಸ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಬಾಬಾ ಸಾಹೇಬ್ ಅಂಬೇಡ್ಕರ್ ಅವರು ದಲಿತರಿಗೆ ಶೈಕ್ಷಣಿಕ, ಔದ್ಯೋಗಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಮೀಸಲಾತಿ ಒದಗಿಸಿಕೊಟ್ಟಿದ್ದಾರೆ. ಈ ಸಮುದಾಯದಿಂದ 54 ಮಂದಿ ಶಾಸಕರಾಗಿದ್ದಾರೆ. 7 ಮಂದಿ ಸಂಸತ್ ಪ್ರವೇಶಿಸಿದ್ದಾರೆ. ಐಎಎಸ್ ಹಾಗೂ ಮುಖ್ಯ ಎಂಜಿನಿಯರ್‌ಗಳೂ ಸಾಕಷ್ಟು ಮಂದಿ ಇದ್ದಾರೆ. ನಮ್ಮಲ್ಲೇ ಹಲವು ಸಂಘಟನೆಗಳು ಹುಟ್ಟಿಕೊಂಡಿವೆ. ಹೀಗಿದ್ದರೂ ನಮ್ಮವರನ್ನು ಮುಖ್ಯಮಂತ್ರಿ ಗಾದಿಯಲ್ಲಿ ನೋಡಲು ಆಗಿಲ್ಲ. ಇನ್ನಾದರೂ ಈ ವಿಚಾರದಲ್ಲಿ ನಾವೆಲ್ಲಾ ಒಗ್ಗಟ್ಟಾಗಿ ಹೋರಾಡಬೇಕು' ಎಂದು ಹೇಳಿದರು.

ಪ್ರತಿಭಟನೆ...

ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ಸದಸ್ಯರು ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲ ದರ ಏರಿಕೆಯನ್ನು ಖಂಡಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಐಬಿಪಿಎಸ್: ಪ್ರಾದೇಶಿಕ ಭಾಷೆಗೆ ಆದ್ಯತೆ ಕೊಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ಯಾಂಕಿಂಗ್ ಸಿಬ್ಬಂದಿ ಆಯ್ಕೆ ಸಂಸ್ಥೆಯು (ಐಬಿಪಿಎಸ್) ರಾಷ್ಟ್ರೀಕೃತ ಬ್ಯಾಂಕುಗಳ ವಿವಿಧ ಹುದ್ದೆಗಳಿಗೆ ನಡೆಸುವ ಪರೀಕ್ಷೆಗಳಲ್ಲಿ ಪ್ರಾದೇಶಿಕ ಭಾಷೆಗಳಲ್ಲಿ ಉತ್ತರಿಸಲು ಅವಕಾಶ ನೀಡಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಒತ್ತಾಯಿಸಿವೆ.

ಈ ಬಗ್ಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

'ಐಬಿಪಿಎಸ್ ಸಂಸ್ಥೆಯು ಸದ್ಯ ನಡೆಸುತ್ತಿರುವ ನೇಮಕಾತಿ ಪ್ರಕ್ರಿಯೆಗಳಲ್ಲಿ ಕನ್ನಡದಲ್ಲಿಯೂ ಪರೀಕ್ಷೆಯನ್ನು ನಡೆಸಿ, ಕನ್ನಡಿಗರಿಗೆ ನ್ಯಾಯ ಸಿಗುವಂತೆ ಕ್ರಮವಹಿಸುವ ತುರ್ತು ಅಗತ್ಯವಿದೆ.

ನಾಗಾಭರಣ

ಇಲ್ಲಿನ ಕೆನರಾ ಬ್ಯಾಂಕ್ ಸೇರಿದಂತೆ ಒಟ್ಟು 11 ಬ್ಯಾಂಕುಗಳಲ್ಲಿ ಖಾಲಿ ಇರುವ 3 ಸಾವಿರಕ್ಕೂ ಅಧಿಕ ಹುದ್ದೆಗಳಿಗೆ ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಮಾತ್ರ ಪರೀಕ್ಷೆ ನಡೆಸಿರುವುದರಿಂದ ಕನ್ನಡಿಗರಿಗೆ ಸಿಗಬೇಕಾದ ಹುದ್ದೆಗಳು ಕೈತಪ್ಪಿವೆ. ಕೇಂದ್ರದ ವಿತ್ತ ಸಚಿವರು ಈ ಹಿಂದೆ ಸ್ಥಳೀಯ ಭಾಷೆಗಳಲ್ಲಿ ಬ್ಯಾಂಕಿಂಗ್ ನೇಮಕಾತಿ ನಡೆಸುವುದಾಗಿ ಭರವಸೆ ನೀಡಿದ್ದರು. ಆದರೆ, ಅದು ಹುಸಿಯಾಗಿದೆ' ಎಂದು ಟಿ.ಎಸ್. ನಾಗಾಭರಣ ಬೇಸರ ವ್ಯಕ್ತಪಡಿಸಿದ್ದಾರೆ.

'ರಾಜ್ಯ ಮತ್ತು ಕೇಂದ್ರ ಸರ್ಕಾರದ ಹುದ್ದೆಗಳು ಹಾಗೂ ಖಾಸಗಿ ವಲಯದ ಹುದ್ದೆಗಳಲ್ಲಿ ಶೇ 75 ರಷ್ಟು ಹುದ್ದೆಗಳನ್ನು ಆಯಾ ರಾಜ್ಯದವರಿಗೆ ಮೀಸಲಿಡುವ ರಾಷ್ಟ್ರೀಯ ನೀತಿಯನ್ನು ರೂಪಿಸಿ, ಅದನ್ನು ಜಾರಿ ಮಾಡಬೇಕು. ರಾಷ್ಟ್ರೀಯ ಸಿಬ್ಬಂದಿ ಆಯ್ಕೆ ಆಯೋಗದ ಪ್ರಾದೇಶಿಕ ಕಚೇರಿ ಬೆಂಗಳೂರಿನಲ್ಲಿದೆ. ಆದರೆ, ನೇಮಕಾತಿ ಪರೀಕ್ಷೆಗಳು ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಮಾತ್ರ ನಡೆಯುತ್ತಿವೆ. ಇದರಿಂದ ಸ್ಥಳೀಯರಿಗೆ ಯಾವುದೇ ಉಪಯೋಗವಾಗಿಲ್ಲ' ಎಂದು ತಿಳಿಸಿದ್ದಾರೆ.

'ಉದ್ಯೋಗ ವಂಚಿತರಾಗುತ್ತಿರುವ ಕನ್ನಡಿಗರು'

'ಐಬಿಪಿಎಸ್ ಸಂಸ್ಥೆಯು ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಮಾತ್ರ ಪರೀಕ್ಷೆ ನಡೆಸುತ್ತಿರುವುದು ಕನ್ನಡ ಭಾಷೆಗೆ ಆದ ಅಪಚಾರ ಎಂದೇ ಭಾವಿಸಬೇಕಾಗುತ್ತದೆ. ಅಭ್ಯರ್ಥಿಯ ಸಾಮಾನ್ಯ ಜ್ಞಾನ, ಕೌಶಲ್ಯ, ಪರಿಣಿತಿ ಹಾಗೂ ಬದ್ಧತೆಯನ್ನು ಪರೀಕ್ಷಿಸಲು ಪ್ರಾದೇಶಿಕ ಭಾಷೆ ಉತ್ತಮ ಸಾಧನ. ಇದನ್ನು ಸಂಸ್ಥೆಯು ಅರಿತುಕೊಳ್ಳಬೇಕು' ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ ತಿಳಿಸಿದ್ದಾರೆ.

ಸೋಮಶೇಖರ್

'ಡಿಜಿಟಲ್ ಗ್ರಂಥಾಲಯ: ಕರ್ನಾಟಕ ಮಾದರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ವಿವಿಧೆಡೆ ಕಳೆದೊಂದು ವರ್ಷದಲ್ಲಿ 372 ಡಿಜಿಟಲ್ ಗ್ರಂಥಾಲಯಗಳು ಕಾರ್ಯಾರಂಭಗೊಂಡಿದ್ದು, ಇಡೀ ದೇಶದಲ್ಲಿ ಮಾದರಿ ಡಿಜಿಟಲ್ ಗ್ರಂಥಾಲಯ ವ್ಯವಸ್ಥೆಯನ್ನು ಹೊಂದಿದ ಮೊದಲ ರಾಜ್ಯ ಕರ್ನಾಟಕ' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಹೇಳಿದರು.

ನಗರದ ತಲಘಟ್ಟಪುರ ಗ್ರಂಥಾಲಯದ ನೂತನ ಕಟ್ಟಡಕ್ಕೆ ಮಂಗಳವಾರ ಶಿಲಾನ್ಯಾಸ ನೆರವೇರಿಸಿ ಮಾತನಾಡಿದರು.

'ಕೋವಿಡ್ ಕಾರಣದಿಂದ, ಸಾರ್ವಜನಿಕ ಗ್ರಂಥಾಲಯ ಇಲಾಖೆ ಡಿಜಿಟಲ್ ಗ್ರಂಥಾಲಯ ಮೊಬೈಲ್ ಆ್ಯಪ್ ಲೋಕಾರ್ಪಣೆಗೊಳಿಸಿದ್ದು, 16 ಲಕ್ಷಕ್ಕೂ ಹೆಚ್ಚು ಪುಸ್ತಕಗಳು ಮತ್ತು ಇ-ವಿಡಿಯೊ ಕಂಟೆಂಟ್‌ಗಳು ಆ್ಯಪ್‌ನಲ್ಲಿ ಲಭ್ಯವಿವೆ. ಈವರೆಗೆ 83 ಲಕ್ಷ ಜನರು ಇದರ ಸದಸ್ಯತ್ವ ಪಡೆದಿದ್ದಾರೆ' ಎಂದರು.

'ಪುಸ್ತಕ ಸಂಸ್ಕೃತಿ ಬೆಳೆಸಲು ರಾಜ್ಯದಾದ್ಯಂತ 6,856 ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿವೆ. ಇದು ದೇಶದಲ್ಲಿಯೇ ಮಾದರಿ ಗ್ರಂಥಾಲಯ ವ್ಯವಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮುಂದಿನ ದಿನಗಳಲ್ಲಿ ಸಾರ್ವಜನಿಕರ ಜ್ಞಾನಾರ್ಜನೆಗೆ ಉಪಯೋಗವಾಗುವಂತೆ ಗ್ರಂಥಾಲಯಗಳಲ್ಲಿ ಅವಶ್ಯಕ ಸೇವೆಗಳನ್ನು ಒದಗಿಸಲಾಗುವುದು' ಎಂದರು.

ಸುಸಜ್ಜಿತ ಕಟ್ಟಡ: 'ಈ ನಿವೇಶನದಲ್ಲಿ ₹ 99 ಲಕ್ಷ ವೆಚ್ಚದಲ್ಲಿ ಸ್ಥಳೀಯರಿಗೆ ಅನುಕೂಲವಾಗುವಂತೆ ಸುಸಜ್ಜಿತ ಕಟ್ಟಡ ನಿರ್ಮಿಸಲಾಗುವುದು. ಈ ಕಟ್ಟಡವು 3 ಅಂತಸ್ತಿನಿಂದ ಕೂಡಿದ್ದು, ಅದರಲ್ಲಿ ಮಹಿಳೆಯರಿಗೆ, ಮಕ್ಕಳಿಗೆ ಹಿರಿಯ ನಾಗರಿಕರಿಗೆ ಅನುಕೂಲವಾಗುವಂತೆ ವಿವಿಧ ವಿಭಾಗಗಳನ್ನು ಸೃಜಿಸಲಾಗುವುದು. ಡಿಜಿಟಲ್ ಲೈಬ್ರರಿ ಸೌಲಭ್ಯವೂ ಇರಲಿದೆ' ಎಂದರು.

ಅಧ್ಯಕ್ಷತೆ ವಹಿಸಿದ್ದ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, 'ಗ್ರಂಥಾಲಯ ಇಲಾಖೆಯ ಡಿಜಿಟಲೀಕರಣ ವ್ಯವಸ್ಥೆಯಿಂದಾಗಿ ಮನೆಯಲ್ಲೇ ಕುಳಿತು ಗ್ರಂಥಗಳ ಅಧ್ಯಯನ ಮಾಡುವಂತ ವ್ಯವಸ್ಥೆ ರೂಪಿಸಿರುವುದು ಉಪಯುಕ್ತವಾಗಿದೆ' ಎಂದರು.

ಪಾಲಿಕೆ ಮಾಜಿ ಸದಸ್ಯ ಆರ್ಯ ಶ್ರೀನಿವಾಸ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜೀವ್, ಗ್ರಂಥಾಲಯ ಇಲಾಖೆ ನಿರ್ದೇಶಕ ಸತೀಶಕುಮಾರ ಎಸ್. ಹೊಸಮನಿ, ಉಪನಿರ್ದೇಶಕಿ ಸರಸ್ವತಿ ಇದ್ದರು.

ಮರು ನೇಮಕಕ್ಕೆ ಎಸ್. ಮೂರ್ತಿ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್‌ನ ಏಕಸದಸ್ಯ ಪೀಠ ಮಾಡಿರುವ ಆದೇಶದ ಅನುಸಾರ ತಮ್ಮನ್ನು ಕಾರ್ಯದರ್ಶಿ ಹುದ್ದೆಗೆ ಮರು ನೇಮಕ ಮಾಡಬೇಕೆಂದು ವಿಧಾನಸಭೆಯ ಹಿಂದಿನ ಕಾರ್ಯದರ್ಶಿ, ಸದ್ಯ ಅಮಾನತಿನಲ್ಲಿರುವ ಎಸ್. ಮೂರ್ತಿ, ಸಭಾಧ್ಯಕ್ಷರು ಹಾಗೂ ಮುಖ್ಯಮಂತ್ರಿಗೆ ಮನವಿ ಮಾಡಿದ್ದಾರೆ.

ಹಣ ದುರುಪಯೋಗದ ಆರೋಪ ಹೊರೆಸಿ ಕರ್ತವ್ಯದಿಂದ ಅಮಾನತು ಮಾಡಿ ಎರಡೂವರೆ ವರ್ಷ ಕಳೆದಿದೆ. ಕರ್ನಾಟಕ ಸರ್ಕಾರದ ಸೇವಾ ನಿಯಮಗಳ ಪ್ರಕಾರ ಯಾವುದೇ ಅಧಿಕಾರಿ/ ನೌಕರರ ಅಮಾನತು ಅವಧಿ ಆರು ತಿಂಗಳು ಎಂದು ನಿಗದಿಪಡಿಸಲಾಗಿದೆ.

ಈ ನಿಯಮಗಳ ಅನ್ವಯ, ಅಮಾನತು ತೆರವುಗೊಳಿಸಿ ನೇಮಕ ಮಾಡಿಲ್ಲ. ಈ ಸಂಬಂಧ ಹೂಡಲಾದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್‌ನ ಏಕಸದಸ್ಯ ಪೀಠ, ಕಾರ್ಯದರ್ಶಿ ಹುದ್ದೆಯಿಂದ ಮಾಡಿರುವ ಅಮಾನತನ್ನು ಅನಗತ್ಯವಾಗಿ ಮುಂದುವರಿಸಿರುವುದನ್ನು ಒಪ್ಪಲಾಗದು ಹಾಗೂ ಮರು ನೇಮಕ ಮಾಡಬೇಕು ಎಂದು ವರ್ಷದ ಹಿಂದೆಯೇ ಹೇಳಿದೆ. ಹಾಗಿದ್ದರೂ ಅದು ಜಾರಿಯಾಗಿಲ್ಲ ಎಂದು ಅವರು ಮನವಿ ಪತ್ರದಲ್ಲಿ ವಿವರಿಸಿದ್ದಾರೆ.

ಈ ಆದೇಶವನ್ನು ಪ್ರಶ್ನಿಸಿ, ಸಚಿವಾಲಯ ಸಲ್ಲಿಸಿದ ಮೇಲ್ಮನವಿಯನ್ನು ಹೈಕೋರ್ಟ್ ವಿಲೇವಾರಿ ಮಾಡಿದೆ. ಅಲ್ಲದೇ ಏಕಸದಸ್ಯ ಪೀಠ ನೀಡಿದ ಆದೇಶವನ್ನು ರದ್ದುಪಡಿಸಿಲ್ಲ. ಮರು ನೇಮಕ ಮಾಡುವಂತೆ ಅನೇಕ ಬಾರಿ ಮಾಡಿದ ಮನವಿಯನ್ನು ಪುರಸ್ಕರಿಸಿಲ್ಲ. ವಿಚಾರಣೆಯನ್ನು ಕೈಬಿಟ್ಟು ಮರು ನೇಮಕ ಮಾಡಲು ಕ್ರಮವಹಿಸಬೇಕು ಎಂದು ಮನವಿಯಲ್ಲಿ ಕೋರಿದ್ದಾರೆ.

ವಿಧಾನಮಂಡಲದ ಬೆಳಗಾವಿ ಅಧಿವೇಶನದ ವೇಳೆ ನಡೆಸಿದ ಕಾಮಗಾರಿಗಳನ್ನು ಅಂದಿನ ಸಭಾಧ್ಯಕ್ಷರ ಗಮನಕ್ಕೆ ತಂದಿಲ್ಲ. ಸಭಾಧ್ಯಕ್ಷರನ್ನು ಕತ್ತಲಿನಲ್ಲಿಟ್ಟು ಕಡತಗಳಿಗೆ ಅನುಮೋದನೆ ಪಡೆದು, ನಂಬಿಕೆಗೆ ದ್ರೋಹ ಬಗೆದಿದ್ದಲ್ಲದೇ, ಸರ್ಕಾರಕ್ಕೆ ನಷ್ಟ ಉಂಟು ಮಾಡಲಾಗಿದೆ ಎಂದು ಆಪಾದಿಸಲಾಗಿತ್ತು.

'ಕೈ' ಬಲವರ್ಧನೆ: ಮುಖಂಡರ ಜೊತೆ ಡಿಕೆಶಿ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷ ಸಂಘಟನೆ, ಬಲವರ್ಧನೆ ಮತ್ತು ಕಾರ್ಯಕರ್ತರನ್ನು ಒಗ್ಗೂಡಿಸುವ ವಿಚಾರವಾಗಿ ಪಕ್ಷದ ಮುಖಂಡರ ಜೊತೆ ಸದಾಶಿವನಗರದಲ್ಲಿರುವ ತಮ್ಮ ನಿವಾಸದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಂಗಳವಾರ ಚರ್ಚೆ ನಡೆಸಿದರು.

ಶಾಸಕರಾದ ಅಮರೇಗೌಡ ಬಯ್ಯಾಪುರ, ಮಹಂತೇಶ ಕೌಜಲಗಿ, ಮಾಜಿ ಸಚಿವ ಎಚ್.ಎಂ. ರೇವಣ್ಣ, ನಿವೃತ್ತ ಐಎಎಸ್ ಅಧಿಕಾರಿ ಪುಟ್ಟಸ್ವಾಮಿ ಜೊತೆ ಶಿವಕುಮಾರ್ ಹಲವು ವಿಚಾರಗಳ ಕುರಿತು ಮಾತುಕತೆ ನಡೆಸಿದರು.

ಬಳಿಕ ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಎಸ್. ಪೊನ್ನಣ್ಣ, ಕೊಡಗು ಜಿಲ್ಲಾ ಘಟಕದ ಅಧ್ಯಕ್ಷ ಧರ್ಮಜ ಉತ್ತಪ್ಪ, ಅಬ್ದುಲ್ ರೆಹಮಾನ್, ಹಂಸ ಕೊಟ್ಟಮುಡಿ, ಪುಡ್ಡಿ ಗೋಣಿಕೊಪ್ಪ, ಅಶ್ರಫ್ ಕೊಟ್ಟಮುಡಿ ಅವರೊಂದಿಗೆ ಚರ್ಚಿಸಿದರು.

ಸಿಐಟಿಯು ನಾಯಕಿ ಎಸ್. ವರಲಕ್ಷ್ಮೀ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದರು

ರಾಜ್ಯಸಭೆ ಸದಸ್ಯ ನಾಸೀರ್ ಹುಸೇನ್, ಶಾಸಕ ರಘುಮೂರ್ತಿ, ಮಾಜಿ ಶಾಸಕ ಬಿ.ಜಿ. ಗೋವಿಂದಪ್ಪ, ಶಾಸಕ ನಂಜೇಗೌಡ, ಪರಿಷತ್ ಸದಸ್ಯ ಪ್ರಕಾಶ್ ರಾಥೋಡ್, ಮಾಜಿ ಶಾಸಕರಾದ ಅಶೋಕ್ ಪಟ್ಟಣ, ಬಿ.ಆರ್. ಯಾವಗಲ್ ಜೊತೆಗೂ ಸಮಾಲೋಚನೆ ನಡೆಸಿದರು.

ಸಿಐಟಿಯು ನಾಯಕಿ ಎಸ್. ವರಲಕ್ಷ್ಮೀ ಕೂಡಾ ಶಿವಕುಮಾರ್ ಅವರನ್ನು ಭೇಟಿ ಮಾಡಿ, 'ಅಂಗನವಾಡಿ, ಆಶಾ ಕಾರ್ಯಕರ್ತೆಯರಿಗೆ ಸರ್ಕಾರದಿಂದ ಸಿಗಬೇಕಾದ ಸವಲತ್ತುಗಳು ಸಮರ್ಪಕವಾಗಿ ಸಿಗುತ್ತಿಲ್ಲ. ಹೋರಾಟ ನಡೆಸಿದರೂ ಫಲ ಕೊಡುತ್ತಿಲ್ಲ. ಮುಂದಿನ ವಿಧಾನಮಂಡಲದ ಅಧಿವೇಶನದಲ್ಲಿ ಈ ವಿಷಯ ಪ್ರಸ್ತಾಪಿಸಬೇಕು' ಎಂದು ಮನವಿ ಮಾಡಿದರು.

ಮೇಕೆದಾಟು ಯೋಜನೆ ಆರಂಭಿಸಲಿ: ಸುದ್ದಿಗಾರರ ಜೊತೆ ಮಾತನಾಡಿದ ಶಿವಕುಮಾರ್, 'ರಾಜ್ಯಕ್ಕೆ ಬಂದಿರುವ ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಜೊತೆ ಮುಖ್ಯಮಂತ್ರಿ ಮಾತನಾಡಿದ್ದಾರೆ. ಶುಭ ಘಳಿಗೆಯಲ್ಲಿ ಮೇಕೆದಾಟು ಯೋಜನೆ ಆರಂಭಿಸಲಿ. ಏನೇ ಅಡೆತಡೆ ಇದ್ದರೂ ಅದನ್ನು ಬಗೆಹರಿಸಿ ಆದಷ್ಟು ಬೇಗ ಭೂಮಿ ಪೂಜೆ ಮಾಡಲಿ' ಎಂದು ಸಲಹೆ ನೀಡಿದರು.

ಡಿಕೆಶಿ ವ್ಯಂಗ್ಯ: 'ಉತ್ತರಪ್ರದೇಶ ಮಾದರಿಯಲ್ಲಿ ಜನಸಂಖ್ಯೆ ನಿಯಂತ್ರಣ ಕಾಯ್ದೆ ರಾಜ್ಯದಲ್ಲೂ ಜಾರಿ ಮಾಡುತ್ತೇವೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ರವಿ ರಾಷ್ಟ್ರೀಯ ನಾಯಕರು. ನಾನು ರಾಜ್ಯದ ಕಾಂಗ್ರೆಸ್ ಅಧ್ಯಕ್ಷ. ಅವರು ಏನು ಹೇಳಿದರೂ ನಡೆಯುತ್ತದೆ' ಎಂದರು.

ಐದು ವರ್ಷದ ಕಾನೂನು ಪದವಿ ಪ್ರವೇಶಕ್ಕೆ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜು, 2021–22ನೇ ಶೈಕ್ಷಣಿಕ ಸಾಲಿನ ಐದು ವರ್ಷದ ಬಿಎ–ಎಲ್‌ಎಲ್‌ಬಿ (ಹಾನರ್ಸ್ ಕೋರ್ಸ್) ಪದವಿ ಪ್ರವೇಶಕ್ಕೆ ಅರ್ಜಿಗಳನ್ನು ಆಹ್ವಾನಿಸಿದೆ.

ದ್ವಿತೀಯ ಪಿಯುಸಿ ಹಾಗೂ ತತ್ಸಮಾನ ಪರೀಕ್ಷೆಯಲ್ಲಿ ಕನಿಷ್ಠ ಶೇ 45ರಷ್ಟು ಅಂಕ ಪಡೆದ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಶೇ 40 ಹಾಗೂ ಒಬಿಸಿ ವಿದ್ಯಾರ್ಥಿಗಳು ಶೇ 42ರಷ್ಟು ಅಂಕಗಳನ್ನು ಪಡೆದಿರಬೇಕು.

ಸಾಮಾನ್ಯ ವರ್ಗಕ್ಕೆ 20 ವರ್ಷ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಒಬಿಸಿ ಹಾಗೂ ವಿದೇಶಿ ವಿದ್ಯಾರ್ಥಿಗಳಿಗೆ 22 ವರ್ಷ ಗರಿಷ್ಠ ವಯೋಮಿತಿ ನಿಗದಿಪಡಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಆಗಸ್ಟ್ 10ರೊಳಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು. ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್ www.bangaloreuniversity.ac.in ನಲ್ಲಿ ಅರ್ಜಿ ನಮೂನೆ ಹಾಗೂ ಇತರ ವಿವರಗಳನ್ನೊಳಗೊಂಡ ಕೈಪಿಡಿ ಲಭ್ಯವಿರುತ್ತದೆ.

ಆನ್‌ಲೈನ್ ಮೂಲಕ ಭರ್ತಿ ಮಾಡಿದ ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಂಡು ಸಂಬಂಧಪಟ್ಟ ಎಲ್ಲಾ ದೃಢೀಕೃತ ದಾಖಲೆಗಳೊಂದಿಗೆ ಅದನ್ನು ಆಗಸ್ಟ್ 12ರೊಳಗೆ ಪ್ರಾಂಶುಪಾಲರು, ವಿಶ್ವವಿದ್ಯಾಲಯ ಕಾನೂನು ಕಾಲೇಜು, ಜ್ಞಾನಭಾರತಿ ಆವರಣ, ಬೆಂಗಳೂರು–560056 ಈ ವಿಳಾಸಕ್ಕೆ ಸಲ್ಲಿಸಲು ತಿಳಿಸಲಾಗಿದೆ.

ಸಾಮಾನ್ಯ ಹಾಗೂ ಸೆಲ್ಫ್ ಫೈನಾನ್ಸ್, ಇವೆರಡು ಸೀಟುಗಳಿಗೂ ಅರ್ಜಿ ಸಲ್ಲಿಸಬಹುದು. ಸಾಮಾನ್ಯ ವರ್ಗ ಹಾಗೂ ಒಬಿಸಿಗೆ ₹850, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1ಕ್ಕೆ ₹550 ಅರ್ಜಿ ಶುಲ್ಕ ನಿಗದಿಪಡಿಸಲಾಗಿದೆ.

ಹೆಚ್ಚಿನ ಮಾಹಿತಿಗೆ 080–23392384, 080–22961174 ಅಥವಾ 080–22961172 ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಎನ್‌ಐಎಗೆ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳಾಗಿ ರಾಜ್ಯದ ಇಬ್ಬರು ವಕೀಲರನ್ನು ನೇಮಕ ಮಾಡಲಾಗಿದೆ.

ವಕೀಲರಾದ ಸಿ.ಎ. ರವೀಂದ್ರ ಹಾಗೂ ಶಂಕರ್ ಟಿ. ಬಿಕ್ಕಣ್ಣವರ ಅವರನ್ನು ಕರ್ನಾಟಕದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಿಸಿ ಎನ್‌ಐಎ ಕಾನೂನು ವಿಭಾಗ ಆದೇಶ ಹೊರಡಿಸಿದೆ.

ಸಿ.ಎ. ರವೀಂದ್ರ

ಎನ್‌ಐಎ ತನಿಖೆ ನಡೆಸುವ ಪ್ರಕರಣಗಳಲ್ಲಿ ರಾಜ್ಯದ ವಿಶೇಷ ನ್ಯಾಯಾಲಯ ಹಾಗೂ ಹೈಕೋರ್ಟ್‌ನಲ್ಲಿ ವಾದ ಮಂಡಿಸಲು ಈ ನೇಮಕಾತಿ ಮಾಡಲಾಗಿದೆ.

ಕೆಎಸ್‌ಆರ್‌ಟಿಸಿಯಿಂದ ತಿರುಪತಿಗೆ ಪ್ಯಾಕೇಜ್ ಪ್ರವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿರುಪತಿ ಪ್ಯಾಕೇಜ್ ಪ್ರವಾಸವನ್ನು ಕೆಎಸ್‌ಆರ್‌ಟಿಸಿ ಶುಕ್ರವಾರದಿಂದ (ಜು.16) ಮತ್ತೆ ಆರಂಭಿಸಲಿದೆ.

ಐರಾವತ ಕ್ಲಬ್ ಕ್ಲಾಸ್(ಮಲ್ಟಿ ಆಕ್ಸೆಲ್) ಬಸ್‌ನಲ್ಲಿ ಪ್ರವಾಸ ಕರೆದೊಯ್ಯಲಾಗುತ್ತದೆ. ಪ್ರತಿದಿನ ರಾತ್ರಿ 8.45ಕ್ಕೆ ಶಾಂತಿನಗರ ನಿಲ್ದಾಣದಿಂದ ಬಸ್ ಹೊರಡಲಿದೆ.



ಜಯನಗರ, ನಾಗಸಂದ್ರ, ಎನ್.ಆರ್. ಕಾಲೊನಿ, ಕೆಂಪೇಗೌಡ ಬಸ್ ನಿಲ್ದಾಣ, ದೊಮ್ಮಲೂರು, ಮಾರತಹಳ್ಳಿ, ಐಟಿಐ ಗೇಟ್ ಮತ್ತು ಕೆ.ಆರ್.ಪುರದಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಂಡು ಹೊಸಕೋಟೆ ಮಾರ್ಗದಲ್ಲಿ ಪ್ರಯಾಣ ಮುಂದುವರಿಸಲಾಗುವುದು.

ಮೈಸೂರು ರಸ್ತೆ ಸ್ಯಾಟಲೈಟ್ ನಿಲ್ದಾಣದಿಂದ ರಾತ್ರಿ 8.30ಕ್ಕೆ ಹೊರಡುವ ಮತ್ತೊಂದು ಬಸ್, ವಿಜಯನಗರ ಟಿಟಿಎಂಸಿ, ನವರಂಗ್, ಮಲ್ಲೇಶ್ವರ ವೃತ್ತ, ಕೆಂಪೇಗೌಡ ಬಸ್ ನಿಲ್ದಾಣ, ಐಟಿಐ ಗೇಟ್, ಕೆ.ಆರ್.ಪುರ ಮಾರ್ಗದಲ್ಲಿ ತಿರುಪತಿಗೆ ಪ್ರಯಾಣ ಮುಂದುವರಿಯಲಿದೆ.

ಭಾನುವಾರದಿಂದ ಗುರುವಾರದ ತನಕ ವಯಸ್ಕರಿಗೆ ಪ್ರಯಾಣದರ ₹2,200 ಮತ್ತು ಮಕ್ಕಳಿಗೆ (6ರಿಂದ 12 ವರ್ಷ) ₹1,800 ದರ ನಿಗದಿ ಮಾಡಲಾಗಿದೆ.

ವಾರಾಂತ್ಯದ ದಿನ (ಶುಕ್ರವಾರ ಮತ್ತು ಶನಿವಾರ) ವಯಸ್ಕರಿಗೆ ₹2,600 ಮತ್ತು ಮಕ್ಕಳಿಗೆ ₹2,000 ನಿಗದಿ ಮಾಡಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ನಗರದಲ್ಲಿ ಇಂದು

ಫಾದರ್ ಸ್ಟ್ಯಾನ್ ಸ್ವಾಮಿ ಅವರಿಗೆ ಶ್ರದ್ಧಾಂಜಲಿ ಹಾಗೂ ಸಾರ್ವಜನಿಕ ಹಕ್ಕೊತ್ತಾಯ: ಆಯೋಜನೆ–ಸಮಾನ ಮನಸ್ಕರ ವೇದಿಕೆ, ಸ್ಥಳ: ಮೌರ್ಯ ವೃತ್ತದ ಗಾಂಧಿ ಪ್ರತಿಮೆ ಬಳಿ–ಬೆಳಿಗ್ಗೆ 10.30.

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಆಗ್ರಹ ದಿನ: ಆಯೋಜನೆ–ಎಐಡಿಎಸ್‌ಒ, ಸ್ಥಳ–ಮಹಾರಾಣಿ ಕಲಾ ಕಾಲೇಜಿನ ಎದುರು–ಬೆಳಿಗ್ಗೆ 10.30.

'ವಾಕ್ ಸ್ವಾತಂತ್ರ್ಯದ ಹಕ್ಕು ಮತ್ತು ಪತ್ರಕರ್ತರು' ಕುರಿತ ವೆಬಿನಾರ್: ಮಾತನಾಡುವವರು–ಪರ್ಯಾಯ ಕಾನೂನು ವೇದಿಕೆ ವಕೀಲ ವಿನಯ್ ಕೆ.ಶ್ರೀನಿವಾಸ, ಆಯೋಜನೆ–ಅನ್ವೇಷಣೆ ಮೀಡಿಯಾ ಕಲೆಕ್ಟಿವ್–ಬೆಳಿಗ್ಗೆ 11.

'ಕರ್ನಾಟಕ ವಿದ್ಯುತ್ ಚಾಲಿತ ಬೈಕ್ ಟ್ಯಾಕ್ಸಿ ಯೋಜನೆ–2021' ಅನಾವರಣ: ಉಪಸ್ಥಿತಿ–ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಆಯೋಜನೆ–ಸಾರಿಗೆ ಇಲಾಖೆ, ಸ್ಥಳ–ಮುಖ್ಯಮಂತ್ರಿಯವರ ಗೃಹ ಕಚೇರಿ (ಕೃಷ್ಣಾ)–ಸಂಜೆ 4.30.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲಿರುವ ರಾಜ್ಯದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನ ವಿತರಣೆ ಹಾಗೂ ಕುಟುಂಬದವರಿಗೆ ಸನ್ಮಾನ: ಉಪಸ್ಥಿತಿ– ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಆಯೋಜನೆ–ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸ್ಥಳ–ಮುಖ್ಯಮಂತ್ರಿಯವರ ಗೃಹ ಕಚೇರಿ (ಕೃಷ್ಣಾ)–ಸಂಜೆ 5.

ಫಾದರ್ ಸ್ಟ್ಯಾನ್ ಸ್ವಾಮಿ ಅವರಿಗೆ ಶ್ರದ್ಧಾಂಜಲಿ: ಭಾಗವಹಿಸುವವರು–ಹಿರಿಯ ಲೇಖಕಿ ಬಿ.ಟಿ. ಲಲಿತಾನಾಯಕ್, ಜನತಾ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ಸ್ಥಾವರಮಠ, ಆಯೋಜನೆ–ಜನತಾ ಪಕ್ಷ–ಕರ್ನಾಟಕ, ಸ್ಥಳ–ರೆಡ್ಡಿ ಪೆಟ್ರೋಲ್ ಬಂಕ್ (ನೆಹರೂ ವೃತ್ತ) ಶೇಷಾದ್ರಿಪುರ–ಸಂಜೆ 6.

ಫಾದರ್ ಸ್ಟ್ಯಾನ್ ಸ್ವಾಮಿ

ಬಿ.ಟಿ.ಲಲಿತಾ ನಾಯಕ್

ತಲಾ ₹10 ಸಾವಿರ ನಗದು ಪುರಸ್ಕಾರ

ಸಾಧಕರಿಗೆ ದತ್ತಿ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೇಖಕ ಹಾಗೂ ಕನ್ನಡಪರ ಹೋರಾಟಗಾರ ಜಾಣಗೆರೆ ವೆಂಕಟರಾಮಯ್ಯ ಮತ್ತು ಸಂತ ಜೋಸೆಫರ ಕನ್ನಡ ಸಂಘದ ಅಧ್ಯಕ್ಷ ಎ.ಆರೋಗ್ಯಪ್ಪ ಅವರು ಫಾದರ್ ಚಸರಾ ಕನ್ನಡ ಸಂಸ್ಕೃತಿ ದತ್ತಿ ಪ್ರಶಸ್ತಿಗೆ ಭಾಜನರಾದರು.

ಕನ್ನಡ ಸಾಹಿತ್ಯ ಪರಿಷತ್ ಮಂಗಳವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ ಅವರು ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಈ ಪುರಸ್ಕಾರವು ತಲಾ ₹10 ಸಾವಿರ ನಗದು ಒಳಗೊಂಡಿದೆ.

ರಂಗಭೂಮಿ ಕಲಾವಿದ ಮಲ್ಲಿಕಾರ್ಜುನಪ್ಪ ನಿಜಗುಣಪ್ಪ ಚಿಕ್ಕಮಠ ಅವರು ಕಂಡ್ಲೂರು ಗಿರಿಜಮ್ಮ ಮತ್ತು ನರಸಿಂಹಯ್ಯ ಜೋಗಿ ದತ್ತಿ ಪ್ರಶಸ್ತಿ ಸ್ವೀಕರಿಸಿದರು. ಇದು ₹5 ಸಾವಿರ ನಗದು ಒಳಗೊಂಡಿದೆ.

ಎಸ್.ರಂಗಪ್ಪ, 'ಕೋವಿಡ್‌ನಿಂದಾಗಿ ಸಾಹಿತಿಗಳು ಹಾಗೂ ಕಲಾವಿದರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಲಾವಿದರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದರೂ ಅವರ ಖಾತೆಗಳಿಗೆ ನೇರವಾಗಿ ಕೊರೊನಾ ಪರಿಹಾರ ಮೊತ್ತ ಜಮೆ ಮಾಡುತ್ತಿದ್ದೇವೆ' ಎಂದರು.

ಪರಿಷತ್ ಅಧ್ಯಕ್ಷ ಮನು ಬಳಿಗಾರ್, 'ದತ್ತಿ ಪುರಸ್ಕೃತರನ್ನು ಆಯ್ಕೆ ಮಾಡಲು ಅರ್ಹತೆ, ಯೋಗ್ಯತೆ ಮತ್ತು ಸಾಧನೆಗಳೇ ಮಾನದಂಡವಾಗಿದೆ' ಎಂದರು.

'ಫಾದರ್ ಚಸರಾ ಅವರು ಕನ್ನಡಕ್ಕಾಗಿ ಮಿಡಿಯುತ್ತಿದ್ದರು. ಕನ್ನಡ ಭಾಷೆ ಹಾಗೂ ಕನ್ನಡಿಗರಿಗೆ ಅನ್ಯಾಯವಾದಾಗ ಗಟ್ಟಿ ಧ್ವನಿ ಎತ್ತುತ್ತಿದ್ದರು' ಎಂದು ಕನ್ನಡಪರ ಹೋರಾಟಗಾರ್ತಿ ರೀಟಾ ರೀನಿ ತಿಳಿಸಿದರು.



ಕಾರ್ಯಕ್ರಮದಲ್ಲಿ (ಕುಳಿತವರು; ಎಡದಿಂದ) ಮಲ್ಲಿಕಾರ್ಜುನಪ್ಪ ನಿಜಗುಣಪ್ಪ ಚಿಕ್ಕಮಠ, ಎ.ಆರೋಗ್ಯಪ್ಪ ಮತ್ತು ಜಾಣಗೆರೆ ವೆಂಕಟರಾಮಯ್ಯ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಪದ್ಮರಾಜ ದಂಡಾವತಿ, ಕೆ.ರಾಜಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಎಸ್.ರಂಗಪ್ಪ, ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್, ಗೌರವ ಕೋಶಾಧ್ಯಕ್ಷ ಪಿ.ಮಲ್ಲಿಕಾರ್ಜುನಪ್ಪ ಮತ್ತು ರೀಟಾ ರೀನಿ ಇದ್ದಾರೆ– ಪ್ರಜಾವಾಣಿ ಚಿತ್ರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560 002

ದೂರವಾಣಿ : 080–22213530/22241325 ಫ್ಯಾಕ್ಸ್ : 080–22214379

ಇ–ಮೇಲ್: kanbhavblr@gmail.com ವೆಬ್‌ಸೈಟ್ : www.kannadasiri.in, www.kanaja.in

ಸಂಖ್ಯೆ: ಡಿಕೆಸಿ–17015/73/2021 ದಿನಾಂಕ: 06–07–2021

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಮಲ್ಲತ್ತಹಳ್ಳಿ ಜ್ಞಾನಭಾರತಿ ಆವರಣದಲ್ಲಿರುವ ಕರ್ನಾಟಕ ಕಲಾಗ್ರಾಮವನ್ನು ಸಾಂಸ್ಕೃತಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ನಿಮಿತ್ತ ಕಲಾಗ್ರಾಮದಲ್ಲಿ ನಿರ್ಮಿಸಬಹುದಾದ ಕಲಾತ್ಮಕ ನಿರ್ಮಾಣಗಳು ಹಾಗೂ ಇತರೆ ಯೋಜನೆಗಳ ಆರ್ಥಿಕ ವಿಶ್ಲೇಷಣೆ, ನಕ್ಷೆ, ವಿನ್ಯಾಸ, ಅಂದಾಜು ಪಟ್ಟಿ, ವೆಚ್ಚ ರಚನೆಯೊಂದಿಗೆ ವಿವರವಾದ ಯೋಜನೆಗಳ ಸಮಗ್ರ ವರದಿ (ಡಿ.ಪಿ.ಆರ್) ಸಿದ್ಧಪಡಿಸಿ ನೀಡಲು ಟೆಂಡರನ್ನು (ಇ–ಪ್ರೊಕ್ಯೂರ್‌ಮೆಂಟ್ ಮೂಲಕ) ಈ ಕೆಳಕಂಡಂತೆ ಆಹ್ವಾನಿಸಲಾಗಿದೆ.

1.	ಟೆಂಡರ್‌ಗೆ ಇಟ್ಟ ಮೊತ್ತ	ರೂ.6,00,000/–
2.	ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ವೆಬ್‌ಸೈಟ್/ದಿನಾಂಕ	http://www.eproc.karnataka.gov.in ದಿನಾಂಕ: 06–07–2021
3.	ಇಎಂಡಿ ಮೊತ್ತ	ರೂ. 15,000/–
4.	ಟೆಂಡರ್ ಡಾಕ್ಯುಮೆಂಟ್ ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡುವ ಅಂತಿಮ ದಿನಾಂಕ ಮತ್ತು ಸಮಯ	20–07–2021, ಸಂಜೆ 4.00 ಗಂಟೆ
5.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	22–07–2021, ಬೆಳಿಗ್ಗೆ 11.00 ಗಂಟೆ
6.	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	26–07–2021 ಬೆಳಿಗ್ಗೆ 11.00 ಗಂಟೆ
7.	ಯಾವುದೇ ವಿಚಾರಣೆ/ಸ್ಪಷ್ಟೀಕರಣಕ್ಕಾಗಿ ಸಂಪರ್ಕಿಸಬಹುದಾದ ಅಧಿಕಾರಿ ವಿಳಾಸ ಹಾಗೂ ದೂರವಾಣಿ ಸಂಖ್ಯೆ	ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560 002. ದೂ: 080–22213530

ಸಹಿ/– ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ವಾ.ಸಾ.ಸಂ.ಇ/ಬೆಂ.ನಗರ/818/ಆಕಾರ್/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಡಿಮೆ ಮೊತ್ತ ದಾಖಲಿಸಿದವರ ಬದಲು ಹೆಚ್ಚು ಮೊತ್ತ ದಾಖಲಿಸಿದವರಿಗೆ ಗುತ್ತಿಗೆ ನೀಡಲು ಯತ್ನ

ರಸ್ತೆ ಕಾಮಗಾರಿ: ₹47 ಕೋಟಿ ಟೆಂಡರ್ ಅಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿಯವರ ನವನಗರೋತ್ಥಾನ ಯೋಜನೆಯಡಿ ಪುಲಿಕೇಶಿನಗರ, ಶಿವಾಜಿನಗರ ವಿಧಾನಸಭಾ ಕ್ಷೇತ್ರಗಳ ಮುಖ್ಯ ರಸ್ತೆ, ಉಪಮುಖ್ಯ ರಸ್ತೆ, ಮಳೆನೀರು ಚರಂಡಿ, ಪಾದಚಾರಿ ಮಾರ್ಗ ನಿರ್ಮಾಣದ ₹ 47.70 ಕೋಟಿ ಮೊತ್ತದ ಕಾಮಗಾರಿಯ ಟೆಂಡರ್‌ನಲ್ಲಿ ಅಕ್ರಮ ನಡೆದಿದೆ.

ಟೆಂಡರ್‌ನಲ್ಲಿ ಕಡಿಮೆ ಮೊತ್ತ ದಾಖಲಿಸಿದ (ಎಲ್1) ಗುತ್ತಿಗೆದಾರನ ಬದಲು ಹೆಚ್ಚು ಮೊತ್ತ ದಾಖಲಿಸಿದ ಗುತ್ತಿಗೆದಾರನಿಗೆ ಕಾಮಗಾರಿಯ ಟೆಂಡರ್ ವಹಿಸುವ ಬಿಬಿಎಂಪಿಯ ಪ್ರಯತ್ನಕ್ಕೆ ಹಿನ್ನಡೆಯಾಗಿದೆ. ಬಿಬಿಎಂಪಿಯ ಶಿಫಾರಸ್ಸನ್ನು ಬದಿಗಿರಿಸಿದ ನಗರಾಭಿವೃದ್ಧಿ ಇಲಾಖೆಯ ಅಧಿಕಾರಯುಕ್ತ ಸಮಿತಿ ಎಲ್–1 ಗುತ್ತಿಗೆದಾರರಿಗೇ ಕಾಮಗಾರಿಯ ಟೆಂಡರ್ ನೀಡಲು ನಿರ್ಧರಿಸಿದೆ.

ಈ ಕಾಮಗಾರಿಗಳ ಕ್ರಿಯಾಯೋಜನೆಗಳಿಗೆ ನಗರಾಭಿವೃದ್ಧಿ ಇಲಾಖೆಯು 2019ರ ಸೆ.20ರಂದು ಅನುಮೋದನೆ ನೀಡಿತ್ತು. ಬಿಬಿಎಂಪಿಯು 2020ರ ಜ.22ರಂದು ಈ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿತ್ತು. ಒಟ್ಟು ಏಳು ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು. ಅವರಲ್ಲಿ ಎ.ಮೋಹನ ನರಸಿಂಹಲು (ಜೆಎಂಸಿ ಕನ್‌ಸ್ಟ್ರಕ್ಷನ್ಸ್), ಎಂ.ಎಸ್.ವೆಂಕಟೇಶ್ ಹಾಗೂ ಎಸ್‌.ಟಿ.ರಮೇಶ್ (ಗಣಪತಿ ಸ್ಟೋನ್ ಕ್ರಷರ್ಸ್) ತಾಂತ್ರಿಕ ಅರ್ಹತೆ ಪಡೆದಿದ್ದರು. 2020ರ ಮೇ 20ರಂದು ಬಿಬಿಎಂಪಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದಿದ್ದ ತಾಂತ್ರಿಕ ಮೌಲ್ಯಮಾಪನ ಸಮಿತಿ ಟೆಂಡರ್ ಮೊತ್ತವನ್ನು ₹37.86 ಕೋಟಿಗೆ ಪರಿಷ್ಕರಿಸಿತ್ತು.

2020ರ ಮೇ 16ರಂದು ಆರ್ಥಿಕ ಬಿಡ್ ತೆರೆಯಲಾಗಿತ್ತು. ಎ.ಮೋಹನ್ ₹ 33.69 ಕೋಟಿಗೆ, ಎಂ.ಎಸ್. ವೆಂಕಟೇಶ್ ₹ 38.91 ಕೋಟಿಗೆ ಹಾಗೂ ಎಸ್‌.ಟಿ.ರಮೇಶ್ ₹ 41.61 ಕೋಟಿಗೆ ಬಿಡ್ ಸಲ್ಲಿಸಿದ್ದರು. ಟೆಂಡರ್‌ನ ಪರಿಷ್ಕೃತ ಮೊತ್ತಕ್ಕಿಂತ ಶೇ 11.01ರಷ್ಟು ಕಡಿಮೆ ದರವನ್ನು ನಮೂದಿಸಿದ್ದರೂ ಮಾದರಿ ಟೆಂಡರ್ ದಾಖಲೆ (ಕೆಡಬ್ಲ್ಯು–4) ಸೆಕ್ಷನ್ IIನ ಪ್ರಕಾರ ಟೆಂಡರ್‌ದಾರರಿಗೆ ನೀಡುವ ಸೂಚನೆಗಳ ಅನುಚ್ಛೇದ 25.5ರನ್ವಯ ಹೆಚ್ಚುವರಿ ದಾಖಲೆ ಸಲ್ಲಿಸುವಂತೆ ಕಾರ್ಯಪಾಲಕ ಎಂಜಿನಿಯರ್ ಎ.ಮೋಹನ್ ಅವರಿಗೆ ಸೂಚಿಸಿದ್ದರು. ಸೂಕ್ತ ದಾಖಲೆ ನೀಡಿಲ್ಲ ಎಂಬ ಕಾರಣ ನೀಡಿ ಅವರ ಅರ್ಜಿಯನ್ನು ತಿರಸ್ಕರಿಸಿದ್ದರು.

ಈ ನಡುವೆ, 2020ರ ಜುಲೈ 1ರಂದು ಟೆಂಡರ್ ಮೊತ್ತವನ್ನು ಮತ್ತೆ ₹ 39.28 ಕೋಟಿಗೆ ಪರಿಷ್ಕರಿಸಲಾಗಿತ್ತು. ಬಿಬಿಎಂಪಿ ಆಯುಕ್ತರ ಅಧ್ಯಕ್ಷತೆಯಲ್ಲಿ 2020ರ ಆ.11ರಂದು ತಾಂತ್ರಿಕ ಮೌಲ್ಯಮಾಪನ, ಆರ್ಥಿಕ ಮೌಲ್ಯಮಾಪನ ಮತ್ತು ದರ ಸಂಧಾನ ಸಭೆ ನಡೆದಿತ್ತು. ವೆಂಕಟೇಶ್ ಟೆಂಡರ್ ಮೊತ್ತಕ್ಕಿಂತ ಶೇ 1.89ರಷ್ಟು ಕಡಿಮೆ ಮೊತ್ತ ನಮೂದಿಸಿದ್ದಾರೆ ಎಂದು ಅವರಿಗೆ ಟೆಂಡರ್ ನೀಡಲು ಬಿಬಿಎಂಪಿ ಶಿಫಾರಸು ಮಾಡಿತ್ತು. ಇದಕ್ಕೆ ಅನುಮೋದನೆ ಕೋರಿ ಬಿಬಿಎಂಪಿಯು ಅಧಿಕಾರಯುಕ್ತ ಸಮಿತಿಗೆ 2021ರ ಮಾರ್ಚ್ 16ರಂದು ಪ್ರಸ್ತಾವನೆ ಸಲ್ಲಿಸಿತ್ತು.

ಎಲ್–1 ಗುತ್ತಿಗೆದಾರರು ನಮೂದಿಸಿದ್ದ ಮೊತ್ತಕ್ಕಿಂತ ₹ 5.02 ಕೋಟಿಗಳಷ್ಟು ಹೆಚ್ಚು ಮೊತ್ತವನ್ನು ನಮೂದಿಸಿರುವ ಎಲ್–2 ಗುತ್ತಿಗೆದಾರರಿಗೆ ಟೆಂಡರ್ ನೀಡಲು ಶಿಫಾರಸು ಮಾಡುವ ಮೂಲಕ ಬಿಬಿಎಂಪಿಯು ಸರ್ಕಾರಕ್ಕೆ ಆರ್ಥಿಕ ಹಾನಿ ಉಂಟು ಮಾಡಿದೆ. ಇದು ಅಧಿಕಾರಿಗಳ ಕರ್ತವ್ಯ ಲೋಪ ಎಂದು ಅಧಿಕಾರಯುಕ್ತ ಸಮಿತಿಯು 2021ರ ಮೇ 21ರಂದು ನಡೆದ ಸಭೆಯಲ್ಲಿ ಅಭಿಪ್ರಾಯಪಟ್ಟಿದೆ. ಕೆಲವು ಷರತ್ತುಗಳನ್ನು ವಿಧಿಸಿ ಎಲ್–1 ಗುತ್ತಿಗೆದಾರರಾದ ಮೋಹನ್ ಅವರಿಗೆ ಕಾಮಗಾರಿ ಗುತ್ತಿಗೆ ನೀಡಲು ಅಧಿಕಾರಯುಕ್ತ ಸಮಿತಿ ಜುಲೈ 6ರಂದು ಆದೇಶ ಮಾಡಿದೆ.

ಗುತ್ತಿಗೆದಾರರು ತಪ್ಪುಮಾಹಿತಿ ನೀಡಿದ್ದಲ್ಲಿ ಟೆಂಡರ್ ರದ್ದುಪಡಿಸಿ ಅವರ ವಿರುದ್ಧ ಬಿಬಿಎಂಪಿ ಮುಖ್ಯ ಆಯುಕ್ತರು ಕ್ರಮವಹಿಸಬಹುದು. ಕಾಮಗಾರಿ ಅನುಷ್ಠಾನಗೊಳಿಸಲು ವಿಫಲವಾದರೆ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗದಂತೆ ತಡೆಯಲು ಹೆಚ್ಚುವರಿ ಭದ್ರತಾ ಠೇವಣಿಯನ್ನು ಗುತ್ತಿಗೆದಾರರಿಂದ ಪಡೆಯಬೇಕು ಎಂದು ಸಮಿತಿ ಆದೇಶದಲ್ಲಿ ತಿಳಿಸಿದೆ.

ಮುಖ್ಯಾಂಶಗಳು

- ₹ 47.70 ಕೋಟಿ ಮೊತ್ತದ ಕಾಮಗಾರಿ
- ಕಾಮಗಾರಿಗೆ 2020ರ ಜ.22ರಂದು ಟೆಂಡರ್ ಆಹ್ವಾನ
- ಬಿಬಿಎಂಪಿ ಶಿಫಾರಸಿನಂತೆ ಗುತ್ತಿಗೆ ನೀಡಿದ್ದರೆ ಸರ್ಕಾರದ ಬೊಕ್ಕಸಕ್ಕೆ ₹ 5.02 ಕೋಟಿ ನಷ್ಟ

ಇಇ ವಿರುದ್ಧ ಶಿಸ್ತುಕ್ರಮಕ್ಕೆ ಸೂಚನೆ

ಈ ಟೆಂಡರ್ ಪ್ರಕ್ರಿಯೆಯಲ್ಲಿ ಸರ್ಕಾರಕ್ಕೆ ನಷ್ಟ ಉಂಟಾಗುವಂತಹ ಶಿಫಾರಸು ಮಾಡಿದ ಬಿಬಿಎಂಪಿಯ ಕಾರ್ಯಪಾಲಕ ಎಂಜಿನಿಯರ್ (ಇಇ) ಅವರ ನಡೆಗೆ ಅಧಿಕಾರಯುಕ್ತ ಸಮಿತಿ ಆಕ್ಷೇಪ ವ್ಯಕ್ತಪಡಿಸಿದೆ.

ಕೆಡಬ್ಲ್ಯು–4 ನಿಯಮವನ್ನು ಕಾರ್ಯಪಾಲಕ ಎಂಜಿನಿಯರ್ ಅವರು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. ಬಿಬಿಎಂಪಿಗೆ ಹಾಗೂ ಸರ್ಕಾರಕ್ಕೆ ಹಾನಿ ಆಗದಷ್ಟು ಹೆಚ್ಚುವರಿ ಬ್ಯಾಂಕ್ ಗ್ಯಾರಂಟಿಯನ್ನು ಎಲ್–1 ಗುತ್ತಿಗೆದಾರರಿಂದ ಪಡೆಯಲು ಅವಕಾಶವಿದ್ದರೂ ಅವರು ಉದ್ದೇಶಪೂರ್ವಕವಾಗಿ ಎಲ್–2 ಗುತ್ತಿಗೆದಾರರಿಗೆ ಟೆಂಡರ್ ನೀಡಲು ಶಿಫಾರಸು ಮಾಡಿದ್ದಾರೆ. ಅವರ ವಿರುದ್ಧ ಬಿಬಿಎಂಪಿ ಮುಖ್ಯ ಆಯುಕ್ತರು ಶಿಸ್ತುಕ್ರಮ ಕೈಗೊಳ್ಳಬೇಕು ಎಂದು ಸಮಿತಿ ಹೇಳಿದೆ.

ಸುದ್ದಿ 2 ನಿಮಿಷ

ನಾನು ಎಲ್ಲಿಗೆ ಹೋಗಲಿ: ಸಂಸದೆ ಸುಮಲತಾ ಪ್ರಶ್ನೆ

ಮಂಡ್ಯ: ‘ಲೋಕಸಭಾ ಅಧಿವೇಶನದಲ್ಲಿ ಇದ್ದಾಗ, ಜಿಲ್ಲೆಗೆ ಬರುತ್ತಿಲ್ಲ ಎಂದು ಆರೋಪಿಸುತ್ತಾರೆ. ಜಿಲ್ಲೆಗೆ ಬಂದರೆ ಟೀಕೆಗೆ ಇಳಿಯುತ್ತಾರೆ. ನಾನು ಎಲ್ಲಿಗೆ ಹೋಗಬೇಕು’ ಎಂದು ಸಂಸದೆ ಸುಮಲತಾ ಮಂಗಳವಾರ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಮಾತನಾಡಿ, ‘ನಾನು ಏನೇ ಮಾತನಾಡಿದರೂ ರಾಜಕೀಯ ಬಣ್ಣ ಕಟ್ಟುವ ಕೆಲಸ ಮಾಡಲಾಗುತ್ತಿದೆ. ಅಕ್ರಮ ಗಣಿಗಾರಿಕೆ ವಿರುದ್ಧ ಮಾತನಾಡಿದರೆ, ದುಡ್ಡು ವಸೂಲಿಗಾಗಿ ಮಾತನಾಡುತ್ತಿದ್ದಾರೆ ಎಂದು ಆರೋಪಿಸುತ್ತಾರೆ. ಯಾರಿಗೆ ಏನೇನು ಅಭ್ಯಾಸವಿದೆಯೋ ಅದನ್ನೇ ಆರೋಪಿಸುತ್ತಿದ್ದಾರೆ’ ಎಂದರು.

ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಅಕ್ರಮ ಕಲ್ಲು ಗಣಿಗಾರಿಕೆ ಬಗ್ಗೆ ಯಾರೂ ಹೇಳಿರಲಿಲ್ಲ ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆಗೆ, ‘ಅಕ್ರಮ ಪ್ರಶ್ನಿಸಿದ ನನ್ನ ವಿರುದ್ಧ ವಿವಿಧ ಮುಖಂಡರು ಮುಗಿಬಿದ್ದಿದ್ದಾರೆ. ಜನರು ಅವರಿಗೆ ಏಕೆ ಹೇಳಿರಲಿಲ್ಲವೋ ಗೊತ್ತಿಲ್ಲ’ ಎಂದರು.

ವಾಹನ ಕದ್ದಿದ್ದವನ ಬಂಧನ

ಬೆಂಗಳೂರು: ನಾಯಂಡನಹಳ್ಳಿ ಮೆಟ್ರೊ ನಿಲ್ದಾಣ ಬಳಿ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕದ್ದಿದ್ದ ಆರೋಪಿ ಇಮ್ರಾನ್ ಖಾನ್‌ನನ್ನು ಬ್ಯಾಟರಾಯನಪುರ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿಯಾದ ಇಮ್ರಾನ್ ಖಾನ್, ಹಲವು ಮನೆಗಳಲ್ಲಿ ಕಳ್ಳತನ ಸಹ ಮಾಡಿದ್ದ. ಆತನಿಂದ ₹ 6 ಲಕ್ಷ ಮೌಲ್ಯದ 85 ಗ್ರಾಂ ಚಿನ್ನಾಭರಣ ಹಾಗೂ 5 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ವಾಹನಗಳನ್ನು ಕದಿಯುತ್ತಿದ್ದ ಆರೋಪಿ, ಅವುಗಳನ್ನು ಮಾರುತ್ತಿದ್ದ. ಕೆಲ ಮನೆಗಳಲ್ಲೂ ಕಳ್ಳತನ ಎಸಗುತ್ತಿದ್ದ. ಬಂದ ಹಣವನ್ನು ದುಶ್ಚಟಗಳಿಗೆ ಖರ್ಚು ಮಾಡುತ್ತಿದ್ದ.’

‘ಶಿವಾಜಿನಗರ, ನಂದಿನಿ ಲೇಔಟ್, ಅಮೃತಹಳ್ಳಿ ಹಾಗೂ ವಿಜಯನಗರ ಠಾಣೆ ವ್ಯಾಪ್ತಿಯಲ್ಲಿ ಆರೋಪಿ ದ್ವಿಚಕ್ರ ವಾಹನಗಳನ್ನು ಕದ್ದಿದ್ದ. ಹನುಮಂತನಗರ, ಕಾಮಾಕ್ಷಿಪಾಳ್ಯ ಹಾಗೂ ಕೆಂಗೇರಿ ಠಾಣೆ ವ್ಯಾಪ್ತಿಯ ಮನೆಯಲ್ಲಿ ಆರೋಪಿ ಕಳ್ಳತನ ಮಾಡಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

₹56.20 ಲಕ್ಷ ಮೌಲ್ಯದ ಚಿನ್ನಾಭರಣ, ಐಫೋನ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣ, ಐಫೋನ್ ಹಾಗೂ ವಿದೇಶಿ ಸಿಗರೇಟ್‌ಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಪ್ರಯಾಣಿಕರೊಬ್ಬರನ್ನು ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

‘ದುಬೈನಿಂದ ವಿಮಾನದಲ್ಲಿ ನಗರದ ನಿಲ್ದಾಣಕ್ಕೆ ಜುಲೈ 11ರಂದು ಬಂದಿಳಿದಿದ್ದ ಪ್ರಯಾಣಿಕರೊಬ್ಬರನ್ನು ನಿರ್ಗಮನ ದ್ವಾರದಲ್ಲಿ ಪರಿಶೀಲನೆ ನಡೆಸಲಾಗಿತ್ತು. ಅವರ ಬ್ಯಾಗ್‌ನಲ್ಲಿ ಅನುಮಾನಾಸ್ಪದ ವಸ್ತುಗಳು ಇರುವುದು ಲೋಹ ಶೋಧಕದಿಂದ ಗೊತ್ತಾಗಿತ್ತು’ ಎಂದು ಮೂಲಗಳು ಹೇಳಿವೆ.

’ಭದ್ರತಾ ಅಧಿಕಾರಿಗಳ ಸಮ್ಮುಖದಲ್ಲಿ ಬ್ಯಾಗ್ ತೆರೆದು ನೋಡಲಾಯಿತು. 630 ಗ್ರಾಂ ಚಿನ್ನಾಭರಣ, 14 ಐಫೋನ್ ಹಾಗೂ 42 ಸಾವಿರ ವಿದೇಶಿ ಸಿಗರೇಟ್‌ಗಳು ಸಿಕ್ಕವು. ಇವುಗಳ ಒಟ್ಟು ಮೌಲ್ಯ ₹ 56.20 ಲಕ್ಷ.’

‘ಬೆಂಗಳೂರಿನಲ್ಲಿ ಮಾರಾಟ ಮಾಡಲೆಂದು ಚಿನ್ನಾಭರಣ, ಐಫೋನ್ ಹಾಗೂ ಸಿಗರೇಟ್ ಸಾಗಿಸುತ್ತಿದ್ದ ಬಗ್ಗೆ ಪ್ರಯಾಣಿಕ ಹೇಳಿಕೆ ನೀಡಿದ್ದಾರೆ. ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದೂ ಮೂಲಗಳು ಹೇಳಿವೆ.

ಪೊಲೀಸರ ಮಕ್ಕಳಿಗೆ ಪರಿಷ್ಕೃತ ‘ವಿದ್ಯಾನಿಧಿ’ ನೆರವು ಯೋಜನೆಗೆ ಚಾಲನೆ

ಗೃಹ ಇಲಾಖೆಗೆ 206 ವೈಜ್ಞಾನಿಕ ಅಧಿಕಾರಿಗಳ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪರಾಧ ಕೃತ್ಯಗಳು ನಡೆದ ಸ್ಥಳಗಳಲ್ಲಿ ವೈಜ್ಞಾನಿಕವಾಗಿ ಸಾಕ್ಷ್ಯ ಸಂಗ್ರಹಿಸುವುದಕ್ಕಾಗಿ ನೇಮಕಗೊಂಡಿರುವ 206 ವೈಜ್ಞಾನಿಕ ಅಧಿಕಾರಿಗಳು ರಾಜ್ಯ ಪೊಲೀಸ್ ಇಲಾಖೆಗೆ ಮಂಗಳವಾರ ಸೇರ್ಪಡೆಯಾದರು.

ವಿಧಾನಸೌಧದ ಮುಂಭಾಗದ ಮೆಟ್ಟಿಲುಗಳ ಮೇಲೆ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು 206 ವೈಜ್ಞಾನಿಕ ಅಧಿಕಾರಿಗಳ ನೇಮಕಾತಿ ಆದೇಶವನ್ನು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರಿಗೆ ಹಸ್ತಾಂತರಿಸಿದರು. ಆ ಮೂಲಕ ವೈಜ್ಞಾನಿಕ ಅಧಿಕಾರಿಗಳು ಸಮಾರಂಭದಲ್ಲೇ ಇಲಾಖೆಗೆ ಬರ ಮಾಡಿಕೊಳ್ಳಲಾಯಿತು

ಬಳಿಕ ಮಾತನಾಡಿದ ಯಡಿಯೂರಪ್ಪ, ‘ಅಪರಾಧ ಪ್ರಕರಣಗಳ ತನಿಖೆಯಲ್ಲಿ ವೈಜ್ಞಾನಿಕ ವಿಧಾನದ ಮೂಲಕ ಸ್ಥಳ ತನಿಖೆ ನಡೆಸುವುದಕ್ಕಾಗಿ ಈ ಅಧಿಕಾರಿಗಳನ್ನು ನೇಮಿಸಲಾಗಿದೆ. ಆರೋಪಿಗಳ ಪತ್ತೆ ಹಾಗೂ ತನಿಖೆಯಲ್ಲಿ ನಿಖರತೆ ಕಾಯ್ದುಕೊಳ್ಳಲು ಇದರಿಂದ ನೆರವಾಗಲಿದೆ. 206 ಜನರಿಗೂ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ತರಬೇತಿ ನೀಡಲಾಗಿದೆ. ಎಲ್ಲ ಜಿಲ್ಲೆಗಳಿಗೂ ಈ ಅಧಿಕಾರಿಗಳನ್ನು ನಿಯೋಜನೆ ಮಾಡಲಾಗುವುದು’ ಎಂದರು.

ವಿಧಾನಸೌಧದ ಮುಂಭಾಗದಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ ಪೊಲೀಸ್ ಇಲಾಖೆಗೆ 206 ವೈಜ್ಞಾನಿಕ ಅಧಿಕಾರಿಗಳ ಸೇರ್ಪಡೆ ಆದೇಶವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರಿಗೆ ಹಸ್ತಾಂತರಿಸಿದರು. ಗೃಹ ಸಚಿವ ಬಸವರಾಜ ಬೊಮ್ಮಾಯಿ, ಶಾಸಕ ರಿಜ್ವಾನ್ ಅರ್ಷದ್ ಇದ್ದರು – ಪ್ರಜಾವಾಣಿ ಚಿತ್ರ

100 ಪೊಲೀಸ್ ಠಾಣೆಗಳಿಗೆ ಮುಂದಿನ ಐದು ವರ್ಷಗಳಲ್ಲಿ ಸ್ವಂತ ಕಟ್ಟಡ ನಿರ್ಮಿಸಲಾಗುವುದು. ಹುಬ್ಬಳ್ಳಿ ಮತ್ತು ಬಳ್ಳಾರಿಯಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯದ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಆರೋಗ್ಯ ಭಾಗ್ಯ ಯೋಜನೆಯಡಿ ಪೊಲೀಸರಿಗೆ ಚಿಕಿತ್ಸೆಗೆ ನೆರವು ನೀಡಲು ₹ 101 ಕೋಟಿ ಒದಗಿಸಲಾಗಿದೆ ಎಂದು ತಿಳಿಸಿದರು.

ಪೊಲೀಸರಿಗೆ ಹೆಚ್ಚಿನ ನೆರವು ನೀಡುವುದಕ್ಕೆ ಪೂರಕವಾಗಿ ಸರ್ಕಾರ ಕೆಲಸ ಮಾಡುತ್ತಿದೆ. ಪೊಲೀಸರ ಮಕ್ಕಳಿಗೆ ಶಿಕ್ಷಣಕ್ಕೆ ನೆರವು ನೀಡುವ ವಿದ್ಯಾನಿಧಿ ಯೋಜನೆಯನ್ನು ಪರಿಷ್ಕರಿಸಲಾಗಿದೆ. ₹ 2,000ದಿಂದ ₹ 40,000ದವರೆಗೂ ನೆರವು ದೊರಕಲಿದೆ. ಪೊಲೀಸರಿಗೆ ಉನ್ನತ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡುವುದಕ್ಕೆ ಪೂರಕವಾಗಿ ಆರೋಗ್ಯ ಭಾಗ್ಯ ಯೋಜನೆಯನ್ನೂ ಪರಿಷ್ಕರಿಸಲಾಗಿದೆ ಎಂದು ಹೇಳಿದರು.

ಪರಿಷ್ಕೃತ ಆರೋಗ್ಯ ಭಾಗ್ಯ ಯೋಜನೆ, ಪೊಲೀಸ್ ಕಲ್ಯಾಣ ನಿಧಿ ಮತ್ತು ವಿದ್ಯಾ ನಿಧಿ ಯೋಜನೆಗಳಿಗೆ ಇದೇ ಸಂದರ್ಭದಲ್ಲಿ ಚಾಲನೆ ನೀಡಲಾಯಿತು. ವಿವಿಧ ಜಿಲ್ಲಾ ಸಶಸ್ತ್ರ ಮೀಸಲು ಪೊಲೀಸ್ ಪಡೆಗಳಿಗೆ ಮಂಜೂರಾಗಿರುವ 50 ಮಿನಿ ಬಸ್‌ಗಳನ್ನು ಸಮಾರಂಭದಲ್ಲೇ ಹಸ್ತಾಂತರ ಮಾಡಲಾಯಿತು.

> **ಅಪರಾಧ ಶೋಧ ಕಾರ್ಯದಲ್ಲಿ ಕರ್ನಾಟಕದಲ್ಲಿ ಹೊಸ ಯುಗ ಆರಂಭವಾಗಲಿದೆ. ಇನ್ನು ಮುಂದೆ ಅಪರಾಧ ಶೋಧದಲ್ಲೂ ಯಶಸ್ವಿಯಾಗುತ್ತೇವೆ**
> **ಬಸವರಾಜ ಬೊಮ್ಮಾಯಿ,** ಗೃಹ ಸಚಿವ

ಶಿವಾಜಿನಗರ ಶಾಸಕ ರಿಜ್ವಾನ್ ಅರ್ಷದ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ರಜನೀಶ್ ಗೋಯಲ್, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಪ್ರತಾಪ್ ರೆಡ್ಡಿ, ಬೆಂಗಳೂರು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಸೇರಿದಂತೆ ಹಲವು ಹಿರಿಯ ಅಧಿಕಾರಿಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು.

100 ಪೊಲೀಸ್ ಠಾಣೆಗಳಿಗೆ ಹೊಸ ಕಟ್ಟಡ

ರಾಜ್ಯದಲ್ಲಿ ಸ್ವಂತ ಕಟ್ಟಡಗಳಿಲ್ಲದ ಆಯ್ದ 100 ಠಾಣೆಗಳಿಗೆ ಎರಡು ವರ್ಷದಲ್ಲಿ ₹ 200 ಕೋಟಿ ವೆಚ್ಚದಲ್ಲಿ ಹೊಸ ಕಟ್ಟಡ ನಿರ್ಮಿಸಲು ಹಾಗೂ ಈ ಸಂಬಂಧ ಟೆಂಡರ್ ಕರೆಯಲು ಸರ್ಕಾರ ಆಡಳಿತಾತ್ಮಕ ಒಪ್ಪಿಗೆ ನೀಡಿ ಆದೇಶ ಹೊರಡಿಸಲಾಗಿದೆ.

ಇದೇ 21ರಂದು ನಡೆದ ಸಚಿವ ಸಂಪುಟ ಸಭೆಯ ತೀರ್ಮಾನದಂತೆ ಆರ್ಥಿಕ ಇಲಾಖೆ ಟಿಪ್ಪಣಿ ಆಧರಿಸಿ ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ) ಮಂಗಳವಾರ ಆದೇಶ ಹೊರಡಿಸಿದೆ.

724 ಗ್ರಾಂ ಗಾಂಜಾ ಜಪ್ತಿ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾಸಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಗಾಂಜಾ ಸಾಗಿಸುತ್ತಿದ್ದ ಆರೋಪಿ ನವಾಜ್ ಪಾಷಾ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಠಾಣೆ ವ್ಯಾಪ್ತಿಯ ಡಿಸ್ಪನ್ಸರಿ ಮುಖ್ಯರಸ್ತೆಯಲ್ಲಿ ಆರೋಪಿ ದ್ವಿಚಕ್ರ ವಾಹನದಲ್ಲಿ (ಕೆಎ 02 ಎಚ್‌ಇ 7938) ಜುಲೈ 12ರಂದು ಹೊರಟಿದ್ದ. ಆತನನ್ನು ತಡೆದು ಪರಿಶೀಲಿಸಿದಾಗ 724 ಗ್ರಾಂ ಗಾಂಜಾ ಪತ್ತೆಯಾಯಿತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪರಿಚಯಸ್ಥರೊಬ್ಬರಿಂದ ಪಡೆದಿದ್ದ ಗಾಂಜಾವನ್ನು ಆರೋಪಿ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದ ಎಂದು ಗೊತ್ತಾಗಿದೆ. ಆತನ ಜೊತೆಯಲ್ಲಿ ಮತ್ತಷ್ಟು ಮಂದಿ ಗಾಂಜಾ ಮಾರಾಟದಲ್ಲಿ ತೊಡಗಿದ್ದ ಮಾಹಿತಿ ಇದೆ’ ಎಂದೂ ಮೂಲಗಳು ತಿಳಿಸಿವೆ.

ವಾಹನ ದಟ್ಟಣೆ ನಗರದ ಶೇಷಾದ್ರಿ ರಸ್ತೆಯಲ್ಲಿ ಮಂಗಳವಾರ ಭಾರಿ ವಾಹನ ದಟ್ಟಣೆಯಿಂದಾಗಿ ಸವಾರರು ಪರದಾಡಬೇಕಾಯಿತು ಪ್ರಜಾವಾಣಿ ಚಿತ್ರ

ಪಾನಮತ್ತ ಮಹಿಳೆ ರಂಪಾಟ: ಹೈರಾಣಾದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಪಾರ್ಕ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಸೋಮವಾರ ರಾತ್ರಿ ಪಾನಮತ್ತ ಮಹಿಳೆಯೊಬ್ಬರು ರಂಪಾಟ ಮಾಡಿದ್ದು, ಅವರನ್ನು ಸಮಾಧಾನಪಡಿಸುವಷ್ಟರಲ್ಲಿ ಪೊಲೀಸರು ಹೈರಾಣಾದರು.

ಕುಡಿದು ವಾಹನ ಚಲಾಯಿಸುವವರ ಪತ್ತೆಗಾಗಿ ಪೊಲೀಸರು ತಪಾಸಣೆ ನಡೆಸುತ್ತಿದ್ದರು. ಅದೇ ಸಂದರ್ಭದಲ್ಲೇ ಮಹಿಳೆ ಕಾರಿನಲ್ಲಿ ಸ್ಥಳಕ್ಕೆ ಬಂದಿದ್ದರು. ಕಾರು ತಡೆದ ಪೊಲೀಸರು ಪರಿಶೀಲಿಸಿದ್ದರು. ಮಹಿಳೆ ಮದ್ಯ ಕುಡಿದಿದ್ದು ಗಮನಕ್ಕೆ ಬಂದಿತ್ತು.

‘ಮದ್ಯ ಕುಡಿದು ಚಾಲನೆ ಮಾಡಿದ್ದಕ್ಕಾಗಿ ಕಾರು ಜಪ್ತಿ ಮಾಡಲಾಗುವುದು’ ಎಂದು ಪೊಲೀಸರು ಹೇಳಿದ್ದರು. ಅಷ್ಟಕ್ಕೆ ಕೋಪಗೊಂಡ ಮಹಿಳೆ, ರಸ್ತೆಯಲ್ಲೇ ರಂಪಾಟ ಮಾಡಿದ್ದರು. ಸಮಾಧಾನಪಡಿಸಿದ್ದ ಪೊಲೀಸರು, ‘ಜಪ್ತಿ ಮಾಡಿದ ವಾಹನವನ್ನು ನ್ಯಾಯಾಲಯದ ಮೂಲಕ ಬಿಡಿಸಿಕೊಳ್ಳಿ. ಈಗ ಮನೆಗೆ ಹೋಗಲು ಆಟೊ ವ್ಯವಸ್ಥೆ ಮಾಡುತ್ತೇವೆ’ ಎಂದಿದ್ದರು.

ಸುಮ್ಮನಾಗದ ಮಹಿಳೆ, ಮೂರು ತಾಸು ಪೊಲೀಸರ ಜೊತೆ ವಾಗ್ವಾದ ನಡೆಸಿದ್ದರು. ರಸ್ತೆಯಲ್ಲಿ ಎಲ್ಲೆಂದರಲ್ಲಿ ಕುಳಿತುಕೊಂಡು, ‘ಡಿಸಿಪಿಯನ್ನು ಸ್ಥಳಕ್ಕೆ ಕರೆಸಿ’ ಎಂದು ಪಟ್ಟು ಹಿಡಿದಿದ್ದರು. ಮಹಿಳಾ ಸಿಬ್ಬಂದಿಯನ್ನು ಸ್ಥಳಕ್ಕೆ ಕರೆಸಿಕೊಂಡ ಪೊಲೀಸರು, ಮಹಿಳೆಯನ್ನು ಆಟೊದಲ್ಲಿ ಮನೆಗೆ ಕಳುಹಿಸಿಕೊಟ್ಟರು.

ಮಹಿಳೆಯ ವಾಹನ ಜಪ್ತಿ ಮಾಡಿರುವ ಪೊಲೀಸರು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

243 ಮಂದಿಗೆ ಮುಖ್ಯಮಂತ್ರಿ ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2015ರಿಂದ 2020ರ ಅವಧಿಯಲ್ಲಿ ಶ್ಲಾಘನೀಯ ಸೇವೆ ಸಲ್ಲಿಸಿರುವ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಗೃಹರಕ್ಷಕ ದಳ, ಪೌರ ರಕ್ಷಣೆ ಮತ್ತು ರಾಜ್ಯ ವಿಪತ್ತು ಸ್ಪಂದನಾ ಪಡೆಯ 243 ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಮುಖ್ಯಮಂತ್ರಿಯವರ ಚಿನ್ನದ ಪದಕವನ್ನು ಮಂಗಳವಾರ ಪ್ರದಾನ ಮಾಡಲಾಯಿತು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಎಲ್ಲ ಪುರಸ್ಕೃತರಿಗೂ ಪದಕ ಪ್ರದಾನ ಮಾಡಿದರು. ಗೃಹ ಸಚಿವ ಬಸವರಾಜ ಬೊಮ್ಮಾಯಿ, ಶಾಸಕ ರಿಜ್ವಾನ್ ಅರ್ಷದ್, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ. ರಜನೀಶ್ ಗೋಯಲ್, ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಡಿಜಿಪಿ ಅಮರ್ ಕುಮಾರ್ ಪಾಂಡೆ, ಗೃಹ ಇಲಾಖೆ ಪ್ರಧಾನ ಕಾರ್ಯದರ್ಶಿ ಮಾಲಿನಿ ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿಯವರ ಚಿನ್ನದ ಪದಕ ಸ್ವೀಕರಿಸಿದ ಅಧಿಕಾರಿಗಳು ಮತ್ತು ಸಿಬ್ಬಂದಿ ಸಂಭ್ರಮದಲ್ಲಿ ಪದಕಗಳನ್ನು ಪ್ರದರ್ಶಿಸುತ್ತಿರುವುದು – ಪ್ರಜಾವಾಣಿ ಚಿತ್ರ

ಪದಕ ಪ್ರದಾನ ಮಾಡಿ ಮಾತನಾಡಿದ ಯಡಿಯೂರಪ್ಪ, ‘ಪ್ರವಾಹ, ಭೂಕುಸಿತ ಸೇರಿದಂತೆ ನೈಸರ್ಗಿಕ ವಿಪತ್ತುಗಳ ಸಂದರ್ಭದಲ್ಲಿ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಸಿಬ್ಬಂದಿ ಜೀವದ ಹಂಗು ತೊರೆದು ಕೆಲಸ ಮಾಡಿದ್ದಾರೆ. ಈಗ ರಾಜ್ಯ ವಿಪತ್ತು ಸ್ಪಂದನಾ ಪಡೆಯನ್ನೂ ರಚಿಸಲಾಗಿದೆ. ಈ ಎಲ್ಲ ಘಟಕಗಳ ಸೇವೆ ಸ್ಮರಣೀಯವಾದುದು’ ಎಂದರು.

ಈ ಎಲ್ಲ ಇಲಾಖೆಗಳಿಗೂ ಅತ್ಯಾಧುನಿಕ ಸಾಧನಗಳನ್ನು ಒದಗಿಸಲಾಗುವುದು. ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಹಾಗೂ ವಿಪತ್ತು ಸ್ಪಂದನಾ ಪಡೆಗಳ ಸಿಬ್ಬಂದಿಗೆ ವೈಜ್ಞಾನಿಕ ವಿಧಾನದಲ್ಲಿ ಕಾರ್ಯನಿರ್ವಹಿಸುವ ಕುರಿತು ತರಬೇತಿ ನೀಡಲಾಗುವುದು. ವಿಪತ್ತು, ಅಗ್ನಿ ಅವಘಡಗಳು ಸಂಭವಿಸಿದ ಸ್ಥಳದಲ್ಲಿ ವೈಜ್ಞಾನಿಕವಾಗಿ ತನಿಖೆ ನಡೆಸುವುದನ್ನೂ ಪರಿಚಯಿಸಲಾಗುವುದು ಎಂದು ಹೇಳಿದರು.

ಜೈಲಿನಿಂದ ಹೊರಬಂದು ವಾಹನ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪರಾಧ ಪ್ರಕರಣವೊಂದರಲ್ಲಿ ಜೈಲಿಗೆ ಹೋಗಿ ಜಾಮೀನು ಮೇಲೆ ಹೊರಬಂದು ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ಜೆ.ಸಿ.ನಗರ ಪೊಲೀಸರು ಬಂಧಿಸಿದ್ದಾರೆ.

‘ಠಾಣೆ ವ್ಯಾಪ್ತಿಯ ನಂದಿದುರ್ಗ ರಸ್ತೆಯ ಏರ್‌ಟೆಲ್ ಕಚೇರಿ ಬಳಿ ಆರೋಪಿಗಳು ಬೈಕ್‌ನಲ್ಲಿ ಹೊರಟಿದ್ದರು. ಗಸ್ತಿನಲ್ಲಿದ್ದ ಸಿಬ್ಬಂದಿ, ಆರೋಪಿಗಳನ್ನು ತಡೆದು ಪರಿಶೀಲನೆ ನಡೆಸಿದ್ದರು. ಬೈಕ್‌ಗೆ ಸಂಬಂಧಪಟ್ಟ ದಾಖಲೆಗಳು ಆರೋಪಿಗಳ ಬಳಿ ಇರಲಿಲ್ಲ. ಕದ್ದ ಬೈಕ್ ಇರಬಹುದೆಂದು ಅನುಮಾನಪಟ್ಟ ಸಿಬ್ಬಂದಿ, ಆರೋಪಿಗಳನ್ನು ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಪರಾಧ ಹಿನ್ನೆಲೆಯುಳ್ಳ ಆರೋಪಿಗಳು, ಕೆ.ಜಿ.ನಗರ ಹಾಗೂ ಡಿ.ಜೆ.ಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಅಪರಾಧ ಕೃತ್ಯ ಎಸಗಿದ್ದರು. ಅದೇ ಪ್ರಕರಣದಲ್ಲಿ ಜೈಲಿಗೂ ಹೋಗಿದ್ದರು. ಜಾಮೀನು ಮೇಲೆ ಹೊರಬಂದ ಅವರು, ದ್ವಿಚಕ್ರ ವಾಹನ ಕಳವು ಮಾಡಲಾರಂಭಿಸಿದ್ದರು. ಕದ್ದ ವಾಹನಗಳ ಮಾರಾಟದಿಂದ ಬಂದ ಹಣವನ್ನು ಹಂಚಿಕೊಳ್ಳುತ್ತಿದ್ದರು’ ಎಂದೂ ತಿಳಿಸಿವೆ.

‘ಜುಲೈ 6ರಂದು ಕೆಂಪಯ್ಯ ಬ್ಲಾಕ್‌ನಲ್ಲಿ ಆರೋಪಿಗಳು ದ್ವಿಚಕ್ರ ವಾಹನ ಕದ್ದಿದ್ದರು. ಆ ಬಗ್ಗೆ ಪ್ರಕರಣ ಸಹ ದಾಖಲಾಗಿತ್ತು. ಸದ್ಯ ಆರೋಪಿಗಳಿಂದ ₹ 4.30 ಲಕ್ಷ ಮೌಲ್ಯದ 7 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ. ಬಂಧಿತರ ಹೆಸರು ಸದ್ಯಕ್ಕೆ ಬಹಿರಂಗಪಡಿಸಲಾಗದು’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಪಕ್ಷ ಸೂಚಿಸಿದರೆ ಬಾದಾಮಿಯಲ್ಲಿ ಸ್ಪರ್ಧೆ: ಶ್ರೀರಾಮುಲು

ಮೊಳಕಾಲ್ಮುರು: ‘ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಾದಾಮಿ ಕ್ಷೇತ್ರದಿಂದ ಸ್ಪರ್ಧಿಸುವಂತೆ ಪಕ್ಷದ ವರಿಷ್ಠರು ಸೂಚಿಸಿದರೆ ಖಂಡಿತ ಕಣದಲ್ಲಿರುತ್ತೇನೆ’ ಎಂದು ಸಮಾಜ ಕಲ್ಯಾಣ ಸಚಿವ ಬಿ. ಶ್ರೀರಾಮುಲು ತಿಳಿಸಿದರು.

ತಾಲ್ಲೂಕಿನ ಹಿರೇಹಳ್ಳಿ ಸಮೀಪ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬಾದಾಮಿ ಕ್ಷೇತ್ರದಿಂದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸ್ಪರ್ಧಿಸಲಿ. ಅದು ಅವರ ವೈಯಕ್ತಿಕ ನಿರ್ಧಾರ’ ಎಂದು ಹೇಳಿದರು.

‘ಭೋವಿ ಸಮಾಜದವರಿಗಷ್ಟೇ ಕಲ್ಲು ಗಣಿಗಾರಿಕೆಗೆ ಅವಕಾಶ ನೀಡಿ’

ಬೆಂಗಳೂರು: ‘ಮಹಾರಾಷ್ಟ್ರದಲ್ಲಿ ಭೋವಿ ಸಮಾಜದವರಿಗೆ ಮಾತ್ರ ಕಲ್ಲು ಗಣಿಗಾರಿಕೆಗೆ ಅವಕಾಶ ನೀಡಲಾಗಿದೆ. ಇದೇ ಮಾದರಿಯನ್ನು ಕರ್ನಾಟಕದಲ್ಲೂ ಅನುಸರಿಸಬೇಕು’ ಎಂದು ಆಮ್ ಆದ್ಮಿ ಪಕ್ಷದ ಮುಖಂಡ ಎಚ್. ಡಿ.ಬಸವರಾಜು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು ‘ರಾಜ್ಯದ ಕಲ್ಲು ಗಣಿಗಾರಿಕೆ ಕೇಂದ್ರಗಳನ್ನು ಬಂಡವಾಳಶಾಹಿಗಳಿಗೆ ನೀಡುವ ಮೂಲಕ, ಇದನ್ನೇ ಕುಲ ಕಸುಬಾಗಿ ಮಾಡಿಕೊಂಡಿರುವ ಭೋವಿ ಸಮಾಜದವರಿಗೆ ಅನ್ಯಾಯ ಮಾಡಲಾಗುತ್ತಿದೆ. ಇವರ ಉದ್ಯೋಗ ಕಿತ್ತುಕೊಳ್ಳಲಾಗುತ್ತಿದೆ. ಬಂಡವಾಳಶಾಹಿಗಳಿಗೆ ನಾಡಿನ ಸಂಪನ್ಮೂಲದ ಮೇಲೆ ಯಾವ ಭಾವನಾತ್ಮಕ ಸಂಬಂಧವೂ ಇರುವುದಿಲ್ಲ. ಹಣ ಮಾಡುವ ದುರುದ್ದೇಶ ಹೊಂದಿರುವ ಅವರು ರಾಜ್ಯದ ಸಂಪನ್ಮೂಲವನ್ನು ಸಾಧ್ಯವಾದಷ್ಟು ಲೂಟಿ ಮಾಡುತ್ತಿದ್ದಾರೆ’ ಎಂದರು.

‘ರಾಜ್ಯದಲ್ಲಿ ಗಣಿ ಮತ್ತು ಭೂವಿಜ್ಞಾನ ಕಾಯ್ದೆಗೆ ತಿದ್ದುಪಡಿ ತಂದು ಭೋವಿ ಸಮಾಜದವರಿಗೆ ಮಾತ್ರ ಕಲ್ಲು ಗಣಿಗಾರಿಕೆಗೆ ಅನುಮತಿ ನೀಡಬೇಕು. ಕ್ರಷರ್ ಯೂನಿಟ್ ಆರಂಭಿಸಲು ಅಗತ್ಯವಿರುವ ಅತ್ಯಾಧುನಿಕ ಉಪಕರಣ ಖರೀದಿಸಲು ಅವರಿಗೆ ಹಣಕಾಸಿನ ನೆರವು ಒದಗಿಸಬೇಕು. ಬಿ.ಎಸ್.ಯಡಿಯೂರಪ್ಪನವರ ನೇತೃತ್ವದ ಬಿಜೆಪಿ ಸರ್ಕಾರಕ್ಕೆ ಭೋವಿ ಸಮಾಜದ ಮೇಲೆ ಕಾಳಜಿ ಇದ್ದರೆ ಕಾಯ್ದೆಗೆ ತಿದ್ದುಪಡಿ ತರಲಿ’ ಎಂದು ಸವಾಲು ಹಾಕಿದರು.

ಪಕ್ಷದ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ಸದಂ, ಮುಖಂಡರಾದ ಪ್ರಕಾಶ್ ನಾಗರಾಜ್, ಉಷಾ ಮೋಹನ್, ಜ್ಯೋತಿಷ್ ಕುಮಾರ್ ಇದ್ದರು.

ಕಳವು, ಸುಲಿಗೆ: ಆರೋಪಿಗಳಿಬ್ಬರ ಬಂಧನ

ಗಾಂಜಾ ನಶೆಯಲ್ಲಿ ಡ್ರ್ಯಾಗರ್ ಹಿಡಿದು ಸುತ್ತಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾತ್ರಿ ಹೊತ್ತಿನಲ್ಲಿ ಗಾಂಜಾ ನಶೆಯಲ್ಲಿ ಡ್ರ್ಯಾಗರ್ ಹಿಡಿದುಕೊಂಡು ಸುತ್ತಾಡಿ ಕಳ್ಳತನ ಹಾಗೂ ಸುಲಿಗೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ರಾಜಾಜಿನಗರ ಪೊಲೀಸರು ಬಂಧಿಸಿದ್ದಾರೆ.

‘ಪ್ರಕಾಶನಗರದ 3ನೇ ಮುಖ್ಯರಸ್ತೆ ಬಳಿ ಜುಲೈ 10ರಂದು ಬೆಳಿಗ್ಗೆ ಆರೋಪಿಗಳು ಪಲ್ಸರ್ ಬೈಕ್‌ನಲ್ಲಿ ಹೊರಟಿದ್ದರು. ಅನುಮಾನಗೊಂಡ ಗಸ್ತಿನಲ್ಲಿದ್ದ ಸಿಬ್ಬಂದಿ, ಆರೋಪಿಗಳನ್ನು ಬೆನ್ನಟ್ಟಿ ಹಿಡಿದು ವಿಚಾರಣೆ ನಡೆಸಿದಾಗ ಕೃತ್ಯಗಳು ಬಯಲಾಗಿವೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕಳವು, ಸುಲಿಗೆ, ಹಲ್ಲೆ ಪ್ರಕರಣಗಳಲ್ಲಿ ಆರೋಪಿಗಳು ಭಾಗಿಯಾಗಿದ್ದರು. ಅವರಿಂದ ₹ 4.15 ಲಕ್ಷ ಮೌಲ್ಯದ 7 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದೂ ತಿಳಿಸಿವೆ.

ಜಾಮೀನು ಮೇಲೆ ಹೊರಬಂದಿದ್ದರು: ‘ಹಲಸೂರು ಗೇಟ್, ಸಂಪಂಗಿರಾಮನಗರ, ಚಿಕ್ಕಜಾಲ ಠಾಣೆ ವ್ಯಾಪ್ತಿಯಲ್ಲಿ ಆರೋಪಿಗಳು ಕೃತ್ಯ ಎಸಗಿದ್ದರು. ಅದೇ ಪ್ರಕರಣದಲ್ಲಿ ಜೈಲು ಸೇರಿದ್ದ ಆರೋಪಿಗಳು, ಜಾಮೀನು ಮೇಲೆ ಹೊರಬಂದು ಕೃತ್ಯ ಮುಂದುವರಿಸಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ನಿತ್ಯವೂ ರಾತ್ರಿ ಗಾಂಜಾ ಸೇವಿಸುತ್ತಿದ್ದ ಆರೋಪಿಗಳು, ಅದರ ನಶೆಯಲ್ಲಿ ಡ್ರ್ಯಾಗರ್ ಹಿಡಿದುಕೊಂಡು ನಗರದಲ್ಲಿ ಸುತ್ತಾಡುತ್ತಿದ್ದರು. ಮನೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳನ್ನು ಕದಿಯುತ್ತಿದ್ದರು. ಡ್ರ್ಯಾಗರ್ ತೋರಿಸಿ ಜೀವಬೆದರಿಕೆಯೊಡ್ಡಿ ಸುಲಿಗೆ ಸಹ ಮಾಡುತ್ತಿದ್ದರು.’

‘ಆರೋಪಿಯೊಬ್ಬನ ವಿರುದ್ಧ ಅತ್ಯಾಚಾರ ಪ್ರಕರಣ ಸಹ ದಾಖಲಾಗಿತ್ತು. ಇವರಿಬ್ಬರ ಬಂಧನದಿಂದ ಬಸವೇಶ್ವರನಗರ ಹಾಗೂ ಯಲಹಂಕ ನ್ಯೂ ಟೌನ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ವಾಹನ ಕಳವು ಪ್ರಕರಣಗಳೂ ಪತ್ತೆಯಾಗಿವೆ’ ಎಂದೂ ಮೂಲಗಳು ತಿಳಿಸಿವೆ.

ಜಪ್ತಿ ಮಾಡಿದ ದ್ವಿಚಕ್ರ ವಾಹನಗಳ ಜೊತೆ ಆರೋಪಿಗಳು ಹಾಗೂ ಅವರನ್ನು ಬಂಧಿಸಿದ ರಾಜಾಜಿನಗರ ಪೊಲೀಸರ ತಂಡ

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	18.83 ಕೋಟಿ ▲	3.09 ಕೋಟಿ
ಸಕ್ರಿಯ ಪ್ರಕರಣ	1.21 ಕೋಟಿ ▲	4.23 ಲಕ್ಷ
ಗುಣಮುಖ	17.21 ಕೋಟಿ ▲	3.00 ಕೋಟಿ
ಸಾವು	40.59 ಲಕ್ಷ ▲	4.11 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.93 ಲಕ್ಷ ▲	37,412 ▲
ಗುಣಮುಖ	3.96 ಲಕ್ಷ ▲	40,140 ▼
ಸಾವು	6,443 ▼	587 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಇರಾನ್	ಬ್ರಿಟನ್	ರಷ್ಯಾ
20,829	34,323 ▲	25,140 ▲

ಪ್ರಜಾವಾಣಿ ಗ್ರಾಫಿಕ್ಸ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಬ್ರಿಟನ್
48.69 ▲	9.06 ▼	6.63 ▼

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.26 ಲಕ್ಷ
ದೆಹಲಿ	25,018
ತಮಿಳುನಾಡು	33,502 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	61.65
ಕೇರಳ	30.87 ▲
ತಮಿಳುನಾಡು	25.23 ▲

ಈ ವರ್ಷ 32 ಮಂದಿ ಮಾತ್ರ ಅಂಗಾಂಗ ದಾನ • 3 ಸಾವಿರಕ್ಕೂ ಅಧಿಕ ಮಂದಿಯಿಂದ ಹೆಸರು ನೋಂದಣಿ

ಕೋವಿಡ್ ಇಳಿಕೆ: ಅಂಗಾಂಗ ಕಸಿಗೆ ಆದ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳ ಇಳಿಕೆ ಹಾಗೂ ಲಾಕ್‌ಡೌನ್ ಸಡಿಲಿಕೆಯಿಂದಾಗಿ ನಗರದ ಆಸ್ಪತ್ರೆಗಳು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ಅಂಗಾಂಗ ಕಸಿ ನಡೆಸಲಾರಂಭಿಸಿವೆ. ಆದರೆ, ಈ ವರ್ಷ ರಾಜ್ಯ ಅಂಗಾಂಶ ಕಸಿ ಸಂಸ್ಥೆ (ಸೊಟ್ಟೊ) ಅಡಿ 32 ಮಂದಿ ಮಾತ್ರ ಅಂಗಾಂಗ ದಾನ ಮಾಡಿದ್ದಾರೆ.

ಅಂಗಾಂಗ ವೈಫಲ್ಯದಿಂದ ಬಳಲುತ್ತಿರುವ 3 ಸಾವಿರಕ್ಕೂ ಅಧಿಕ ಮಂದಿ ಸೊಟ್ಟೊ ಅಡಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಅವರು ಅಂಗಾಂಗಕ್ಕಾಗಿ ಎದುರು ನೋಡುತ್ತಿದ್ದಾರೆ. ಆದರೆ, ಕೋವಿಡ್ ಕಾರಣದಿಂದ ಬಹುತೇಕ ಪ್ರಕರಣಗಳಲ್ಲಿ ಮೃತ ವ್ಯಕ್ತಿಯ ಕುಟುಂಬದ ಸದಸ್ಯರು ಅಂಗಾಂಗ ದಾನದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡುತ್ತಿಲ್ಲ. ಇದರಿಂದಾಗಿ ಅಂಗಾಂಗಗಳ ಸಂಗ್ರಹ ಹೆಚ್ಚಿನ ಸಂಖ್ಯೆಯಲ್ಲಿ ಈ ವರ್ಷ ಸಾಕಾರವಾಗಿಲ್ಲ. ಇನ್ನೊಂದೆಡೆ, ಆಸ್ಪತ್ರೆಗಳು ಕೂಡ ಕೋವಿಡ್ ಚಿಕಿತ್ಸೆಗೆ ಆದ್ಯತೆ ನೀಡಿದ್ದರಿಂದ ರೋಗಿಗಳಿಗೆ ಅಂಗಾಂಗ ಕಸಿಗಳನ್ನು ಮುಂದೂಡಲಾಗಿತ್ತು.

ಜೂನ್ ಬಳಿಕ 7 ಮಂದಿಯಿಂದ ಅಂಗಾಂಗ ಸಂಗ್ರಹಿಸಲಾಗಿದೆ. ಈ ವರ್ಷ 86 ಅಂಗಾಂಗಗಳು ಹಾಗೂ 46 ಕಣ್ಣಿನ ಕಾರ್ನಿಯಾವನ್ನು ಸಂಸ್ಥೆಯು ಅಗತ್ಯ ಇರುವವರಿಗೆ ಒದಗಿಸಿದೆ.

ನಗರದ ಫೋರ್ಟಿಸ್, ನಾರಾಯಣ ಹೆಲ್ತ್, ಎಂ.ಎಸ್. ರಾಮಯ್ಯ, ಮಣಿಪಾಲ್, ಕೊಲಂಬಿಯಾ ಏಷ್ಯಾ, ಅಪೋಲೊ, ಸಕ್ರಾ ವರ್ಲ್ಡ್ ಸೇರಿದಂತೆ ಪ್ರಮುಖ ಖಾಸಗಿ ಆಸ್ಪತ್ರೆಗಳು ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಅಂಗಾಂಗ ಕಸಿ ಸೇರಿದಂತೆ ತುರ್ತಾಗಿ ಅಗತ್ಯವಲ್ಲದ ಕೆಲ ಶಸ್ತ್ರಚಿಕಿತ್ಸೆಗಳನ್ನು ಸ್ಥಗಿತ ಮಾಡಿದ್ದವು. ಈಗ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆ ಹಾಗೂ ಸೋಂಕಿತರಿಗೆ ಹಾಸಿಗೆಗಳ ಮೀಸಲು ನಿರ್ಬಂಧವನ್ನು ಸಡಿಲಿಸಿದ್ದರಿಂದ ಕೋವಿಡೇತರ ಚಿಕಿತ್ಸೆಗಳು ಹಾಗೂ ಶಸ್ತ್ರ-ಚಿಕಿತ್ಸೆಗಳಿಗೆ ಆದ್ಯತೆ ನೀಡಲಾರಂಭಿಸಿವೆ.

ಜಾಗೃತಿ ಕೊರತೆ: 'ಮಿದುಳು ನಿಷ್ಕ್ರಿಯಗೊಂಡ ಯಾವುದೇ ವ್ಯಕ್ತಿಯು ಅಂಗಾಂಗ ದಾನ ಮಾಡಬಹುದಾಗಿದ್ದು, ಅದು ಕಾನೂನುಬದ್ಧ. ಒಬ್ಬ ದಾನಿಯು ಹೃದಯ, ಮೂತ್ರಪಿಂಡ, ಯಕೃತ್ತು, ಮೇದೋಜೀರಕ ಗ್ರಂಥಿ, ಸಣ್ಣ ಕರುಳು, ಶ್ವಾಸಕೋಶ ದಾನ ಮಾಡಬಹುದು. ಚರ್ಮ, ಮೂಳೆಗಳು, ಅಸ್ಥಿ ಮಜ್ಜೆ, ಹೃದಯದ ಕವಾಟ, ನೇತ್ರದ ಕಾರ್ನಿಯಾ ಸೇರಿದಂತೆ ವಿವಿಧ ಅಂಗಗಳನ್ನು ದಾನ ಮಾಡುವ ಮೂಲಕ ಹಲವು ಜೀವಗಳಿಗೆ ನೆರವಾಗಬಹುದು' ಎಂದು ಸೊಟ್ಟೊದ ಅಧಿಕಾರಿಯೊಬ್ಬರು ತಿಳಿಸಿದರು.

'ಕೋವಿಡ್‌ನಿಂದಾಗಿ ಅಂಗಾಂಗ ದಾನ ಪ್ರಕ್ರಿಯೆಗೆ ಸಮಸ್ಯೆಯಾಗಿತ್ತು. ಈಗ ಕೋವಿಡ್ ಪ್ರಕರಣಗಳು ಇಳಿಕೆಯಾಗಿದ್ದರಿಂದ ಆಸ್ಪತ್ರೆಗಳಲ್ಲಿ ಕೋವಿಡೇತರ ಕಾಯಿಲೆಗಳಿಗೆ ಶಸ್ತ್ರಚಿಕಿತ್ಸೆ ನಡೆಯುತ್ತಿವೆ. ಹೀಗಾಗಿ, ಮುಂದಿನ ದಿನಗಳಲ್ಲಿ ಅಂಗಾಂಗ ದಾನ ಹೆಚ್ಚುವ ನಿರೀಕ್ಷೆಯಲ್ಲಿದ್ದೇವೆ. ಜನರಲ್ಲಿ ಅಂಗಾಂಗ ದಾನದ ಬಗ್ಗೆ ಜಾಗೃತಿ ಕೊರತೆಯಿದೆ' ಎಂದು ವಿವರಿಸಿದರು.

ಸಂಚಾರಿ ವಿಜಯ್ ಪ್ರೇರಣೆ

ಅಂಗಾಂಗ ದಾನಕ್ಕೆ ಸಂಬಂಧಿಸಿದಂತೆ ಈವರೆಗೆ ನಾಲ್ಕು ಸಾವಿರಕ್ಕೂ ಅಧಿಕ ಮಂದಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಕಳೆದ ತಿಂಗಳು ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದ ನಟ ಸಂಚಾರಿ ವಿಜಯ್ ಅವರ ಅಂಗಾಂಗಗಳನ್ನು ಕುಟುಂಬದ ಸದಸ್ಯರು ದಾನ ಮಾಡಿದ್ದರು. ಇದರಿಂದ ಹಲವರು ಪ್ರೇರಣೆ ಪಡೆದು, ಅಂಗಾಂಗ ದಾನಕ್ಕೆ ಹೆಸರು ನೋಂದಾಯಿಸಿಕೊಳ್ಳುತ್ತಿದ್ದಾರೆ ಎಂದು ಸೊಟ್ಟೊದ ಅಧಿಕಾರಿಗಳು ತಿಳಿಸಿದರು.

'ಕೋವಿಡ್ ಹಾಗೂ ಲಾಕ್‌ಡೌನ್ ಕಾರಣ ಕೆಲ ತಿಂಗಳಿನಿಂದ ಅಂಗಾಂಗ ದಾನಕ್ಕೆ ಸಂಬಂಧಿಸಿದಂತೆ ಹೆಸರು ನೋಂದಣಿ ಶಿಬಿರ ನಡೆಸಲು ಸಾಧ್ಯವಾಗಿಲ್ಲ. ಜೂನ್ ತಿಂಗಳ ಬಳಿಕ 230 ಮಂದಿ ಆನ್‌ಲೈನ್ ಮೂಲಕ ಅಂಗಾಂಗ ದಾನಕ್ಕೆ ಹೆಸರು ನೋಂದಾಯಿಸಿಕೊಂಡಿದ್ದಾರೆ. ಅಂಗಾಂಗ ದಾನಕ್ಕೆ ಹೆಸರು ನೋಂದಾಯಿಸುವವರ ಸಂಖ್ಯೆ ಕೆಲ ದಿನಗಳಿಂದ ಹೆಚ್ಚಳವಾಗುತ್ತಿದೆ. ನಾವು ಕೂಡ ಜಾಗೃತಿ ಮೂಡಿಸುತ್ತಿದ್ದು, ಸಂಚಾರಿ ವಿಜಯ್ ಅವರ ಉದಾಹರಣೆ ನೀಡುತ್ತಿದ್ದೇವೆ' ಎಂದು ಅಧಿಕಾರಿಗಳು ವಿವರಿಸಿದರು.

ವರ್ಷವಾರು ಅಂಗಾಂಗ ದಾನಮಾಡಿದವರು

2018	2019	2020	2021
89	105	35	32

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,20,098 ▲ ಒಟ್ಟು ಸೋಂಕಿತರು (12,19,697 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
12,671 ▼	11,91,673 ▲	15,753 ▲

ದಿನದ ಏರಿಕೆ

ಹೊಸ ಪ್ರಕರಣ	401 ▲
ಗುಣಮುಖ	707 ▼
ಸಾವು	8 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಮಕ್ಕಳ ಚಿಕಿತ್ಸೆಗೆ ಸೌಕರ್ಯ ಹೆಚ್ಚಳ

ಬೆಂಗಳೂರು: 'ಕೋವಿಡ್ ಮೂರನೇ ಅಲೆಯ ಸಂದರ್ಭದಲ್ಲಿ ಮಕ್ಕಳು ಸೋಂಕಿಗೆ ಒಳಗಾಗುವ ಸಾಧ್ಯತೆ ಇರುವುದರಿಂದ ನಗರದ ತೃತೀಯ ಹಂತದ ಆಸ್ಪತ್ರೆಗಳಲ್ಲೂ ಮಕ್ಕಳ ಚಿಕಿತ್ಸೆಯ ಮೂಲಸೌಕರ್ಯ ಹೆಚ್ಚಿಸಬೇಕು ಎಂದು ಬಿಬಿಎಂಪಿ ನೇಮಿಸಿರುವ ತಜ್ಞರ ಸಮಿತಿ ಸಲಹೆ ನೀಡಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಮಕ್ಕಳ ತಜ್ಞರ ಸಮಿತಿಯ ಕೆಲವು ಸಲಹೆಗಳ ಆಧಾರದಲ್ಲಿ ನಗರದ ವೈದ್ಯಕೀಯ ಕಾಲೇಜುಗಳು ಹಾಗೂ ಇತರ ತೃತೀಯ ಹಂತದ ಆಸ್ಪತ್ರೆಗಳಲ್ಲಿ ಮಕ್ಕಳ ಚಿಕಿತ್ಸೆಗೆ ಸೌಕರ್ಯಗಳನ್ನು ಹೆಚ್ಚಿಸಲು ಕ್ರಮಕೈಗೊಂಡಿದ್ದೇವೆ' ಎಂದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ದಕ್ಷಿಣ ವಲಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚು ಇದೆ. ಹೆಚ್ಚು ಪ್ರಕರಣಗಳು ಕಂಡುಬಂದ ಕಡೆ ಕಂಟೈನ್ಮೆಂಟ್ ಪ್ರದೇಶಗಳನ್ನು ಗುರುತಿಸಿ ನಿಯಂತ್ರಿಸಿದ್ದರಿಂದ ಮಹದೇವಪುರ ವಲಯದಲ್ಲಿ ಸೋಂಕು ನಿಯಂತ್ರಣಕ್ಕೆ ಬಂದಿದೆ. ಮನೆ ಮನೆಗೆ ಭೇಟಿ ನೀಡಿ ವಿವರ ಕಲೆ ಹಾಕುವ ಹಾಗೂ ಕಂಟೈನ್ಮೆಂಟ್ ಗುರುತಿಸುವ ಪ್ರಕ್ರಿಯೆ ಈಗಲೂ ಮುಂದುವರಿದಿದೆ' ಎಂದು ತಿಳಿಸಿದರು.

'ಲಾಕ್‌ಡೌನ್ ಸಂಪೂರ್ಣ ತೆರವುಗೊಳಿಸಬೇಕು, ಜನಜೀವನ ಸಹಜ ಸ್ಥಿತಿಗೆ ಬರಬೇಕು ಎಂಬ ಅಪೇಕ್ಷೆ ಜನರಲ್ಲಿ ಇರುವುದು ಸಹಜ. ಆದರೆ, ನಮ್ಮ ಅಕ್ಕ ಪಕ್ಕದ ರಾಜ್ಯಗಳಲ್ಲಿ ಕೋವಿಡ್ ಸಂಖ್ಯೆ ಹೆಚ್ಚುತ್ತಿರುವುದರಿಂದ ನಾವೂ ಜಾಗರೂಕರಾಗಿರಬೇಕಾಗುತ್ತದೆ' ಎಂದರು.

'ಮಳೆಗಾಲದಲ್ಲಿ ಅನಾಹುತ ತಡೆಯಲು ಸಿದ್ಧತೆ ಮಾಡಿಕೊಂಡಿದ್ದೇವೆ. ನಗರದಲ್ಲಿ ದಿನದಲ್ಲಿ 50 ಮಿ.ಮೀಟರ್‌ವರೆಗೆ ಮಳೆ ಬಿದ್ದರೆ ಸಮಸ್ಯೆ ಆಗದು. ಅದಕ್ಕಿಂತ ಹೆಚ್ಚು ಮಳೆಯಾದಾಗ ಮಾತ್ರ ಸಮಸ್ಯೆ ಆಗುವ ಸಾಧ್ಯತೆ ಇದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಚಿತ್ರಾವಳಿ

ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಅರಕೆರೆ ವಾರ್ಡ್‌ನಲ್ಲಿ ಬಿಜೆಪಿ ಮುಖಂಡ ಎ.ಎನ್‌.ಪುರುಷೋತ್ತಮ (ರವಿ) ನೇತೃತ್ವದಲ್ಲಿ ಬಡವರಿಗೆ ದಿನಸಿ ಕಿಟ್‌ಗಳನ್ನು ಮಂಗಳವಾರ ಉಚಿತವಾಗಿ ವಿತರಿಸಲಾಯಿತು. ಶಾಸಕ ಎಂ. ಸತೀಶ್ ರೆಡ್ಡಿ ಹಾಗೂ ಕಂದಾಯ ಸಚಿವ ಆರ್‌. ಅಶೋಕ ಭಾಗವಹಿಸಿದರು

ಇನ್ನರ್‌ವ್ಹೀಲ್ ಕ್ಲಬ್ ಬೆಂಗಳೂರು ಡಿಸ್ಟ್ರಿಕ್ಟ್ 319ರ ನೂತನ ಅಧ್ಯಕ್ಷೆಯಾಗಿ ವಿರಿನಾ ಸುಬ್ಬಯ್ಯ (ಬಲದಿಂದ ಮೂರನೇಯವರು) ಅಧಿಕಾರ ಸ್ವೀಕರಿಸಿದರು. ಕಾರ್ಯದರ್ಶಿ ಉದಯ ಶೆಟ್ಟಿ ಇದ್ದರು

ಚನ್ನಪಟ್ಟಣದಲ್ಲಿ ಓಡಾಡಿದ ಚಿರತೆ

ಚನ್ನಪಟ್ಟಣ: ಪಟ್ಟಣದ ಎಂ.ಜಿ. ರಸ್ತೆಯಲ್ಲಿ ಸೋಮವಾರ ತಡರಾತ್ರಿ ಚಿರತೆಯೊಂದು ಕಾಣಿಸಿಕೊಂಡಿದ್ದು, ಆ ದೃಶ್ಯ ಮನೆಯೊಂದರ ಸಿಸಿ ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ರಾತ್ರಿ ಸುಮಾರು ಎರಡು ಗಂಟೆಯ ಸಮಯದಲ್ಲಿ ಚಿರತೆಯೊಂದು ಎಂ.ಜಿ. ರಸ್ತೆಯ ಉದ್ಯಮಿ ಮೋತಿಲಾಲ್ ಅವರ ಮನೆಯ ಮುಂಭಾಗ ನಡೆದುಕೊಂಡು ಹೋಗಿರುವ ದೃಶ್ಯ ದಾಖಲಾಗಿದೆ. ಈ ವಿಡಿಯೊ ವೈರಲ್ ಆಗಿದ್ದು, ನಗರವಾಸಿಗಳು ಭಯಭೀತರಾಗಿದ್ದಾರೆ.

'ಚಿರತೆ ಓಡಾಡಿರುವ ವಿಷಯವನ್ನು ಅರಣ್ಯ ಇಲಾಖಾಧಿಕಾರಿಗಳಿಗೆ ತಿಳಿಸಲಾಗಿದೆ. ಆದರೂ ಅವರು ಈವರೆಗೆ ಇಲ್ಲಿಗೆ ಭೇಟಿ ನೀಡಿಲ್ಲ' ಎಂದು ಇಲ್ಲಿನ ನಿವಾಸಿಗಳು ತಿಳಿಸಿದ್ದಾರೆ.

ಲಸಿಕೆ ದೊರೆಯದೆ ವಾಪಸಾದ ಕಾಗೋಡು

ಪ್ರಜಾವಾಣಿ ವಾರ್ತೆ

ಸಾಗರ: ಎರಡನೇ ಡೋಸ್ ಕೋವಿಶೀಲ್ಡ್ ಲಸಿಕೆ ಪಡೆಯಲು ಇಲ್ಲಿನ ದೇವರಾಜ ಅರಸು ಸಭಾಭವನಕ್ಕೆ ಮಂಗಳವಾರ ಬಂದಿದ್ದ ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಅವರು ಲಸಿಕಾ ಕೇಂದ್ರದಲ್ಲಿ ಲಸಿಕೆ ಸಂಗ್ರಹವಿಲ್ಲದ ಕಾರಣ ಮನೆಗೆ ಮರಳಬೇಕಾಯಿತು.

ಕಾಗೋಡು ತಿಮ್ಮಪ್ಪ

ಕಾಗೋಡು ತಿಮ್ಮಪ್ಪ ಅವರಿಗೆ ಎರಡನೇ ಡೋಸ್ ಲಸಿಕೆ ಪಡೆಯಲು ಲಸಿಕಾ ಕೇಂದ್ರಕ್ಕೆ ಮಂಗಳವಾರ ಬರುವಂತೆ ಅವರ ಮೊಬೈಲ್‌ಗೆ ಸಂದೇಶ ಕಳುಹಿಸಲಾಗಿತ್ತು. ಆ ಪ್ರಕಾರ ಅವರು ಲಸಿಕಾ ಕೇಂದ್ರಕ್ಕೆ ಬಂದರೆ 'ಲಸಿಕೆ ಸಂಗ್ರಹವಿಲ್ಲ' ಎಂಬ ಫಲಕ ನೋಡಿ ವಾಪಸ್ ಹೋಗಬೇಕಾಯಿತು.

ಈ ಸಂಬಂಧ ಪ್ರತಿಕ್ರಿಯಿಸಿದ ಅವರು, 'ಕೇಂದ್ರ ಮತ್ತು ರಾಜ್ಯ ಸರ್ಕಾರ ಎಲ್ಲರಿಗೂ ಉಚಿತವಾಗಿ ಕೋವಿಡ್ ತಡೆ ಲಸಿಕೆ ಹಾಕುವುದಾಗಿ ವ್ಯಾಪಕ ಪ್ರಚಾರ ನೀಡಿದೆ. ಆದರೆ, ಅಗತ್ಯ ಪ್ರಮಾಣದಲ್ಲಿ ಲಸಿಕಾ ಕೇಂದ್ರಗಳಿಗೆ ಲಸಿಕೆ ಸರಬರಾಜು ಆಗದೆ ಇರುವುದು ದುರದೃಷ್ಟಕರ' ಎಂದರು.

'ನಗರ ಪ್ರದೇಶಗಳಲ್ಲಿ ಮಾತ್ರವಲ್ಲ, ಗ್ರಾಮೀಣ ಭಾಗದ ಜನರಿಗೂ ಲಸಿಕೆ ಕೊರತೆ ಸಮಸ್ಯೆ ಕಾಡುತ್ತಿದೆ. ಲಸಿಕಾ ಕೇಂದ್ರಗಳಿಗೆ ಸುರಿಯುವ ಮಳೆಯಲ್ಲಿ ಬರುವ ಜನರು ಲಸಿಕೆ ಸಿಗದೆ ನಿರಾಶರಾಗಿ ಮರಳುತ್ತಿದ್ದಾರೆ. ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದು ಹೇಳಿದರು.

'ಲಸಿಕೆ ಸರಬರಾಜಿನಲ್ಲಿ ಕೊರತೆ ಇರುವುದು ನಿಜ. ಸರ್ಕಾರ ತುರ್ತಾಗಿ ಲಸಿಕೆ ಸರಬರಾಜು ಮಾಡದೆ ಇದ್ದರೆ ಅಗತ್ಯವಿರುವ ಎಲ್ಲರಿಗೂ ಲಸಿಕೆ ನೀಡುವುದು ಸಾಧ್ಯವಿಲ್ಲ. 18ರಿಂದ 45 ವರ್ಷದೊಳಗಿನವರಿಗೆ ಲಸಿಕೆ ನೀಡುವ ಸಂಬಂಧ ಇನ್ನೂ ಸರ್ಕಾರದ ಆದೇಶ ಬಂದಿಲ್ಲ' ಎಂದು ಲಸಿಕಾ ಕೇಂದ್ರದ ಸಂಯೋಜಕ ಮ.ಸ. ನಂಜುಂಡಸ್ವಾಮಿ ಪ್ರತಿಕ್ರಿಯಿಸಿದ್ದಾರೆ.

ವಾರಾಂತ್ಯದಲ್ಲಿ ನಂದಿ ಬೆಟ್ಟಕ್ಕೆ ಪ್ರವೇಶ ನಿಷೇಧ

ಚಿಕ್ಕಬಳ್ಳಾಪುರ: ಪ್ರಸಿದ್ಧ ನಂದಿಗಿರಿಧಾಮಕ್ಕೆ ವಾರಾಂತ್ಯದಲ್ಲಿ ಸಾರ್ವಜನಿಕರು ಹಾಗೂ ಪ್ರವಾಸಿಗರ ಪ್ರವೇಶವನ್ನು ಜಿಲ್ಲಾಡಳಿತ ನಿಷೇಧಿಸಿದೆ.

ಶುಕ್ರವಾರ ಸಂಜೆ ಆರು ಗಂಟೆಯಿಂದ ಸೋಮವಾರ ಬೆಳಿಗ್ಗೆ ಆರರವರೆಗೆ ಈ ನಿಷೇಧ ಜಾರಿಯಲ್ಲಿ ಇರುತ್ತದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಎಚ್.ಅಮರೇಶ್ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಕೊರೊನಾ ಸೋಂಕು ತಡೆಗಟ್ಟಬೇಕಾಗಿದೆ. ಸೋಂಕು ಹೆಚ್ಚದಂತೆ ಮುನ್ನೆಚ್ಚರಿಕೆ ವಹಿಸಬೇಕಾಗಿದೆ. ಆದ್ದರಿಂದ ಮುಂದಿನ ಆದೇಶದವರೆಗೂ ಈ ನಿಷೇಧ ಜಾರಿಯಲ್ಲಿರುತ್ತದೆ ಎಂದಿದ್ದಾರೆ.

ಲಾಕ್‌ಡೌನ್ ತೆರವಾದ ನಂತರ ನಂದಿಬೆಟ್ಟಕ್ಕೆ ಪ್ರವಾಸಿಗರ ಪ್ರವೇಶಕ್ಕೆ ಅವಕಾಶ ನೀಡಲಾಗಿತ್ತು. ಆರಂಭದಲ್ಲಿ ಹೆಚ್ಚು ಜನಸಂದಣಿ ಇರಲಿಲ್ಲ. ಆದರೆ ಭಾನುವಾರ (ಜು.11)ರಂದು ಸಾವಿರಾರು ಪ್ರವಾಸಿಗರು ನಂದಿ ಬೆಟ್ಟಕ್ಕೆ ಭೇಟಿ ನೀಡಿದ್ದರು. ಬೆಟ್ಟದಲ್ಲಿರುವ ಪ್ರವಾಸೋದ್ಯಮ ನಿಗಮದ ಎಲ್ಲ ಕೊಠಡಿಗಳು ಪ್ರವಾಸಿಗರಿಂದ ಭರ್ತಿ ಆಗಿದ್ದವು. ಬೆಂಗಳೂರಿನಿಂದ ನಂದಿಬೆಟ್ಟಕ್ಕೆ ಸಾಗುವ ದೇವನಹಳ್ಳಿ ತಾಲ್ಲೂಕಿನ ರಾಣಿಕ್ರಾಸ್‌ನಲ್ಲಿ ಒಂದು ಕಿಲೋಮೀಟರ್‌ನಷ್ಟು ಸಂಚಾರ ದಟ್ಟಣೆ ಉಂಟಾಗಿತ್ತು. ಮಾಸ್ಕ್ ಧರಿಸದ ಮತ್ತು ಅಂತರ ಕಾಪಾಡದ ಪ್ರವಾಸಿಗರಿಗೆ ದಂಡ ವಿಧಿಸಲಾಗಿತ್ತು. ಈ ಎಲ್ಲ ದೃಷ್ಟಿಯಿಂದ ಜಿಲ್ಲಾಡಳಿತ ವಾರಾಂತ್ಯದ ಪ್ರವೇಶ ನಿಷೇಧಿಸಿದೆ.

ಆರ್‌ಟಿಐ ಕಾರ್ಯಕರ್ತ ಭೀಮಪ್ಪ ಗಡಾದ ಆರೋಪ

'ಅಂಬರೀಷ್ ಅಂತ್ಯಸಂಸ್ಕಾರ ವೆಚ್ಚ: ಮಾಹಿತಿ ನೀಡದ ಸರ್ಕಾರ'

ಬೆಳಗಾವಿ: 'ಚಿತ್ರನಟ, ಕೇಂದ್ರದ ಮಾಜಿ ಸಚಿವ ದಿವಂಗತ ಅಂಬರೀಷ್ ಅವರ ಅಂತ್ಯಸಂಸ್ಕಾರಕ್ಕೆ ವೆಚ್ಚವಾದ ಹಣವೆಷ್ಟು ಮತ್ತು ಅದನ್ನು ಭರಿಸಿದವರು ಯಾರು ಎನ್ನುವ ಮಾಹಿತಿಯನ್ನು ಸರ್ಕಾರ ಒದಗಿಸಿಲ್ಲ' ಎಂದು ಇಲ್ಲಿನ ಮಾಹಿತಿ ಹಕ್ಕು ಕಾರ್ಯಕರ್ತ ಭೀಮಪ್ಪ ಗಡಾದ ಆರೋಪಿಸಿದ್ದಾರೆ.

'ಮಾಹಿತಿ ಕೋರಿ ಆರ್‌ಟಿಐ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದೆ. ಆ ಮಾಹಿತಿಯು ಸರ್ಕಾರದ ಬಳಿ ಇಲ್ಲದಿರುವುದು ಮತ್ತು ಯಾವ ಕಚೇರಿಯಲ್ಲಿ ಸಿಗುತ್ತದೆ ಎನ್ನುವ ಮಾಹಿತಿ ಕೂಡ ಮುಖ್ಯ ಕಾರ್ಯದರ್ಶಿ ಕಚೇರಿಯಿಂದ ಸಿಕ್ಕಿಲ್ಲ' ಎಂದು ತಿಳಿಸಿದ್ದಾರೆ.

ಈ ಬಗ್ಗೆ ಮಂಗಳವಾರ ದಾಖಲೆಗಳನ್ನು ಅವರು ಬಿಡುಗಡೆ ಮಾಡಿದ್ದಾರೆ.

'ಅಂಬರೀಷ್ ಅವರ ಚಿಕಿತ್ಸೆಗಾಗಿ ಸರ್ಕಾರದಿಂದ ಮಾಡಿದ ವೆಚ್ಚವೆಷ್ಟು, ಅಂತ್ಯಕ್ರಿಯೆಗೆ ಖರ್ಚಾಗಿದ್ದೆಷ್ಟು ಹಾಗೂ ಅವರ ಸ್ಮಾರಕ ನಿರ್ಮಿಸಲು ನಿಗದಿಪಡಿಸಿದ ಮೊತ್ತದ ವಿವರ ನೀಡುವಂತೆ ಮುಖ್ಯ ಕಾರ್ಯದರ್ಶಿ ಕಚೇರಿಗೆ ಅರ್ಜಿ ಸಲ್ಲಿಸಿದ್ದೆ. ವೈದ್ಯಕೀಯ ವೆಚ್ಚದ ಸಲುವಾಗಿ ಬೆಂಗಳೂರಿನ ವಿಕ್ರಂ ಆಸ್ಪತ್ರೆ ಮತ್ತು ಸಿಂಗಪುರ ಆಸ್ಪತ್ರೆಗೆ ಸೇರಿ ₹ 1.22 ಕೋಟಿ ಭರಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಆದರೆ, ಅಂತ್ಯಸಂಸ್ಕಾರಕ್ಕೆ ಆದ ವೆಚ್ಚದ ಮಾಹಿತಿಯನ್ನು ಮಂಡ್ಯ ಜಿಲ್ಲಾಧಿಕಾರಿಯಿಂದ ಮತ್ತು ಸ್ಮಾರಕಕ್ಕೆ ನಿಗದಿಯಾದ ಮೊತ್ತವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಪಡೆದುಕೊಳ್ಳುವಂತೆ ಮುಖ್ಯ ಕಾರ್ಯದರ್ಶಿ ಕಚೇರಿಯಿಂದ ಅರ್ಜಿ ವರ್ಗಾಯಿಸಲಾಗಿತ್ತು' ಎಂದರು.

'ಅಂಬರೀಷ್ ಅಂತ್ಯಸಂಸ್ಕಾರಕ್ಕೆ ವೆಚ್ಚವಾದ ಹಣದ ಮಾಹಿತಿಯನ್ನು ಮುಖ್ಯ ಕಾರ್ಯದರ್ಶಿ ಕಚೇರಿಯಿಂದಲೇ ಪಡೆಯುವಂತೆ ಮಂಡ್ಯ ಜಿಲ್ಲಾಧಿಕಾರಿ ಕಚೇರಿಯಿಂದ ಕೊಟ್ಟಿರುವ ಲಿಖಿತ ಉತ್ತರದಲ್ಲಿ ತಿಳಿಸಲಾಗಿದೆ. ಹೀಗೆ ಒಬ್ಬರತ್ತ ಇನ್ನೊಬ್ಬರು ಬೆರಳು ತೋರುತ್ತಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಡುತ್ತಿದೆ. ಸರ್ಕಾರವಾಗಲಿ ಅಥವಾ ಅಂಬರೀಷ್ ಕುಟುಂಬದವರಾಗಲಿ ಈ ಮಾಹಿತಿ ಬಹಿರಂಗಪಡಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಸ್ಮಾರಕ ನಿರ್ಮಾಣಕ್ಕೆ ಅನುದಾನ ನಿಗದಿಪಡಿಸಿಲ್ಲ ಎಂದು ವಾರ್ತಾ ಇಲಾಖೆ ತಿಳಿಸಿದೆ' ಎಂದು ಹೇಳಿದ್ದಾರೆ.

₹5ಲಕ್ಷ ಪರಿಹಾರ ನೀಡಿ: ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಆನೇಕಲ್: ಕೊರೊನಾದಿಂದ ಮೃತಪಟ್ಟ ಕುಟುಂಬಗಳಿಗೆ ಸರ್ಕಾರ ₹1ಲಕ್ಷ ನೆರವು ನೀಡುತ್ತಿದೆ. ಆದರೆ, ಸಂಕಷ್ಟದ ಹಿನ್ನೆಲೆಯಲ್ಲಿ ಮೃತಪಟ್ಟ ಕುಟುಂಬಗಳಿಗೆ ₹5ಲಕ್ಷ ನೆರವು ನೀಡಬೇಕು ಮತ್ತು ಬಿಪಿಎಲ್ ಕಾರ್ಡ್ ಇಲ್ಲದವರಿಗೂ ನೆರವು ಸಿಗುವಂತಾಗಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಒತ್ತಾಯಿಸಿದರು.

ಅವರು ತಾಲ್ಲೂಕಿನ ಚಂದಾಪುರದಲ್ಲಿ ಕಾಂಗ್ರೆಸ್ ಆಯೋಜಿಸಿದ್ದ 'ಸಹಾಯ ಹಸ್ತ' ಕಾರ್ಯಕ್ರಮದಲ್ಲಿ ಮಾತನಾಡಿದರು. ಕೊರೊನ ತಡೆಯಲು ಲಾಕ್‌ಡೌನ್ ಮಾಡಲಾಗಿತ್ತು. ಬಡವರು, ಅಸಂಘಟಿತ ಕಾರ್ಮಿಕರು, ಬೀದಿ ವ್ಯಾಪಾರಿಗಳು ಸಂಕಷ್ಟದಲ್ಲಿದ್ದಾರೆ. ಬಿಜೆಪಿ ಸರ್ಕಾರ ಪ್ಯಾಕೇಜ್ ಘೋಷಿಸಿದ್ದರೂ ಸಮರ್ಥವಾಗಿ ತಲುಪುತ್ತಿಲ್ಲ. ಕಾಂಗ್ರೆಸ್ ಕಾರ್ಯಕರ್ತರು ಕಾರ್ಮಿಕರಿಗೆ, ಬೀದಿ ಬದಿ ವ್ಯಾಪಾರಿಗಳಿಗೆ ಅರ್ಜಿ ತುಂಬಲು ನೆರವಾಗಬೇಕು ಎಂದು ಸಲಹೆ ನೀಡಿದರು.

ಶಾಸಕ ಬಿ.ಶಿವಣ್ಣ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಆರ್‌.ಕೆ.ರಮೇಶ್, ಆನೇಕಲ್ ಪುರಸಭೆ ಅಧ್ಯಕ್ಷ ಎನ್‌.ಎಸ್‌.ಪದ್ಮನಾಭ, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಕೃಷ್ಣಪ್ಪ, ಮಹಿಳಾ ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷೆ ಜಯಶ್ರೀ ಗೌಡ ಇದ್ದರು.

ಉಪಮುಖ್ಯಮಂತ್ರಿ ಡಾ.ಸಿ.ಎನ್‌. ಅಶ್ವತ್ಥನಾರಾಯಣ ಅವರು ಹುಬ್ಬಳ್ಳಿಯ ಆರ್ ಎಸ್ ಎಸ್ ಕೇಂದ್ರ ಕಚೇರಿ ಕೇಶವ ಕುಂಜಗೆ ಸೋಮವಾರ ಭೇಟಿ ನೀಡಿ ಸಂಘದ ಪ್ರಮುಖ ಶ್ರೀಧರ ನಾಡಿಗೇರ್ ಅವರೊಂದಿಗೆ ಮಾತುಕತೆ ನಡೆಸಿದರು. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಶಾಸಕ ಅರವಿಂದ ಬೆಲ್ಲದ ಇದ್ದಾರೆ

ಆರ್‌ಎಸ್‌ಎಸ್ ಕಚೇರಿಗೆ ಹೊರಟ್ಟಿ ಭೇಟಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರೊಂದಿಗೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಆರ್‌ಎಸ್‌ಎಸ್ ಕಚೇರಿಗೆ ಸೋಮವಾರ ಭೇಟಿ ನೀಡಿದ್ದರು.

ಕರ್ನಾಟಕ ಡಿಜಿಟಲ್ ಎಕನಾಮಿ ಮಿಷನ್ (ಕೆಡಿಇಎಂ) ಕೇಂದ್ರ ಉದ್ಘಾಟನೆಗೆ ಅಶ್ವತ್ಥನಾರಾಯಣ ಹುಬ್ಬಳ್ಳಿಗೆ ಭೇಟಿ ನೀಡಿದ್ದರು. ಕೇಂದ್ರ ಉದ್ಘಾಟನೆಗೆ ಮುಂಚೆ ಅವರು ಆರ್‌ಎಸ್‌ಎಸ್ ಕಚೇರಿ ಕೇಶವ ಕುಂಜಕ್ಕೆ ತೆರಳಿದ್ದರು. ಅವರ ಜೊತೆ ಹೊರಟ್ಟಿ ಅವರಿದ್ದರು. ಕೆಲಹೊತ್ತು ಆರ್‌ಎಸ್‌ಎಸ್ ಪ್ರಮುಖ ಶ್ರೀಧರ್ ನಾಡಿಗೇರ್, ಬಿಜೆಪಿ ಮುಖಂಡರ ಜೊತೆ ಚರ್ಚಿಸಿ ಹೊರಟುಹೋದರು.

'ಕರ್ನಾಟಕ ವಿಶ್ವವಿದ್ಯಾಲಯ ಕಾರ್ಯಕ್ರಮ ಮುಗಿಸಿಕೊಂಡು ಡಿಸಿಎಂ ಅಶ್ವತ್ಥನಾರಾಯಣ ಅವರೊಂದಿಗೆ ಊಟಕ್ಕೆ ಹೊರಟಿದ್ದೆ. ಆಗ ಅವರು, 10 ನಿಮಿಷ ಆರ್‌ಎಸ್‌ಎಸ್ ಕಚೇರಿಗೆ ಹೋಗಿಬರುತ್ತೇನೆ. ನೀವೂ ಬನ್ನಿ. ಹಾಗೆಯೇ ಊಟಕ್ಕೆ ಹೋಗೋಣ ಎಂದು ಕರೆದರು. ಹಾಗಾಗಿ ಹೋಗಿದ್ದೆ. ಯಾವುದೇ ರಾಜಕೀಯ ಉದ್ದೇಶವಿರಲಿಲ್ಲ' ಎಂದು ಸಭಾಪತಿ ಬಸವರಾಜ ಹೊರಟ್ಟಿ 'ಪ್ರಜಾವಾಣಿ'ಗೆ ತಿಳಿಸಿದರು.

'ಸರ್ಕಾರ ಮೃತರ ಸಂಖ್ಯೆ ಮರೆಮಾಚುತ್ತಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರವು ಕೋವಿಡ್‌ನಿಂದ ಮೃತಪಟ್ಟವರ ವಾಸ್ತವ ಸಂಖ್ಯೆ ನೀಡುತ್ತಿಲ್ಲ. ಈ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಮರೆಮಾಚುತ್ತಿದೆ' ಎಂದು ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಸಹ ಅಧ್ಯಕ್ಷ ವಿ.ಆರ್ ಸುದರ್ಶನ್ ಆರೋಪಿಸಿದರು.

ಕಾಂಗ್ರೆಸ್ ಮುಖಂಡ ಆರ್‌.ಕೆ.ರಮೇಶ್ ಅವರು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಗಳ ಕುಟುಂಬಕ್ಕೆ ವೈಯಕ್ತಿಕವಾಗಿ ಸಹಾಯಧನ ನೀಡುತ್ತಿದ್ದು, ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

'ಬೂತ್, ವಾರ್ಡ್, ಹೋಬಳಿ ಹಾಗೂ ಬ್ಲಾಕ್ ಮಟ್ಟದಲ್ಲಿ ಎಷ್ಟು ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ ಎಂಬ ಮಾಹಿತಿ ಕಲೆಹಾಕುವಂತೆ ಕಾಂಗ್ರೆಸ್ ಕಾರ್ಯಕರ್ತರಿಗೆ ಸೂಚಿಸಲಾಗಿದೆ. ಈ ವರದಿಯ ಆಧಾರದಲ್ಲಿ ಮುಂಬರುವ ವಿಧಾನಸಭಾ ಅಧಿವೇಶನದ ವೇಳೆ ಸರ್ಕಾರದ ವಿರುದ್ಧ ಹೋರಾಟ ನಡೆಸಲಾಗುತ್ತದೆ' ಎಂದರು.

ಆರ್.ಕೆ.ರಮೇಶ್ 'ಸ್ಥಳೀಯ ಶಾಸಕ ಎಂ.ಕೃಷ್ಣಪ್ಪ ಕೋವಿಡ್ ಸಮಯದಲ್ಲಿ ಮನೆಬಿಟ್ಟು ಹೊರಬರಲಿಲ್ಲ. ಸೋಂಕಿತರ ಅಳಲು ಕೇಳಲಿಲ್ಲ. ನೊಂದವರಿಗಾಗಿ ಮಿಡಿಯಲಿಲ್ಲ. ಬದಲಾಗಿ ಸಹಾಯ ಮಾಡುವವರಿಗೆ ಬೆದರಿಕೆಯೊಡ್ಡುತ್ತಿದ್ದರು. ಬಿಜೆಪಿ ಕಾರ್ಯಕರ್ತರಿಗಷ್ಟೇ ಹಾಸಿಗೆ ಹಾಗೂ ಆಮ್ಲಜನಕ ಸಿಗುವಂತೆ ನೋಡಿಕೊಂಡಿದ್ದರು' ಎಂದು ದೂರಿದರು.

ಉತ್ತರಹಳ್ಳಿ ಸಮೀಪದ ಆರೇಹಳ್ಳಿ ನಿವಾಸಿ ನಾಗರಾಜ್ ಕೋವಿಡ್‌ನಿಂದ ಮೃತಪಟ್ಟಿದ್ದು ಅವರ ಪತ್ನಿ ನಾಗರತ್ನ ಅವರಿಗೆ ವಿ.ಆರ್‌.ಸುದರ್ಶನ್ ಹಾಗೂ ಆರ್‌.ಕೆ.ರಮೇಶ್ ಪರಿಹಾರದ ಚೆಕ್ ವಿತರಿಸಿದರು.

ಗೌರವ

ಮೇಲುಕೋಟೆಯ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಅವರಿಗೆ ತಿರುಪತಿ ತಿರುಮಲ ದೇವಸ್ಥಾನವು ಗೌರವ ಸಲ್ಲಿಸಿತು. ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಧರ್ಮಾರೆಡ್ಡಿ, ಪ್ರಧಾನ ಅರ್ಚಕ ವೇಣುಗೋಪಾಲ ದೀಕ್ಷಿತ ಇದ್ದರು

ಗೈರು ಹಾಜರಿ, ಹೋಂ ವರ್ಕ್ ಮಾಡಿಲ್ಲ ಎಂಬ ಕಾರಣಕ್ಕೆ ಸಿಗದ 'ಪ್ರವೇಶಪತ್ರ'

ಎಸ್ಸೆಸ್ಸೆಲ್ಸಿ ಪರೀಕ್ಷೆಯಿಂದ 30 ವಿದ್ಯಾರ್ಥಿಗಳು ವಂಚಿತ

• ರಾಜೇಂದ್ರ ನಾಯಕ

ಹಂಸಭಾವಿ (ಹಾವೇರಿ): ಎಸ್ಸೆಸ್ಸೆಲ್ಸಿ ಪರೀಕ್ಷೆಯ ಪ್ರವೇಶ ಪತ್ರ ಸಿಗದೇ ಚಿಕ್ಕೇರೂರಿನ ಮಹಾತ್ಮಗಾಂಧಿ ಪ್ರೌಢ ಶಾಲೆಯ 30 ವಿದ್ಯಾರ್ಥಿಗಳು ಪರೀಕ್ಷೆ ಬರೆಯುವ ಅವಕಾಶದಿಂದ ವಂಚಿತರಾಗಿದ್ದಾರೆ.

ಜುಲೈ 19 ಮತ್ತು 22ರಂದು ನಡೆಯಲಿರುವ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ ಬರೆಯಲು ಈ ವಿದ್ಯಾರ್ಥಿಗಳು ಸಿದ್ಧತೆ ಮಾಡಿಕೊಂಡು ಉತ್ಸುಕರಾಗಿದ್ದರು. ಆದರೆ, ಪ್ರವೇಶ ಪತ್ರ ಸಿಗದಿರುವುದು ಇವರಿಗೆ ಬರಸಿಡಿಲು ಬಡಿದಂತಾಗಿದೆ.

ಶಾಲೆಯ ಒಟ್ಟು 64 ವಿದ್ಯಾರ್ಥಿಗಳಲ್ಲಿ 34 ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರ ಬಂದಿದೆ. 28 ವಿದ್ಯಾರ್ಥಿಗಳಿಗೆ ಪರೀಕ್ಷೆ ಅರ್ಜಿ ನಮೂನೆ ತುಂಬುವ ಬಗ್ಗೆ ಶಿಕ್ಷಕರು ಮಾಹಿತಿಯನ್ನೇ ಕೊಟ್ಟಿರಲಿಲ್ಲ. ಇಬ್ಬರು ವಿದ್ಯಾರ್ಥಿಗಳು ಅರ್ಜಿ ನಮೂನೆ ತುಂಬಲು ಪರೀಕ್ಷಾ ಶುಲ್ಕವನ್ನು ಕಟ್ಟಿದ್ದರು. ಆದರೂ ಈ ವಿದ್ಯಾರ್ಥಿಗಳ ಪ್ರವೇಶ ಪತ್ರಗಳು ಬಂದಿಲ್ಲ.

ಪ್ರವೇಶಪತ್ರ ಬಾರದೇ ಇರುವ ಬಗ್ಗೆ ವಿದ್ಯಾರ್ಥಿಗಳ ಪೋಷಕರು ಶಾಲೆಗೆ ಹೋಗಿ ಗಲಾಟೆ ಮಾಡಿದ ಕಾರಣ, ಮುಖ್ಯ ಶಿಕ್ಷಕ ಶಿವಾನಂದ ಉಜ್ಜಕ್ಕನವರ ಅವರು ಬೆಂಗಳೂರಿನ ಪರೀಕ್ಷಾ ಮಂಡಳಿಗೆ ಹೋಗಿ ಬಂದಿದ್ದರೂ, ಪ್ರಯೋಜನವಾಗಿಲ್ಲ.

'ನಾವು ಶಿಕ್ಷಕರು ಹೇಳಿದ ಎಲ್ಲ ಹೋಂವರ್ಕ್ ಮಾಡಿದ್ದೇವೆ. ಆದರೆ, ಶಾಲಾ ಮುಖ್ಯಶಿಕ್ಷಕರು ನಾವು ಸರಿಯಾಗಿ ತರಗತಿಗೆ ಹಾಜರಾಗಿಲ್ಲ ಎಂದು ಪ್ರವೇಶಪತ್ರ ಅರ್ಜಿ ತುಂಬಿಲ್ಲ. ಇದರಿಂದ ನಮ್ಮ ಭವಿಷ್ಯದ ಗತಿಯೇನು?' ಎಂದು ಪರೀಕ್ಷೆಯಿಂದ ವಂಚಿತಳಾದ ವಿದ್ಯಾರ್ಥಿನಿ ನಿಖಿತಾ ಪಾಟೀಲ ಅಳಲು ತೋಡಿಕೊಂಡಳು.

'ನಮ್ಮ ಮಗನ ಪರೀಕ್ಷೆ ಅರ್ಜಿ ತುಂಬಲು ಹಣ ನೀಡಿದ್ದೇನೆ. ಆದರೆ ಶಾಲೆಯಲ್ಲಿ ಅದನ್ನು ತುಂಬದೇ ಹಾಗೇ ಇಟ್ಟುಕೊಂಡಿದ್ದಾರೆ. ಈಗ ಪರೀಕ್ಷೆ ಬರೆಯಲು ಅವಕಾಶ ಸಿಗದೆ ನನ್ನ ಮಗ ದುಃಖಿತನಾಗಿದ್ದಾನೆ. ಶಿಕ್ಷಕರ ಯಡವಟ್ಟಿನಿಂದಾಗಿ ಮಕ್ಕಳು ಶಿಕ್ಷೆ ಅನುಭವಿಸುವಂತಾಗಿದೆ' ಎಂದು ಪರೀಕ್ಷೆಯಿಂದ ವಂಚಿತನಾದ ವಿದ್ಯಾರ್ಥಿ ಭುವನ್ ವಂಟಿಕರ್ ತಂದೆ ಶಂಕರ್ ಆಕ್ರೋಶ ವ್ಯಕ್ತಪಡಿಸಿದರು.

'ವಿದ್ಯಾರ್ಥಿಗಳು ಸರಿಯಾಗಿ ಹೋಂವರ್ಕ್ ಮಾಡಿಲ್ಲ ಹಾಗೂ ಅವರ ಹಾಜರಾತಿ ಕೊರತೆಯೂ ಇದೆ. ಹೀಗಾಗಿ ಇವರಿಗೆ ಮುಂದಿನ ಬಾರಿ ಪರೀಕ್ಷೆಗೆ ಅವಕಾಶ ನೀಡಲಾಗುವುದು' ಎಂದು ಶಾಲೆಯ ಮುಖ್ಯಶಿಕ್ಷಕ ಶಿವಾನಂದ ಉಜ್ಜಕ್ಕನವರ 'ಪ್ರಜಾವಾಣಿ'ಗೆ ತಿಳಿಸಿದರು.

ಪರೀಕ್ಷೆಯಿಂದ ವಂಚಿತರಾದ ಹಾವೇರಿ ಜಿಲ್ಲೆಯ ಚಿಕ್ಕೇರೂರಿನ ಮಹಾತ್ಮಗಾಂಧಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು

ಪ್ರಾಜೆಕ್ಟ್ ರಿಪೋರ್ಟ್ ಸಲ್ಲಿಸಿಲ್ಲ ಹಾಗೂ ಪರೀಕ್ಷಾ ಶುಲ್ಕ ಕಟ್ಟದ ಕಾರಣ ಪ್ರವೇಶ ಪತ್ರ ಸಿಕ್ಕಿಲ್ಲ. ಮರು ಪರೀಕ್ಷೆಯಲ್ಲಿ ಅವಕಾಶ ಕಲ್ಪಿಸಲಾಗುವುದು

ಎಲ್. ಸಿದ್ದಲಿಂಗಪ್ಪ
ಬಿಇಒ, ಹಿರೇಕೆರೂರು ತಾ.

ಈಶ ಪ್ರತಿಷ್ಠಾನ: ಆಹಾರ ಪೊಟ್ಟಣ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಕಳೆದ 75 ದಿನಗಳಿಂದ ಈಶ ಪ್ರತಿಷ್ಠಾನ ರಾಜ್ಯದ 11 ಜಿಲ್ಲೆಗಳ ಸರ್ಕಾರಿ ಆಸ್ಪತ್ರೆಗಳಲ್ಲಿ ಕೋವಿಡ್ ಕಾರ್ಯದಲ್ಲಿ ತೊಡಗಿದ್ದ ವೈದ್ಯಕೀಯ ಸಿಬ್ಬಂದಿಗೆ 7.34 ಲಕ್ಷ ಆಹಾರ, ಬಿಸ್ಕತ್ ಪೊಟ್ಟಣ, ಸ್ನ್ಯಾಕ್ಸ್ ಮತ್ತು ತಂಪು ಪಾನಿಯ ವಿತರಿಸಿದೆ.

ಬೆಂಗಳೂರು, ಮೈಸೂರು, ಮಂಡ್ಯ, ಮಂಗಳೂರು, ಉಡುಪಿ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಕೋಲಾರ, ಚಾಮರಾಜನಗರ ಮತ್ತು ರಾಮನಗರ ಜಿಲ್ಲೆಗಳಲ್ಲಿನ ಆಸ್ಪತ್ರೆಗಳಲ್ಲಿ ಇವುಗಳನ್ನು ವಿತರಿಸಲಾಗಿದೆ ಎಂದು ಈಶ ಪ್ರತಿಷ್ಠಾನದ ರಾಘವೇಂದ್ರ ಶಾಸ್ತ್ರಿ ತಿಳಿಸಿದ್ದಾರೆ.

ಎರಡನೇ ಅಲೆಯ ಸಂದರ್ಭದಲ್ಲಿ ಕೋವಿಡ್ ಸೋಂಕು ತಾರಕಕ್ಕೆ ಏರಿತ್ತು. ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿ ಅತ್ಯಂತ ಮಾನಸಿಕ ಒತ್ತಡಕ್ಕೂ ಒಳಗಾಗಿದ್ದರು. ಕೆಲವರು 18 ಗಂಟೆಗಳವರೆಗೂ ಕೆಲಸ ಮಾಡುತ್ತಿದ್ದರು. ಪಿಪಿಇ ಸೂಟ್‌ಗಳು, ಕೈಗವುಸು ಮತ್ತು ಮುಖ ಗವುಸುಗಳನ್ನು ಕೋವಿಡ್ ಯೋಧರಿಗೆ ವಿತರಿಸಲಾಯಿತು. ಸದ್ಗುರು ಅವರು ಕೋವಿಡ್ ಸಮರದಲ್ಲಿ ತೊಡಗಿದ್ದ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಯ ಬಗ್ಗೆ ಕಾಳಜಿವಹಿಸುವಂತೆ ಸೂಚಿಸಿದ್ದರು. ಅದರ ಪ್ರಕಾರವೇ ಕಾರ್ಯನಿರ್ವಹಿಸಲಾಗಿದೆ ಎಂದು ಹೇಳಿದರು.

ಅಲೆಮಾರಿ ಜನಾಂಗಕ್ಕೆ ಪಡಿತರ ಕಿಟ್ ವಿತರಣೆ

ಪ್ರಜಾವಾಣಿ LIVE
Prajavani.net Prajavani
ಏಕಕಾಲದಲ್ಲಿ ಫೇಸ್‌ಬುಕ್, ಯೂಟ್ಯೂಬ್‌ಗಳಲ್ಲಿ ನೇರ ಪ್ರಸಾರ
ರಂಗ ಭೀಷ್ಮ ದಿ. ಆರ್ ಪರಮಶಿವನ್ ಸ್ಮರಣಾರ್ಥ
ವೃತ್ತಿ ರಂಗಭೂಮಿಯ ರಂಗಗೀತೆಗಳ ಗಾಯನ ಕಾರ್ಯಕ್ರಮ

ರಂಗಸಂಜೆ
ನಡೆಸಿಕೊಡುವವರು

ರಂಗಗೀತೆಗಳ ಗಾಯನ — ಡಾ. ದೀಪಕ್ ಪರಮಶಿವನ್
ಪಿಟೀಲು — ವಿದುಷಿ ಚಾರುಲತಾ ರಾಮಾನುಜಂ
ತಬಲ — ವಿದ್ವಾನ್ ಗುರುಮೂರ್ತಿ ವೈದ್ಯ
ಇಂದು ಸಂಜೆ 5 ಗಂಟೆಯಿಂದ

ಪ್ರಜಾವಾಣಿ
ಗ್ರೀನ್ ಟಾಕ್ | ಪ್ರಕೃತಿ ಮಡಿಲ ಮಾತು

ವಿದ್ಯಾರ್ಥಿಗಳಿಗಾಗಿ ವೃಕ್ಷವನ
ವಿದ್ಯಾರ್ಥಿದೆಸೆಯಲ್ಲಿ ಪರಿಸರ ಪ್ರಜ್ಞೆ ಮನಸ್ಸಿಗಿಳಿದರೆ, ಮುಂದೆ ಪ್ರಕೃತಿ ರಕ್ಷಣೆ, ಸಮೃದ್ಧಿಗೆ ಅದೇ ಸ್ಫೂರ್ತಿ. ಇಂಥ ಪ್ರೇರಕ ಶಕ್ತಿಯಾಗಿ 12 ಸಾವಿರಕ್ಕೂ ಅಧಿಕ ಗಿಡ-ಮರಗಳೊಂದಿಗೆ ಸ್ಥಾಪನೆಯಾಗಿವೆ ವೃಕ್ಷವನಗಳು..
https://bit.ly/36vnsh9

ಜೆಡಿಎಸ್, ಕಾಂಗ್ರೆಸ್, ಬಿಜೆಪಿ ಮುಖಂಡರು ಫಲಾನುಭವಿಗಳು; ಗಣಿ ಚಟುವಟಿಕೆಗೆ ಪಕ್ಷಭೇದವಿಲ್ಲ

ಗಣಿಗಾರಿಕೆಯೇ ಪಕ್ಷಗಳ ಚುನಾವಣಾ ನಿಧಿ!

• ಎಂ.ಎನ್.ಯೋಗೇಶ್

ಮಂಡ್ಯ: ರಾಜಕಾರಣ ವಿಚಾರದಲ್ಲಿ ಸಕ್ಕರೆ ನಾಡಿನ ವಿವಿಧ ಪಕ್ಷಗಳ ಮುಖಂಡರು ತೊಡೆ ತಟ್ಟಿ ಅಖಾಡಕ್ಕಿಳಿಯುತ್ತಾರೆ. ಆದರೆ, ಅಕ್ರಮ ಕಲ್ಲು ಗಣಿಗಾರಿಕೆ ವಿಷಯದಲ್ಲಿ ಎಲ್ಲ ಪಕ್ಷಗಳ ನಾಯಕರು ಫಲಾನುಭವಿಗಳೇ ಆಗಿದ್ದಾರೆ. ಗಣಿಗಾರಿಕೆ ಅವರಿಗೆ ಚುನಾವಣಾ ನಿಧಿಯಾಗಿದೆ.

ಗಣಿಗಾರಿಕೆ ಯಾವುದೋ ಒಂದು ಪಕ್ಷ, ಒಬ್ಬ ಜನಪ್ರತಿನಿಧಿಗೆ ಸೀಮಿತವಾಗಿಲ್ಲ. ಕಾಂಗ್ರೆಸ್, ಜೆಡಿಎಸ್, ಬಿಜೆಪಿಯ ಮುಖಂಡರು ಪ್ರತ್ಯಕ್ಷ, ಪರೋಕ್ಷವಾಗಿ ತೊಡಗಿಸಿಕೊಂಡಿದ್ದಾರೆ. ಕೆಲವರು ನೇರವಾಗಿ, ಕೆಲವರು ಬೆಂಬಲಿಗರ ಮೂಲಕ ತೊಡಗಿದ್ದಾರೆ.

ಹಲವರಿಗೆ ವಂಶಪಾರಂಪರ್ಯ ವೃತ್ತಿಯಾಗಿದ್ದು, ತಮ್ಮ ರಾಜಕೀಯ ಪ್ರಾಬಲ್ಯ ಹೆಚ್ಚಿಸಿಕೊಂಡಿದ್ದಾರೆ. ತಮಗಷ್ಟೇ ಅಲ್ಲ, ಅನ್ಯ ಜಿಲ್ಲೆಯ ಮುಖಂಡರಿಗೂ ಆರ್ಥಿಕ ನೆರವು ಹರಿಸುವಷ್ಟು ಸದೃಢರಾಗಿದ್ದಾರೆ.

'ಇತರ ಜಿಲ್ಲೆಗಳಿಗೆ ಹೋಲಿಸಿದರೆ ಮಂಡ್ಯದಲ್ಲಿ ಕಲ್ಲು ಗಣಿಗಾರಿಕೆ ಹೆಚ್ಚಾಗಿದೆ. ಆದರೆ, ರಾಜಧನ ಸಂಗ್ರಹ ತೀರಾ ಕಡಿಮೆ' ಎಂದು ಉಸ್ತುವಾರಿ ಸಚಿವ ಕೆ.ಸಿ.ನಾರಾಯಣಗೌಡ ಹೇಳಿದ್ದು, ಅಕ್ರಮ ಕಲ್ಲು ಗಣಿಗಾರಿಕೆಯ ವಿಸ್ತಾರವನ್ನು ತೆರೆದಿಟ್ಟಿದ್ದಾರೆ.

ಬೇಬಿಬೆಟ್ಟದಲ್ಲಿ ಮಾತ್ರವಲ್ಲ; ಶ್ರೀರಂಗಪಟ್ಟಣ, ನಾಗಮಂಗಲ ತಾಲ್ಲೂಕಿನಲ್ಲಿ ಅತಿ ಹೆಚ್ಚು ಗಣಿ ಕಂಪನಿಗಳು ಬೆಟ್ಟ, ಗುಡ್ಡಗಳನ್ನು ಆವರಿಸಿಕೊಂಡಿವೆ. ಎರಡೂ ಕ್ಷೇತ್ರಗಳ ಶಾಸಕರು, ಮಾಜಿ ಶಾಸಕರು ಗಣಿಗಾರಿಕೆಯಿಂದ ಅಪಾರ ಲಾಭ ಕಂಡವರೇ ಆಗಿದ್ದಾರೆ.

ಬಹುಭಾಗ ಅರಣ್ಯ ಇಲಾಖೆಗೆ ಸೇರಿದ ಜಾಗದಲ್ಲಿ ಗಣಿ ಚಟುವಟಿಕೆ ನಡೆಯುತ್ತಿದ್ದು, ಹಲವು ಪ್ರಕರಣಗಳು ದಾಖಲಾಗಿವೆ. ಅರಣ್ಯ ಇಲಾಖೆ, ಕಂದಾಯ ಇಲಾಖೆ ಹಾಗೂ ಪೊಲೀಸ್ ಇಲಾಖೆ ನಡುವೆ ಸಮನ್ವಯ ಇಲ್ಲದ ಕಾರಣ ಅರಣ್ಯ ಭೂಮಿ ತೆರವುಗೊಳಿಸಲು ಸಾಧ್ಯವಾಗಿಲ್ಲ ಎಂದು ರೈತ ಮುಖಂಡರು ಆರೋಪಿಸುತ್ತಾರೆ.

ಶ್ರೀರಂಗಪಟ್ಟಣ ತಾಲ್ಲೂಕಿನ ಹಂಗರಹಳ್ಳಿಯಲ್ಲಿ ಬಹುಕಾಲದಿಂದ ಗಣಿಗಾರಿಕೆ ನಡೆಯುತ್ತಿದೆ. 'ಹಂಗರಹಳ್ಳಿ' ಜೀತ ಪ್ರಕರಣ ರಾಷ್ಟ್ರ ಮಟ್ಟದಲ್ಲಿ ಗಮನ ಸೆಳೆದಿತ್ತು. ಆಗಿನ ಕರಾಳ ದಿನಗಳ ನೆನಪು ಈಗಲೂ ಇಲ್ಲಿಯ ಜನರಲ್ಲಿ ಹಸಿರಾಗಿದೆ.

'ನಮ್ಮ ಗಣಿ ಚಟುವಟಿಕೆ ಕೆಆರ್‌ಎಸ್‌ನಿಂದ 20 ಕಿ.ಮೀ ವ್ಯಾಪ್ತಿಯ ಹೊರಗಿರುವ ಕಾರಣ ನಾವು ಸ್ಥಗಿತಗೊಳಿಸಬೇಕಿಲ್ಲ, ಚಟುವಟಿಕೆ ಅಕ್ರಮವಾಗಿದ್ದರೆ ಸಕ್ರಮ ಮಾಡಿಕೊಡಿ' ಎಂಬುದು ಶ್ರೀರಂಗಪಟ್ಟಣ ಶಾಸಕ ರವೀಂದ್ರ ಶ್ರೀಕಂಠಯ್ಯ ವಾದವಾಗಿದೆ.

ಗಣಿ ಪರ ನಿಂತ ಎಚ್‌ಡಿಡಿ: ಕೆ.ಆರ್. ಪೇಟೆ ತಾಲ್ಲೂಕಿನ ಬೆಮ್ಮನಾಯಕನ ಹಳ್ಳಿ ಅರಣ್ಯ ಪ್ರದೇಶದಲ್ಲಿ ನಡೆಯುತ್ತಿದ್ದ ಗಣಿಗಾರಿಕೆ ವಿರುದ್ಧ ಹಲವು ದೂರು ದಾಖಲಾಗಿವೆ. ಗಣಿ ಮಾಲೀಕ, ಜೆಡಿಎಸ್ ಮುಖಂಡ ಎಚ್.ಟಿ.ಮಂಜು ಮಾಲೀಕರಾಗಿದ್ದು, ಕಲ್ಲು ಸ್ಫೋಟದ ವೇಳೆ ಹೇಮಾವತಿ ನಾಲೆಗೂ ಹಾನಿಯಾಗಿತ್ತು.

ದೂರು ಆಧರಿಸಿ ಗಣಿ ಇಲಾಖೆಯು ಯಂತ್ರಗಳನ್ನು ಜಪ್ತಿ ಮಾಡಿತ್ತು. ಆಗ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ಮಂಜು ಪರ ನಿಂತಿದ್ದರು. 'ಗಣಿಗಾರಿಕೆಗೆ ಅವಕಾಶ ನೀಡದಿದ್ದರೆ ಮುಖ್ಯಮಂತ್ರಿ ಮನೆ ಮುಂದೆ ಧರಣಿ ಕೂರಲಾಗುವುದು' ಎಂದು ಬೆದರಿಕೆ ಹಾಕಿದ್ದರು. ನಂತರ ಗಣಿಗಾರಿಕೆಯ ಮೇಲಿನ ನಿಷೇಧ ತೆರವುಗೊಳಿಸಲಾಗಿತ್ತು.

'ದೇವೇಗೌಡರ ಮಧ್ಯಪ್ರವೇಶದ ನಂತರ ಜಿಲ್ಲೆಯಾದ್ಯಂತ ಅಕ್ರಮ ಗಣಿಗಳ ಮೇಲಿನ ಕಟು ನಿಲುವು ಸಡಿಲಗೊಂಡಿತು' ಎಂದು ರೈತ ಮುಖಂಡರೊಬ್ಬರು ತಿಳಿಸಿದರು.

ಶ್ರೀರಂಗಪಟ್ಟಣ ತಾಲ್ಲೂಕಿನ ಹಂಗರಹಳ್ಳಿ ಬಳಿಯ ಕಲ್ಲು ಗಣಿ ದೃಶ್ಯ

ಮುಖ್ಯಾಂಶಗಳು

- ಅಕ್ರಮ ಗಣಿಯಲ್ಲಿ ಮೂರೂ ಪಕ್ಷಗಳ ಮುಖಂಡರು ಭಾಗಿ
- ಗಣಿ ಚಟುವಟಿಕೆಗಾಗಿ ಒಂದಾಗುವ ಜನಪ್ರತಿನಿಧಿಗಳು
- ಅಕ್ರಮ–ಸಕ್ರಮಕ್ಕಾಗಿ ರವೀಂದ್ರ ಶ್ರೀಕಂಠಯ್ಯ ಒತ್ತಾಯ

ಬೇಬಿಬೆಟ್ಟದಲ್ಲಿ ನಾವು ಗಣಿ ಚಟುವಟಿಕೆ ನಡೆಸುತ್ತಿಲ್ಲ. ಕೆಆರ್‌ಎಸ್ ಸಮಸ್ಯೆ ಆರಂಭಗೊಂಡ ನಂತರ ನಮ್ಮ ಕುಟುಂಬದ ಕ್ರಷರ್‌ಗಳನ್ನು ಸ್ಥಳಾಂತರ ಮಾಡಿದ್ದೇವೆ
ಸಿ.ಎಸ್.ಪುಟ್ಟರಾಜು, ಶಾಸಕ, ಮೇಲುಕೋಟೆ ಕ್ಷೇತ್ರ

ನಾಗಮಂಗಲ ತಾಲ್ಲೂಕು ಮಾತ್ರವಲ್ಲದೇ ಮಂಡ್ಯ ಜಿಲ್ಲೆಯಾದ್ಯಂತ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಅದು ಸ್ಥಗಿತಗೊಳ್ಳಬೇಕು ಎಂಬುದು ನನ್ನ ಒತ್ತಾಯವಾಗಿದೆ
ಎನ್.ಚಲುವರಾಯಸ್ವಾಮಿ, ಕಾಂಗ್ರೆಸ್ ಮುಖಂಡ

ಜಲಾಶಯಕ್ಕೆ ಧಕ್ಕೆಯಾಗುವ ಅಕ್ರಮ ಗಣಿ ಚಟುವಟಿಕೆಯನ್ನು ತಕ್ಷಣವೇ ನಿಷೇಧಿಸಬೇಕು. ಜಲಾಶಯದ ಸುರಕ್ಷತೆಗೆ ಪ್ರಮುಖ ಆದ್ಯತೆ ನೀಡಬೇಕು
ಅಶ್ವತ್ಥ ನಾರಾಯಣಗೌಡ, ಬಿಜೆಪಿ ಮುಖಂಡ

ಕಲ್ಲುಗಣಿ ಸುತ್ತಮುತ್ತ

ವಾಕ್ಸಮರಕ್ಕೆ ಕಾರಣವಾದ ಭೂವಿಜ್ಞಾನಿ ವರ್ಗಾವಣೆ

'ಕೆಆರ್‌ಎಸ್ ಉಳಿಸಿ' ಹೋರಾಟ ಹಿಂದಿನಿಂದಲೂ ನಡೆಯುತ್ತಿದ್ದು, ಸಂಸದೆ ಸುಮಲತಾ ಅವರದ್ದು ಹೊಸ ಸೇರ್ಪಡೆ. ಅದಕ್ಕೆ ಅಧಿಕಾರಿಯೊಬ್ಬರ ವರ್ಗಾವಣೆಯೇ ಕಾರಣ ಎಂಬ ಅಂಶ ಕುತೂಹಲ ಮೂಡಿಸುತ್ತದೆ.

ಅಕ್ರಮ ಗಣಿ ಮಾಲೀಕರಿಗೆ ₹ 500 ಕೋಟಿಯಷ್ಟು ದಂಡ ವಿಧಿಸಿದ್ದ ಹಿಂದಿನ ಹಿರಿಯ ಭೂವಿಜ್ಞಾನಿ ಟಿ.ವಿ.ಪುಷ್ಪಾ ಅವರನ್ನು ಏಪ್ರಿಲ್‌ನಲ್ಲಿ ದಿಢೀರ್ ವರ್ಗಾವಣೆ ಮಾಡಲಾಗಿತ್ತು. ಆಗ ಎಲ್ಲ ಪಕ್ಷಗಳ ಮುಖಂಡರು ಒಟ್ಟಾಗಿ ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ ನಿರಾಣಿ ಮೇಲೆ ಒತ್ತಡ ಹಾಕಿದ್ದರು ಎಂಬ ಆರೋಪವಿದೆ.

ವರ್ಗಾವಣೆ ತಪ್ಪಿಸಲು ಸುಮಲತಾ ಯತ್ನಿಸಿದ್ದರು. ಮುಖ್ಯಮಂತ್ರಿ ಭೇಟಿಯಾದರೂ ವರ್ಗಾವಣೆ ರದ್ದಾಗಲಿಲ್ಲ. ಅವರ ಬೆಂಬಲಕ್ಕೆ ಆಗ ಯಾವ ಪಕ್ಷದ ಮುಖಂಡರೂ ಬರಲಿಲ್ಲ. ಇದರಿಂದ ಅಸಮಾಧಾನಗೊಂಡು, 'ಕೆಆರ್‌ಎಸ್ ಜಲಾಶಯ ಬಿರುಕು ಬಿಟ್ಟಿದೆ' ಎಂದು ಹೇಳಿಕೆ ಕೊಟ್ಟು ಗಣಿ ವಿರುದ್ಧದ ಹೋರಾಟ ಆರಂಭಿಸಿದರು. ಅಲ್ಲಿಂದ ಜೆಡಿಎಸ್ ಮುಖಂಡರು ಹಾಗೂ ಸುಮಲತಾ ನಡುವೆ ವಾಕ್ಸಮರ ಆರಂಭವಾಯಿತು. ರಾಜಕೀಯ ದ್ವೇಷಕ್ಕಾಗಿ ಕೆಆರ್‌ಎಸ್ ವಿಚಾರ ಎಳೆದುತಂದಿದ್ದಾರೆ ಎಂಬ ಆರೋಪವೂ ಇದೆ.

ರಂಗನತಿಟ್ಟು ಪಕ್ಷಿಧಾಮಕ್ಕೂ ಧಕ್ಕೆ

ರಂಗನತಿಟ್ಟು ಪಕ್ಷಿಧಾಮ ಸೂಕ್ಷ್ಮ ಪರಿಸರ ವಲಯದ ಕಾರೇಕುರ ಗ್ರಾಮದ ಬಳಿ ಬೃಹತ್ ಸೇತುವೆ ನಿರ್ಮಾಣ ಕಾಮಗಾರಿ ನಡೆಯುತ್ತಿದೆ ಎಂದು ಆರೋಪಿಸಿ ನಾಲ್ಕು ತಿಂಗಳ ಹಿಂದಷ್ಟೇ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ದಾವೆ ದಾಖಲಾಗಿದೆ.

ಸಾರ್ವಜನಿಕ ಉದ್ದೇಶದ ನೆಪದಲ್ಲಿ ಗಣಿ ಲಾರಿಗಳ ಸಂಚಾರಕ್ಕೆ ಸೇತುವೆ ನಿರ್ಮಾಣವಾಗುತ್ತಿದ್ದು, ಇದರಿಂದ ರಂಗನತಿಟ್ಟು ಪಕ್ಷಿಧಾಮದ ಪಕ್ಷಿಗಳಿಗೂ ತೊಂದರೆ ಉಂಟಾಗಲಿದೆ ಎಂದು ಆರೋಪಿಸಲಾಗಿದೆ.

ನಿಧನ ವಾರ್ತೆ
ಶೀನಪ್ಪ ರೈ



ಮಂಗಳೂರು: ಯಕ್ಷಗಾನ ಕಲಾವಿದ ಸಂಪಾಜೆ ಶೀನಪ್ಪ ರೈ (78) ವಯೋಸಹಜ ಅನಾರೋಗ್ಯದಿಂದ ಮಂಗಳವಾರ ನಿಧನರಾದರು. ಅವರಿಗೆ ಪತ್ನಿ ಗಿರಿಜಾವತಿ, ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ.ಹಲವು ದಿನಗಳಿಂದ ಅವರು ಇಲ್ಲಿ ಮಗನ ಮನೆಯಲ್ಲಿ ನೆಲೆಸಿದ್ದರು. 13ನೇ ವಯಸ್ಸಿನಲ್ಲಿ ಕಲ್ಲಾಡಿ ಕೊರಗ ಶೆಟ್ಟರ ಇರಾ ಸೋಮನಾಥೇಶ್ವರ ಕುಂಡಾವು ಮೇಳದಲ್ಲಿ ಕಲಾವಿದರಾಗಿ ತಿರುಗಾಟ ಪ್ರಾರಂಭಿಸಿದರು. ನಂತರ, ವಿವಿಧ ಮೇಳಗಳಲ್ಲಿ ಕಲಾವಿದರಾಗಿ, ಕಟೀಲು ಮೇಳದಲ್ಲಿ ಸುದೀರ್ಘ ಕಲಾ ಸೇವೆ ಸಲ್ಲಿಸಿದ್ದರು.

2014 ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಯಕ್ಷಗಾನ ಬಯಲಾಟ ಅಕಾಡೆಮಿಯ ಗೌರವ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಮಂಗಳೂರು ವಿ.ವಿಯ 'ಯಕ್ಷಮಂಗಳ' ಪ್ರಶಸ್ತಿಗಳು ಸಂದಿವೆ. ಅಂತ್ಯಕ್ರಿಯೆ ಮಂಗಳೂರು ಕಾಟಿಪಳ್ಳ ಸ್ಮಶಾನದಲ್ಲಿ ಸಂಜೆ ನಡೆಯಿತು.

ಎಸ್ಸೆಸ್ಸೆಲ್ಸಿ ಪರೀಕ್ಷಾರ್ಥಿಗಳಿಗೆ ಪ್ರಯಾಣ ಉಚಿತ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ಸಾರಿಗೆ ಸಂಸ್ಥೆಗಳ ಬಸ್‌ನಲ್ಲಿ ಉಚಿತವಾಗಿ ತೆರಳಲು ಅವಕಾಶ ಕಲ್ಪಿಸಲಾಗಿದೆ ಎಂದು ಸಾರಿಗೆ ಸಚಿವ ಲಕ್ಷ್ಮಣ ಸವದಿ ತಿಳಿಸಿದ್ದಾರೆ.

ಪರೀಕ್ಷಾ ಪ್ರವೇಶ ಪತ್ರ ತೋರಿಸಿ ಬಸ್‌ಗಳಲ್ಲಿ ತೆರಳಬಹುದಾಗಿದೆ.

ಆಗಸ್ಟ್ 24ರಂದು ಚರ್ಚಾ ಸ್ಪರ್ಧೆ

ಬೆಂಗಳೂರು: ವಾಕ್ ಚತುರ ಮಕ್ಕಳಿಗಾಗಿ ಆಗಸ್ಟ್ 24ರಂದು ಚರ್ಚಾ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ.

12ರಿಂದ 16 ವರ್ಷದೊಳಗಿನ ಶಾಲಾ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಅರ್ಹರಾಗಿದ್ದಾರೆ.

'ವಿದ್ಯಾರ್ಥಿಗಳ ಬುದ್ಧಿಮತ್ತೆ ಪರೀಕ್ಷೆಗೆ ವೇದಿಕೆಯಾಗಿರುವ ಈ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ₹10 ಸಾವಿರ ಬಹುಮಾನ ಸಿಗಲಿದೆ. ದ್ವಿತೀಯ ಸ್ಥಾನ ಪಡೆದವರು ₹5 ಸಾವಿರ ತಮ್ಮದಾಗಿಸಿಕೊಳ್ಳಲಿದ್ದಾರೆ. ಆಸಕ್ತರು 9886464641 ಸಂಖ್ಯೆಗೆ ಕರೆ ಮಾಡಬಹುದು' ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ office@verbattle.com ಮತ್ತು www.verbattle.com ಗೆ ಸಂಪರ್ಕಿಸಬಹುದು.

ಪದಕ ಸಂಭ್ರಮ — ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿಯವರ ಚಿನ್ನದ ಪದಕ ಸ್ವೀಕರಿಸಿದ ಅಧಿಕಾರಿಗಳು ಮತ್ತು ಸಿಬ್ಬಂದಿ ಸಂಭ್ರಮದಲ್ಲಿ ಪದಕಗಳನ್ನು ಪ್ರದರ್ಶಿಸುತ್ತಿರುವುದು – ಪ್ರಜಾವಾಣಿ ಚಿತ್ರ

ಕೆಎಸ್‌ಒಯುಗೆ 25ರ ಸಂಭ್ರಮ 11 ಹೊಸ ಕೋರ್ಸ್ ಆರಂಭ

ಪ್ರಜಾವಾಣಿ ವಾರ್ತೆ

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು (ಕೆಎಸ್‌ಒಯು) ಈ ಶೈಕ್ಷಣಿಕ ವರ್ಷದಿಂದ 11 ಹೊಸ ಕೋರ್ಸ್ ಆರಂಭಿಸಲಿದೆ ಎಂದು ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ತಿಳಿಸಿದರು.

ಕೆಎಸ್‌ಒಯು ಸ್ಥಾಪನೆಯಾಗಿ 25 ವರ್ಷವಾದ ಹಿನ್ನೆಲೆಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವವಿದ್ಯಾಲಯದ ಉನ್ನತಿಗಾಗಿ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

'ಸಸ್ಯವಿಜ್ಞಾನ, ಪ್ರಾಣಿ ವಿಜ್ಞಾನ, ಆಹಾರ ವಿಜ್ಞಾನ, ಮಾಹಿತಿ ತಂತ್ರಜ್ಞಾನ ವಿಷಯಗಳಲ್ಲಿ ಎಂ.ಎಸ್ಸಿ ಪದವಿ, ಬಿ.ಎಸ್ಸಿ (ಜನರಲ್), ಮಾಹಿತಿ ತಂತ್ರಜ್ಞಾನ ಮತ್ತು ಗೃಹ ವಿಜ್ಞಾನ ವಿಷಯಗಳಲ್ಲಿ ಬಿ.ಎಸ್ಸಿ ಪದವಿ, ಬಿಬಿಎ, ಬಿಸಿಎ, ತೆಲುಗು ಹಾಗೂ ಶಿಕ್ಷಣ ವಿಷಯಗಳಲ್ಲಿ ಎಂ.ಎ ಕೋರ್ಸ್ ಆರಂಭಿಸಲು ಸಲ್ಲಿಸಿದ್ದ ಮನವಿಗೆ ಯುಜಿಸಿ ತಜ್ಞರ ಸಮಿತಿ ಒಪ್ಪಿಗೆ ನೀಡಿದೆ. ಈ ಸಂಬಂಧ ಅಧಿಕೃತ ಪತ್ರ ಇನ್ನೊಂದು ವಾರದಲ್ಲಿ ಬರಲಿದ್ದು, ಆ ಬಳಿಕ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗುವುದು. ಇದರೊಂದಿಗೆ ವಿಶ್ವವಿದ್ಯಾಲಯದ ಕೋರ್ಸ್‌ಗಳ ಸಂಖ್ಯೆ 42ಕ್ಕೆ ಏರಿಕೆಯಾಗಲಿದೆ' ಎಂದು ಮಾಹಿತಿ ನೀಡಿದರು.

ಪ್ರೊ.ಎಸ್. ವಿದ್ಯಾಶಂಕರ್

'ವಿಶ್ವವಿದ್ಯಾಲಯಕ್ಕೆ ಈಗಾಗಲೇ ಯುಜಿಸಿಯಿಂದ 12 (ಬಿ) ಮಾನ್ಯತೆ ಲಭಿಸಿದ್ದು, ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಳವಾಗಿದೆ. 2020ರ ಜುಲೈನಲ್ಲಿ 22 ಸಾವಿರ ಮಂದಿ, ಈ ವರ್ಷ ಜನವರಿಯಲ್ಲಿ 7 ಸಾವಿರ ಮಂದಿ ಪ್ರವೇಶ ಪಡೆದುಕೊಂಡಿದ್ದಾರೆ. ಈ ಶೈಕ್ಷಣಿಕ ವರ್ಷದಲ್ಲಿ 40 ಸಾವಿರ ವಿದ್ಯಾರ್ಥಿಗಳು ಪ್ರವೇಶ ಪಡೆಯುವ ನಿರೀಕ್ಷೆಯಿದೆ' ಎಂದರು.

'ಬಿ.ಇಡಿ ಸೀಟುಗಳ ಸಂಖ್ಯೆಯನ್ನು 500 ರಿಂದ 2,000 ಕ್ಕೆ ಹೆಚ್ಚಿಸುವಂತೆ ಕೋರಿ ನ್ಯಾಷನಲ್ ಕೌನ್ಸಿಲ್ ಫಾರ್ ಟೀಚರ್ಸ್ ಎಜುಕೇಷನ್‌ಗೆ (ಎನ್‌ಸಿಟಿಇ) ಪತ್ರ ಬರೆಯಲಾಗಿದೆ' ಎಂದರು.

ಅತ್ಯಾಧುನಿಕ ಸ್ಟುಡಿಯೊ: 'ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಪರಿಣಾಮಕಾರಿ ಬೋಧನೆಗಾಗಿ ಅತ್ಯಾಧುನಿಕ ಆಡಿಯೊ-ವಿಶುವಲ್ ಸ್ಟುಡಿಯೊ ನಿರ್ಮಾಣ ಆಗಿದ್ದು, ಮುಂದಿನ ವಾರ ಉದ್ಘಾಟನೆ ನಡೆಯಲಿದೆ' ಎಂದು ತಿಳಿಸಿದರು.

'ಹೈಕಮಾಂಡ್ ಸೂಚನೆಯಂತೆ ಅಧಿಕಾರ ಹಸ್ತಾಂತರ'

ಮಂಗಳೂರು: 'ಹೈಕಮಾಂಡ್ ಸೂಚನೆಯಂತೆ ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ವಹಿಸಿಕೊಂಡಿದ್ದೆ. ಈಗ ಮುಹಮ್ಮದ್ ನಲಪಾಡ್‌ಗೆ ಅಧಿಕಾರ ಹಸ್ತಾಂತರಿಸುವಂತೆ ಹೈಕಮಾಂಡ್ ಸೂಚಿಸಿದೆ. ಅದರಂತೆ ನಡೆಯುತ್ತೇನೆ' ಎಂದು ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ರಕ್ಷಾ ರಾಮಯ್ಯ ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನನ್ನ ಹಾಗೂ ನಲಪಾಡ್ ನಡುವೆ ಭಿನ್ನಮತವಿಲ್ಲ. 12 ವರ್ಷಗಳಿಂದ ಸ್ನೇಹಿತರಾಗಿದ್ದೇವೆ. ನಮ್ಮೊಳಗೆ ಬಣವಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಮರಳಿ ಅಧಿಕಾರಕ್ಕೆ ತರುವುದೇ ನಮ್ಮ ಗುರಿ. ಯುವಕರನ್ನು ಸೆಳೆಯಲು ಅಭಿಯಾನ ಆರಂಭಿಸಲಿದ್ದೇವೆ' ಎಂದರು.

ಮುಂದಿನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಂದು ಮುಹಮ್ಮದ್ ನಲಪಾಡ್ ಬಾಯಿತಪ್ಪಿ ಹೇಳಿರಬಹುದು ಎಂದರು.

5 ವರ್ಷದ ಬಾಲಕ ಮಠದ ಉತ್ತರಾಧಿಕಾರಿ

ಕಾಳಗಿ (ಕಲಬುರ್ಗಿ ಜಿಲ್ಲೆ): ಇಲ್ಲಿಯ ಸಂಸ್ಥಾನ ಹಿರೇಮಠದಲ್ಲಿ ಸೋಮವಾರ ಹೃದಯಾಘಾತದಿಂದ ಲಿಂಗೈಕ್ಯರಾದ ಪೀಠಾಧಿಪತಿ ಶಿವಬಸವ ಶಿವಾಚಾರ್ಯರ (45) ಉತ್ತರಾಧಿಕಾರಿಯಾಗಿ ಅವರ ಪೂರ್ವಾಶ್ರಮದ ಸಹೋದರ ಗುರುನಂಜಯ್ಯ ಹಿರೇಮಠ ಅವರ ಮಗ, ಐದು ವರ್ಷದ ಬಾಲಕ ನೀಲಕಂಠ ಅವರನ್ನು ನೇಮಿಸಲಾಯಿತು.

ಹಿರೇನಾಗಾಂವ ಮಠದ ಶ್ರೀಗಳು ಮಂಗಳವಾರ, ಶಿವಬಸವ ಶಿವಾಚಾರ್ಯರ ತಲೆಯ ಮೇಲಿದ್ದ ಹಸಿರು ಶಾಲು, ಕೈಯಲ್ಲಿದ್ದ ಬೆತ್ತವನ್ನು ಉತ್ತರಾಧಿಕಾರಿಗೆ ಹಸ್ತಾಂತರಿಸಿದರು.

'ಪೀಠಾಧಿಪತಿ ನಿಧನದ ನಂತರ ಉತ್ತರಾಧಿಕಾರಿ ಸ್ಥಾನ ಖಾಲಿ ಬಿಡುವಂತಿಲ್ಲ. ಹೀಗಾಗಿ ನೇಮಿಸಲಾಗಿದೆ' ಎಂದು ಭಕ್ತರು ಹೇಳಿದರು. ಶಿವಬಸವ ಶಿವಾಚಾರ್ಯರ ಅಂತ್ಯಕ್ರಿಯೆಯು ಪಂಚಾಚಾರ್ಯರ ತತ್ವದಂತೆ ಮಠದ ಆವರಣದಲ್ಲಿ ನಡೆಯಿತು.

ಜಿಂದಾಲ್‌ಗೆ ಜಮೀನು: ನಿಲುವು ಸ್ಪಷ್ಟಪಡಿಸಲು ಸೂಚನೆ

ಬೆಂಗಳೂರು: 'ಮೊದಲೇ ಸರ್ಕಾರಿ ಆದೇಶ ಹೊರಡಿಸಿ ಬಳಿಕ ಸಂಪುಟದ ಮುಂದೆ ಮಂಡಿಸುವುದೆಂದರೆ ಅದು 'ಕುದುರೆಯ ಮುಂದೆ ಬಂಡಿ ಇಟ್ಟಂತೆ' ಆಗಲಿದೆ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಬಳ್ಳಾರಿ ಜಿಲ್ಲೆಯಲ್ಲಿ 3,667 ಎಕರೆ ಜಮೀನನ್ನು ಜೆಎಸ್‌ಡಬ್ಲ್ಯು ಕಂಪನಿಗೆ ನೀಡುವ ವಿಷಯದಲ್ಲಿ ನಿಲುವು ತಿಳಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಕೆ.ಎ.ಪಾಲ್ ಎಂಬುವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, '2021ರ ಮೇ 6ರ ಆದೇಶಕ್ಕೆ ಸಂಪುಟದ ಅನುಮೋದನೆ ಇದೆಯೇ' ಎಂದು ಸ್ಪಷ್ಟಪಡಿಸಲು ತಿಳಿಸಿತು.

ಸಂಪುಟದ ಅನೇಕ ಸಚಿವರು ವಿರೋಧಿಸಿದ್ದರೂ ಕಡಿಮೆ ದರದಲ್ಲಿ ಸರ್ಕಾರಿ ಜಾಗ ಮಾರಾಟ ಮಾಡಲು ಸರ್ಕಾರ ಹೊರಟಿದೆ ಎಂದು ಅರ್ಜಿದಾರರು ಆರೋಪಿಸಿದರು.

'ಸರ್ಕಾರದ ಆದೇಶವನ್ನು ಸಚಿವ ಸಂಪುಟದ ಮುಂದಿಟ್ಟು ತೀರ್ಮಾನಿಸಲಾಗುವುದು ಎಂದು ಜೂನ್ 15ರ ಮೆಮೊನಲ್ಲಿ ತಿಳಿಸಲಾಗಿದೆ. ಸಚಿವ ಸಂಪುಟದ ತೀರ್ಮಾನ ಆಧರಿಸಿ ಸರ್ಕಾರಿ ಆದೇಶ ಹೊರಡಿಸಬೇಕೆ ಹೊರತು, ಮೊದಲೇ ಸರ್ಕಾರಿ ಆದೇಶ ಹೊರಡಿಸಿ ಬಳಿಕ ಅದನ್ನು ಸಂಪುಟದ ಮುಂದೆ ಇಡಲಾಗುವುದು ಎಂದರೆ ಏನರ್ಥ' ಎಂದು ಪೀಠ ಪ್ರಶ್ನಿಸಿತು.

ವಿಚಾರಣೆಯನ್ನು ಜುಲೈ 16ಕ್ಕೆ ಮುಂದೂಡಿತು.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ
KARNATAKA POWER CORPORATION LTD.
ಸಿಐಎನ್: U85110KA1970SGC001919
ಸಂಖ್ಯೆ: KPCL/2021-22/OW/WORK_INDENT 11395 ದಿನಾಂಕ: 09.07.2021
ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ನೋಂದಾಯಿತ ವೈಯಕ್ತಿಕ/ಕಂಪನಿ/ವ್ಯವಹಾರ ಸಂಸ್ಥೆ/ಜಂಟಿ ಉದ್ಯಮ ಕಂಪನಿ/ಒಕ್ಕೂಟ ಎಂದು ಗುರುತಿಸಿಕೊಂಡ ಗುತ್ತಿಗೆದಾರರಿಂದ "Maintenance of RTPS/RPCL Colony, Ash bund & Related works for a period of 24 months" ಈ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ: ರೂ. 764.10 ಲಕ್ಷಗಳು. ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವಧಿ: 24 ತಿಂಗಳು. ಹೆಚ್ಚಿನ ವಿವರಗಳಿಗಾಗಿ www.eproc.karnataka.gov.in ವೆಬ್‌ಸೈಟ್‌ನ್ನು ನೋಡಬಹುದು. ಯಾವುದೇ ಇತರೆ ಮಾಹಿತಿಗಾಗಿ ಅಧೀಕ್ಷಕ ಅಭಿಯಂತರರು (ಕಾಮಗಾರಿ–2) ರಾ.ಶಾ.ವಿ.ಕೇಂದ್ರ, ಕ.ವಿ.ನಿ.ನಿ., ಶಕ್ತಿನಗರ–584170, ರಾಯಚೂರು (ಜಿಲ್ಲೆ), ಇವರನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಮೊಬೈಲ್ ಸಂಖ್ಯೆ: 94495 96583.

ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್
(ಸಿಐಎನ್ ಸಂಖ್ಯೆ: ಯು74999ಕೆಎ2018ಪಿಎಲ್‌ಸಿ109175)
ವ್ಯವಸ್ಥಾಪಕ ನಿರ್ದೇಶಕರ ಕಛೇರಿ, ಬೆಂ.ಸ್ಮಾ.ಸಿ.ಲಿ #30/1, 3&4ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ಅಲಿಯನ್ಸ್ ಫ್ರಾನ್ಸಯಿಸ್ ಡೇ ಶಾಲೆ ಎದುರು, ವಸಂತನಗರ, ಬೆಂಗಳೂರು–560052. ದೂರವಾಣಿ ಸಂ: 080–22200080
ಟೆಂಡರ್ ರದ್ಧತಿ / ಹಿಂಪಡೆಯುವಿಕೆ ಪ್ರಕಟಣೆ
ಟೆಂಡರ್ ಪ್ರಕಟಣೆ ಸಂಖ್ಯೆ: ಬೆಂಸ್ಮಾಸಿಲಿ/ತಾಂವಿ/ಕಾಪಾಅ–02/ಟೆಂಡರ್/01/2021–22 ದಿನಾಂಕ: 04.05.2021 ಕ್ಕೆ ಸಂಬಂಧಿಸಿದಂತೆ ಬೃಬೆಂಮ ಪಾಲಿಕೆಯ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಡಿಜಿಟಲ್ ತರಗತಿ ಕೊಠಡಿಗಳು ಮತ್ತು ಕಂಪ್ಯೂಟರ್ ಲ್ಯಾಬ್‌ಗಳ ಅನುಷ್ಠಾನ ಕಾಮಗಾರಿಗಾಗಿ ಕರೆಯಲಾಗಿದ್ದ ಟೆಂಡರ್ ಪ್ರಕಟಣೆಯನ್ನು ಆಡಳಿತಾತ್ಮಕ ಕಾರಣಗಳಿಂದ ರದ್ದುಪಡಿಸಲಾಗಿದೆ/ಹಿಂಪಡೆಯಲಾಗಿದೆ.
ಸಹಿ/–
ಕಾರ್ಯಪಾಲಕ ಇಂಜಿನಿಯರ್–02,
ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ಕಾರ್ಯಪಾಲಕ ಇಂಜಿನಿಯರ್ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು.
ಟೆಂಡರ್ ಪ್ರಕಟಣೆ ಸಂಖ್ಯೆ : 17 3rd call/ ದಿನಾಂಕ: 09.07.2021
ಟೆಂಡರ್ ಆಹ್ವಾನ ಪ್ರಕಟಣೆ
ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ 1 ಕಾಮಗಾರಿಗೆ ಸಂಬಂದಿಸಿದಂತೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ವಿವರ ಹೀಗಿವೆ. ಕಾಮಗಾರಿ ವಹಿಸಿಕೊಳ್ಳುವ ಅಥವಾ ನಿರ್ವಹಿಸುವ ಸಾಮರ್ಥ್ಯದ ಬಗ್ಗೆ Standard Tender Document-KW 4 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಗುತ್ತಿಗೆದಾರರಿಗೆ ಅಧಿನಿಯಮ 1 ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ : 09–07–2021 ರಿಂದ 17–07–2021 ರ ವರೆಗೆ ಸಂಜೆ 5.30 ಗಂಟೆಯೊಳಗೆ ಸಲ್ಲಿಸಬೇಕು, ಟೆಂಡರನ್ನು ದಿನಾಂಕ 19–07–2021 ರಂದು ಸಂಜೆ 5.31 ಕ್ಕೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು https://www.eproc.karnataka.gov.in ನಲ್ಲಿ ಓದಿಕೊಳ್ಳುವುದು ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್,
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಕನೀನಿನಿ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ–1, ಮುಂಡರಗಿ, ಗದಗ ಜಿಲ್ಲೆ. Ph No: 08371 – 262174
No. EE/KNNL/SLIS/Div No-1/T-N/Tank filling /2021-22/408
Date: 08.07.2021
SHORT TERM TENDER NOTIFICATION (Call-4)
(ONLY THROUGH "e-Procurement" SYSTEM)
ಸಿಂಗಟಾಲೂರು ಏತ ನೀರಾವರಿ ಯೋಜನೆ ವಿಭಾಗದಡಿ ಬರುವ ಕೆರೆ ತುಂಬಿಸುವ ಕಾಮಗಾರಿಗೆ ಮೇಲ್ಕಾಣಿಸಿದ ಉಲ್ಲೇಖ ರನ್ವಯ ಟೆಂಡರ್‌ನ್ನು(Indent No-28268) ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಟೆಂಡರಗಳನ್ನು "e-Procurement" Portal ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮುಂದುವರೆದು ಸದರಿ ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ, ಇ.ಎಂ.ಡಿ ಹಾಗೂ ಇನ್ನಿತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ : 12.07.2021 ರ ನಂತರ "eproc.karnataka.gov.in", ಈ ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ : 23.07.2021 ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.
ಸಹಿ/– ಕಾರ್ಯಪಾಲಕ ಅಭಿಯಂತರರು,
ಕ.ನೀ.ನಿ.ನಿ., ಸಿಂ.ಏ.ನೀ.ಯೋ., ವಿಭಾಗ–01, ಮುಂಡರಗಿ
ವಾಸಾಸಂಇ/ಗದಗ/ಎಂ.ಸಿ.ಎ/164/2021–22

ಡಾ: ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ.
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಡಾ. ಬಾಬು ಜಗಜೀವನ ರಾಂ ಲಿಡ್‌ಕರ್ ಭವನ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ ಬೆಂಗಳೂರು–560052. ದೂರವಾಣಿ ಸಂಖ್ಯೆ: 080–22288895/22288897 ಇ–ಮೇಲ್: lidkar2018@gmail.com
ಲಿಡ್‌ಕರ್ ನಂಬಿಕೆ. ನಿರಂತರ
ಉಲ್ಲೇಖ: ಲಿಡ್‌ಕರ್/ತಾಂತ್ರಿಕ/ಇ–ಟೆಂಡರ್/2021–22/551 ದಿನಾಂಕ: 07.07.2021
ಇ–ಟೆಂಡರ್ ನೋಟಿಫಿಕೇಷನ್
ಡಾ: ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದಿಂದ ಚರ್ಮ ಕುಶಲಕರ್ಮಿಗಳಿಗೆ ಒದಗಿಸಬೇಕಾಗಿರುವ ಕಚ್ಚಾಮಾಲು ಸರಬರಾಜಿಗಾಗಿ ಹಾಗೂ ತರಬೇತಿ ಪಡೆದ ಕುಶಲಕರ್ಮಿಗಳಿಗೆ ಒದಗಿಸಲು ಟೂಲ್ ಕಿಟ್ ಮತ್ತು ಮೋಟರ್ ಸಹಿತ ಹೆವಿಡ್ಯೂಟಿ ಚರ್ಮ ಹೊಲಿಗೆ ಯಂತ್ರಗಳನ್ನು ಖರೀದಿಸಲು ಪ್ರತಿಷ್ಠಿತ ತಯಾರಕರು / ಫ್ಯಾಬ್ರಿಕೇಟರ್ಸ್ / ಸರಬರಾಜುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ಕರೆಯಲಾಗಿದ್ದು, ಅವಶ್ಯವಿರುವ ವಿವರಗಳನ್ನು/ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್: http://e-proc.karnataka.gov.in.ರ ಮೂಲಕ ಪಡೆಯಬಹುದಾಗಿದೆ. ಸಹಾಯವಾಣಿ ಸಂಖ್ಯೆ: 080–25501216 /1227.

ಕ್ರ. ಸಂ	ವಿವರಗಳು	ಫುಟ್‌ವೇರ್ & ಲೆದರ್ ಗೂಡ್ಸ್ ಮೇಕರ್ಸ್ ಟೂಲ್ ಕಿಟ್	ಮೋಟರ್ ಸಹಿತ ಹೆವಿಡ್ಯೂಟಿ ಚರ್ಮ ಹೊಲಿಗೆ ಯಂತ್ರ	ಕಚ್ಚಾಮಾಲು
1.	ಟೆಂಡರ್ ಉಲ್ಲೇಖ ಮತ್ತು ದಿನಾಂಕ	ಲಿಡ್‌ಕರ್/ತಾಂತ್ರಿಕ/2021–22/487 ದಿನಾಂಕ: 01–07–2021	ಲಿಡ್‌ಕರ್/ತಾಂತ್ರಿಕ/2021–22/488 ದಿನಾಂಕ: 01–07–2021	ಲಿಡ್‌ಕರ್/ತಾಂತ್ರಿಕ/2020–21/486 ದಿನಾಂಕ: 01–07–2021
2.	ಪ್ರೀ ಬಿಡ್ ಸಭೆಯ ದಿನಾಂಕ	----	15.07.2021 @ ಮಧ್ಯಾಹ್ನ 3.30 ಘಂಟೆ	----
3.	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	30.07.2021 @ ಮಧ್ಯಾಹ್ನ 02.00 ಘಂಟೆ	30.07.2021 @ ಮಧ್ಯಾಹ್ನ 02.00 ಘಂಟೆ	30.07.2021 @ ಮಧ್ಯಾಹ್ನ 02.00 ಘಂಟೆ
4.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	31.07.2021 @ ಸಂಜೆ 04.00 ಘಂಟೆ	31.07.2021 @ ಮಧ್ಯಾಹ್ನ 03.30 ಘಂಟೆ	31.07.2021 @ ಸಂಜೆ 04.00 ಘಂಟೆ
5.	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆದವರಿಗೆ ಮಾತ್ರ ತಿಳಿಸಲಾಗುವುದು.		

ಈ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ ಮತ್ತು ಇ–ಪೋರ್ಟಲ್ ಮೂಲಕವೇ ಟೆಂಡರ್ ಸಲ್ಲಿಸುವುದು.
ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು (ವಾ & ಅ) ಮತ್ತು ಟೆಂಡರ್ ಪ್ರಕಟಿಸುವ ಪ್ರಾಧಿಕಾರಿ
DIPR/DDU/Zen/R.O:825/2021-22
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್
(ಸಿಐಎನ್ ಸಂಖ್ಯೆ: ಯು74999ಕೆಎ2018ಪಿಎಲ್‌ಸಿ109175)
ವ್ಯವಸ್ಥಾಪಕ ನಿರ್ದೇಶಕರ ಕಛೇರಿ, ಬೆಂ.ಸ್ಮಾ.ಸಿ.ಲಿ #30/1, 3&4ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ಅಲಿಯನ್ಸ್ ಫ್ರಾನ್ಸಯಿಸ್ ಡೇ ಶಾಲೆ ಎದುರು, ವಸಂತನಗರ, ಬೆಂಗಳೂರು–560052. ದೂರವಾಣಿ ಸಂ: 080–22200080
ಸಂಖ್ಯೆ: ಬೆಂಸ್ಮಾಸಿಲಿ/ತಾಂವಿ/ಕಾಪಾಇಂ–02/ಟೆಂಡರ್–04/2021–22 ದಿನಾಂಕ: 13–07–2021
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ (ಐಎಫ್‌ಟಿ)
1) ವ್ಯವಸ್ಥಾಪಕ ನಿರ್ದೇಶಕರು, ಬೆಂ.ಸ್ಮಾ.ಸಿ.ಲಿ., ರವರ ಪರವಾಗಿ, ಕಾರ್ಯಪಾಲಕ ಇಂಜಿನಿಯರ್–02, ಬೆಂ.ಸ್ಮಾ.ಸಿ.ಲಿ, ರವರು ಕೆಳಗೆ ವಿವರಿಸಿರುವಂತೆ ಅರ್ಹ ಟೆಂಡರ್‌ದಾರರಿಂದ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ಅಹ್ವಾನಿಸಿದ್ದಾರೆ. ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://eproc.karnataka.gov.in) ಮೂಲಕ ಟೆಂಡರ್‌ನ್ನು ಸಲ್ಲಿಸಬಹುದು.

ಕ್ರ. ಸಂ.	ಯೋಜನೆಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ)	ಇಎಂಡಿ
1	ಬೃಬೆಂಮ ಪಾಲಿಕೆಯ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಸ್ಮಾರ್ಟ್ ಡಿಜಿಟಲ್ ತರಗತಿ ಕೊಠಡಿಗಳು ಮತ್ತು ಕಂಪ್ಯೂಟರ್ ಲ್ಯಾಬ್‌ಗಳ ಅನುಷ್ಠಾನ.	6.00	ಇಎಂಡಿ ಘೋಷಣಾ ಪತ್ರ

ಪೂರ್ಣಗೊಳಿಸುವ ಅವಧಿ: 90 ದಿನಗಳು
2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ: 14–07–2021 ರ ಸಂಜೆ 4:00 ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 3) ಪೂರ್ವಭಾವಿ ಪ್ರಶ್ನಾವಳಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: 20–07–2021ರ ಸಂಜೆ 4:00 ಗಂಟೆವರೆಗೆ. 4) ಪೂರ್ವಭಾವಿ ಸಭೆಯನ್ನು ದಿನಾಂಕ: 22–07–2021ರ ಸಂಜೆ 4:00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್–02 ರವರ ಕಛೇರಿ, ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ಇಲ್ಲಿ ನಡೆಸಲಾಗುವುದು. 5) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆನ್‌ಲೈನ್‌ನಲ್ಲಿ ದಿನಾಂಕ: 26–07–2021ರ ಸಂಜೆ 4:00 ಗಂಟೆಯೊಳಗೆ ಸಲ್ಲಿಸತಕ್ಕದ್ದು. 6) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 27–07–2021 ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. 7) ಹೆಚ್ಚಿನ ಮಾಹಿತಿ, ನೋಂದಣಿ ಹಾಗೂ ಇ–ಪಾವತಿಗಾಗಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ಅಥವಾ ಸಹಾಯವಾಣಿ 080–22441076 ಸಂಪರ್ಕಿಸುವುದು.
ಸಹಿ/–
ಕಾರ್ಯಪಾಲಕ ಇಂಜಿನಿಯರ್–02,
ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ರಾಜ್ಯದ ವಿವಿಧೆಡೆ ಧಾರಾಕಾರ ಮಳೆ: ತುಂಗಾ, ಭದ್ರಾ ನೇತ್ರಾವತಿ, ಫಲ್ಗುಣಿ ನದಿಗಳಲ್ಲಿ ನೀರಿನ ಹರಿವು ಏರಿಕೆ

ಮಹಿಳೆ ಸಾವು, ವಿವಿಧೆಡೆ ಮನೆಗೆ ಹಾನಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಶಿವಮೊಗ್ಗ/ಮಂಗಳೂರು: ಉತ್ತರ ಕರ್ನಾಟಕ, ಕರಾವಳಿ ಭಾಗದ ಹಲವು ಜಿಲ್ಲೆಗಳಲ್ಲಿ ಮಂಗಳವಾರ ಉತ್ತಮ ಮಳೆ ಸುರಿದಿದೆ. ಶಿರಸಿ ತಾಲ್ಲೂಕಿನ ಮುಂಡಿಗೆಹಳ್ಳಿಯಲ್ಲಿ ಗೋಡೆ ಬಿದ್ದು ಯಶೋದಾ ಬಂಗಾರ್ಯ ಗೌಡ (31) ಮೃತಪಟ್ಟಿದ್ದಾರೆ.

ಸ್ಥಳಕ್ಕೆ ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ ಭೇಟಿ ನೀಡಿದ್ದು, ಪರಿಹಾರದ ಭರವಸೆ ನೀಡಿದ್ದಾರೆ. ಅಲ್ಲಲ್ಲಿ ಮನೆಗಳ ಚಾವಣಿ ಕುಸಿದಿದ್ದು, ಹಲವೆಡೆ ಮರಗಳು ಉರುಳಿವೆ. ಅಂಕೋಲಾದಲ್ಲಿ ಎರಡು ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಬೆಳಗಾವಿ ನಗರ ಸೇರಿ ಜಿಲ್ಲೆಯಲ್ಲಿ ಬೈಲಹೊಂಗಲ, ಹಿರೇಬಾಗೇವಾಡಿ, ಸವದತ್ತಿ, ಎಂ.ಕೆ. ಹುಬ್ಬಳ್ಳಿ ಭಾಗದಲ್ಲೂ ಮಳೆಯಾಯಿತು. ಹುಬ್ಬಳ್ಳಿ– ಧಾರವಾಡ ಅವಳಿ ನಗರಗಳಲ್ಲೂ ಮಳೆಯಾಗಿದೆ.

ನೇತ್ರಾವತಿ, ಫಲ್ಗುಣಿ ನದಿ ಹರಿವು ಏರಿಕೆ: ಕರಾವಳಿ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮುಂಗಾರು ಚುರುಕಾಗಿದೆ. ಪಶ್ಚಿಮ ಘಟ್ಟದಲ್ಲಿ ಧಾರಾಕಾರ ಮಳೆ ಸುರಿಯುತ್ತಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯ ನೇತ್ರಾವತಿ, ಫಲ್ಗುಣಿ ನದಿಯಲ್ಲಿ ನೀರಿನ ಹರಿವು ಹೆಚ್ಚಾಗಿದೆ.

ಶಿರಸಿ ತಾಲ್ಲೂಕಿನ ಗುಡ್ನಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುಂಡಿಗೆಹಳ್ಳಿಯಲ್ಲಿ ಮಂಗಳವಾರ ಮನೆ ಕುಸಿದಿರುವುದು

ಮಂಗಳೂರು ನಗರ ಮತ್ತು ಹೊರ ವಲಯದ ಕೆಲವೆಡೆ ಮರಗಳು ನೆಲಕ್ಕೆ ಉರುಳಿವೆ. ನಾಲ್ಕು ಮನೆಗಳಿಗೆ ಭಾಗಶಃ, ಒಂದು ಮನೆಗೆ ಸಂಪೂರ್ಣ ಹಾನಿಯಾಗಿದೆ. ನಗರದ ಜೆಪ್ಪಿನಮೊಗರು ಬಳಿ ಮನೆಗೆ ನೀರು ನುಗ್ಗಿದೆ. ಉಡುಪಿ ತಾಲ್ಲೂಕಿನ ಉದ್ಯಾವರದಲ್ಲಿ ಮೂರು, ಬ್ರಹ್ಮಾವರ ತಾಲ್ಲೂಕಿನ ವಡ್ಡರ್ಸೆಯಲ್ಲಿ 3 ಸೇರಿದ್ದು, ವಿವಿಧೆಡೆ ಸುಮಾರು 15 ಮನೆಗಳು ಭಾಗಶಃ ಕುಸಿದಿವೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ತುಂಗಾ, ಭದ್ರಾ ನದಿಗಳಲ್ಲಿಯೂ ನೀರಿನ ಹರಿವು ಜಾಸ್ತಿಯಾಗಿದೆ. ಕಳಸ, ಕೊಪ್ಪ, ಶೃಂಗೇರಿ ಸುತ್ತಮುತ್ತ ಜೋರು ಮಳೆಯಾಗಿದೆ. ಚಿಕ್ಕಮಗಳೂರು, ಕಡೂರು, ತರೀಕೆರೆ, ಮೂಡಿಗೆರೆಯಲ್ಲಿ ಸಾಧಾರಣ ಮಳೆಯಾಗಿದೆ.

ಶಿವಮೊಗ್ಗ ಜಿಲ್ಲೆಯ ಹಲವೆಡೆ ಬೆಳಿಗ್ಗೆಯಿಂದಲೇ ಮಳೆ ಸುರಿಯಿತು. ಹೊಸನಗರ, ಸೊರಬ, ತೀರ್ಥಹಳ್ಳಿ, ಶಿಕಾರಿಪುರ, ಶಿವಮೊಗ್ಗ ತಾಲ್ಲೂಕಿನಲ್ಲಿ ಮಳೆಯಾಗಿದೆ. ದಾವಣಗೆರೆ ನಗರ ಸೇರಿ ಜಿಲ್ಲೆಯ ವಿವಿಧೆಡೆ ಮಳೆಯಾಗಿದೆ. ಜಿಲ್ಲೆಯ ಹರಿಹರ, ಹೊನ್ನಾಳಿ, ನ್ಯಾಮತಿ, ಚನ್ನಗಿರಿ, ಸಂತೇಬೆನ್ನೂರು, ಸಾಸ್ವೇಹಳ್ಳಿಗಳಲ್ಲಿ ಜಿಟಿಜಿಟಿ ಮಳೆ ಸುರಿದಿದೆ.

ಚಿತ್ರದುರ್ಗದ ಜಿಲ್ಲೆಯ ಹೊಸದುರ್ಗ, ಹಿರಿಯೂರು, ಹೊಳಲ್ಕೆರೆ ತಾಲ್ಲೂಕುಗಳಲ್ಲಿ ದಿನವಿಡೀ ಸೋನೆ ಮಳೆ ಸುರಿದಿದೆ.

ಕೊಡಗು ಜಿಲ್ಲೆಯಲ್ಲಿ ಸೋಮವಾರ ರಾತ್ರಿ ಧಾರಾಕಾರ ಮಳೆಯಾಗಿದೆ. ನಾಪೋಕ್ಲು, ಕಕ್ಕಬ್ಬೆ, ಕುಂಜಿಲ ವ್ಯಾಪ್ತಿಯಲ್ಲಿ ಅಲ್ಲಲ್ಲಿ ಮರ ಬಿದ್ದು ವಿದ್ಯುತ್ ವ್ಯತ್ಯಯವಾಗಿದೆ. ಜಿಲ್ಲೆಯಲ್ಲಿ ಭತ್ತದ ನಾಟಿ ಕಾರ್ಯ ಚುರುಕಾಗಿದೆ.

ಹಾಸನ ಜಿಲ್ಲೆಯಲ್ಲಿ ಹೆತ್ತೂರು, ಸಕಲೇಶಪುರ, ಹೊಳೆನರಸೀಪುರದಲ್ಲಿ ಸಾಧಾರಣ ಮಳೆ ಸುರಿದಿದೆ. ಮೈಸೂರು ನಗರದಲ್ಲಿ ತುಂತುರು ಮಳೆಯಾಯಿತು.

ಬಿರುಸಿನ ಮಳೆ (ಕಲಬುರ್ಗಿ ವರದಿ): ಕಲಬುರ್ಗಿ, ಯಾದಗಿರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಕೆಲ ಹೊತ್ತು ಬಿರುಸಿನ ಮಳೆಯಾಗಿದೆ.

ಕಲಬುರ್ಗಿ ನಗರ, ಸೇಡಂ, ಕಾಳಗಿ, ಚಿತ್ತಾಪುರ, ಆಳಂದ ಹಾಗೂ ಯಡ್ರಾಮಿ ತಾಲ್ಲೂಕುಗಳಲ್ಲಿ ಸುಮಾರು ಅರ್ಧಗಂಟೆಗೂ ಅಧಿಕ ಕಾಲ ಉತ್ತಮ ಮಳೆಯಾಯಿತು.

ರಾಯಚೂರು ಜಿಲ್ಲೆಯ ಕವಿತಾಳ, ಮಾನ್ವಿ, ದೇವದುರ್ಗ, ಲಿಂಗಸುಗೂರು, ಸಿಂಧನೂರು, ಮಸ್ಕಿ, ಹಾಗೂ ಸಿರವಾರ ತಾಲ್ಲೂಕಿನಲ್ಲಿ ಸೋಮವಾರ ರಾತ್ರಿಯಿಂದಲೂ ಮಳೆಯಾಗಿದೆ. ಯಾದಗಿರಿ ಜಿಲ್ಲೆಯ ವಿವಿಧೆಡೆ ಜಿಟಿಜಿಟಿ ಮಳೆಯಾಗಿದೆ.

ಗರಿಷ್ಠ ಮಳೆ (ಸೆ.ಮೀ.ಗಳಲ್ಲಿ)	
ಗೋಳಿಹೊಳೆ (ಉಡುಪಿ)	16.2
ಕೊಕ್ಕಡ (ದಕ್ಷಿಣ ಕನ್ನಡ)	10
ಕಿಗ್ಗಾ (ಚಿಕ್ಕಮಗಳೂರು)	5.6
ಅಂಕೋಲಾ	6.2
ಕಾರವಾರ	5.8
ಹೊನ್ನಾವರ	5.7

ದೇಶ ವ್ಯಾಪಿಸಿದ ನೈರುತ್ಯ ಮುಂಗಾರು ಮಾರುತ: ಹವಾಮಾನ ಇಲಾಖೆ

ನವದೆಹಲಿ (ಪಿಟಿಐ): ನಿಗದಿತ ದಿನಕ್ಕಿಂತ ಐದು ದಿನಗಳು ವಿಳಂಬವಾಗಿ ದೇಶವನ್ನು ಪ್ರವೇಶಿಸಿರುವ ನೈರುತ್ಯ ಮುಂಗಾರು ಮಾರುತಗಳು ಮಂಗಳವಾರದ ವೇಳಗೆ ಇಡೀ ದೇಶವನ್ನೇ ವ್ಯಾಪಿಸಿದ್ದು, ಉತ್ತರ ಭಾರತ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಬಿರುಸಿನ ಮಳೆಯಾಗುತ್ತಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ.

ಸಾಮಾನ್ಯವಾಗಿ ಜುಲೈ 8ರ ವೇಳೆಗೆ ದೇಶದಾದ್ಯಂತ ನೈರುತ್ಯ ಮುಂಗಾರು ಮಾರುತಗಳ ವ್ಯಾಪಿಸುತ್ತದೆ. ಆದರೆ, ಈ ವರ್ಷದ ಐದು ದಿನ ವಿಳಂಬವಾಗಿದೆ. ಸೋಮವಾರ ರಾಜಸ್ಥಾನದ ಜೈಸಲ್ಮೇರ್ ಮತ್ತು ಗಂಗಾನಗರ ವ್ಯಾಪ್ತಿಯಲ್ಲಿ ಮಳೆ ಆರಂಭವಾಗಿದೆ. ಮಂಗಳವಾರ ಎನ್‌ಸಿಆರ್ ಪ್ರದೇಶದಲ್ಲಿ ಉತ್ತಮ ಮಳೆಯಾಗಿದೆ. ಮುಂಗಾರು ಮಾರುತಗಳು ದೆಹಲಿಯನ್ನೂ ಪ್ರವೇಶಿಸಿವೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

'ನಾಲ್ಕು ದಿನಗಳಿಂದ ಬಂಗಾಳ ಕೊಲ್ಲಿಯಲ್ಲಿ ನಿರಂತರವಾಗಿ ತೇವಾಂಶವುಳ್ಳ ಗಾಳಿ ಬೀಸುತ್ತಿರುವುರಿಂದ, ದೆಹಲಿ, ಉತ್ತರ ಪ್ರದೇಶ, ಪಂಜಾಬ್, ಹರಿಯಾಣ, ರಾಜಸ್ಥಾನ ಸೇರಿದಂತೆ ದೇಶದ ಬೇರೆ ಬೇರೆ ಭಾಗಗಳಲ್ಲಿ ಮಳೆಯಾಗುತ್ತಿದೆ' ಎಂದು ಐಎಂಡಿ ಹೇಳಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)				
ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	88.75	3,684	1,436
ಹಾರಂಗಿ	2,859	2,846.71	3,589	80
ಕಬಿನಿ	2284.00	2,276.41	4,000	700
ಹೇಮಾವತಿ	2,922	2,897.16	1,940	200
ಲಿಂಗನಮಕ್ಕಿ	1,819	1,784.70	12,769	-
ಸೂಪಾ (ಮೀ)	564	538.36	14,440	47
ಮಾಣಿ	594	574.12	1838	-
ತುಂಗಭದ್ರಾ	1,633	1,610.55	1,962	295
ಮಲಪ್ರಭಾ	2079.5	2,063.80	3,284	194
ಘಟಪ್ರಭಾ	2175	2,137.50	2,489	127
ಭದ್ರಾ	186	156.8	5029	782
ಆಲಮಟ್ಟಿ (ಮೀ)	519.6	517.47	6,173	10,792
ನಾರಾಯಣಪುರ (ಮೀ)	492.25	491.66	12,000	14,000

* ನೆಲಮಟ್ಟದಿಂದ

ಕೋವಿಡ್: 3 ತಿಂಗಳಲ್ಲಿ ಕನಿಷ್ಠ ಮರಣ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕಿತರಲ್ಲಿ 48 ಮಂದಿ ಮೃತಪಟ್ಟಿರುವುದು ಮಂಗಳವಾರ ದೃಢಪಟ್ಟಿದೆ. ಮೂರು ತಿಂಗಳ ಅವಧಿಯಲ್ಲಿ ವರದಿಯಾದ ಕನಿಷ್ಠ ಮರಣ ಪ್ರಕರಣಗಳು ಇವಾಗಿವೆ.

ರಾಜ್ಯದಲ್ಲಿ ಏಪ್ರಿಲ್ ಎರಡನೇ ವಾರದ ಬಳಿಕ ಮರಣ ಪ್ರಕರಣಗಳ ಸಂಖ್ಯೆ 50ರ ಗಡಿ ದಾಟಿತ್ತು. ಕಳೆದೊಂದು ತಿಂಗಳಿನಿಂದ ಮರಣ ಪ್ರಕರಣಗಳ ಸಂಖ್ಯೆ ಕೂಡ ಇಳಿಮುಖ ಮಾಡಿದೆ. 17 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ದೃಢಪಟ್ಟಿವೆ. ಮರಣ ಪ್ರಮಾಣ ದರ ಶೇ 2.50ರಷ್ಟು ವರದಿಯಾಗಿದೆ.

ದಕ್ಷಿಣ ಕನ್ನಡದಲ್ಲಿ 9, ಬೆಂಗಳೂರಿನಲ್ಲಿ 8 ಹಾಗೂ ಕೋಲಾರದಲ್ಲಿ 7 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 5ಕ್ಕಿಂತ ಕಡಿಮೆಯಿದೆ. ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 35,944ಕ್ಕೆ ತಲುಪಿದೆ.

ಹೊಸದಾಗಿ 1,913 ಮಂದಿಗೆ ಕೋವಿಡ್ ದೃಢಪಟ್ಟಿದೆ. ಸೋಂಕಿತತ ಒಟ್ಟು ಸಂಖ್ಯೆ 28.74 ಲಕ್ಷ ದಾಟಿದೆ. ಒಂದು ದಿನದಲ್ಲಿ 1.24 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದ್ದು, ಶೇ 1.53ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ.

ಬೆಂಗಳೂರಿನಲ್ಲಿ 401, ದಕ್ಷಿಣ ಕನ್ನಡದಲ್ಲಿ 222, ಮೈಸೂರಿನಲ್ಲಿ 198, ಹಾಸನದಲ್ಲಿ 191 ಹಾಗೂ ತುಮಕೂರಿನಲ್ಲಿ 170 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ವರದಿಯಾಗಿವೆ. 16 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 8 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ.

ಸೋಂಕಿತರಲ್ಲಿ 2,489 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 28.04 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದ್ದು, 34,234 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಡೆಲ್ಟಾ ಪ್ಲಸ್: 3ಕ್ಕೆ ಏರಿಕೆ

ರಾಜ್ಯದಲ್ಲಿ ಡೆಲ್ಟಾ ಪ್ಲಸ್ ಪ್ರಕರಣಗಳ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ. ಬೆಂಗಳೂರಿನ ನಂದಿನಿ ಲೇಔಟ್‌ನಲ್ಲಿ 60 ವರ್ಷದ ಮಹಿಳೆಗೆ ಈ ತಳಿಯ ವೈರಾಣು ಕಾಣಿಸಿಕೊಂಡಿದೆ. ಅವರ ಗಂಟಲ ದ್ರವದ ಮಾದರಿಯನ್ನು ಒಂದು ತಿಂಗಳ ಹಿಂದೆ ಜಿನೋಮಿಕ್ ಸಿಕ್ವೆನ್ಸೀಸ್ ಪರೀಕ್ಷೆಗೆ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಅವರು ಮನೆ ಆರೈಕೆಗೆ ಒಳಗಾಗಿ, ಚೇತರಿಸಿಕೊಂಡಿದ್ದಾರೆ. ಇದೇ ಪ್ರದೇಶದಲ್ಲಿ ಈ ಹಿಂದೆ ಒಂದು ಡೆಲ್ಟಾ ಪ್ಲಸ್ ಪ್ರಕರಣ ವರದಿಯಾಗಿತ್ತು. ಇನ್ನೊಂದು ಪ್ರಕರಣ ಮೈಸೂರಿನಲ್ಲಿ ದೃಢಪಟ್ಟಿದೆ.

ಡೆಲ್ಟಾ ಪ್ಲಸ್ ಮಾತ್ರವಲ್ಲದೇ, ವಿಶ್ವ ಆರೋಗ್ಯ ಸಂಸ್ಥೆಯು ಗುರುತಿಸಿರುವ ಹೊಸ ತಳಿಯ ಕೊರೊನಾ ವೈರಾಣುಗಳು ರಾಜ್ಯದಲ್ಲಿ ಈಗಾಗಲೇ ಕೆಲವರಲ್ಲಿ ಕಾಣಿಸಿಕೊಂಡಿದೆ. ಆಲ್ಫಾ/ಬಿ.1.1.7 ವೈರಾಣು ಈವರೆಗೆ 140 ಮಂದಿಯಲ್ಲಿ ಪತ್ತೆಯಾಗಿದೆ. ಅದೇ ರೀತಿ, ಬೀಟಾ/ಬಿ.1.351 ವೈರಾಣು ಆರು ಮಂದಿಯಲ್ಲಿ, ಡೆಲ್ಟಾ/ಬಿ.1.617.2 ವೈರಾಣು 725 ಮಂದಿಯಲ್ಲಿ ಹಾಗೂ ಕಪ್ಪಾ/ಬಿ.1.617.1 ವೈರಾಣು 145 ಮಂದಿಯಲ್ಲಿ ಕಾಣಿಸಿಕೊಂಡಿರುವುದು ಜಿನೋಮಿಕ್ ಸಿಕ್ವೆನ್ಸೀಸ್ ಪರೀಕ್ಷೆಯಿಂದ ದೃಢಪಟ್ಟಿದೆ.

ವಂಚನೆ ಪ್ರಕರಣ ಮಾತುಕತೆಯಲ್ಲೇ ಸುಖಾಂತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದರ್ಶನ್ ಅವರ ಹೆಸರಿನಲ್ಲಿ ವಂಚನೆಗೆ ಯತ್ನಿಸಿದ ಪ್ರಕರಣವು ಮಾತುಕತೆಯ ಮೂಲಕವೇ ಸುಖಾಂತ್ಯ ಕಂಡಿದೆ. 'ಈ ಪ್ರಕರಣಕ್ಕೆ ನಾನು ಹಾಗೂ ಉಮಾಪತಿಯವರು ಮಂಗಳ ಹಾಡಿದ್ದೇವೆ. ಇದನ್ನು ಬಿಟ್ಟು ಬಿಡಿ' ಎಂದು ದರ್ಶನ್ ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

ಮೈಸೂರಿನಿಂದ ವಾಪಾಸಾಗಿರುವ ದರ್ಶನ್, ನಿರ್ಮಾಪಕ ಉಮಾಪತಿ ಶ್ರೀನಿವಾಸ ಗೌಡ ಅವರೊಂದಿಗೆ ಮಂಗಳವಾರ ಸಂಜೆ ಮಾತುಕತೆ ನಡೆಸಿದ್ದಾರೆ. ಈ ಮಾತುಕತೆಯ ಬಳಿಕ ದರ್ಶನ್ ಅವರ ಆಪ್ತ, ನಿರ್ದೇಶಕ ಮಹೇಶ್ ಕುಮಾರ್ ಅವರು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ದರ್ಶನ್ ಹಾಗೂ ಉಮಾಪತಿ ಅವರು ಜೊತೆಗಿರುವ ಎರಡು ಫೋಟೊಗಳನ್ನು

ದರ್ಶನ್ ಹಾಗೂ ಉಮಾಪತಿ

ಅಪ್‌ಲೋಡ್ ಮಾಡಿದ್ದು, ಇದರ ಜೊತೆಗೆ 'ಎಲ್ಲವೂ ಸುಖಾಂತ್ಯ. ಒಂದಾಗಿದ್ವಿ, ಒಂದಾಗಿರೋಣ– ಇಂತಿ ದರ್ಶನ್ ತೂಗುದೀಪ ಹಾಗೂ ಉಮಾಪತಿ ಗೌಡ' ಎಂದು ಉಲ್ಲೇಖಿಸಿದ್ದಾರೆ.

ಈ ಮಾತುಕತೆಗೂ ಮುನ್ನ ತಮ್ಮ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ್ದ ದರ್ಶನ್, 'ಪ್ರಕರಣದಲ್ಲಿ ನಮ್ಮ ನಿರ್ಮಾಪಕರ ಕೈವಾಡ ಏನೂ ಇಲ್ಲ. ಬೇರೇನೋ ಇರುತ್ತದೆ. ಅದು ತಿಳಿಯಬೇಕಷ್ಟೇ. ಈಗಲೂ ನಾನು ಉಮಾಪತಿಯವರ ಕುರಿತು ಏನೂ ಹೇಳಲ್ಲ. ಅವರು ನಮ್ಮ ನಿರ್ಮಾಪಕರು. ಉಮಾಪತಿಯವರು ಬಳಸಿಕೊಂಡರು ಎಂದು ಆ ಮಹಿಳೆ ಹೇಳುತ್ತಿದ್ದಾರಲ್ಲ, ಇದನ್ನು ಒಂದು ಕ್ಷಣ ಒಪ್ಪಿಕೊಳ್ಳೋಣ. ಆದರೆ ಇಷ್ಟೊಂದು ಮುಂದುವರಿಯಲು ಒಂದು ಹೆಣ್ಣಿಗೆ ಧೈರ್ಯ ಹೇಗೆ ಬರುತ್ತದೆ ಎನ್ನುವುದೇ ನನ್ನ ಪ್ರಶ್ನೆ. ಯಾರೋ ಹೇಳಿದರು ಎಂದು ಈ ರೀತಿ ಮಾಡುತ್ತೀರಾ? ಈ ರೀತಿ ಕೆಲಸ ಮಾಡಲು ಯಾವ ಹೆಣ್ಣುಮಕ್ಕಳೂ ಮುಂದೆ ಬರುವುದಿಲ್ಲ. ಇದರ ಹಿಂದೆ ಯಾರಿದ್ದಾರೆ ಎನ್ನುವುದು ನಮಗೆ ಗೊತ್ತಿಲ್ಲ. ನಾವು ಯಾರೂ ಕೈಕಟ್ಟಿಕೊಂಡು ಕೂತಿಲ್ಲ' ಎಂದಿದ್ದಾರೆ.

ರಾಜಿ ಸಂಧಾನಕ್ಕೆ ಒಪ್ಪಲ್ಲ ಎಂದಿದ್ದ ಉಮಾಪತಿ: ದರ್ಶನ್ ಭೇಟಿಗೂ ಮುನ್ನ ಪ್ರಕರಣದ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ್ದ ನಿರ್ಮಾಪಕ ಉಮಾಪತಿ ಶ್ರೀನಿವಾಸಗೌಡ, 'ಈ ಪ್ರಕರಣವನ್ನು ನಾನು ಇಲ್ಲಿಗೇ ಬಿಡಲು ಸಿದ್ಧವಿಲ್ಲ. ಇದನ್ನು ಎದುರಿಸುತ್ತೇನೆ. ನಾನು ರಾಜಿಸಂಧಾನಕ್ಕೆ ಒಪ್ಪಲ್ಲ. ವಾಟ್ಸ್‌ಆ್ಯಪ್ ಚಾಟ್, ವಾಯ್ಸ್ ರೆಕಾರ್ಡ್‌ನಲ್ಲಿ ನಾನು ಅಶ್ಲೀಲವಾಗಿ ಮಾತನಾಡಿಲ್ಲ. ನನ್ನನ್ನು ಒಬ್ಬರು ಕಳೆದುಕೊಳ್ಳಲು ಸಿದ್ಧರಿದ್ದಾರೆ ಎಂದ ಮೇಲೆ ಅವರನ್ನು ಉಳಿಸಿಕೊಳ್ಳಲು ನಾನು ಸಿದ್ಧವಿಲ್ಲ. ನನ್ನನ್ನೂ ದರ್ಶನ್ ಅವರನ್ನೂ ದೂರ ದೂರ ಇಡಲು ಖಚಿತವಾಗಿ ಈ ಕೃತ್ಯ ನಡೆದಿದೆ. ನನ್ನ ತೇಜೋವಧೆ ಮಾಡಲು ಪ್ರಯತ್ನ ನಡೆದಿದೆ. ತನಿಖೆಯ ಮುಖಾಂತರವೇ ಎಲ್ಲವೂ ಬಹಿರಂಗವಾಗಲಿ. ನಾವು ಯಾರ ಮುಂದೆಯೂ ತಲೆತಗ್ಗಿಸಲ್ಲ. ಅನ್ನ ಹಾಕಿದವರ ಮುಂದೆ ತಲೆ ತಗ್ಗಿಸುತ್ತೇವೆ. ದರ್ಶನ್ ಸರ್ ಹಾಗೂ ನನ್ನ ಒಡನಾಟ ಬೇರೆ ರೀತಿ ಇದೆ, ಅವರಿಗೆ ತಲೆಬಾಗಿಸುತ್ತೇನೆ' ಎಂದಿದ್ದರು.

'ಇಡೀ ಕುಟುಂಬವೇ ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದೆ'

ಪ್ರಕರಣದ ಕುರಿತು ವಿಡಿಯೊವೊಂದರಲ್ಲಿ ಮಾತನಾಡಿರುವ ಅರುಣ ಕುಮಾರಿ, 'ಉಮಾಪತಿಯವರು ನನ್ನ ಪರಿಚಯ ಕೇವಲ ಎರಡು ತಿಂಗಳಿನಿಂದ ಎನ್ನುತ್ತಿದ್ದಾರೆ. ಆದರೆ ಕಳೆದ ಮಾರ್ಚ್‌ನಿಂದ ನಾನು ಅವರ ಸಂಪರ್ಕದಲ್ಲಿದ್ದೇನೆ. ದರ್ಶನ್ ಅವರನ್ನು ಭೇಟಿಯಾಗಲು ಜನ ಕಾಯುತ್ತಾ ನಿಂತಿರುತ್ತಾರೆ. ಇಂತಹ ವ್ಯಕ್ತಿಯನ್ನು ಭೇಟಿಯಾಗುತ್ತೇನೆ ಎಂದು ನನ್ನ ಹಿಂದೆ ಯಾರಾದರೂ ಒಬ್ಬರು ಇರಲೇ ಬೇಕಲ್ಲವೇ? ನನ್ನನ್ನು ಏಕೆ ಉಪಯೋಗಿಸಿಕೊಂಡರು ತಿಳಿದಿಲ್ಲ. ನನ್ನ ತೇಜೋವಧೆ ಏಕೆ ಮಾಡುತ್ತಿದ್ದಾರೆ. ಪರಿಸ್ಥಿತಿ ಹೇಗಾಗಿದೆ ಎಂದರೆ ಇಡೀ ಕುಟುಂಬವೇ ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದೆ. ಉಮಾಪತಿಯವರು ಮಾಡಿದ್ದು ತಪ್ಪು ಎಂದು ನೇರವಾಗಿ ಹೇಳುತ್ತೇನೆ. ಅವರವರೇ ಹೋಗಿ ಅವರವರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದಿತ್ತು. ನನ್ನನ್ನು ಉಪಯೋಗಿಸಿಕೊಂಡಿದ್ದು ತಪ್ಪು. ದಯವಿಟ್ಟು ನಮ್ಮನ್ನು ಬದುಕಲು ಬಿಡಿ' ಎಂದು ಹೇಳಿದ್ದಾರೆ.

ಪ್ರಧಾನಿ ಮೋದಿ ಕರೆಗೆ ರಾಜ್ಯದಲ್ಲಿ ಸ್ಪಂದನೆ

'ಅಪ್ರತಿಮ ನಟನಿಗೆ ಅತ್ಯುನ್ನತ ಪ್ರಶಸ್ತಿ ಗುಡಿಯ ಮೇಲೆ ಕಲಶವಿಟ್ಟಂತೆ. ಅನಂತನಾಗ್ ಅವರಿಗೆ ಪದ್ಮಪ್ರಶಸ್ತಿ ನೀಡಬೇಕೆಂಬುದು ಎಲ್ಲರ ಆಶಯ'– ನಟ ರಕ್ಷಿತ್ ಶೆಟ್ಟಿ

ನಟ ಅನಂತನಾಗ್‌ಗೆ ಪದ್ಮ ಪ್ರಶಸ್ತಿಗಾಗಿ ಅಭಿಯಾನ

ಬೆಂಗಳೂರು: ಭಾರತದ ಉನ್ನತ ನಾಗರಿಕ ಪುರಸ್ಕಾರಗಳಲ್ಲಿ ಒಂದಾದ ಪದ್ಮ ಪ್ರಶಸ್ತಿಗೆ ಸೂಕ್ತ ವ್ಯಕ್ತಿಗಳನ್ನು ಸೆ.15ರೊಳಗಾಗಿ ನಾಮನಿರ್ದೇಶನ ಮಾಡಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕರನ್ನು ಕೇಳಿಕೊಂಡಿರುವ ಬೆನ್ನಲ್ಲೇ, ನಟ ಅನಂತ್‌ನಾಗ್ ಅವರಿಗೆ ಪದ್ಮಪ್ರಶಸ್ತಿ ನೀಡಬೇಕು ಎನ್ನುವ ಅಭಿಯಾನ ಇದೀಗ ಟ್ವಿಟರ್‌ನಲ್ಲಿ ಆರಂಭವಾಗಿದೆ.



ಈ ಕುರಿತು ಮೊದಲು ಟ್ವಿಟರ್‌ನಲ್ಲಿ ಪೋಸ್ಟ್ ಮಾಡಿರುವ ನಟ, ನಿರ್ದೇಶಕ ರಿಷಬ್ ಶೆಟ್ಟಿ, 'ದೇಶದ ಅತ್ಯುನ್ನತ ಗೌರವಗಳಾದ ಪದ್ಮತ್ರಯ ಪ್ರಶಸ್ತಿಗಳಿಗೆ, 2022ರ ಸಾಲಿನಲ್ಲಿ ಯಾರು ಭಾಜನರಾಗಬೇಕೆಂಬ ಆಯ್ಕೆಯನ್ನು ಪ್ರಧಾನಿಗಳು ಜನತೆಗೇ ನೀಡಿರುವುದು ಪ್ರಶಂಸನೀಯ ನಡೆ. ಸರ್ಕಾರದ ಬದಲಾಗಿ ದೇಶದ ಪ್ರಜೆಗಳೇ ಪ್ರಶಸ್ತಿಗೆ ತೀರ್ಪುಗಾರರಾಗಬೇಕು ಎಂಬುವುದು ಇದರ ಹಿಂದಿನ ಉದ್ದೇಶ. ಅರ್ಹ ಪ್ರತಿಭೆಗಳ ಕೈ ಸೇರಿದಾಗಲೇ ಪ್ರಶಸ್ತಿಗಳಿಗೆ ಶೋಭೆ' ಎಂದಿದ್ದಾರೆ.

'ನಮ್ಮಲ್ಲಿ ಅಂತಹ ಬೃಹತ್ ಪ್ರತಿಭೆಗಳಿಗೆ ಕೊರತೆಯಿಲ್ಲ. ನಾಡು ಕಂಡ ಶ್ರೇಷ್ಠ ಕಲಾವಿದರಲ್ಲಿ ಹಿರಿಯ ನಟ, ಅನಂತನಾಗ್ ಕೂಡಾ ಅಂತಹ ಮಹಾನ್ ಪ್ರತಿಭೆಗಳಲ್ಲಿ ಒಬ್ಬರು. ಚಿತ್ರನಟರಾಗಿ, ಕನ್ನಡ ಭಾಷೆಗೆ, ನಾಡಿಗೆ, ಚಿತ್ರರಂಗಕ್ಕೆ ಇವರ ಕೊಡುಗೆ ಚಿರಸ್ಮರಣೀಯ. ಈ 'ಅಭಿನಯ ಬ್ರಹ್ಮ'ನಿಗೆ ಪದ್ಮಪ್ರಶಸ್ತಿಯೊಂದು ಸಲ್ಲಬೇಕಾದದ್ದು ನ್ಯಾಯವೇ ಸರಿ' ಎಂದು ಹೇಳಿದ್ದಾರೆ.

'ಅದಕ್ಕಾಗಿ ನಾವೆಲ್ಲರೂ ಒಂದುಗೂಡಿ, ನಮ್ಮ ನಾಡಿನ ಪರವಾಗಿ ಅನಂತನಾಗ್ ಅವರನ್ನು #PeoplesPadma ಗೆ ನಾಮನಿರ್ದೇಶಿಸೋಣ. ಇದಕ್ಕೆ ಸೆ.15ರವರೆಗೂ ಸಮಯವಿದೆ. ಅಲ್ಲಿಯವರೆಗೂ #AnanthnagForPadma ಎಂಬ ಹ್ಯಾಷ್‌ಟ್ಯಾಗ್ ಬಳಸುವ ಮೂಲಕ ಎಲ್ಲರೂ ಇದಕ್ಕೆ ಬೆಂಬಲ ಸೂಚಿಸೋಣ' ಎಂದು ರಿಷಬ್ ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ನಟ ವಸಿಷ್ಠ ಸಿಂಹ, ನಿರ್ದೇಶಕ ಹೇಮಂತ್ ಎಂ.ರಾವ್ ಸೇರಿದಂತೆ ಚಂದನವನದ ಹಲವು ಕಲಾವಿದರು ಹಾಗೂ ಸಾವಿರಾರು ಜನರು ಈ ಅಭಿಯಾನಕ್ಕೆ ಬೆಂಬಲ ಸೂಚಿಸಿ ಟ್ವೀಟ್ ಮಾಡಿದ್ದಾರೆ. ಸಂಸದ ಪ್ರತಾಪ್ ಸಿಂಹ ಅವರೂ ಈ ಕುರಿತು ಟ್ವೀಟ್ ಮಾಡಿದ್ದು, 'ಅನಂತನಾಗ್ ಅವರಿಗೆ ಕೊಡುವುದು ಪದ್ಮ ಪುರಸ್ಕಾರಕ್ಕೇ ಭೂಷಣ' ಎಂದು ಉಲ್ಲೇಖಿಸಿದ್ದಾರೆ.

ಬಾಡಿಗೆ ಟ್ರೋಲರ್ ಬಳಸಿದ ರೋಹಿಣಿ !

ಒಂದನೇ ಪುಟದಿಂದ

'ಬಾಡಿಗೆ ಟ್ರೋಲರ್‌ಗಳು ಒಬ್ಬ ಅಧಿಕಾರಿಯ ಪರ ಕೆಲಸ ಮಾಡುತ್ತಾ, ಮತ್ತೊಬ್ಬ ಅಧಿಕಾರಿಯ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುವುದು ಹೊಸ ಸಾಮಾನ್ಯ ಸ್ಥಿತಿ? ಆದರೆ, ಆ ಬಾಡಿಗೆ ಟ್ರೋಲರ್‌ಗಳಿಗೆ ಗೊತ್ತೊಲ್ಲವೇ ನಾಯಿ ಬೊಗಳಿದರೆ ಅಂಬಾರಿ ಹೋಗೋದು ನಿಲ್ಲಲ್ಲ ಎಂದು. ಈ ವ್ಯಕ್ತಿ ಹೇಳಿದ ವಿಷಯ ಸತ್ಯವೇ, ತನಿಖೆ ಆಗಲಿ' ಎಂದು ರೂಪಾ ಒತ್ತಾಯಿಸಿದ್ದಾರೆ.

ಜೂನ್ 25ರ ತಡರಾತ್ರಿ 2.42ರಿಂದ 3.27ರವರೆಗೆ ವಾಟ್ಸ್ ಆ್ಯಪ್‌ನಲ್ಲಿ ಈ ಚರ್ಚೆ ನಡೆದಿದೆ. ಸಂಭಾಷಣೆಯ ಮಧ್ಯದಲ್ಲಿ ರೂಪಾ ಅವರು 'ಸತ್ಯ ಹೇಳೋಕೆ ಯಾವ ದೊಣ್ಣೆ ನಾಯಕನ ಅಪ್ಪಣೆ ಬೇಕು' ಎಂದು ಹೇಳಿದ್ದಾರೆ. ಆಗ ಆ ಕಡೆ ಇದ್ದ ವ್ಯಕ್ತಿ ಕನ್ನಡ ಭಾಷೆ ತಿಳಿದಿಲ್ಲ ಎಂದು ಹೇಳಿದ್ದಲ್ಲದೇ, 'ನಾನು ಕೂಡ ಆಂಧ್ರಪ್ರದೇಶದವ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದಾರೆ. ಬಾಡಿಗೆ ಟ್ರೋಲರ್‌ಗಳಿಗೆ ನೀಡುತ್ತಿರುವ ಹಣದ ಬಗ್ಗೆ ಮಾಹಿತಿ ನೀಡುವಂತೆ ರೂಪಾ ಕೇಳಿದ್ದಾರೆ. 'ಆ ವಿಷಯ ಗೊತ್ತಿಲ್ಲ, ರೋಹಿಣಿ ಅವರ ಗಂಡ ಒಂದು ವರ್ಷದಿಂದಲೂ ಪಿ.ಆರ್ ಏಜೆನ್ಸಿಯ ಸೇವೆ ಪಡೆಯುತ್ತಿದ್ದಾರೆ' ಎಂದು ಆ ವ್ಯಕ್ತಿ ಉತ್ತರಿಸಿದ್ದಾರೆ.

ಈ ಕುರಿತು ರೋಹಿಣಿ ಸಿಂಧೂರಿ ಅವರ ಪ್ರತಿಕ್ರಿಯೆ ಪಡೆಯಲು ಪ್ರಯತ್ನಿಸಲಾಯಿತು. ಆದರೆ, ಅವರ ಮೊಬೈಲ್ ಸಂಖ್ಯೆ ಸಂಪರ್ಕಕ್ಕೆ ಸಿಗಲಿಲ್ಲ.

91.19 ಲಕ್ಷ ಕುಟುಂಬಗಳಿಗೆ 55 ಎಲ್‌ಪಿಸಿಡಿ ಶುದ್ಧ ನೀರು: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ 91.19 ಲಕ್ಷ ಗ್ರಾಮೀಣ ಕುಟುಂಬಗಳಿಗೆ 55 ಎಲ್‌ಪಿಸಿಡಿ (ಒಬ್ಬ ವ್ಯಕ್ತಿಗೆ ಒಂದು ದಿನಕ್ಕೆ ಪೂರೈಸುವ ತಲಾ ಲೀಟರ್) ಶುದ್ಧ ನೀರು ಒದಗಿಸುವ ಗುರಿ ಇದೆ' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ವಿಧಾನಸೌಧದಲ್ಲಿ ಮಂಗಳವಾರ ನಡೆದ ಜಲಜೀವನ್ ಮಿಷನ್ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರಿಗೆ ಈ ಮಾಹಿತಿ ನೀಡಿದರು.

ಈ ಯೋಜನೆಯಡಿ ಈ ಸಾಲಿನಲ್ಲಿ 25.17 ಲಕ್ಷ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ಒದಗಿಸಲು ಉದ್ದೇಶಿಸಲಾಗಿದೆ. ಅದೇ ರೀತಿ 2022–23 ನೇ ಸಾಲಿನಲ್ಲಿ 27.15 ಲಕ್ಷ ಮತ್ತು 2023 ಡಿಸೆಂಬರ್ ಅಂತ್ಯದ ವೇಳೆಗೆ 10.72

ಜಲಜೀವನ್ ಮಿಷನ್ ಪ್ರಗತಿ ಪರಿಶೀಲನಾ ಸಭೆ ಬಳಿಕ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ರಾಜ್ಯದ ನೀರಾವರಿ ಯೋಜನೆಗಳ ಕುರಿತು ಮನವಿಯೊಂದನ್ನು ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರಿಗೆ ನೀಡಿದರು. ಸಚಿವರಾದ ಬಸವರಾಜಬೊಮ್ಮಾಯಿ ಮತ್ತು ಜೆ.ಸಿ.ಮಾಧುಸ್ವಾಮಿ ಇದ್ದರು.

ಲಕ್ಷ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ಒದಗಿಸುವ ಗುರಿ ಹೊಂದಲಾಗಿದ ಎಂದು ವಿವರಿಸಿದರು.

ಆದ್ಯತಾ ಜಿಲ್ಲೆಗಳಾದ ರಾಯಚೂರು ಜಿಲ್ಲೆಗೆ ₹2000 ಕೋಟಿ ವೆಚ್ಚದಲ್ಲಿ ಬಹುಗ್ರಾಮ ಯೋಜನೆ ರೂಪಿಸಲಾಗಿದೆ. ಇದಕ್ಕೆ ಸಚಿವ ಸಂಪುಟ ಅನುಮೋದನೆ ನೀಡಲಾಗಿದೆ. ಇದಕ್ಕೆ ಶೀಘ್ರವೇ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿದೆ. ಯಾದಗಿರಿ ಜಿಲ್ಲೆಯಲ್ಲಿಯೂ ಬಹುಗ್ರಾಮ ಯೋಜನೆ ರೂಪಿಸಲಾಗುತ್ತಿದೆ ಎಂದು ಯಡಿಯೂರಪ್ಪ ಹೇಳಿದರು.

ಕೇಂದ್ರ ಸಚಿವ ಗಜೇಂದ್ರ ಸಿಂಗ್ ಮಾತನಾಡಿ, ಕರ್ನಾಟಕದ ಜಲಜೀವನ್ ಮಿಷನ್ ಕಾರ್ಯಕ್ರಮವನ್ನು ನಿಗದಿತ ಅವಧಿಯೊಳಗೇ ಪೂರ್ಣಗೊಳಿಸಬೇಕು ಎಂದು ಸಲಹೆ ನೀಡಿದರು.

ಜಲಜೀವನ್ ಮಿಷನ್ ಯೋಜನೆಯಡಿ 2024ರ ವೇಳೆಗೆ ದೇಶದ 18.93 ಕೋಟಿ ಗ್ರಾಮೀಣ ಮನೆಗಳಲ್ಲಿ 15.70 ಕೋಟಿ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ನೀಡುವ ಗುರಿ ಹೊಂದಲಾಗಿದೆ. ಕೇವಲ ನಲ್ಲಿ ಸಂಪರ್ಕ ಕೊಡುವುದು ಮಾತ್ರವಲ್ಲದೆ, ನಿರಂತರವಾಗಿ ಕುಡಿಯುವ ನೀರು ಪೂರೈಸುವ ಬಗ್ಗೆ ಗಮನ ಹರಿಸಲಾಗುವುದು ಎಂದು ಸಚಿವರು ತಿಳಿಸಿದರು.

ಸಭೆಯಲ್ಲಿ ಗೃಹ ಸಚಿವ ಬಸವರಾಜ ಬೊಮ್ಮಾಯಿ, ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳು ಇದ್ದರು.

ರಾಜ್ಯಕ್ಕೆ ನ್ಯಾಯದ ಭರವಸೆ

ಒಂದನೇ ಪುಟದಿಂದ

'ತಮಿಳುನಾಡು ಸರ್ಕಾರ ಏನೇ ತೀರ್ಮಾನ ತೆಗೆದುಕೊಳ್ಳಲಿ. ಅದು ಆ ರಾಜ್ಯಕ್ಕೆ ಸಂಬಂಧಿಸಿದ್ದು. ಈಗಾಗಲೇ ಯೋಜನೆಯನ್ನು ಪ್ರಶ್ನಿಸಿ ಆ ರಾಜ್ಯ ಸುಪ್ರೀಂಕೋರ್ಟ್‌ನಲ್ಲೂ ದಾವೆ ಹೂಡಿದೆ. ತೀರ್ಪು ಬಂದ ಮೇಲೆ ಎರಡೂ ರಾಜ್ಯಗಳ ಹಿತ ಗಮನದಲ್ಲಿ ಇಟ್ಟುಕೊಂಡು ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತೇವೆ' ಎಂದು ಅವರು ತಿಳಿಸಿದರು.

'ಕೇಂದ್ರ ಸರ್ಕಾರ ಯಾವ ಸಂದರ್ಭದಲ್ಲಿ ಏನು ತೀರ್ಮಾನ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತದೆ. ಯಾವ ರಾಜ್ಯ ಏನು ತೀರ್ಮಾನ ತೆಗೆದುಕೊಳ್ಳುತ್ತದೆ ಎಂಬುದು ಮುಖ್ಯವಲ್ಲ. ನಾವು ಸರಿಯಾದ ನಿರ್ಧಾರವನ್ನೇ ತೆಗೆದುಕೊಳ್ಳುತ್ತೇವೆ.

> **ಮೇಕೆದಾಟು ಯೋಜನೆ ಕೇಂದ್ರ ಸಚಿವರ ಗಮನಕ್ಕೆ ತಂದಾಗ, ಎಲ್ಲ ವಿಷಯಗಳೂ ಅರಿವು ಇದೆ. ನ್ಯಾಯ ಒದಗಿಸುತ್ತೇನೆ ಎಂದು ಭರವಸೆ ಕೊಟ್ಟಿದ್ದಾರೆ**
>
> **ಬಸವರಾಜ ಬೊಮ್ಮಾಯಿ,** ಗೃಹ ಮತ್ತು ಕಾನೂನು ಸಚಿವ

ಪಕ್ಷ ಬೇರೆ, ಸರ್ಕಾರ ಬೇರೆ. ಇಲಾಖೆಯ ನಿಯಮ, ಕಾನೂನು, ಸುಪ್ರೀಂಕೋರ್ಟ್ ತೀರ್ಪಿನ ಪ್ರಕಾರವೇ ನಡೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಬದ್ಧರಾಗಿದ್ದೇವೆ' ಎಂದು ಸ್ಪಷ್ಟಪಡಿಸಿದರು.

ಯಡಿಯೂರಪ್ಪ ಮಾತನಾಡಿ, 'ಮೇಕೆದಾಟು ಅಲ್ಲದೆ, ಕೃಷ್ಣಾ ಮೇಲ್ದಂಡೆ, ಕಳಸಾ ಬಂಡೂರಿ, ಎತ್ತಿನಹೊಳೆ, ಭದ್ರಾ ಮೇಲ್ದಂಡೆ ಯೋಜನೆಗಳಿಗೆ ಕೇಂದ್ರದ ವಿವಿಧ ಇಲಾಖೆಗಳ ಅನುಮತಿ ಬಾಕಿ ಇರುವ ಬಗ್ಗೆಯೂ ಅವರಲ್ಲಿ ಪ್ರಸ್ತಾಪಿಸಿದ್ದೇವೆ' ಎಂದರು.

'ಕೇಂದ್ರ ಸಚಿವರ ಜತೆ ನಾವು ನಮ್ಮ ಎಲ್ಲ ನೀರಾವರಿ ಯೋಜನೆಗಳ ಬಗ್ಗೆಯೂ ಅವರ ಜತೆ ಚರ್ಚಿಸಿದ್ದೇವೆ. ಮೇಕೆದಾಟು ಯೋಜನೆ ಕುರಿತು ಈಗಾಗಲೇ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಿ, ಅದನ್ನು ಈಗಾಗಲೇ ಕೇಂದ್ರ ಜಲ ಮಂಡಳಿಗೆ ಸಲ್ಲಿಸಿದ್ದೇವೆ. ಕೇಂದ್ರದ ಸಹಕಾರ ಸಿಗಲಿದೆ' ಎಂದು ಅವರು ತಿಳಿಸಿದರು.

ಸಭೆಯಲ್ಲಿ ಗೃಹ ಮತ್ತು ಕಾನೂನು ಸಚಿವ ಬಸವರಾಜ ಬೊಮ್ಮಾಯಿ, ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಇದ್ದರು.

ತೆರಿಗೆ ಪಾವತಿಗೆ ಹಿಂದೇಟು: ನಟ ವಿಜಯ್‌ಗೆ ತರಾಟೆ

ಒಂದನೇ ಪುಟದಿಂದ

ಅರ್ಜಿಯನ್ನು ವಜಾ ಮಾಡುವುದರ ಜೊತೆಗೆ ಅವರಿಗೆ ₹ 1 ಲಕ್ಷ ದಂಡವನ್ನೂ ವಿಧಿಸಿದ ಹೈಕೋರ್ಟ್, ದಂಡದ ಮೊತ್ತವನ್ನು ಎರಡು ವಾರಗಳಲ್ಲಿ ಮುಖ್ಯಮಂತ್ರಿಗಳ ಕೋವಿಡ್ ಪರಿಹಾರ ನಿಧಿಗೆ ಸಲ್ಲಿಸಬೇಕು ಎಂದು ಆದೇಶಿಸಿದೆ.

'ಅರ್ಜಿದಾರರಿಗೆ ಲಕ್ಷಾಂತರ ಜನ ಅಭಿಮಾನಿಗಳಿದ್ದಾರೆ. ಅವರು ಹಣ ಪಾವತಿಸಿಯೇ ಇವರ ಚಿತ್ರಗಳನ್ನು ನೋಡುತ್ತಾರೆ. ಅವರ ಹಣದಿಂದಲೇ ಜಗತ್ತಿನ ಐಷಾರಾಮಿ ಕಾರನ್ನು ತನ್ನ ಸ್ವಂತ ಬಳಕೆಗಾಗಿ ಈ ನಟ ಖರೀದಿಸಿದ್ದಾರೆ. ಆದರೆ, ತೆರಿಗೆಯನ್ನು ಪಾವತಿಸದ ಅವರು ಆ ಮೂಲಕ ತಮ್ಮ ಅಭಿಮಾನಿಗಳಿಗೇ ಅಗೌರವ ತೋರಿದ್ದಾರೆ' ಎಂದೂ ನ್ಯಾಯಮೂರ್ತಿ ಅಭಿಪ್ರಾಯಪಟ್ಟಿದ್ದಾರೆ.

'ಬಡವರು ಕಷ್ಟಪಟ್ಟು ದುಡಿದು ಗಳಿಸಿದ ಹಣವೇ ತಮ್ಮ ಕೈಗೆ ಸೇರುತ್ತದೆ. ಅದು ಆಕಾಶದಿಂದ ಉದುರುವುದಿಲ್ಲ ಎಂಬುದನ್ನು ಈ ದೇಶದ ಗಣ್ಯವ್ಯಕ್ತಿಗಳು ಅರ್ಥ ಮಾಡಿಕೊಳ್ಳಬೇಕು. ತೆರಿಗೆ ವ್ಯವಸ್ಥೆ ದೇಶವೊಂದರ ಆರ್ಥಿಕತೆಯ ಬೆನ್ನೆಲುಬು. ತೆರಿಗೆ ಪಾವತಿಯಿಂದ ತಪ್ಪಿಸಿಕೊಳ್ಳುವುದನ್ನು ದೇಶ ವಿರೋಧಿ ಪ್ರವೃತ್ತಿ ಎಂದೇ ಪರಿಗಣಿಸಬೇಕು. ಇಂಥ ವರ್ತನೆ ಮತ್ತು ಮನೋಭಾವ ಕೂಡಾ ಅಸಾಂವಿಧಾನಿಕವಾದುದು' ಎಂದು ಅವರು ಹೇಳಿದ್ದಾರೆ.

ವಿಜಯ್ ಕಾಲಮಿತಿಯಲ್ಲಿ ಪ್ರವೇಶ ತೆರಿಗೆಯನ್ನು ಪಾವತಿಸದಿದ್ದರೆ ಕಾನೂನು ಕ್ರಮವನ್ನು ಜರುಗಿಸಬೇಕು ಎಂದು ಪ್ರತಿವಾದಿಗಳಾಗಿದ್ದ ಗೃಹ ಇಲಾಖೆ, ವಾಣಿಜ್ಯ ತೆರಿಗೆ ಇಲಾಖೆಗೆ ಅವರು ಸೂಚಿಸಿದ್ದಾರೆ.

ಶುಲ್ಕ ಕಟ್ಟಿದರಷ್ಟೇ ಹಾಲ್ ಟಿಕೆಟ್

ಒಂದನೇ ಪುಟದಿಂದ

'ಹೆಚ್ಚು ಶುಲ್ಕ ಕೇಳುವವರ ಮೇಲೆ ದೂರು ಕೊಡಲಿ. ಆದರೆ, ಸುಳ್ಳು ಹೇಳಿಕೊಂಡು ಒತ್ತಡ ಹೇರುತ್ತಿದ್ದಾರೆ ಎಂದು ಆರೋಪಿಸುವುದು ಸರಿಯಲ್ಲ' ಎಂದರು.

ಅನ್ಯಾಯ: 'ತರಗತಿಗಳನ್ನು ನಡೆಸದೆ ಪರೀಕ್ಷೆ ನಡೆಸುವುದೇ ಸರ್ಕಾರ ತಪ್ಪು ನಡೆ. ಪರೀಕ್ಷೆಯನ್ನು ಅಸ್ತ್ರ ಮಾಡಿಕೊಂಡು ಖಾಸಗಿ ಶಾಲೆಗಳು ಶುಲ್ಕ ವಸೂಲಿಗೆ ಇಳಿದಿರುವುದು ತೀರಾ ಅನ್ಯಾಯ' ಎಂದು ಆರ್‌ಟಿಇ ವಿದ್ಯಾರ್ಥಿಗಳು ಮತ್ತು ಪೋಷಕರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಎನ್. ಯೋಗಾನಂದ ಹೇಳಿದರು.

ಅಸಹಾಯಕತೆ: 'ಸರ್ಕಾರ ಶುಲ್ಕ ಕಡಿತಗೊಳಿಸಿದ ವಿಷಯದಲ್ಲಿ ಹೈಕೋರ್ಟ್ ಅಂತಿಮ ತೀರ್ಪು ನೀಡದೇ ಇರುವುದು ಖಾಸಗಿ ಶಾಲಾ ಆಡಳಿತ ಮಂಡಳಿಗಳಿಗೆ ವರವಾಗಿದೆ. ಪ್ರಕರಣ ಹೈಕೋರ್ಟ್‌ನಲ್ಲಿರುವುದರಿಂದ ಶೇ 70ರಷ್ಟು ಮಾತ್ರ ಶುಲ್ಕ ಪಡೆಯಬೇಕು ಎಂದು ಮತ್ತೊಮ್ಮೆ ಕಟ್ಟುನಿಟ್ಟಿನ ಸುತ್ತೋಲೆ ಹೊರಡಿಸಲು ಸಾಧ್ಯವೂ ಇಲ್ಲ' ಎಂದು ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ಅಸಹಾಯಕತೆ ವ್ಯಕ್ತಪಡಿಸಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕನ್ನಡ ಪುಸ್ತಕ ಪ್ರಾಧಿಕಾರ: ಪುಸ್ತಕ, ಮುದ್ರಣ ಸೊಗಸು ಬಹುಮಾನ ಪ್ರಕಟ

ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ 2020ನೇ ಸಾಲಿನ 'ಪುಸ್ತಕ ಸೊಗಸು' ಹಾಗೂ 'ಮುದ್ರಣ ಸೊಗಸು' ಬಹುಮಾನಗಳನ್ನು ಮಂಗಳವಾರ ಪ್ರಕಟಿಸಿದೆ. ಪ್ರಾಧಿಕಾರದ ಅಧ್ಯಕ್ಷ ಎಂ.ಎನ್. ನಂದೀಶ್ ಹಂಚೆ ಅವರ ನೇತೃತ್ವದಲ್ಲಿ ಈ ಕೃತಿಗಳ ಆಯ್ಕೆ ನಡೆದಿದೆ.

'ಪುಸ್ತಕ ಸೊಗಸು' ಮೊದಲನೇ ಬಹುಮಾನಕ್ಕೆ ಡಾ.ಎಸ್. ಗುರುಮೂರ್ತಿ ಅವರ 'ಕದಂಬರು ಸಮಗ್ರ ಅವಲೋಕನ' ಕೃತಿಯನ್ನು ಹೊರತಂದಿರುವ ಬೆಂಗಳೂರಿನ ಭವತಾರಿಣಿ ಪ್ರಕಾಶನ ಆಯ್ಕೆಯಾಗಿದೆ. ದ್ವಿತೀಯ ಬಹುಮಾನಕ್ಕೆ ಡಾ. ಅಮರೇಶ ಯತಗಲ್ ಅವರ 'ಸಾರ್ಥಕ ಬದುಕು' ಕೃತಿ ಪ್ರಕಟಿಸಿರುವ ರಾಯಚೂರಿನ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಪ್ರತಿಷ್ಠಾನ, ಮೂರನೇ ಬಹುಮಾನಕ್ಕೆ ಡಾ. ತಲ್ಲೂರು ಶಿವರಾಮ ಶೆಟ್ಟಿ ಅವರ 'ಕಲಾಸಂಚಯ' ಕೃತಿ ಪ್ರಕಟಿಸಿರುವ ಉಡುಪಿಯ ತಲ್ಲೂರ್ಸ್ ಫ್ಯಾಮಿಲಿ ಟ್ರಸ್ಟ್ ಭಾಜನವಾಗಿವೆ. ಈ ಬಹುಮಾನಗಳು ಕ್ರಮವಾಗಿ ₹ 25 ಸಾವಿರ, ₹ 20 ಸಾವಿರ ಹಾಗೂ ₹ 10 ಸಾವಿರ ನಗದು ಒಳಗೊಂಡಿವೆ.

'ಮಕ್ಕಳ ಪುಸ್ತಕ ಸೊಗಸು' ಬಹುಮಾನಕ್ಕೆ ತಮ್ಮಣ್ಣ ಬೀಗಾರ ಅವರ 'ಫ್ರಾಗಿ ಮತ್ತು ಗೆಳೆಯರು...' ಕೃತಿಯನ್ನು ಹೊರತಂದಿರುವ ತುಮಕೂರಿನ ಗೋಮಿನಿ ಪ್ರಕಾಶನ ಆಯ್ಕೆಯಾಗಿದೆ. ಈ ಬಹುಮಾನವು ₹ 8 ಸಾವಿರ ನಗದು ಒಳಗೊಂಡಿದೆ. 'ಮುಖಪುಟ ಚಿತ್ರ ವಿನ್ಯಾಸ ಬಹುಮಾನ'ಕ್ಕೆ ಲಕ್ಷ್ಮೀಕಾಂತ ಮಿರಜಕರ ಅವರ 'ಬಯಲೊಳಗೆ ಬಯಲಾಗಿ' ಕೃತಿಗೆ ಮೈಸೂರಿನ ಕಲಾವಿದ ಟಿ.ಎಫ್. ಹಾದಿಮನಿ, 'ಮುಖಪುಟ ಚಿತ್ರಕಲೆಯ ಬಹುಮಾನ'ಕ್ಕೆ ರೂಪಾ ಹಾಸನ ಅವರ ಸಂಪಾದಕತ್ವದ 'ಹೆಣ್ಣೊಳನೋಟ' ಕೃತಿಗೆ ಬೆಂಗಳೂರಿನ ಕಲಾವಿದ ಸುಧಾಕರ ದರ್ಬೆ ಹಾಗೂ 'ಪುಸ್ತಕ ಮುದ್ರಣ ಸೊಗಸು ಬಹುಮಾನ'ಕ್ಕೆ ಕಿರಣ್ ಭಟ್ ಅವರ 'ರಂಗ ಕೈರಳಿ' ಕೃತಿಗೆ ಬೆಂಗಳೂರಿನ ರೀಗಲ್ ಪ್ರಿಂಟ್ ಸರ್ವೀಸ್ ಆಯ್ಕೆಯಾಗಿವೆ. ಈ ಪ್ರಶಸ್ತಿಗಳು ಕ್ರಮವಾಗಿ ₹ 10 ಸಾವಿರ, ₹ 8 ಸಾವಿರ ಹಾಗೂ ₹ 5 ಸಾವಿರ ನಗದು ಬಹುಮಾನವನ್ನು ಒಳಗೊಂಡಿವೆ ಎಂದು ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ತಿಳಿಸಿದ್ದಾರೆ.

ಮಲ್ಲೂರ ಗ್ರೂಪ್ ಶಿಕ್ಷಣ ಸಮಿತಿ (ರಿ) ಮಲ್ಲೂರ

ಎಸ್.ಬಿ.ಹೆಚ್.ವ್ಹಿ ಗ್ರಾಮಾಂತರ ಪ್ರೌಢ ಶಾಲೆ, ಮಲ್ಲೂರ ತಾ॥ ಬ್ಯಾಡಗಿ ಜಿ॥ಹಾವೇರಿ

ಕ್ರಮ ಸಂಖ್ಯೆ: ಎಮ್‌ಜಿಎಸ್‌ಎಸ್/ನೇಮಕ/005/2021–22 ದಿನಾಂಕ 13–07–2021

–: ಬೇಕಾಗಿದ್ದಾರೆ :–

ಮಲ್ಲೂರ ಗ್ರೂಪ್ ಶಿಕ್ಷಣ ಸಮಿತಿ ಮಲ್ಲೂರ ಇವರ ಆಶ್ರಯದಲ್ಲಿ ನಡೆಯುತ್ತಿರುವ ಎಸ್.ಬಿ.ಹೆಚ್.ವ್ಹಿ ಗ್ರಾಮಾಂತರ ಪ್ರೌಢ ಶಾಲೆ, ಮಲ್ಲೂರ ಇಲ್ಲಿ ಖಾಲಿ ಇರುವ ಸಹ ಶಿಕ್ಷಕ (ಕನ್ನಡ) ಹುದ್ದೆಯನ್ನು ತುಂಬಲು ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ ಇವರ ಆದೇಶ ಸಂಖ್ಯೆ ಜಿ4.ಶಾಶಿಆ:ಹು:ತುಂ:ಅನು:39:2019–20 ದಿನಾಂಕ: 02–03–2020 ಅನುಸಾರ ಆದೇಶ ನೀಡಿದ್ದಾರೆ ಸದರಿ ಹುದ್ದೆಯ ಭರ್ತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಶಾಲೆಯ ಹೆಸರು	ಅನುದಾನಿತ ಹುದ್ದೆ ಮತ್ತು ವಿಷಯ	ಹುದ್ದೆಯ ಮೀಸಲಾತಿ	ಮೀಸಲಾತಿ ಸೂಚ್ಯಂಕ	ವಿದ್ಯಾರ್ಹತೆ	ಮಾಧ್ಯಮ	ವೇತನ ಶ್ರೇಣಿ
1	2	3	4	5	6	7
ಎಸ್.ಬಿ.ಹೆಚ್.ವ್ಹಿ ಗ್ರಾಮಂತರ ಪ್ರೌಢಶಾಲೆ ಮಲ್ಲೂರ ತಾ॥ಬ್ಯಾಡಗಿ ಜಿ॥ಹಾವೇರಿ–581106	ಸಹ ಶಿಕ್ಷಕ ಕನ್ನಡ	ಪರಿಶಿಷ್ಟ ಪಂಗಡ (ಸಮತಳ ಮೀಸಲಾತಿ –1)	ಸೂಚ್ಯಂಕ–3	BA. B.Ed	ಕನ್ನಡ	33450 – 62600

ಮೇಲ್ಕಂಡ ಸಹ ಶಿಕ್ಷಕ ಹುದ್ದೆಗೆ ಅರ್ಜಿ ಹಾಕಬಯಸುವ ಅರ್ಹ ಅಭ್ಯರ್ಥಿಗಳು ತಮ್ಮ ಪೂರ್ಣ ವಿವರಗಳೊಂದಿಗೆ ಹಾಗೂ ಅವಶ್ಯಕ ದಾಖಲೆಗಳೊಂದಿಗೆ ರೂ 1000/– ಗಳ ಡಿಡಿಯನ್ನ "ಮಲ್ಲೂರ ಗ್ರೂಪ್ ಶಿಕ್ಷಣ ಸಮಿತಿ (ರಿ) ಮಲ್ಲೂರ" ಇವರ ಹೆಸರಿನಲ್ಲಿ ಪಡೆದು ಅರ್ಜಿ ಸಮೇತ ಸದರಿಯವರ ವಿಳಾಸಕ್ಕೆ **ದಿನಾಂಕ 14–07–2021 ರಿಂದ 03–08–2021 21** ದಿನಗಳೊಳಗಾಗಿ ಅರ್ಜಿಯನ್ನು ನೋಂದಾಯಿತ ಅಂಚೆ ಮೂಲಕ ಕಳುಹಿಸಬೇಕು. ಅರ್ಜಿಯ ಒಂದು ಪ್ರತಿಯನ್ನು ಮಾನ್ಯ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಹಾವೇರಿ ಇವರ ವಿಳಾಸಕ್ಕೆ ಕಳಿಸಬೇಕು. ಅಭ್ಯರ್ಥಿಗಳು ಅರ್ಜಿಯ ಜೊತೆಗೆ ತಮ್ಮ ವಿದ್ಯಾರ್ಹತೆ ಮತ್ತು ಮೀಸಲಾತಿಗೆ ಸಂಬಂಧಿಸಿದ ಮೂಲ ದಾಖಲೆಗಳ ದೃಢೀಕೃತ ಝುರಾಕ್ಸ್ ಪ್ರತಿಯನ್ನು ಲಗುತ್ತಿಸಬೇಕು. ಅವಧಿ ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ. ನೋಂದಾಯಿತ ಅಂಚೆ ಮೂಲಕವಲ್ಲದ ಅರ್ಜಿಗಳಿಗೆ ಮಾನ್ಯತೆ ಇರುವುದಿಲ್ಲ, ಆಯ್ಕೆ ಪ್ರಕ್ರಿಯೆಯ ಇಲಾಖಾ ನಿಯಮಾವಳಿಯಲ್ಲಿ ನಡೆಸಲಾಗುತ್ತದೆ. ಸಂದರ್ಶನ ದಿನಾಂಕವನ್ನು ನಂತರ ನೋಂದಾಯಿತ ಅಂಚೆ ಮೂಲಕ ತಿಳಿಸಲಾಗುತ್ತದೆ.

ಸ್ಥಳ: ಮಲ್ಲೂರ

ಸಹಿ/– ಅಧ್ಯಕ್ಷರು
ಶ್ರೀ ಎಮ್. ಆರ್. ಹೊಮ್ಮರಡಿ, ವಕೀಲರು,

ಸಹಿ/– ಕಾರ್ಯದರ್ಶಿಗಳು
ಶ್ರೀ ವ್ಹಿ. ವ್ಹಿ. ನೂರಂದನವರ

ಸಂಪುಟ ಸಮಿತಿ ಪುನರ್ ರಚನೆ: ಭೂಪೇಂದ್ರ, ಸೊನೊವಾಲ್ ಸಹಿತ ನೂತನ ಸಚಿವರಿಗೂ ಸ್ಥಾನ

ರಾಜಕೀಯ ವ್ಯವಹಾರಗಳ ಸಮಿತಿಗೆ ಸ್ಮೃತಿ ಇರಾನಿ

ನವದೆಹಲಿ (ಪಿಟಿಐ): ಕೇಂದ್ರ ಸಚಿವ ಸಂಪುಟವನ್ನು ಇತ್ತೀಚೆಗೆ ಪುನರ್ ರಚನೆ ಮಾಡಿರುವ ಬೆನ್ನಲ್ಲೇ, ಪ್ರಧಾನಿ ನರೇಂದ್ರ ಮೋದಿ ಅವರು ಈಗ ಕೆಲವು ಸಂಪುಟ ಸಮಿತಿಗಳನ್ನು ಸಹ ಪುನರ್‌ರಚನೆ ಮಾಡಿದ್ದಾರೆ.

ಕೆಲವು ಸಂಪುಟ ಸಮಿತಿಗಳಿಗೆ ನೂತನ ಸಚಿವರನ್ನು ಸದಸ್ಯರನ್ನಾಗಿ ನೇಮಕ ಮಾಡಿದ್ದರೆ, ಇನ್ನೂ ಕೆಲವು ಸಮಿತಿಗಳಿಂದ ಕೆಲ ಸಚಿವರನ್ನು ಹೊರಗಿಡಲಾಗಿದೆ.

ಸಚಿವರಾದ ಸ್ಮೃತಿ ಇರಾನಿ, ಸರ್ವಾನಂದ ಸೊನೊವಾಲ್ ಹಾಗೂ ಗಿರಿರಾಜ್ ಸಿಂಗ್ ಅವರನ್ನು ರಾಜಕೀಯ ವ್ಯವಹಾರಗಳ ಮೇಲಿನ ಸಂಪುಟ ಸಮಿತಿಗೆ (ಸಿಸಿಪಿಎ) ನೇಮಕ ಮಾಡಲಾಗಿದೆ.

ಸ್ಮೃತಿ ಇರಾನಿ

ಪರಿಸರ ಹಾಗೂ ಕಾರ್ಮಿಕ ಸಚಿವ ಭೂಪೇಂದ್ರ ಯಾದವ್, ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರಿಗೂ ಸಿಸಿಪಿಎದಲ್ಲಿ ಸ್ಥಾನ ನೀಡಲಾಗಿದೆ.

ಸಂಖ್ಯಾದೃಷ್ಟಿಯಿಂದಲೂ ಸಿಸಿಪಿಎ ಬಲಹೆಚ್ಚಿಸಿಕೊಂಡಿದೆ. ಈ ಮೊದಲು ಈ ಸಂಪುಟ ಸಮಿತಿಯಲ್ಲಿ 10 ಸದಸ್ಯರಿದ್ದರು. ಈಗ ಸಮಿತಿಯ ಸಂಖ್ಯಾಬಲ 13ಕ್ಕೆ ಏರಿದೆ. ಈ ಸಮಿತಿಯಲ್ಲಿ ಎನ್‌ಡಿಎ ಅಂಗಪಕ್ಷಗಳ ಸಂಸದರಿಗೆ ಸ್ಥಾನ ನೀಡಿಲ್ಲ ಎಂಬುದು ಸಹ ಗಮನಾರ್ಹ.

ಈ ಮೊದಲಿದ್ದ ಸಿಸಿಪಿಎದಲ್ಲಿ ಎಲ್‌ಜೆಪಿಯ ರಾಮವಿಲಾಸ್ ಪಾಸ್ವಾನ್, ಹರ್ಸಿಮ್ರತ್ ಕೌರ್ ಬಾದಲ್ (ಅಕಾಲಿ ದಳ) ಹಾಗೂ ಅರವಿಂದ್ ಸಾವಂತ್ (ಶಿವಸೇನಾ) ಅವರಿಗೆ ಸ್ಥಾನ ನೀಡಲಾಗಿತ್ತು. ಅಕಾಲಿದಳ ಹಾಗೂ ಶಿವಸೇನಾ ಪಕ್ಷಗಳು ಎನ್‌ಡಿಎಯಿಂದ ಹೊರನಡೆದವು. ಪಾಸ್ವಾನ್ ಅವರು ಕಳೆದ ವರ್ಷ ಅಕ್ಟೋಬರ್‌ನಲ್ಲಿ ಮೃತಪಟ್ಟರು. ಹೀಗಾಗಿ, ಈಗಿನ ಪುನರ್‌ರಚನೆಗೊಂಡ ಸಿಸಿಪಿಎ ಸಂಪೂರ್ಣ ಬಿಜೆಪಿಯ ಸಚಿವರನ್ನೇ ಒಳಗೊಂಡಿದೆ.

ಮತ್ತೊಂದು ಬೆಳವಣಿಗೆಯಲ್ಲಿ, ಆರ್ಥಿಕ ವ್ಯವಹಾರಗಳ ಮೇಲಿನ ಸಂಪುಟ ಸಮಿತಿಯಿಂದ (ಸಿಸಿಇಎ) ಪೆಟ್ರೋಲಿಯಂ, ರಾಸಾಯನಿಕ ಹಾಗೂ ರಸಗೊಬ್ಬರ ಸಚಿವರನ್ನು ಹೊರಗಿಡಲಾಗಿದೆ.

ಈ ಸಮಿತಿ ಮೊದಲು 11 ಜನ ಸದಸ್ಯರನ್ನು ಒಳಗೊಂಡಿತ್ತು. ಡಿ.ವಿ. ಸದಾನಂದಗೌಡ ಹಾಗೂ ರವಿಶಂಕರ್ ಪ್ರಸಾದ್ ಅವರು ಸಚಿವ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದರಿಂದ ಸಿಸಿಇಎ ಸದಸ್ಯ ಬಲ ಈಗ 9ಕ್ಕೆ ಇಳಿದಿದೆ. ಆದರೆ, ಈ ಮೊದಲು ಪೆಟ್ರೋಲಿಯಂ ಸಚಿವರಾಗಿದ್ದಾಗ ಸಿಸಿಇಎ ಸದಸ್ಯರಾಗಿದ್ದ, ನೂತನ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಸಿಸಿಇಎನಲ್ಲಿ ಉಳಿಸಿಕೊಳ್ಳಲಾಗಿದೆ.

ಸಂಸದೀಯ ವ್ಯವಹಾರಗಳ ಮೇಲಿನ ಸಂಪುಟ ಸಮಿತಿಗೆ ಸಚಿವರಾದ ಅರ್ಜುನ್ ಮುಂಡಾ, ವೀರೇಂದ್ರಕುಮಾರ್, ಕಿರಣ್ ರಿಜಿಜು ಹಾಗೂ ಅನುರಾಗ್ ಠಾಕೂರ್ ಅವರನ್ನು ನೇಮಕ ಮಾಡಲಾಗಿದೆ.

ದೇಶದ ಭದ್ರತೆಯ ವಿಷಯದಲ್ಲಿ ಮಹತ್ವದ ನಿರ್ಧಾರ ಕೈಗೊಳ್ಳುವ ರಕ್ಷಣಾ ವ್ಯವಹಾರಗಳ ಸಂಪುಟ ಸಮಿತಿಯಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ.

ಸಚಿವರಾದ ನಾರಾಯಣ ರಾಣೆ, ಜ್ಯೋತಿರಾದಿತ್ಯ ಸಿಂಧಿಯಾ ಮತ್ತು ಅಶ್ವಿನಿ ವೈಷ್ಣವ್ ಅವರು ಪ್ರಧಾನ ಮಂತ್ರಿ ನೇತೃತ್ವದ ಹೂಡಿಕೆ ಮತ್ತು ಪ್ರಗತಿ ಸಂಪುಟ ಸಮಿತಿಯ ಸದಸ್ಯರಾಗಿದ್ದಾರೆ.

ಸಚಿವರಾದ ಅಶ್ವಿನಿ ವೈಷ್ಣವ್, ಭೂಪೇಂದ್ರ ಯಾದವ್, ರಾಮಚಂದ್ರ ಪ್ರಸಾದ್ ಸಿಂಗ್ ಮತ್ತು ಜಿ. ಕಿಶನ್ ರೆಡ್ಡಿ ಅವರು ಉದ್ಯೋಗ ಮತ್ತು ಕೌಶಲ ಸಂಪುಟ ಸಮಿತಿ ಸದಸ್ಯರಾಗಿದ್ದಾರೆ.

ಸುದ್ದಿ 2 ನಿಮಿಷ

ಸೆ.11ಕ್ಕೆ ಸ್ನಾತಕೋತ್ತರ ನೀಟ್

ನವದೆಹಲಿ: ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ಸೆಪ್ಟೆಂಬರ್ 11ರಂದು ನಡೆಯಲಿದೆ ಎಂದು ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಮಂಗಳವಾರ ತಿಳಿಸಿದ್ದಾರೆ.

ವೈದ್ಯಕೀಯ ಕಾಲೇಜುಗಳಲ್ಲಿ 30,000 ಸ್ನಾತಕೋತ್ತರ ಸೀಟುಗಳಿಗೆ ಪ್ರವೇಶ ನೀಡಲು ಪ್ರತಿವರ್ಷ ಪ್ರವೇಶ ಪರೀಕ್ಷೆ ನಡೆಯುತ್ತದೆ.

‘2021ರ ಸೆಪ್ಟೆಂಬರ್ 11ರಂದು ನಾವು ನೀಟ್ ಸ್ನಾತಕೋತ್ತರ ಪರೀಕ್ಷೆಯನ್ನು ನಡೆಸಲು ನಿರ್ಧರಿಸಿದ್ದೇವೆ. ಯುವ ವೈದ್ಯಕೀಯ ಆಕಾಂಕ್ಷಿಗಳಿಗೆ ನನ್ನ ಶುಭಾಶಯಗಳು’ ಎಂದು ಸಚಿವರು ಹೇಳಿದ್ದಾರೆ.

ಕೋವಿಡ್-19 ಸಾಂಕ್ರಾಮಿಕದ ಕಾರಣಕ್ಕೆ, ರಾಷ್ಟ್ರೀಯ ಪರೀಕ್ಷಾ ಮಂಡಳಿಯು ಪರೀಕ್ಷೆಯನ್ನು ಏಪ್ರಿಲ್‌ಗೆ ಮುಂದೂಡಿತ್ತು. ಎರಡನೇ ಅಲೆ ಆವರಿಸಿದ್ದರಿಂದ, ಆಗಸ್ಟ್ 31ಕ್ಕೂ ಮೊದಲು ಪರೀಕ್ಷೆ ನಡೆಯುವುದಿಲ್ಲ ಎಂದು ಸರ್ಕಾರ ತಿಳಿಸಿತ್ತು. ಟೆಲಿಕನ್ಸಲ್ಟೇಷನ್ ಮೊದಲಾದ ಕೋವಿಡ್ ಕರ್ತವ್ಯಗಳಿಗೆ ಅಂತಿಮ ವರ್ಷದ ವೈದ್ಯಕೀಯ ಪದವಿ ವಿದ್ಯಾರ್ಥಿಗಳನ್ನು ನಿಯೋಜಿಸಲಾಗಿತ್ತು.

ಭೂಕುಸಿತ– ಮಹಿಳೆ ಸಾವು, 9 ಮಂದಿ ಸಿಲುಕಿರುವ ಶಂಕೆ

ಧರ್ಮಶಾಲಾ (ಪಿಟಿಐ): ಇಲ್ಲಿನ ಕಾಂಗ್ರಾ ಜಿಲ್ಲೆಯ ಬೋಹ್ ಕಣಿವೆಯಲ್ಲಿ ಉಂಟಾದ ಭೂಕುಸಿತದಲ್ಲಿ ಮಹಿಳೆಯೊಬ್ಬರು ಸಾವಿಗೀಡಾಗಿದ್ದು, ಒಂಬತ್ತು ಮಂದಿ ಅವಶೇಷಗಳ ಅಡಿಯಲ್ಲಿ ಸಿಲುಕಿರುವ ಸಾಧ್ಯತೆ ಇದೆ ಎನ್ನಲಾಗಿದೆ.

‘ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ ತಂಡವು (ಎನ್‌ಡಿಆರ್‌ಎಫ್) ರಕ್ಷಣಾ ಕಾರ್ಯಾಚರಣೆ ಕೈಗೊಂಡಿದ್ದು, ಸೋಮವಾರ ನಾಲ್ಕು ಜನರನ್ನು ರಕ್ಷಿಸಿದೆ. ಅವಶೇಷಗಳ ಅಡಿಯಲ್ಲಿ ಸಿಲುಕಿರುವ ಇತರರನ್ನು ಹೊರತೆಗೆಯಲು ಪ್ರಯತ್ನಿಸಲಾಗುತ್ತಿದೆ’ ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

‘ಬೋಹ್ ಕಣಿವೆಯಲ್ಲಿ ಉಂಟಾದ ಭೂಕುಸಿತದಲ್ಲಿ ಮನೆ ಕುಸಿದು ಮಹಿಳೆಯೊಬ್ಬರು ಸಾವಿಗೀಡಾಗಿದ್ದಾರೆ. ಮನೆಯ ಅವಶೇಷಗಳಡಿ ಒಂಬತ್ತು ಮಂದಿ ಸಿಲುಕಿರುವ ಸಾಧ್ಯತೆ ಇದೆ’ ಎಂದ ಕಾಂಗ್ರಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಮುಕ್ತ್ ರಂಜನ್ ಮಾಹಿತಿ ನೀಡಿದ್ದಾರೆ.

ಬೋಹ್ ಕಣಿವೆ ಪ್ರದೇಶಕ್ಕೆ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದ ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಜೈರಾಮ್ ಠಾಕೂರ್ ಅವರು, ‘ಪ್ರವಾಹ ಮತ್ತು ಭೂಕುಸಿತದಲ್ಲಿ ಮನೆಗಳು ನಾಶವಾದವರಿಗೆ ರಾಜ್ಯ ಸರ್ಕಾರ ಹೊಸ ಮನೆಗಳನ್ನು ನಿರ್ಮಿಸಿಕೊಡಲಿದೆ’ ಎಂದು ಭರವಸೆ ನೀಡಿದರು.

ಕೋವಿಡ್: ಕನ್ವರ್ ಯಾತ್ರೆ ರದ್ದುಪಡಿಸಿದ ಉತ್ತರಾಖಂಡ ಸರ್ಕಾರ

ಡೆಹ್ರಾಡೂನ್ (ಪಿಟಿಐ): ಕೋವಿಡ್–19 ಪಿಡುಗಿನ ಸಂಭಾವ್ಯ 3ನೇ ಅಲೆಯ ಕಾರಣದಿಂದಾಗಿ ಈ ವರ್ಷದ ಕನ್ವರ್ ಯಾತ್ರೆಯನ್ನು ರದ್ದುಗೊಳಿಸಿ ಉತ್ತರಾಖಂಡ ಸರ್ಕಾರ ಮಂಗಳವಾರ ಆದೇಶಿಸಿದೆ ಎಂದು ಮೂಲಗಳು ಹೇಳಿವೆ.

‘ಕನ್ವರ್ ಯಾತ್ರೆ ನಮ್ಮ ಸನಾತನ ಸಂಸ್ಕೃತಿಯ ಭಾಗವಾಗಿದ್ದರೂ, ಕೋವಿಡ್ ಪಿಡುಗಿನ ಈ ಸಮಯದಲ್ಲಿ ಜನರ ಪ್ರಾಣ ರಕ್ಷಣೆಯೇ ಮುಖ್ಯ’ ಎಂದು ಮುಖ್ಯಮಂತ್ರಿ ಪುಷ್ಕರ್‌ಸಿಂಗ್ ಧಾಮಿ ಹೇಳಿದ್ದಾರೆ.

ಕೋವಿಡ್ ಕಾರಣದಿಂದ ಕಳೆದ ವರ್ಷವೂ ಈ ಯಾತ್ರೆಯನ್ನು ರದ್ದುಪಡಿಸಲಾಗಿತ್ತು.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಚಂದ್ರಚೂಡ್ ಪ್ರತಿಪಾದನೆ

‘ಭಯೋತ್ಪಾದನೆ ತಡೆ ಕಾಯ್ದೆ ಭಿನ್ನಮತ ದಮನಕ್ಕಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ಭಯೋತ್ಪಾದನೆ ತಡೆ ಕಾಯ್ದೆ ಅಥವಾ ಅಪರಾಧ ತಡೆಯ ಇನ್ನಾವುದೇ ಕಾನೂನನ್ನು ಬಳಸಿಕೊಂಡು ಭಿನ್ನಮತವನ್ನು ದಮನ ಮಾಡಲು ಯತ್ನಿಸಬಾರದು. ಒಂದೇ ಒಂದು ದಿನದ ಮಟ್ಟಿಗಾದರೂ ವ್ಯಕ್ತಿಯ ಸ್ವಾತಂತ್ರ್ಯವನ್ನು ಕಸಿಯುವುದು ಅತಿಯಾದ ನಡವಳಿಕೆ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹೇಳಿದ್ದಾರೆ.

ಚಂದ್ರಚೂಡ್

ಇಂತಹ ಸಂದರ್ಭಗಳಲ್ಲಿ ನ್ಯಾಯಾಲಯಗಳು ‘ರಕ್ಷಣೆಯ ಮೊದಲ ಹಂತ’ದ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಭಾರತ– ಅಮೆರಿಕ ಕಾನೂನು ಬಾಂಧವ್ಯ ಕುರಿತು ನಡೆದ ಜಂಟಿ ಬೇಸಿಗೆ ಸಮಾವೇಶದಲ್ಲಿ ಅವರು ಮಾತನಾಡಿದರು. ಪೌರರಿಗೆ ಕಿರುಕುಳ ನೀಡಲು ಮತ್ತು ಅವರ ಸ್ವಾತಂತ್ರ್ಯವನ್ನು ಕಸಿಯಲು ಯಾವ ಕಾಯ್ದೆಯೂ ಬಳಕೆ ಆಗಬಾರದು ಎಂದು ಚಂದ್ರಚೂಡ್ ಪ್ರತಿಪಾದಿಸಿದರು.

‘ಜನರ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದರ ವಿರುದ್ಧ ನ್ಯಾಯಾಲಯಗಳು ಮೊದಲ ಹಂತದ ರಕ್ಷಣೆ ಆಗಿರಬೇಕು ಎಂದು ಅರ್ನಬ್ ಗೋಸ್ವಾಮಿ ಪ್ರಕರಣದಲ್ಲಿಯೇ ಸ್ಪಷ್ಟವಾಗಿ ಹೇಳಿದ್ದೇನೆ’ ಎಂಬುದನ್ನು ಅವರು ನೆನಪಿಸಿದರು. ತಮ್ಮ ನಿರ್ಧಾರಗಳು ವ್ಯವಸ್ಥೆಯ ಮೇಲೆ ಗಾಢವಾದ ಪರಿಣಾಮ ಬೀರುತ್ತವೆ ಎಂಬುದರ ಅರಿವು ನ್ಯಾಯಾಧೀಶರಿಗೆ ಇರಬೇಕು ಎಂದೂ ಅವರು ಹೇಳಿದರು.

ಬುಡಕಟ್ಟು ಜನರಪರ ಹೋರಾಟಗಾರ, 84 ವರ್ಷ ವಯಸ್ಸಿನ ಸ್ಟ್ಯಾನ್ ಸ್ವಾಮಿ ಅವರು ಸೆರೆಯಲ್ಲಿರುವಾಗಲೇ ಮೃತಪಟ್ಟ ಬಗ್ಗೆ ಆಕ್ರೋಶ ವ್ಯಕ್ತವಾಗುತ್ತಿರುವುದರ ನಡುವೆಯೇ ಚಂದ್ರಚೂಡ್ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿರುವುದು ಮಹತ್ವ ಪಡೆದುಕೊಂಡಿದೆ. ಎಲ್ಗರ್ ಪರಿಷತ್ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿ ಸ್ಟ್ಯಾನ್ ಸ್ವಾಮಿ ಅವರನ್ನು ಭಯೋತ್ಪಾದನೆ ತಡೆ ಕಾಯ್ದೆ ಅಡಿಯಲ್ಲಿ ಬಂಧಿಸಲಾಗಿತ್ತು. ಜಾಮೀನು ಅರ್ಜಿಯು ವಿಚಾರಣೆ ಹಂತದಲ್ಲಿರುವಾಗಲೇ ಅವರು ಕಳೆದ ವಾರ ಮುಂಬೈನ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು.

ಪೌರತ್ವ ತಿದ್ದುಪಡಿ ಕಾಯ್ದೆಯ ವಿರುದ್ಧ ನಡೆದ ಪ್ರತಿಭಟನೆಯ ಸಂಬಂಧ ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆ ಅಡಿಯಲ್ಲಿ ಬಂಧನಕ್ಕೆ ಒಳಗಾಗಿದ್ದ ಅಸ್ಸಾಂನ ಹೋರಾಟಗಾರ ಮತ್ತು ಶಾಸಕ ಅಖಿಲ್ ಗೊಗೊಯಿ ಅವರು 17 ತಿಂಗಳ ಜೈಲುವಾಸದ ಬಳಿಕ ಇತ್ತೀಚೆಗಷ್ಟೇ ಬಿಡುಗಡೆ ಆಗಿದ್ದಾರೆ.

ಪ್ರತಿಭಟನೆ ಮೂಲವೇತನದಿಂದ ನಾನ್ ಪ್ರಾಕ್ಟಿಸಿಂಗ್ ಅಲೋಯನ್ಸ್ (ಎನ್‌ಪಿಎ) ಪ್ರತ್ಯೇಕಿಸುವಂತೆ 6ನೇ ವೇತನ ಆಯೋಗ ಶಿಫಾರಸು ಮಾಡಿರುವುದನ್ನು ಖಂಡಿಸಿ ವಿವಿಧ ವೈದ್ಯಕೀಯ ಹಾಗೂ ಆರೋಗ್ಯ ಸಂಘಟನೆಗಳ ಸದಸ್ಯರು ಪಂಜಾಬ್‌ನ ಅಮೃತಸರದಲ್ಲಿರುವ ಸಾರ್ವಜನಿಕ ಆಸ್ಪತ್ರೆ ಮುಂದೆ ಮಂಗಳವಾರ ಪ್ರತಿಭಟನೆ ನಡೆಸಿದರು

ಪಿಟಿಐ ಚಿತ್ರ

ಮುಖಂಡರೊಂದಿಗೆ ರಾಜ್ಯ ರಾಜಕೀಯ ಚರ್ಚೆ

ವರಿಷ್ಠರ ಭೇಟಿ ಮಾಡಿದ ಮುನಿಯಪ್ಪ, ಜಾರ್ಜ್

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಜಿ ಸಚಿವರಾದ ಕೆ.ಎಚ್. ಮುನಿಯಪ್ಪ ಹಾಗೂ ಕೆ.ಜೆ. ಜಾರ್ಜ್ ಅವರು ಮಂಗಳವಾರ ಕಾಂಗ್ರೆಸ್ ವರಿಷ್ಠರನ್ನು ಭೇಟಿ ಮಾಡಿ ಚರ್ಚಿಸಿದ್ದಾರೆ.

ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡಿದ ಮುನಿಯಪ್ಪ, ರಾಜ್ಯದಲ್ಲಿನ ಪಕ್ಷದ ಸ್ಥಿತಿಗತಿ ಕುರಿತು ವಿವರಿಸಿದ್ದಾರೆ.

ಮುಂದಿನ ಮುಖ್ಯಮಂತ್ರಿ ಚರ್ಚೆ ನಡೆಸದಂತೆ ಪಕ್ಷ ಎಚ್ಚರಿಕೆ ನೀಡಿದ್ದರೂ ಕೆಲವರು ಹೇಳಿಕೆ ನೀಡುವುದನ್ನು ಮುಂದುವರಿಸಿದ್ದಾರೆ. ಈ ಸಂಬಂಧ ಉಂಟಾಗುತ್ತಿರುವ ಗೊಂದಲವನ್ನು ನಿವಾರಿಸುವ ನಿಟ್ಟನಲ್ಲಿ ಕೂಡಲೇ ರಾಜ್ಯಕ್ಕೆ ಭೇಟಿ ನೀಡಬೇಕು ಎಂದು ಅವರು ಸುರ್ಜೇವಾಲಾ ಅವರನ್ನು ಕೋರಿದ್ದಾರೆ.

ಮೊದಲು ಎಲ್ಲರೂ ಒಗ್ಗಟ್ಟಿನಿಂದ ಚುನಾವಣೆ ಎದುರಿಸಿ ಗೆಲುವು ಸಾಧಿಸುವ ಅಗತ್ಯವಿದೆ. ನಂತರವಷ್ಟೇ ಮುಖ್ಯಮಂತ್ರಿ ಯಾರಾಗಬೇಕು ಎಂಬ ಬಗ್ಗೆ ಚಿಂತನೆ ನಡೆಸಬೇಕಿದೆ. ಹೈಕಮಾಂಡ್ ಕೈಗೊಳ್ಳುವ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರಬೇಕು ಎಂಬ ಸಂದೇಶ ರವಾನಿಸುವಂತೆ ಮನವಿ ಸಲ್ಲಿಸಿದ್ದಾಗಿ ಮುನಿಯಪ್ಪ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ನಿವಾಸಕ್ಕೆ ತೆರಳಿ ಆರೋಗ್ಯ ವಿಚಾರಿಸಿದ ಕೆ.ಜೆ. ಜಾರ್ಜ್ ಅವರು, ರಾಜಕೀಯ ಸ್ಥಿತಿಗತಿ ಕುರಿತು ಚರ್ಚಿಸಿದ್ದಾರೆ ಎಂದು ಗೊತ್ತಾಗಿದೆ.

‘ಕೋವಿಡ್ ಲಸಿಕೆ: ರಾಜ್ಯಗಳಲ್ಲಿ 1.91 ಕೋಟಿ ಡೋಸ್‌ಗಳು ಲಭ್ಯ’

ನವದೆಹಲಿ (ಪಿಟಿಐ): ‘ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ಲಸಿಕೆಯ 1.91 ಕೋಟಿಗೂ ಹೆಚ್ಚು ಡೋಸ್‌ಗಳು ಲಭ್ಯವಿವೆ’ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಂಗಳವಾರ ತಿಳಿಸಿದೆ.

‘ಈವರೆಗೆ ಕೇಂದ್ರವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಉಚಿತವಾಗಿ 39.46 ಕೋಟಿಗೂ ಹೆಚ್ಚು ಡೋಸ್‌ಗಳನ್ನು ವಿತರಿಸಿದೆ.

‘ಇದರಲ್ಲಿ ಪೋಲಾಗಿರುವ ಲಸಿಕೆ ಸೇರಿ ಒಟ್ಟು 37,55,38,390 ಡೋಸ್‌ಗಳನ್ನು ಉಪಯೋಗಿಸಲಾಗಿದೆ. ಇನ್ನೂ 1.91 ಕೋಟಿಗೂ ಹೆಚ್ಚು ಡೋಸ್‌ಗಳು ಬಾಕಿ ಉಳಿದಿವೆ ’ ಎಂದು ಸಚಿವಾಲಯ ಮಾಹಿತಿ ನೀಡಿದೆ.

ಚಿನ್ನ ಕಳ್ಳಸಾಗಣೆ: 12 ಜನ ಆರೋಪಿಗಳ ಜಾಮೀನು ರದ್ದತಿಗೆ ‘ಸುಪ್ರೀಂ’ ನಕಾರ

ನವದೆಹಲಿ (ಪಿಟಿಐ): ಚಿನ್ನ ಕಳ್ಳಸಾಗಣೆ ಪ್ರಕರಣದ 12 ಜನ ಆರೋಪಿಗಳಿಗೆ ಕೇರಳ ಹೈಕೋರ್ಟ್ ನೀಡಿರುವ ಜಾಮೀನು ರದ್ದುಗೊಳಿಸುವಂತೆ ಕೋರಿ ಎನ್‌ಐಎ ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಲು ಸುಪ್ರೀಂಕೋರ್ಟ್ ಮಂಗಳವಾರ ನಿರಾಕರಿಸಿತು.

ಅಲ್ಲದೇ, ಚಿನ್ನ ಸಾಗಣೆ ಪ್ರಕರಣಕ್ಕೆ, ಭಯೋತ್ಪಾದನೆ ನಿಗ್ರಹ ಕಾಯ್ದೆ ಯುಎಪಿಎ ಅನ್ವಯಿಸಬಹುದೇ ಎಂಬ ಬಗ್ಗೆ ಪರಿಶೀಲಿಸಲು ಸುಪ್ರೀಂಕೋರ್ಟ್ ಸಮ್ಮತಿಸಿತು.

ಮುಖ್ಯನ್ಯಾಯಮೂರ್ತಿ ಎನ್. ವಿ.ರಮಣ, ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ ಹಾಗೂ ಹೃಷಿಕೇಶ್ ರಾಯ್ ಅವರಿರುವ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

‘ಚಿನ್ನದ ಕಳ್ಳಸಾಗಣೆ ವಿರುದ್ಧ ಕ್ರಮ ಕೈಗೊಳ್ಳುವುದು ಕಸ್ಟಮ್ಸ್ ಕಾಯ್ದೆ ವ್ಯಾಪ್ತಿಗೆ ಒಳಪಡುತ್ತದೆ. ಅದು ಯುಎಪಿಎ ವ್ಯಾಪ್ತಿಗೆ ಬರುವುದಿಲ್ಲ’ ಎಂದು ಕೇರಳ ಹೈಕೋರ್ಟ್ ಕಳೆದ ಫೆಬ್ರುವರಿಯಲ್ಲಿ ನೀಡಿರುವ ಆದೇಶದಲ್ಲಿ ತಿಳಿಸಿದೆ. ಇದನ್ನು ಎನ್‌ಐಎ ಪ್ರಶ್ನಿಸಿತ್ತು.

‘ಈ ಪ್ರಕರಣದ ಆರೋಪಿಗಳೆಲ್ಲರೂ ಸರ್ಕಾರಿ ನೌಕರರು. ಹೀಗಾಗಿ ಅವರಿಗೆ ನೀಡಿರುವ ಜಾಮೀನು ಅರ್ಜಿಯ ರದ್ದತಿಯ ವಿಷಯದಲ್ಲಿ ನಾವು ಹಸ್ತಕ್ಷೇಪ ಮಾಡುವುದಿಲ್ಲ. ಆದರೆ, ಆರೋಪಿಗಳಿಗೆ ಜಾಮೀನು ನೀಡಿದ್ದರಿಂದ ಕಾನೂನು ಪ್ರಕ್ರಿಯೆಗೆ ಸಂಬಂಧಿಸಿ ಉದ್ಭವಿಸಿರುವ ಪ್ರಶ್ನೆಗಳ ಕುರಿತು ಪರಿಶೀಲನೆಗೆ ಒಪ್ಪಿಗೆ ಇದೆ’ ಎಂದು ನ್ಯಾಯಪೀಠ ತಿಳಿಸಿತು.

ಕಳೆದ ವರ್ಷ ಜುಲೈ 5ರಂದು ತಿರುವನಂತಪುರ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ₹ 14.82 ಕೋಟಿ ಮೌಲ್ಯದ 30 ಕೆ.ಜಿ ಚಿನ್ನವನ್ನು ಜಪ್ತಿ ಮಾಡಿದ್ದರು. ಈ ಪ್ರಕರಣದ ತನಿಖೆಯನ್ನು ಎನ್‌ಐಎ ನಡೆಸುತ್ತಿದೆ.

ಬಾಂಬೆ ಹೈಕೋರ್ಟ್‌ಗೆ ಸ್ಟ್ಯಾನ್ ಸ್ವಾಮಿ ವೈದ್ಯಕೀಯ ದಾಖಲೆ ಸಲ್ಲಿಸಿದ ‘ಮಹಾ’ ಸರ್ಕಾರ

ಮುಂಬೈ (ಪಿಟಿಐ): ಇಲ್ಲಿನ ಆಸ್ಪತ್ರೆಯಲ್ಲಿ ಇತ್ತೀಚೆಗೆ ಮೃತಪಟ್ಟ, ಬುಡಕಟ್ಟು ಜನರ ಹಕ್ಕುಗಳ ಪರ ಹೋರಾಟಗಾರ ಸ್ಟ್ಯಾನ್ ಸ್ವಾಮಿ ಅವರಿಗೆ ಸಂಬಂಧಿಸಿದ ವೈದ್ಯಕೀಯ ದಾಖಲೆಗಳನ್ನು ಮಹಾರಾಷ್ಟ್ರ ಸರ್ಕಾರ ಬಾಂಬೆ ಹೈಕೋರ್ಟ್‌ಗೆ ಮಂಗಳವಾರ ಸಲ್ಲಿಸಿತು.

‘ವಿಚಾರಣಾಧೀನ ಕೈದಿಯಾಗಿದ್ದ ಸ್ಟ್ಯಾನ್ ಸ್ವಾಮಿ ಅವರನ್ನು ತಲೋಜಾ ಜೈಲಿನಲ್ಲಿರಿಸಿದಾಗಿನಿಂದ ಹಿಡಿದು ಇತ್ತೀಚಿನ ದಾಖಲೆಗಳನ್ನು ಒಳಗೊಂಡ ಕ್ರೋಡೀಕೃತ ವೈದ್ಯಕೀಯ ವರದಿಯನ್ನು ರಾಜ್ಯ ಸರ್ಕಾರ ಸಲ್ಲಿಸಿದೆ’ ಎಂದು ಮಹಾರಾಷ್ಟ್ರದ ಮುಖ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಅರುಣಾ ಪೈ ಅವರು ನ್ಯಾಯಮೂರ್ತಿಗಳಾದ ಎಸ್.ಎಸ್. ಶಿಂಧೆ ಹಾಗೂ ಎನ್.ಜೆ.ಜಮಾದಾರ್ ಅವರಿರುವ ನ್ಯಾಯಪೀಠಕ್ಕೆ ತಿಳಿಸಿದರು.

ಸ್ಟ್ಯಾನ್ ಸ್ವಾಮಿ

‘ಸ್ಟ್ಯಾನ್ ಸ್ವಾಮಿ ಅವರ ಸಾವಿಗೆ ಮಹಾರಾಷ್ಟ್ರ ಜೈಲು ಅಧಿಕಾರಿಗಳು ಹಾಗೂ ಎನ್‌ಐಎ ನಿರ್ಲಕ್ಷ್ಯವೇ ಕಾರಣ. ಅವರಿಗೆ ಸಕಾಲದಲ್ಲಿ ಹಾಗೂ ಸೂಕ್ತ ಚಿಕಿತ್ಸೆ ಒದಗಿಸಲಿಲ್ಲ’ ಎಂದು ಸ್ಟ್ಯಾನ್ ಸ್ವಾಮಿ ಪರ ವಾದ ಮಂಡಿಸಿದ್ದ ಹಿರಿಯ ವಕೀಲ ಮಿಹಿರ್ ದೇಸಾಯಿ ಹೈಕೋರ್ಟ್‌ಗೆ ತಿಳಿಸಿದ್ದರು.

ಸ್ಟ್ಯಾನ್ ಸ್ವಾಮಿ ಅವರ ವೈದ್ಯಕೀಯ ವರದಿಗಳನ್ನು ಪರಿಶೀಲಿಸುವಂತೆಯೂ ವಕೀಲ ದೇಸಾಯಿ ಮನವಿ ಮಾಡಿದ್ದರು.

ಎನ್‌ಐಎ ಹಾಗೂ ಮಹಾರಾಷ್ಟ್ರದ ಜೈಲು ಅಧಿಕಾರಿಗಳ ವಿರುದ್ಧದ ಆರೋಪಗಳ ಸತ್ಯಾಸತ್ಯತೆಯನ್ನು ತಿಳಿಯುವ ಸಂಬಂಧ ಸ್ಟ್ಯಾನ್ ಸ್ವಾಮಿ ಅವರ ವೈದ್ಯಕೀಯ ದಾಖಲೆಗಳನ್ನು ಸಲ್ಲಿಸುವಂತೆ ಹೈಕೋರ್ಟ್ ಆದೇಶಿಸಿತ್ತು.

ಎಲ್ಗಾರ್ ಪರಿಷತ್– ಸಿಪಿಎಂ (ಮಾವೋವಾದಿ) ನಡುವಿನ ಸಂಪರ್ಕಕ್ಕೆ ಸಂಬಂಧಿಸಿದ ಪ್ರಕರಣದ ಆರೋಪಿಯಾಗಿದ್ದ 84 ವರ್ಷದ ಸ್ಟ್ಯಾನ್ ಸ್ವಾಮಿ ಅವರನ್ನು ಎನ್‌ಐಎ ಬಂಧಿಸಿತ್ತು. ನ್ಯಾಯಾಂಗ ಬಂಧನದಲ್ಲಿದ್ದ ಅವರು, ವೈದ್ಯಕೀಯ ಕಾರಣಗಳ ಹಿನ್ನೆಲೆಯಲ್ಲಿ ಜಾಮೀನಿಗಾಗಿ ಅರ್ಜಿ ಸಲ್ಲಿಸಿದ್ದರು. ಪಾರ್ಕಿನ್‌ಸನ್ಸ್ ಕಾಯಿಲೆಯಿಂದ ಬಳಲುತ್ತಿದ್ದ ಅವರ ಆರೋಗ್ಯ ಹದಗೆಟ್ಟಿದ್ದ ಕಾರಣ ಅವರನ್ನು ಇಲ್ಲಿನ ಪಿ.ಡಿ.ಹಿಂದುಜಾ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ನಂತರ ಅವರನ್ನು ಹೋಲಿ ಫ್ಯಾಮಿಲಿ ಆಸ್ಪತ್ರೆಗೆ ದಾಖಲಿಸಲಾಯಿತು. ಅವರಿಗೆ ಕೋವಿಡ್–19 ಕೂಡ ದೃಢಪಟ್ಟಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಅವರು ಜುಲೈ 5ರಂದು ಆಸ್ಪತ್ರೆಯಲ್ಲಿ ಮೃತಪಟ್ಟರು.

ಹೋಲಿ ಫ್ಯಾಮಿಲಿ ಆಸ್ಪತ್ರೆ ಸಹ ಅವರಿಗೆ ಸಂಬಂಧಿಸಿದ ವೈದ್ಯಕೀಯ ದಾಖಲೆಗಳನ್ನು ಸಲ್ಲಿಸಿತು.

ಕಾರ್ಡ್ ಹೊಂದಿದವರಿಗೆ ಹೊಸ ಆಧಾರ್ ಸಂಖ್ಯೆ

ಕೇಂದ್ರದ ಪ್ರತಿಕ್ರಿಯೆ ಕೇಳಿದ ದೆಹಲಿ ಹೈಕೋರ್ಟ್

ನವದೆಹಲಿ (ಪಿಟಿಐ): ಈಗಾಗಲೇ ಆಧಾರ್ ಕಾರ್ಡ್ ಹೊಂದಿರುವವರಿಗೆ ಹೊಸದಾಗಿ ಆಧಾರ್ ಸಂಖ್ಯೆ ನೀಡುವ ಪ್ರಕ್ರಿಯೆ ಹಾಗೂ ವಿಧಾನ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರ್ಕಾರ ಹಾಗೂ ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರಕ್ಕೆ (ಯುಐಡಿಎಐ) ದೆಹಲಿ ಹೈಕೋರ್ಟ್ ಮಂಗಳವಾರ ನೋಟಿಸ್ ನೀಡಿತು.

ವರ್ತಕ ರಾಜನ್ ಅರೋರಾ ಎಂಬುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ರೇಖಾ ಪಲ್ಲಿ ಅವರು ಈ ನೋಟಿಸ್ ಜಾರಿಗೊಳಿಸಿದರು.

‘ಆಧಾರ್ ಸಂಖ್ಯೆ ಹಾಗೂ ನೋಂದಣಿ ಸಮಯದಲ್ಲಿ ನೀಡಲಾಗಿದ್ದ ನನ್ನ ವೈಯಕ್ತಿಕ ವಿವರಗಳನ್ನು ಸೋರಿಕೆ ಮಾಡಲಾಗಿದೆ. ಇದರಿಂದ ನನ್ನ ವ್ಯವಹಾರಕ್ಕೆ ತೊಂದರೆಯಾಗುತ್ತಿದೆ’ ಎಂದು ದೂರಿ ಅರೋರಾ ಅವರು ಅರ್ಜಿ ಸಲ್ಲಿಸಿದ್ದರು.

‘ಅರೋರಾ ಅವರಿಗೆ ಹೊಸದಾಗಿ ಆಧಾರ್ ಸಂಖ್ಯೆಯನ್ನು ನೀಡಬೇಕು. ವೈಯಕ್ತಿಕ ವಿವರಗಳ ಸೋರಿಕೆ ತಡೆಗಟ್ಟಲು ಹಾಗೂ ಮೂಲಭೂತ ಹಕ್ಕಾಗಿರುವ ಖಾಸಗಿತನದ ರಕ್ಷಣೆಗೂ ಕ್ರಮ ಕೈಗೊಳ್ಳುವಂತೆ ಯುಐಡಿಎಐಗೆ ನಿರ್ದೇಶನ ನೀಡಬೇಕು‘ ಎಂದು ಅರ್ಜಿದಾರರ ಪರ ವಕೀಲರು ಕೋರಿದ್ದರು.

‘ಹೊಸ ಆಧಾರ್ ಸಂಖ್ಯೆ ನೀಡಲು ಆಧಾರ್ ಕಾಯ್ದೆಯಡಿ ಅವಕಾಶ ಇದೆ. ಆದರೂ, ಪ್ರಾಧಿಕಾರ ನೀಡಲು ಮುಂದಾಗುತ್ತಿಲ್ಲ’ ಎಂದೂ ಅರ್ಜಿದಾರರು ವಿವರಿಸಿದ್ದರು.

ಯುಐಡಿಎಐ ಪರ ವಕೀಲ ಝೋಹೆಬ್ ಹುಸೇನ್, ‘ಆಧಾರ್ ಸಂಖ್ಯೆಯನ್ನು ನೀಡಿದ ತಕ್ಷಣ, ವ್ಯಕ್ತಿಗೆ ಸಂಬಂಧಿಸಿದ ವಿವರಗಳು ಹಾಗೂ ಆ ಸಂಖ್ಯೆ ಜೀವಿತಾವಧಿಗೆ ಲಾಕ್ ಆಗಿರುತ್ತವೆ’ ಎಂದು ಹೈಕೋರ್ಟ್‌ಗೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಹೈಕೋರ್ಟ್, ‘ಹಾಗಿದ್ದರೆ, ಈಗಾಗಲೇ ಕಾರ್ಡು ಹೊಂದಿರುವವರಿಗೆ ಹೊಸದಾಗಿ ಆಧಾರ್ ಸಂಖ್ಯೆ ನೀಡಲು ಯುಐಡಿಎಐ ಕಾಯ್ದೆಯ ಸೆಕ್ಷನ್ 23 (ಎನ್) ಅಡಿ ಪ್ರಾಧಿಕಾರಕ್ಕೆ ಅಧಿಕಾರವನ್ನೇ ನೀಡುತ್ತಿರಲಿಲ್ಲ’ ಎಂದು ಅಭಿಪ್ರಾಯಪಟ್ಟಿತು.

‘ನಿಯಮಗಳ ಪಾಲನೆಯಾಗಲೇಬೇಕು. ನಿಯಮಗಳನ್ನು ಮನಬಂದಂತೆ ಬದಲಾಯಿಸಲು ಸಾಧ್ಯವಿಲ್ಲ. ಕಾಯ್ದೆಯಲ್ಲಿ ಉಲ್ಲೇಖಿಸಿದ ರೀತಿಯಲ್ಲಿಯೇ ಅದನ್ನು ಜಾರಿಗೊಳಿಸಬೇಕು’ ಎಂದೂ ಹೇಳಿತು.

‘ಅಲ್ಲದೇ, ಕಾರ್ಡ್‌ದಾರರ ಇಚ್ಛೆ ಅಥವಾ ಖುಷಿಗಾಗಿ ಆಧಾರ್ ಸಂಖ್ಯೆ ಬದಲಾಯಿಸಬಾರದು ಎಂಬುದೂ ಸರಿ’ ಎಂದು ಅಭಿಪ್ರಾಯಪಟ್ಟ ನ್ಯಾಯಮೂರ್ತಿ ರೇಖಾ ಪಲ್ಲಿ, ವಿಚಾರಣೆಯನ್ನು ಸೆಪ್ಟೆಂಬರ್ 9ಕ್ಕೆ ಮುಂದೂಡಿದರು.

‘ಜುಲೈ 4ರಿಂದಲೇ ಶುರುವಾಗಿದೆ 3ನೇ ಅಲೆ’

ಹೈದರಾಬಾದ್ (ಪಿಟಿಐ): ಕೋವಿಡ್–19ರ ಮೂರನೇ ಅಲೆಯು ಜುಲೈ 4ರಂದೇ ಆರಂಭವಾಗಿರಬಹುದು ಎಂದು ಹೈದರಾಬಾದ್‌ನ ಹಿರಿಯ ವಿಜ್ಞಾನಿ ಡಾ.ವಿಪಿನ್ ಶ್ರೀವಾತ್ಸವ ಹೇಳಿದ್ದಾರೆ.

ಕಳೆದ 463 ದಿನಗಳಲ್ಲಿ ವರದಿಯಾದ ಕೋವಿಡ್ ಪ್ರಕರಣಗಳು ಹಾಗೂ ಸಾವಿನ ಸಂಖ್ಯೆಯನ್ನು ವಿಶ್ಲೇಷಿಸಿರುವ ಅವರು, ಈ ವರ್ಷದ ಫೆಬ್ರುವರಿ ಮೊದಲ ವಾರದ ಕೊನೆಯಲ್ಲಿ ಅಂದರೆ ಎರಡನೇ ಅಲೆ ಆರಂಭದ ಸ್ಥಿತಿಯೇ ಜುಲೈ 4ರ ಸಂದರ್ಭದಲ್ಲೂ ಗೋಚರಿಸಿದ್ದನ್ನು ಪ್ರಸ್ತಾಪಿಸಿದ್ದಾರೆ.

ಆ ಸಂದರ್ಭದಲ್ಲಿ ಕೋವಿಡ್ ಸಂಕಟ ಮುಗಿದು ಹೋಯಿತು ಎಂದೇ ಭಾವಿಸಲಾಗಿತ್ತು. ಆದರೆ, ಅದು ಎರಡನೇ ಅಲೆಯ ಆರಂಭವಾಗಿತ್ತು ಎಂದಿರುವ ಅವರು, ಇದೀಗ ಅಂಥದೇ ವರ್ತನೆ ಕಾಣಿಸಿಕೊಂಡ ಜುಲೈ 4ರಂದು ಮೂರನೇ ಅಲೆ ಆರಂಭವಾಗಿರುವ ಸೂಚನೆಯನ್ನು ನೀಡಿದ್ದಾರೆ.

ಸಾರ್ವಜನಿಕರು ಹಾಗೂ ಸರ್ಕಾರ ಈ ಬಗ್ಗೆ ತೀವ್ರ ಎಚ್ಚರಿಕೆ ವಹಿಸಬೇಕಿದ್ದು, ಹೊಸ ಅಲೆಯನ್ನು ಹೆಚ್ಚು ಜಾಗ್ರತೆಯಿಂದ ಎದುರಿಸಬೇಕಿದೆ ಎಂದು ಸಲಹೆ ನೀಡಿದ್ದಾರೆ.

ದೇಶದ 50 ನಗರಗಳಲ್ಲಿ ಸ್ಪುಟ್ನಿಕ್–ವಿ ಲಸಿಕಾ ಕಾರ್ಯಕ್ರಮ ವಿಸ್ತರಣೆ: ಡಾ.ರೆಡ್ಡೀಸ್ ಲ್ಯಾಬ್

ಹೈದರಾಬಾದ್ (ಪಿಟಿಐ): ‘ಹೈದರಾಬಾದ್‌ನಲ್ಲಿ ಮೇ 14ರಂದು ಆರಂಭಗೊಂಡ ‘ಸ್ಪುಟ್ನಿಕ್–ವಿ’ ಲಸಿಕಾ ಕಾರ್ಯಕ್ರಮದ ಪ್ರಾಯೋಗಿಕ ಯೋಜನೆಯನ್ನು ದೇಶದ 50 ನಗರಗಳಲ್ಲಿ ವಿಸ್ತರಿಸಲಾಗಿದೆ’ ಎಂದು ಡಾ.ರೆಡ್ಡೀಸ್ ಲ್ಯಾಬೊರೇಟರೀಸ್ ಲಿಮಿಟೆಡ್ ಹೇಳಿದೆ.

‘ಮುಂಬರುವ ವಾರಗಳಲ್ಲಿ ಸ್ಪುಟ್ನಿಕ್–ವಿ ಲಸಿಕೆಯ ವಾಣಿಜ್ಯ ವಹಿವಾಟನ್ನು ಇನ್ನಷ್ಟು ಬಲಿಷ್ಠಗೊಳಿಸಲಾಗುವುದು’ ಎಂದು ರೆಡ್ಡೀಸ್ ಲ್ಯಾಬ್ ಸೋಮವಾರ ರಾತ್ರಿ ಟ್ವೀಟ್ ಮಾಡಿದೆ.

‘ಹೈದರಾಬಾದ್‌ನಲ್ಲಿ ಆರಂಭಗೊಂಡ ಸ್ಪುಟ್ನಿಕ್–ವಿ ಲಸಿಕಾ ಕಾರ್ಯಕ್ರಮವು ಇದೀಗ ದೇಶದ ಹಲವು ನಗರಗಳಿಗೆ ವಿಸ್ತರಿಸಿದೆ. ಹೈದರಾಬಾದ್‌ಗೆ ಸೀಮಿತವಾಗಿರದೇ ವಿಶಾಖಪಟ್ಟಣ, ಬೆಂಗಳೂರು, ಮುಂಬೈ, ನವೀ ಮುಂಬೈ, ಕೋಲ್ಕತ್ತ, ದೆಹಲಿ, ಚೆನ್ನೈ, ವಿಜಯವಾಡ, ಬಡ್ಡಿ, ಕೊಲ್ಹಾಪುರ, ಕೊಚ್ಚಿ, ರಾಯಪುರ, ಚಂಡೀಗಡ, ಪುಣೆ, ನಾಗಪುರ, ನಾಸಿಕ್ ಸೇರಿದಂತೆ ಹಲವು ನಗರಗಳಲ್ಲಿ ಸ್ಪುಟ್ನಿಕ್ ವಿ ಲಸಿಕಾ ಕಾರ್ಯಕ್ರಮ ಚಾಲನೆಯಲ್ಲಿದೆ’ ಎಂದು ಸಂಸ್ಥೆ ತಿಳಿಸಿದೆ.

‘ಇತ್ತೀಚೆಗೆ ರಷ್ಯಾದಿಂದ ಸ್ಪುಟ್ನಿಕ್–ವಿ ಲಸಿಕೆಯ 30 ಲಕ್ಷ ಡೋಸ್‌ಗಳನ್ನು ರೆಡ್ಡೀಸ್ ಲ್ಯಾಬೊರೇಟರೀಸ್ ಪಡೆದಿದೆ. ಇದನ್ನು 12.5 ಕೋಟಿ ಜನರಿಗೆ ವಿತರಿಸಲಾಗುವುದು. ಇದಕ್ಕಾಗಿ ದೇಶದ ಪ್ರಮುಖ ಆಸ್ಪತ್ರೆಗಳೊಂದಿಗೆ ನಾವು ಕೈಜೋಡಿಸಿದ್ದೇವೆ’ ಎಂದು ಸಂಸ್ಥೆ ಹೇಳಿದೆ.

ಗಮಲೇಯ ನ್ಯಾಷನಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಆಫ್ ಎಪಿಡೆಮಿಯಾಲಜಿ ಆ್ಯಂಡ್ ಮೈಕ್ರೋಬಯಾಲಜಿ ಅಭಿವೃದ್ಧಿ ಪಡಿಸಿರುವ ಸ್ಪುಟ್ನಿಕ್–ವಿ ಲಸಿಕೆಯ ನಿರ್ಬಂಧಿತ ತುರ್ತು ಬಳಕೆಗೆ ಭಾರತೀಯ ಔಷಧ ನಿಯಂತ್ರಕರು ಅನುಮತಿ ನೀಡಿದ್ದಾರೆ.

ಸೀರಂನಿಂದ ಸ್ಪುಟ್ನಿಕ್ ಲಸಿಕೆ ತಯಾರಿ ಸೆಪ್ಟೆಂಬರ್‌ನಲ್ಲಿ ಶುರು

ಮಾಸ್ಕೊ (ಪಿಟಿಐ): ಭಾರತದಲ್ಲಿ ಸ್ಪುಟ್ನಿಕ್–ವಿ ಲಸಿಕೆಯ ತಯಾರಿಕೆಯನ್ನು ಸೆಪ್ಟೆಂಬರ್‌ನಿಂದ ಆರಂಭಿಸುವುದಾಗಿ ರಷ್ಯಾದ ನೇರ ಹೂಡಿಕೆ ನಿಧಿ (ಆರ್‌ಡಿಐಎಫ್) ಹಾಗೂ ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ಮಂಗಳವಾರ ಪ್ರಕಟಿಸಿವೆ.

ಭಾರತದಲ್ಲಿ ಪ್ರತಿ ವರ್ಷ ಲಸಿಕೆಯ 30 ಕೋಟಿಗೂ ಹೆಚ್ಚು ಡೋಸ್‌ಗಳನ್ನು ತಯಾರಿಸುವ ಯೋಜನೆ ಇದ್ದು, ಮೊದಲ ಬ್ಯಾಚ್‌ನಲ್ಲಿ ತಯಾರಿಸುವ ಲಸಿಕೆಯನ್ನು ಭಾರತದ ಅಗತ್ಯಕ್ಕೆ ತೆಗೆದಿರಿಸಲಾಗುವುದು ಎಂದು ಆರ್‌ಡಿಐಎಫ್‌ನ ಸಿಇಒ ಕಿರಿಲ್ ಡಿಮಿಟ್ರವ್ ತಿಳಿಸಿದ್ದಾರೆ.

ಭಾರತದ ಅಗತ್ಯವನ್ನು ಪೂರೈಸಿದ ಮೇಲೆ ತೃತೀಯ ರಾಷ್ಟ್ರಗಳಿಗೆ ಒಂದಿಷ್ಟು ಡೋಸ್ ರಫ್ತು ಮಾಡುವ ಸಾಧ್ಯತೆ ಬಗ್ಗೆ ಭಾರತ ಸರ್ಕಾರದೊಂದಿಗೆ ಮಾತುಕತೆ ನಡೆದಿರುವುದಾಗಿ ಅವರು ಹೇಳಿದ್ದಾರೆ.

ಮುಂಬರುವ ತಿಂಗಳಲ್ಲಿ ಸ್ಪುಟ್ನಿಕ್ ವಿ ಲಸಿಕೆಯ ತಯಾರಿಕೆ ಆರಂಭ ಆಗಲಿದ್ದು, ಪ್ರಾಯೋಗಿಕ ಲಸಿಕೆ ಸೆಪ್ಟೆಂಬರ್‌ನಲ್ಲಿ ಲಭ್ಯವಾಗಲಿದೆ ಎಂದು ಸೀರಂನ ಸಿಇಒ ಅದಾರ್ ಪೂನಾವಾಲಾ ತಿಳಿಸಿದ್ದಾರೆ.

ಕೇರಳ: ಮತ್ತೆ 4 ಝೀಕಾ ವೈರಸ್ ಪ್ರಕರಣ ಪತ್ತೆ

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಮಹಿಳೆ ಸೇರಿದಂತೆ ಮೂವರಿಗೆ ಝೀಕಾ ವೈರಸ್ ಸೋಂಕು ತಗಲಿರುವುದು ಮಂಗಳವಾರ ದೃಢಪಟ್ಟಿದ್ದು, ಇದರಿಂದ ರಾಜ್ಯದಲ್ಲಿ ಒಟ್ಟಾರೆ ಸೋಂಕಿತರ ಸಂಖ್ಯೆ 23ಕ್ಕೆ ಏರಿದೆ.



ಪುಂಥುರಾದ 35 ವರ್ಷದ ಪುರುಷ ಹಾಗೂ ಸಪ್ತಮಂಗಲಂನ 41 ವರ್ಷದ ಮಹಿಳೆಗೆ ಝೀಕಾ ವೈರಸ್ ಸೋಂಕು ತಗುಲಿರುವುದು ದೃಢಪಟ್ಟಿದೆ. ತಿರುವನಂತಪುರದ 16 ವರ್ಷದ ಬಾಲಕಿಗೆ ಮತ್ತು ಕೊಯಮತ್ತೂರು ಮೂಲದ ವೈದ್ಯರೊಬ್ಬರಿಗೆ ಸೋಂಕು ತಗುಲಿದೆ.

‘ರಾಜ್ಯದಲ್ಲಿ ಝೀಕಾ ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವುದರಿಂದ ಜನರು ಎಚ್ಚರಿಕೆ ವಹಿಸಬೇಕು’ ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ಹೇಳಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆ ಹೇಳಿಕೆ

ವಿಶ್ವದ 104 ರಾಷ್ಟ್ರಗಳಲ್ಲಿ ಡೆಲ್ಟಾ ತಳಿ

ವಿಶ್ವಸಂಸ್ಥೆ/ ಜಿನೀವಾ (ಪಿಟಿಐ): ’ವಿಶ್ವದಾದ್ಯಂತ ವೇಗವಾಗಿ ಸೋಂಕು ಹರಡುತ್ತಾ, ಸಾವಿನ ಪ್ರಮಾಣ ಹೆಚ್ಚಳಕ್ಕೂ ಕಾರಣವಾಗಿರುವ ’ಕೋವಿಡ್–19’ ಡೆಲ್ಟಾ ರೂಪಾಂತರ ತಳಿಯು ಪ್ರಸ್ತುತ 104 ರಾಷ್ಟ್ರಗಳಲ್ಲಿ ವಿಸ್ತರಿಸಿದ್ದು, ಶೀಘ್ರದಲ್ಲೇ ಇದೊಂದು ಪ್ರಬಲ ರೂಪಾಂತರ ತಳಿಯಾಗಿ, ವಿಶ್ವವನ್ನೇ ಕಾಡುವ ಸಾಧ್ಯತೆ ಇದೆ’ ಎಂದು ವಿಶ್ವ ಆರೋಗ್ಯ ಸಂಸ್ಥೆ ಮುಖ್ಯಸ್ಥ ಟೆಡ್ರೊಸ್ ಗೆಬ್ರೆಷಿಯಸ್ ಎಚ್ಚರಿಸಿದ್ದಾರೆ.

’ನಾಲ್ಕು ವಾರಗಳಿಂದ ವಿಶ್ವದಾದ್ಯಂತ ಕೊರೊನಾ ಸೋಂಕಿನ ಪ್ರಕರಣಗಳು ನಿರಂತರವಾಗಿ ಏರಿಕೆಯಾಗುತ್ತಿವೆ. ವಿಶ್ವ ಆರೋಗ್ಯ ಸಂಸ್ಥೆ ವ್ಯಾಪ್ತಿಯಲ್ಲಿರುವ ಆರು ವಲಯಗಳ ಪೈಕಿ, ಒಂದು ವಲಯದಲ್ಲಿ ಸೋಂಕಿನ ಪ್ರಮಾಣ ತೀವ್ರವಾಗಿದೆ’ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದ ಅವರು, ’ಸೋಂಕು ಇಳಿಕೆಯಾಗಿ 10 ವಾರಗಳ ನಂತರ, ಮತ್ತೆ ಸೋಂಕಿನಿಂದ ಸಾವಿನ ಸಂಖ್ಯೆ ಹೆಚ್ಚಾಗುತ್ತಿದೆ’ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಟೆಡ್ರೊಸ್ ಗೆಬ್ರೆಷಿಯಸ್

’ಡೆಲ್ಟಾ ರೂಪಾಂತರ ಸೋಂಕಿನಿಂದ, ಸಾರ್ವಜನಿಕ ಆರೋಗ್ಯ ಪರಿಸ್ಥಿತಿ ತೀರಾ ಹದಗೆಡುತ್ತಿದೆ. ಜನರ ಜೀವ, ಜೀವನೋಪಾಯ ಮತ್ತು ಜಾಗತಿಕ ಆರ್ಥಿಕ ಚೇತರಿಕೆ ಮೇಲೂ ಪರಿಣಾಮಮ ಉಂಟಾಗುತ್ತಿದೆ. ಕಡಿಮೆ ಪ್ರಮಾಣದಲ್ಲಿ ಕೋವಿಡ್ ಲಸಿಕೆ ನೀಡಿರುವ ರಾಷ್ಟ್ರಗಳಲ್ಲಿ ಆರೋಗ್ಯ ಪರಿಸ್ಥಿತಿ ಇನ್ನೂ ಭೀಕರವಾಗಿದೆ. ಆದರೆ, ಯಾವ ದೇಶದಲ್ಲೂ ಸಾಂಕ್ರಾಮಿಕ ರೋಗ ಪರಿಪೂರ್ಣವಾಗಿ ನಿವಾರಣೆಯಾಗಿಲ್ಲ’ ಎಂದು ಹೇಳಿದ ಅವರು, ’ಈ ಸಾಂಕ್ರಾಮಿಕವನ್ನು ಸಂಪೂರ್ಣವಾಗಿ ತೊಡೆದು ಹಾಕಲು ಇಡೀ ವಿಶ್ವವೇ ಒಟ್ಟಾಗಿ ಹೋರಾಟ ಮಾಡಬೇಕು’ ಎಂದು ತಿಳಿಸಿದರು.

ಡೆಲ್ಟಾ ರೂಪಾಂತರ ಸೋಂಕು ಹರಡುತ್ತಿದ್ದರೂ, ಎಲ್ಲ ಕಡೆಯೂ ಒಂದೇ ರೀತಿಯಲ್ಲಿ ದಾಳಿ ಮಾಡುತ್ತಿಲ್ಲ ಎಂದು ಹೇಳಿದ ಟೆಡ್ರೊಸ್, ’ನಾವೀಗ ಎರಡು ಸಾಂಕ್ರಾಮಿಕಗಳ ನಡುವೆ ಜೀವನ ನಡೆಸುತ್ತಿದ್ದೇವೆ. ಇವೆರಡರ ನಡುವೆ ಎಚ್ಚರಿಕೆಯಿಂದ ಹೆಜ್ಜೆ ಹಾಕಬೇಕಿದೆ ಎಂದು ಅವರು ಸಲಹೆ ನೀಡಿದರು.

ಕಡಿಮೆ ಪ್ರಮಾಣದಲ್ಲಿ ಕೋವಿಡ್ ಲಸಿಕೆ ನೀಡಿರುವ ರಾಷ್ಟ್ರಗಳಲ್ಲಿ ಪರಿಸ್ಥಿತಿ ತೀರ ಕೆಟ್ಟದಾಗಿದೆ ಎಂದು ಎಚ್ಚರಿಕೆ ನೀಡಿದ ಟೆಡ್ರೊಸ್ ಗೆಬ್ರೆಷಿಯಸ್ ಅವರು, ’ಡೆಲ್ಟಾ ಸೇರಿದಂತೆ ಹೆಚ್ಚು ವೇಗವಾಗಿ ಸೋಂಕು ಹರಡಬಲ್ಲ ರೂಪಾಂತರಿತ ತಳಿಗಳು ಅಷ್ಟೇ ವೇಗವಾಗಿ ಸೋಂಕಿನ ಪ್ರಮಾಣವನ್ನು ಹೆಚ್ಚಿಸುತ್ತವೆ. ಹೆಚ್ಚಿನ ಸಂಖ್ಯೆಯಲ್ಲಿ ಆಸ್ಪತ್ರೆಗೆ ದಾಖಲಾಗುವಂತೆ ಮಾಡುತ್ತವೆ. ಸಾವಿನ ಪ್ರಮಾಣ ಏರಿಕೆಗೂ ಕಾರಣವಾಗುತ್ತವೆ’ ಎಂದು ಹೇಳಿದ್ದಾರೆ.

‘ಲಸಿಕೆ: ಜುಲೈ ಗುರಿ ತಲುಪುವ ಸಾಧ್ಯತೆ ಕಡಿಮೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಆರೋಗ್ಯ ಸಚಿವಾಲಯ ಜುಲೈನಲ್ಲಿ ಕೋವಿಡ್ ಲಸಿಕೆಯ 51.6 ಕೋಟಿ ಡೋಸ್‌ಗಳನ್ನು ನೀಡುವ ಗುರಿಯನ್ನು ತಲುಪುವ ಸಾಧ್ಯತೆಗಳಿಲ್ಲಎಂದು ಮೂಲಗಳು ಹೇಳಿವೆ.

ಈಗಾಗಲೇ ರೂಪಿಸಿರುವ ಯೋಜನೆ ಪ್ರಕಾರ, ಲಸಿಕೆಯ 13 ಕೋಟಿ ಡೋಸ್‌ಗಳನ್ನು ಪೂರೈಕೆ ಮಾಡಬೇಕಿದೆ. ಇಷ್ಟೊಂದು ಪ್ರಮಾಣದ ಡೋಸ್‌ಗಳನ್ನು ಮುಂದಿನ 18 ದಿನಗಳಲ್ಲಿ ಪೂರೈಕೆ ಮಾಡಬೇಕಿದೆ. ಹೀಗಾಗಿ ಜುಲೈ ತಿಂಗಳಿನ ನಿಗದಿತ ಗುರಿಯನ್ನು ಮುಟ್ಟುವ ಸಾಧ್ಯತೆಗಳು ಕ್ಷೀಣಿಸಿವೆ ಎಂದು ಇವೇ ಮೂಲಗಳು ಹೇಳಿವೆ.

‘18 ದಿನಗಳಲ್ಲಿ ಇಷ್ಟೊಂದು ಪ್ರಮಾಣದ ಡೋಸ್‌ಗಳಷ್ಟು ಲಸಿಕೆ ನೀಡಬೇಕು ಎಂದರೆ, ಪ್ರತಿ ದಿನ 70 ಲಕ್ಷಕ್ಕೂ ಅಧಿಕ ಡೋಸ್‌ಗಳ ಅಗತ್ಯವಿದೆ. ಆದರೆ,ಈಗ ಪ್ರತಿದಿನ 40 ಲಕ್ಷಕ್ಕಿಂತ ಕಡಿಮೆ ಡೋಸ್‌ಗಳಷ್ಟು ಲಸಿಕೆಯನ್ನು ನೀಡಲಾಗುತ್ತಿದೆ’ ಎಂದು ಮೂಲಗಳು ಹೇಳಿವೆ.

‘ಲಸಿಕೆಯ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ವಿಶ್ವದ ಅನೇಕ ರಾಷ್ಟ್ರಗಳಿಗೆ ಲಸಿಕೆಯನ್ನು ಪೂರೈಕೆ ಮಾಡುವ ರಾಷ್ಟ್ರವಾದ ಭಾರತವೇ ಈಗ ದೇಶೀಯ ಲಸಿಕೆ ಬೇಡಿಕೆಯನ್ನು ಪೂರೈಸಲು ಹೆಣಗಾಡಬೇಕಾಗಿರುವುದು ದುರದೃಷ್ಟಕರ’ ಎಂದು ಜಾರ್ಜ್ ಇನ್‌ಸ್ಟಿಟ್ಯೂಟ್ ಫಾರ್ ಗ್ಲೋಬಲ್ ಹೆಲ್ತ್‌ನಲ್ಲಿ ಹಿರಿಯ ಸಂಶೋಧಕರಾಗಿರುವ ಉಮ್ಮೆನ್ ಜಾನ್ ಹೇಳಿದರು.

ಪುಣೆ ಮೂಲದ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದಲ್ಲಿ ಜುಲೈ ಮತ್ತು ಆಗಸ್ಟ್‌ನಲ್ಲಿ ಕೋವಿಶೀಲ್ಡ್ ಲಸಿಕೆಯ 10 ಕೋಟಿ ಡೋಸ್‌ಗಳನ್ನು ಉತ್ಪಾದಿಸಲಾಗುತ್ತದೆ ಎಂದು ಮೂಲಗಳು ಹೇಳುತ್ತವೆ.

ಆದರೆ, ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಹಾಗೂ ಭಾರತ್ ಬಯೋಟೆಕ್ ಕಂಪನಿಗಳು ತಮ್ಮ ಒಟ್ಟು ಉತ್ಪಾದನಾ ಸಾಮರ್ಥ್ಯಕ್ಕಿಂತ ಶೇ 30 ರಷ್ಟು ಡೋಸ್‌ಗಳನ್ನು ಈ ವರ್ಷದ ಮೊದಲ ಐದು ತಿಂಗಳ ಅವಧಿಯಲ್ಲಿ ಪೂರೈಸಿವೆ. ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಈ ಮಾಹಿತಿಯನ್ನು ಉಲ್ಲೇಖಿಸಲಾಗಿದೆ.





ನೋಟಿಫಿಕೇಶನ್ ಅನಿರೀಕ್ಷಿತ ಅತಿಥಿ

ಕೃಷ್ಣ ಭಟ್

ನೀವು ನಿಮ್ಮ ಗ್ರಾಹಕರ ಜೊತೆಗೆ ಮಾತನಾಡುತ್ತಿದ್ದೀರಿ. ಪಕ್ಕದಲ್ಲೇ ಗ್ರಾಹಕರ ಕಣ್ಣಳತೆಯಲ್ಲೇ ನಿಮ್ಮ ಸ್ಮಾರ್ಟ್‌ಫೋನ್ ಟೇಬಲ್ ಮೇಲೆ ಇದೆ. ಏನೋ ಮಾತನಾಡುತ್ತಿರುವಾಗಲೇ ಒಂದು ವಾಟ್ಸ್‌ಆ್ಯಪ್ ಮೆಸೇಜ್ ನಿಮ್ಮ ಸ್ನೇಹಿತನಿಂದ ಬಂದಿದೆ. ವಾಟ್ಸ್‌ಆ್ಯಪ್‌ನಲ್ಲಿ ನಿಮಗೆ ಮೆಸೇಜ್ ಕಳಿಸಿದ ಸ್ನೇಹಿತ ಅತ್ಯಂತ ಆತ್ಮೀಯ. ಬೈಗುಳದಿಂದಲೇ ಮಾತು ಶುರು ಮಾಡುವವ. ಅವನು ಕಳಿಸಿದ ಮೊದಲ ಶಬ್ದವೇ ಶುದ್ಧ ಬೈಗುಳ! ನೋಟಿಫಿಕೇಶನ್ ಬರುತ್ತಿದ್ದಂತೆಯೇ ಸ್ಮಾರ್ಟ್‌ಫೋನ್ ಒಮ್ಮೆ ಬೆಳಗುತ್ತದೆ. ನೋಟಿಫಿಕೇಶನ್ ತೋರಿಸಿ ನಾಲ್ಕೈದು ಸೆಕೆಂಡುಗಳಲ್ಲಿ ಮೌನವಾಗುತ್ತದೆ. ಆದರೆ, ಒಂದು ಶಬ್ದ ಓದಲು ಒಂದು ಸೆಕೆಂಡ್ ಸಾಕು. ನಿಮ್ಮ ಗ್ರಾಹಕರು ಅದನ್ನು ಓದಿದರೆ ನಿಮಗೆ ಮುಜುಗರ!

ಈ ನೋಟಿಫಿಕೇಶನ್ ಎಂಬುದು ಎರಡು ಅಲಗಿನ ಕತ್ತಿ. ಅದರಲ್ಲಿ ಬೇಕಾದ್ದೂ ಇರುತ್ತದೆ, ಬೇಡವಾದದ್ದೂ ಇರುತ್ತದೆ. ಅವೆರಡನ್ನೂ ಸರಿಯಾಗಿ ನಿಭಾಯಿಸಬೇಕಾದ್ದು ಅತ್ಯಂತ ಮುಖ್ಯ.

ನೋಟಿಫಿಕೇಶನ್‌ಗಳಲ್ಲಿ ಹಲವು ರೀತಿಯವು ಇರುತ್ತವೆ. ಅವುಗಳ ಮೂಲವೂ ಒಂದೊಂದಾಗಿರುತ್ತವೆ. ಒಂದೊಂದು ಆ್ಯಪ್‌ಗಳಲ್ಲೂ ಒಂದೊಂದು ವಿಧದ ನೋಟಿಫಿಕೇಶನ್‌ಗಳು ಬರುತ್ತವೆ. ನಮ್ಮ ನಮ್ಮ ಅಗತ್ಯಕ್ಕೆ ಅವುಗಳಿಗೆ ಅನುಮತಿ ನೀಡಬೇಕು. ಹೀಗೆ ಅನುಮತಿ ನೀಡುವಾಗ ಆ್ಯಪ್‌ಗಳ ಉದ್ದೇಶವೇನು ಎನ್ನುವುದು ಅತ್ಯಂತ ಮುಖ್ಯ.

ಕೆಲವು ಸುದ್ದಿ ಆ್ಯಪ್‌ಗಳಂತೂ ಸಣ್ಣ ಸಣ್ಣ ಸುದ್ದಿಗಳಿಗೂ ಪುಶ್ ನೋಟಿಫಿಕೇಶನ್‌ಗಳನ್ನು ಕಳುಹಿಸುತ್ತವೆ. ಇನ್ನೂ ಕೆಲವು ಆ್ಯಪ್‌ಗಳು ಬೇಕು ಬೇಡದ್ದಕ್ಕೆಲ್ಲ ಪುಶ್ ನೋಟಿಫಿಕೇಶನ್ ಕಳುಹಿಸುತ್ತವೆ. ಅವುಗಳೆಲ್ಲದರ ಮಧ್ಯೆ ನಿಜಕ್ಕೂ ಬೇಕಿರುವ, ಗಮನಿಸಬೇಕಿರುವ ಸುದ್ದಿಯೋ, ಮಾಹಿತಿಯೋ ಕಣ್ಮರೆಯಾಗುತ್ತದೆ. ಇಲ್ಲವಾದರೆ, ಈ ಎಲ್ಲ ಆ್ಯಪ್ ನೋಟಿಫಿಕೇಶನ್ ಎಂಬ ಸಮುದ್ರದಲ್ಲಿ ಒಳ್ಳೆಯದು ಬೇಡದ್ದನ್ನೆಲ್ಲ ಪ್ರತ್ಯೇಕಿಸಲಾಗದೆ ಎಲ್ಲವನ್ನೂ ಒಟ್ಟಿಗೆ ಕ್ಲಿಯರ್ ಮಾಡಿ ಕುಳಿತುಬಿಡುತ್ತೇವೆ.

> ನೋಟಿಫಿಕೇಶನ್ ಎಂಬುದು ಎರಡು ಅಲಗಿನ ಕತ್ತಿ. ಅದರಲ್ಲಿ ಬೇಕಾದ್ದೂ ಇರುತ್ತದೆ, ಬೇಡವಾದದ್ದೂ ಇರುತ್ತದೆ. ಅವೆರಡನ್ನೂ ಸರಿಯಾಗಿ ನಿಭಾಯಿಸಬೇಕಾದ್ದು ಅತ್ಯಂತ ಮುಖ್ಯ.

ನೋಟಿಫಿಕೇಶನ್ ಎಂಬುದು ಸ್ಮಾರ್ಟ್‌ಫೋನ್‌ಗಳಲ್ಲಿ ಆ್ಯಪ್‌ಗಳು ತಮ್ಮ ವಿಸಿಟ್ ಹೆಚ್ಚಿಸಿಕೊಳ್ಳುವುದಕ್ಕೆ ಹೂಡುವ ತಂತ್ರ. ಆದರೆ, ಇದು ಬಳಕೆದಾರರ ವಿಚಾರಕ್ಕೆ ಬಂದರೆ ಉಂಟುಮಾಡುವ ಕಿರಿಕಿರಿಯೇ ಹೆಚ್ಚು. ಅದರಲ್ಲೂ ಕ್ರೋಮ್ ಬ್ರೌಸರ್ ಬಳಸಿ ವೆಬ್‌ಸೈಟ್‌ಗೆ ಭೇಟಿ ನೀಡಿದಾಗ, ಅಲ್ಲಿ ಕೇಳುವ ನೋಟಿಫಿಕೇಶನ್‌ಗೆ ಅನುಮತಿ ಕೊಟ್ಟರಂತೂ ಕ್ರೋಮ್‌ನಿಂದ ಒಂದರ ಹಿಂದೊಂದು ನೋಟಿಫಿಕೇಶನ್‌ಗಳು ಬರಲಾರಂಭಿಸುತ್ತವೆ.

ನೋಟಿಫಿಕೇಶನ್‌ಗಳನ್ನು ಎರಡು ರೀತಿಯಲ್ಲಿ ನಿಯಂತ್ರಿಸಬಹುದು. ಆ್ಯಪ್‌ಗಳಲ್ಲಿ ಬೇಕಾದ್ದಕ್ಕೆ ಮಾತ್ರ ಅನುಮತಿ ನೀಡುವುದು ಒಂದು ವಿಧಾನವಾದರೆ, ನಿರ್ದಿಷ್ಟ ಆ್ಯಪ್‌ಗಳ ಎಲ್ಲ ನೋಟಿಫಿಕೇಶನ್‌ಗಳನ್ನು ಫೋನ್ ಸೆಟ್ಟಿಂಗ್ಸ್‌ಗೆ ಹೋಗಿ ನಿರ್ಬಂಧಿಸುವುದು ಒಂದು ವಿಧಾನ. ಆ್ಯಪ್‌ಗಳ ಒಳಗೆ ಹೋಗಿ, ಸೆಟ್ಟಿಂಗ್ಸ್‌ನಲ್ಲಿ ಬೇಕಾದ ನೋಟಿಫಿಕೇಶನ್‌ಗೆ ಮಾತ್ರ ಅನುಮತಿ ನೀಡುವುದು ಹೆಚ್ಚು ಉತ್ತಮವಾದ ವಿಧಾನ. ಏಕೆಂದರೆ, ಇಲ್ಲಿ ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡ ಮೂಲ ಉದ್ದೇಶಕ್ಕೆ ಪೂರಕವಾಗಿ ಬಳಸಲು ಇದರಿಂದ ಅನುಕೂಲವಾಗುತ್ತದೆ.

ಇದಲ್ಲವಾದರೆ, ಫೋನ್‌ನ ಸೆಟ್ಟಿಂಗ್ಸ್‌ಗೆ ಹೋಗಿ ಅದರಲ್ಲಿ ನಿರ್ದಿಷ್ಟ ಆ್ಯಪ್‌ಗಳಿಂದ ಎಲ್ಲ ನೋಟಿಫಿಕೇಶನ್‌ಗಳನ್ನೂ ಸ್ಥಗಿತಗೊಳಿಸುವುದು ಇನ್ನೊಂದು ವಿಧಾನ. ಇದರಲ್ಲಿ ಆ ಆ್ಯಪ್‌ನಿಂದ ಬರುವ ಎಲ್ಲ ನೋಟಿಫಿಕೇಶನ್ ಸ್ಥಗಿತಗೊಳ್ಳುತ್ತವೆ.

ಇದೆಲ್ಲಕ್ಕಿಂತ ಅತ್ಯಂತ ಮುಜುಗರಕ್ಕೀಡು ಮಾಡುವ ಇನ್ನೊಂದು ನೋಟಿಫಿಕೇಶನ್ ಎಂದರೆ, ಲಾಕ್ ಸ್ಕ್ರೀನ್‌ನಲ್ಲಿ ಕಾಣಿಸುವಂಥದ್ದು. ಫೋನ್ ಲಾಕ್ ಆಗಿದ್ದಾಗಲೂ ಇದು ಕಾಣಿಸುತ್ತದೆ. ಕೆಲವು ಆಪ್‌ಗಳನ್ನು ಇನ್‌ಸ್ಟಾಲ್ ಮಾಡಿದಾಗಲೇ ಇದನ್ನು ಆನ್ ಆಗಿರುತ್ತವೆ. ಅದರಲ್ಲೂ ವಾಟ್ಸ್‌ಆ್ಯಪ್‌ನಲ್ಲಂತೂ ಲಾಕ್ ಸ್ಕ್ರೀನ್ ನೋಟಿಫಿಕೇಶನ್ ಎರಡು ರೀತಿಯಲ್ಲಿರುತ್ತವೆ. ಕೇವಲ ಮೆಸೇಜ್ ಬಂದಿದೆ ಎಂದಷ್ಟೇ ಹೇಳುವ ಮತ್ತು ಯಾರಿಂದ ಯಾವ ಮೆಸೇಜ್ ಬಂದಿದೆ ಎಂದು ಹೇಳುವ ನೋಟಿಫಿಕೇಶನ್ ಕೂಡ ಇರುತ್ತದೆ. ಇವನ್ನು ಅಗತ್ಯಕ್ಕೆ ತಕ್ಕಂತೆ ಹೊಂದಿಸಿಕೊಳ್ಳಬೇಕಾಗುತ್ತದೆ.

ಇತ್ತೀಚಿನ ಸ್ಮಾರ್ಟ್‌ಫೋನ್‌ಗಳಲ್ಲಿ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಇದ್ದು, ತುಂಬ ಸಮಯ ಫೋನ್ ಲಾಕ್ ಮಾಡಿದ್ದಾಗ, ಮಲಗುವ ಸಮಯದಲ್ಲಿ ನೋಟಿಫಿಕೇಶನ್‌ಗಳು ಬಂದು ಕಿರಿಕಿರಿ ಮಾಡುವುದಿಲ್ಲ. ಬದಲಿಗೆ ಲಾಕ್ ಓಪನ್ ಮಾಡುತ್ತಿದ್ದ ಹಾಗೆ ಅವೆಲ್ಲ ಒಟ್ಟಿಗೆ ಕಾಣಿಸಿಕೊಳ್ಳುತ್ತವೆ. ಇದು ಬ್ಯಾಟರಿ ನಿರ್ವಹಣೆಯ ವಿಚಾರದಲ್ಲಿ ಉತ್ತಮ ವಿಧಾನವೂ ಹೌದು. ಪ್ರತಿ ಬಾರಿ ನೋಟಿಫಿಕೇಶನ್ ಬಂದು ಸ್ಕ್ರೀನ್ ಲೈಟ್ ಬೆಳಗುವುದರಿಂದ ಬ್ಯಾಟರಿ ಬೇಗ ಖಾಲಿಯಾಗುತ್ತದೆ.

ಟೇಬಲ್ ಮೇಲೆ ಫೋನ್ ಇಟ್ಟುಕೊಂಡು ಕೆಲಸಕ್ಕೆ ಕುಳಿತರೆ ಪ್ರತಿ ಬಾರಿ ನೋಟಿಫಿಕೇಶನ್ ಬಂದಾಗಲೂ ನಮ್ಮ ಗಮನ ಅತ್ತ ಕಡೆಗೆ ಸೆಳೆಯುತ್ತದೆ. ಇದು ಕೆಲಸದ ಮೇಲೆ ಗಮನ ಹರಿಸುವಲ್ಲಿ ಲೋಪವಾಗಬಹುದು. ಹೀಗಾಗಿ, ಮನೆಗೆ ಬರುವ ಅನಪೇಕ್ಷಿತ ಅತಿಥಿಗಳನ್ನು ನಿಯಂತ್ರಿಸುವ ರೀತಿಯಲ್ಲೇ ನಮ್ಮ ಸ್ಮಾರ್ಟ್‌ಫೋನ್‌ಗೆ ಬರುವ ಅನಗತ್ಯ ನೋಟಿಫಿಕೇಶನ್‌ಗಳನ್ನೂ ಸರಿಯಾಗಿ ನಿಯಂತ್ರಿಸಬೇಕು.

ಸ್ಯಾಮ್‌ಸಂಗ್ ಗ್ಯಾಲಕ್ಸಿ M32

ದೊಡ್ಡ ಬ್ಯಾಟರಿಯ ಸ್ಮಾರ್ಟ್ ವೈಶಿಷ್ಟ್ಯಗಳ ಫೋನ್

ಅವಿನಾಶ್ ಬಿ.

5ಜಿ ತಂತ್ರಜ್ಞಾನ ಬರುವ ಮುನ್ನ 4ಜಿ ಗ್ರಾಹಕರನ್ನು ಸೆಳೆಯಲು ಸ್ಯಾಮ್‌ಸಂಗ್ ಗ್ಯಾಲಕ್ಸಿ ಎಂ32 ಇತ್ತೀಚೆಗೆ ಬಿಡುಗಡೆ ಮಾಡಿದೆ. ವಿಮರ್ಶೆಗಾಗಿ ದೊರೆತ 4ಜಿಬಿ/64 ಜಿಬಿ ಮಾದರಿಯ ಎಂ32 ಸಾಧನವು ನೋಡಲು ಪ್ರೀಮಿಯಂ ಫೋನ್‌ನಂತಿದೆ.

ಪ್ಲಾಸ್ಟಿಕ್ ಬಾಡಿ, ಸ್ಲಿಮ್, ಹಗುರ ತೂಕದ ಈ ಫೋನ್, ನಾಲ್ಕು ಸೆನ್ಸರ್‌ಗಳಿರುವ ಪ್ರಧಾನ ಕ್ಯಾಮೆರಾ ಮಾಡ್ಯೂಲ್ ಹೊಂದಿದೆ. ಪವರ್ ಬಟನ್‌ನಲ್ಲೇ ಇರುವ ಕೆಪಾಸಿಟಿವ್ ಫಿಂಗರ್ ಪ್ರಿಂಟ್ ಸ್ಕ್ಯಾನರ್ ಹಾಗೂ ಮುಖ ಗುರುತಿಸುವಿಕೆ ತಂತ್ರಜ್ಞಾನ ವೇಗವಾಗಿ ಕೆಲಸ ಮಾಡುತ್ತದೆ. 6000mAh ಬ್ಯಾಟರಿ ಇದ್ದಾಗ್ಯೂ 196 ಗ್ರಾಂ ಹಗುರವಾಗಿದೆ. ಯುಎಸ್‌ಬಿ ಟೈಪ್ ಸಿ ಚಾರ್ಜರ್ ಜೊತೆಗೆ 15W ವೇಗದ ಚಾರ್ಜಿಂಗ್ ಅಡಾಪ್ಟರ್ ನೀಡಲಾಗಿದೆ. 3.5ಮಿಮೀ ಇಯರ್‌ಫೋನ್ ಜಾಕ್ ಇದೆ.

6.4 ಇಂಚಿನ ಎಸ್-ಅಮೋಲೆಡ್ (sAMOLED) ಎಫ್‌ಹೆಚ್‌ಡಿ ಪ್ಯಾನಲ್ ಸ್ಕ್ರೀನ್ ಇದ್ದು, 90Hz ರೀಫ್ರೆಶ್ ರೇಟ್ ಇದೆ. ಮೀಡಿಯಾಟೆಕ್ ಹೀಲಿಯೋ ಜಿ80 ಪ್ರೊಸೆಸರ್ ಜೊತೆಗೂಡಿರುವುದರಿಂದ ಕಾರ್ಯಾಚರಣೆಯು ಸುಲಲಿತವಾಗಿದೆ. ಪಂಚ್-ಹೋಲ್ ನಾಚ್ ಸೆಲ್ಫಿ ಕ್ಯಾಮೆರಾ ಕೂಡ ಮಧ್ಯಭಾಗದಲ್ಲಿದೆ.

ಕ್ಯಾಮೆರಾ: ಸ್ಯಾಮ್‌ಸಂಗ್ ಗ್ಯಾಲಕ್ಸಿ ಎಂ32 ಫೋನ್‌ನ ಹಿಂಭಾಗದ ಕ್ಯಾಮೆರಾದಲ್ಲಿ 64 ಮೆಗಾಪಿಕ್ಸೆಲ್ ಸಾಮರ್ಥ್ಯದ ಪ್ರಧಾನ ಸೆನ್ಸರ್ ಇದ್ದು, 8MP ವೈಡ್ ಆ್ಯಂಗಲ್ ಲೆನ್ಸ್ ಹಾಗೂ ತಲಾ 2 ಮೆಗಾಪಿಕ್ಸೆಲ್ ಸಾಮರ್ಥ್ಯದ ಮ್ಯಾಕ್ರೋ ಮತ್ತು ಡೆಪ್ತ್ ಸೆನ್ಸರ್ ಲೆನ್ಸ್‌ಗಳಿವೆ. ಸೆಲ್ಫೀಗೆ 20 ಮೆಗಾಪಿಕ್ಸೆಲ್ ಸಾಮರ್ಥ್ಯದ ಮುಂಭಾಗದ ಕ್ಯಾಮೆರಾ ಸೆಟಪ್. ಪ್ರಧಾನ ಕ್ಯಾಮೆರಾವು ಹೊರಾಂಗಣದಲ್ಲಿ ಅದ್ಭುತವಾಗಿ ಬಣ್ಣಗಳ ಮಿಳಿತದೊಂದಿಗೆ ಚಿತ್ರಗಳನ್ನು ಸೆರೆಹಿಡಿಯುತ್ತದೆ. ಮ್ಯಾಕ್ರೋ ಮತ್ತು ಡೆಪ್ತ್ ಸೆನ್ಸರ್‌ಗಳು ಸಮೀಪದ ವಸ್ತುವನ್ನು ಬಹುತೇಕ ನಿಖರವಾಗಿ ಸೆರೆಹಿಡಿಯುತ್ತವೆ. ವ್ಯೂಫೈಂಡರ್ ಮೇಲೆ ತಟ್ಟಿದಾಗ ಸ್ವಯಂ ಫೋಕಸ್ ವೈಶಿಷ್ಟ್ಯವು ಕೆಲಸ ಮಾಡುತ್ತದೆ. 20MP ಸಾಮರ್ಥ್ಯದ ಲೆನ್ಸ್‌ನಲ್ಲಿ ಸೆಲ್ಫೀಗೆ ಈಗಿನ ಅಗತ್ಯಕ್ಕೆ ತಕ್ಕಂತೆ ಹೆಚ್ಚು ಸೌಂದರ್ಯ ಒದಗಿಸುವ ಮೋಡ್‌ಗಳಿವೆ.

ಕಾರ್ಯಾಚರಣೆ ಹೇಗಿದೆ?: ಆಂಡ್ರಾಯ್ಡ್ 11 ಆಧಾರಿತ ಒನ್ ಯುಐ 3.1 ಕಾರ್ಯಾಚರಣಾ ವ್ಯವಸ್ಥೆಯಿದ್ದು, ಫೋನ್‌ನಲ್ಲಿಯೇ ಬಂದಿರುವ ಕೆಲವು ಆ್ಯಪ್‌ಗಳನ್ನು ಅನ್‌ಇನ್‌ಸ್ಟಾಲ್ ಮಾಡಬಹುದು, ಕೆಲವನ್ನು ನಿಷ್ಕ್ರಿಯಗೊಳಿಸಬಹುದು. ಸಿಸ್ಟಂ ಇಂಟರ್ಫೇಸ್ ಅನ್ನು ಕನ್ನಡಕ್ಕೆ ಬದಲಾಯಿಸಿಕೊಳ್ಳುವ ಆಯ್ಕೆಯಿದೆ. ಕನ್ನಡ ಟೈಪ್ ಮಾಡಲು ಅಂತರ್-ನಿರ್ಮಿತ ಕೀಬೋರ್ಡ್ ಇದೆ.

ಸ್ಮಾರ್ಟ್ ವೈಶಿಷ್ಟ್ಯಗಳು: ಫೋನ್ ಎತ್ತಿಕೊಂಡಾಗ ಅಥವಾ ಸ್ಕ್ರೀನ್ ಮೇಲೆ ಡಬಲ್-ಟ್ಯಾಪ್ ಮಾಡಿದಾಗ ಸ್ಕ್ರೀನ್ ಆನ್/ಆಫ್ ಆಗುವುದು, ಸ್ಕ್ರೀನ್ ಲಾಕ್ ಸಮಯ ಹೊಂದಿಸಿದ್ದರೂ, ನಾವು ಸ್ಕ್ರೀನ್ ಮೇಲೆ ಕಣ್ಣಿರಿಸಿದಷ್ಟೂ ಹೊತ್ತು ಸ್ಕ್ರೀನ್ ಆಫ್ ಆಗದಂತಿರುವುದು, ಸ್ಕ್ರೀನ್ ಮೇಲೆ ಕೈಯಿಟ್ಟಾಗ ಮ್ಯೂಟ್ ಆಗುವುದು, ಸ್ಕ್ರೀನ್ ಮೇಲೆ ಕೈಯ ಅಂಚಿನಿಂದ ಆಡಿಸಿದರೆ ಸ್ಕ್ರೀನ್ ಶಾಟ್ ತೆಗೆಯುವ ವೈಶಿಷ್ಟ್ಯಗಳಿವೆ.

4GB ಸಾಮರ್ಥ್ಯದ ಫೋನ್ ಬೆಲೆ ₹14,999 ಆಗಿದ್ದು, ಈ ಶ್ರೇಣಿಯಲ್ಲಿ ಪ್ರೀಮಿಯಂ ನೋಟವಿರುವ ಫೋನ್ ಇದು.

ಕೊಡೆಗೂ ಬಂತು ಬ್ಲೂಟೂತ್

ಪೃಥ್ವಿರಾಜ್

ಮಳೆಗಾಲದಲ್ಲಿ ಕೊಡೆಗಳ ಆಶ್ರಯ ಬೇಕು. ತಂತ್ರಜ್ಞಾನದ ಜೊತೆಗೆ ಕೊಡೆಗಳಿಗೆ ಆಧುನಿಕ ಸ್ಪರ್ಶ ದಕ್ಕುತ್ತಿದೆ. ಭಿನ್ನ ಎನಿಸುವಂಥ ಕೆಲವು ಕೊಡೆಗಳ ಮಾಹಿತಿ ಇಲ್ಲಿದೆ.

ಪೈಲೆಸ್ ಇಂಟರ್‌ನೆಟ್ ಅಂಬ್ರೆಲ್ಲಾ

ಕೊಡೆಯ ಬಟ್ಟೆಯ ಮೇಲಿರುವ ಬಣ್ಣ ಬಣ್ಣದ ಅಕ್ಷರಗಳೇ ಆಕರ್ಷಕವಾಗಿ ಕಾಣಿಸುತ್ತವೆ. ಇನ್ನು ಅದೇ ಬಟ್ಟೆ ಪ್ರೊಜೆಕ್ಟರ್ ಸ್ಕ್ರೀನ್‌ನಂತೆ ಬಳಕೆಯಾಗುವಂತಿದ್ದರೆ ಹೇಗಿರಬಹುದು? ಇದೇ ದಾರಿಯಲ್ಲಿ ಅಭಿವೃದ್ಧಿಯಾಗಿದೆ ಪೈಲೆಸ್ ಇಂಟರ್‌ನೆಟ್ ಅಂಬ್ರೆಲ್ಲಾ. ಈ ಕೊಡೆಯಲ್ಲಿ ಡಿಜಿಟಲ್ ಕ್ಯಾಮೆರಾ, ಮೋಷನ್ ಸೆನ್ಸರ್, ಜಿಪಿಎಸ್, ಡಿಜಿಟಲ್ ಕಾಂಪಸ್ ಅಳವಡಿಸಿರುವುದು ವಿಶೇಷ.

ಇದರಲ್ಲಿನ ಕ್ಯಾಮೆರಾ ನಮ್ಮ ಸುತ್ತಮುತ್ತಲಿನ ಪ್ರದೇಶಗಳನ್ನು ಸೆರೆ ಹಿಡಿದು ಕೊಡೆಯ ಮೇಲೆ ಮೂಡಿಸುತ್ತದೆ. ಜೋರು ಮಳೆಯಲ್ಲಿ ಬೆನ್ನ ಹಿಂದೆ ವಾಹನ ಬಂದರೂ ಅದರ ಬಿಂಬ ಸ್ಕ್ರೀನ್ ಮೇಲೆ ಮೂಡುತ್ತದೆ. ಇದು ಸುತ್ತಲಿನ ಪ್ರದೇಶಗಳ ಚಿತ್ರಗಳನ್ನು ಸೆರೆ ಹಿಡಿಯುವುದಕ್ಕೂ ನೆರವಾಗುತ್ತದೆ.

ನೀರು ಬಿದ್ದರೆ ಹೊಳೆಯುವ ಛತ್ರಿ

ರಭಸವಾಗಿ ಧುಮುಕುವ ನೀರಿನ ಶಕ್ತಿಯನ್ನೇ ನಾವು ವಿದ್ಯುತ್ ಶಕ್ತಿಯಾಗಿ ಪರಿವರ್ತಿಸಿಕೊಳ್ಳುತ್ತಿದ್ದೇವೆ. ಇನ್ನು ಆಕಾಶದಿಂದ ಕೊಡೆಯ ಮೇಲೆ ಬೀಳುವ ನೀರಿನ ಶಕ್ತಿಯನ್ನು ವಿದ್ಯುತ್ ಶಕ್ತಿಯಾಗಿ ಪರಿವರ್ತಿಸಿಕೊಳ್ಳಲು ಸಾಧ್ಯವಾಗುವಂತಿದ್ದರೆ? ಇದೇ ಸಿದ್ಧಾಂತದಿಂದ ವಿಭಿನ್ನ ಕೊಡೆಯೊಂದು ಸಿದ್ಧವಾಗಿದೆ. ಇದರ ಹೆಸರು ದಿ ಲೈಟ್ ಡ್ರಾಪ್ಸ್ ಅಂಬ್ರೆಲ್ಲಾ. ಹೆಸರಿಗೆ ತಕ್ಕಂತೆ ಇದರ ಮೇಲೆ ಬೀಳುವ ಮಳೆಯ ಹನಿಗಳು ಬೆಳಕನ್ನು ಮೂಡಿಸುತ್ತವೆ! ಕೊಡೆಗೆ ಅಳವಡಿಸಿರುವ ವಿಶೇಷ ಬಟ್ಟೆ ಮಳೆಯ ಹನಿಗಳನ್ನು ಕೈನೆಟಿಕ್ ಎನರ್ಜಿಯಾಗಿ ಬದಲಿಸುತ್ತದೆ. ಈ ಶಕ್ತಿ ಕಡಿಮೆ ಪ್ರಮಾಣದ್ದಾಗಿದ್ದರೂ ಪುಟ್ಟ ಎಲ್ಇಡಿ ಬಲ್ಬ್‌ಗಳು ಉರಿಯಲು ಸಾಕಾಗುತ್ತದೆ. ಈ ಬಲ್ಬ್‌ಗಳು ಉರಿಯುತ್ತಿದ್ದಂತೆಯೇ ಕೊಡೆಯ ಬಟ್ಟೆಯಲ್ಲಿ ಬೆಳಕು ಮೂಡುತ್ತದೆ.

ದಿ ಮಲ್ಟಿ ಯೂನಿಟ್ ಸೂಪರ್‌ಬ್ರೆಲ್ಲಾ

ಕೊಡೆಗಳು ಸಾಮಾನ್ಯ ಮಳೆಯಲ್ಲಿ ನಾವು ನೆನೆಯದಂತೆ ನೆರವಾಗುತ್ತವೆ. ಆದರೆ ಜೋರು ಗಾಳಿ ಬೀಸಿದಾಗ, ಮಳೆಯ ರಭಸ ಹೆಚ್ಚಿದ್ದಾಗ ಧರಿಸಿದ ಅಂಗಿ ಒದ್ದೆಯಾಗುವುದು ಸಹಜ. ಆದರೆ ಈ ಸೂಪರ್‌ಬ್ರೆಲ್ಲಾ ಕೊಡೆಯಲ್ಲಿ ಈ ಸಮಸ್ಯೆ ಇರುವುದಿಲ್ಲ. ಜೋರು ಮಳೆಯಲ್ಲೂ ದೇಹಕ್ಕೆ ರಕ್ಷಣೆ ನೀಡುತ್ತದೆ. ಭಿನ್ನ ಗಾತ್ರದ ಐದು ಕೊಡೆಗಳನ್ನು ಕೂಡಿಸಿ ಇದನ್ನು ತಯಾರಿಸಲಾಗಿದೆ. ನೆತ್ತಿಯ ಮೇಲೆ ಒಂದು ಕೊಡೆ ಇದ್ದರೆ ಸುತ್ತಲೂ ನಾಲ್ಕು ಕೊಡೆಗಳು ಒಂದಕ್ಕೊಂದು ಕೂಡಿಕೊಂಡಿರುತ್ತವೆ. ಒಮ್ಮೆಲೆ ಇಬ್ಬರು ಅಥವಾ ಮೂವರು ಮಳೆಯಲ್ಲಿ ನೆನೆಯದಂತೆ ನಡೆದುಕೊಂಡು ಹೋಗಬಹುದು. ಇದರ ಮುಂದುವರಿದ ಉತ್ಪನ್ನದಂತೆ, ಸ್ಪೋರ್ಟ್ ಸೂಪರ್‌ಬ್ರೆಲ್ಲಾ ಹೆಸರಿನ ಮತ್ತೊಂದು ಕೊಡೆ ಕೂಡ ರೂಪವನ್ನು ಪಡೆದಿದೆ. ಇದನ್ನು ಆಟದ ಮೈದಾನಗಳಲ್ಲಿ ಪುಟ್ಟ ಗುಡಾರದಂತೆಯೂ ಬಳಸಿಕೊಳ್ಳಬಹುದು.

ಬ್ಲೂಟೂತ್ ಮೊಬೈಲ್ ಮೆಸೆಂಜರ್ ಅಂಬ್ರೆಲ್ಲಾ

ಜೋರು ಮಳೆ, ಗಾಳಿಯಲ್ಲಿ ಕೊಡೆಯನ್ನು ಹಿಡಿದು ನಡೆದುಕೊಂಡು ಹೋಗುವಾಗ ಮೊಬೈಲ್ ರಿಂಗಣಿಸಿದರೆ ಏನಾಗುತ್ತದೆ? ಒಂದು ಕೈಗೆ ಬಿಡುವಿದ್ದರೂ ಆ ಪರಿಸ್ಥಿತಿಯಲ್ಲಿ ಕಿರಿಕಿರಿ ಎನಿಸುತ್ತದೆ; ಕರೆಯನ್ನು ಸ್ವೀಕರಿಸಲು ಕಷ್ಟವೂ ಆಗುತ್ತದೆ. ಆದರೆ ಈ ಬ್ಲೂಟೂತ್ ಅಂಬ್ರೆಲ್ಲಾದಲ್ಲಿ ಹೀಗಾಗದು. ಇದರ ಹಿಡಿಯಲ್ಲಿ ಕಾಲರ್ ಐಡಿ ಇರುವಂಥ ಟಚ್ ಸ್ಕ್ರೀನ್ ಡಿಸ್‌ಪ್ಲೇ, ಸ್ಪೀಕರ್, ಮೈಕ್ ಹಾಗೂ ರೇಡಿಯೊ ರಿಸೀವರ್ ಅಳವಡಿಸಲಾಗಿದೆ. ಮೊಬೈಲ್‌ಫೋನ್ ರಿಂಗಣಿಸಿದ ಕೂಡಲೇ ಹಿಡಿಯ ಡಿಸ್‌ಪ್ಲೇನಲ್ಲಿ ಯಾರಿಂದ ಕರೆ ಬಂದಿದೆ ಎಂಬುದು ತಿಳಿಯುತ್ತದೆ. ಬಟನ್ ಒತ್ತಿ, ಫೋನ್‌ನಲ್ಲಿ ಮಾತನಾಡಲು ತೊಡಗಬಹುದು.

ಎಸ್ಸೆಸ್ಸೆಲ್ಸಿ ದಿಕ್ಸೂಚಿ

ವಿಷಯ: ಗಣಿತ

21. (1,-1) (-4,6) & (-3,-5) ಶೃಂಗಗಳಿರುವ ಒಂದು ತ್ರಿಭುಜದ ವಿಸ್ತೀರ್ಣ
a) 24 ಚದರ ಮಾನಗಳು
b) 40 ಚದರ ಮಾನಗಳು
c) 48 ಚದರ ಮಾನಗಳು
d) 32 ಚದರ ಮಾನಗಳು

22. y - ಅಕ್ಷದಿಂದ (5 , -4) ಬಿಂದುವಿಗಿರುವ ದೂರ
a) 5 ಮಾನಗಳು b) 4 ಮಾನಗಳು
c) 3 ಮಾನಗಳು d) 9 ಮಾನಗಳು

23. $ax^2 + bx + c = 0$ ಸಮೀಕರಣದ ಶ್ರೀಧರನ ಸೂತ್ರ
A) $x= -b \pm \sqrt{b^2 - 4ac}$
B) $x= \frac{-b}{2a} \pm \sqrt{b^2 - 4ac}$
C) $x= \frac{-b\pm\sqrt{b^2-2ac}}{4a}$
D) $x= \frac{-b\pm\sqrt{b^2-4ac}}{2a}$

24. ಒಂದು ವರ್ಗ ಸಮೀಕರಣವು ಹೊಂದಿರಬಹುದಾದ ಗರಿಷ್ಠ ಮೂಲಗಳ ಸಂಖ್ಯೆ
a)ಒಂದು b)ಎರಡು c)ಮೂರು d)ಅಪರಿಮಿತ

25. $X^2 + 1 = 101$ ಈ ವರ್ಗ ಸಮೀಕರಣದಲ್ಲಿ X ನ ಬೆಲೆ
a) ± 1 b) ± 10 c) ± 11 d) $\pm \sqrt{10}$

26. $x^2 + mx + 4 = 0$ ಸಮೀಕರಣದ ಮೂಲಗಳು ಸಮನಾಗಿದ್ದರೆ m ನ ಬೆಲೆ
a) 2 b) 8 c) 6 d) 4

27. ವರ್ಗ ಸಮೀಕರಣ $2x^2 + px - 15 = 0$ ಇದರ ಒಂದು ಮೂಲ -5 ಆದರೆ p ಬೆಲೆ
a) 3 b) 5 c) 7 d) 1

28. $\sin 30^0 + \cos 60^0$ ಇದರ ಬೆಲೆ
A) 1 B) $\frac{3}{2}$ C) $\frac{1}{4}$ D) $\frac{2}{3}$

29. $\sin^2\theta + \cos^2\theta$ = ____
a) -1 b) 1 c) 0 d) 2

30. $\tan 26° - \cot 64°$ ರ ಬೆಲೆ ____
a) 0 b) 1 c)2 d)3

ವಿಷಯ: ವಿಜ್ಞಾನ

21. ಪರಾಗಸ್ಪರ್ಶದ ನಂತರ ಹೂವಿನ ಯಾವ ಭಾಗ ಬೀಜವಾಗಿ ಪರಿವರ್ತನೆಗೊಳ್ಳುತ್ತದೆ?
ಎ) ಅಂಡಾಣು ಬಿ) ಅಂಡಾಶಯ
ಸಿ) ಪುಷ್ಪ ಪಾತ್ರೆ ಡಿ) ಪುಂಕೇಸರ

22. ಋತುಚಕ್ರವು ಪ್ರತಿ ತಿಂಗಳು ಸಾಮಾನ್ಯವಾಗಿ________ದಿನಗಳವರೆಗೆ ಮುಂದುವರಿಯುತ್ತದೆ
ಎ) 2 ರಿಂದ 5 ಬಿ) 2 ರಿಂದ 6
ಸಿ) 2 ರಿಂದ 7 ಡಿ) 2 ರಿಂದ 8

23. ನಿಸರ್ಗದ ಆಯ್ಕೆಯಿಂದ ಜೀವ ಪ್ರಭೇದಗಳ ವಿಕಾಸ ಎಂದು ಪ್ರತಿಪಾದಿಸಿದವರು
ಎ) ಮೆಂಡಲ್ ಬಿ) ಡಾರ್ವಿನ್
ಸಿ) ಮಾರ್ಗನ್ ಡಿ) ಲ್ಯಾಮಾರ್ಕ್

24. ಎತ್ತರ(TT) ಮತ್ತು ಗಿಡ್ಡ(tt) ಬಟಾಣಿ ಸಸ್ಯಗಳನ್ನು ಸಂಕರಗೊಳಿಸಲಾಗಿದೆ. F2 ಸಂತತಿಯಲ್ಲಿ ಶುದ್ಧ ಎತ್ತರ ಮತ್ತು ಗಿಡ್ಡ ಸಂತತಿಯ ಅನುಪಾತ
ಎ) 1:3 ಬಿ) 3:1 ಸಿ) 1:1 ಡಿ) 2:1

25. ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ?
ಎ) ಪ್ರತಿಯೊಂದು ಹಾರ್ಮೋನ್ ಅನ್ನು ಒಂದು ವಂಶವಾಹಿ ನಿಯಂತ್ರಿಸುತ್ತದೆ
ಬಿ) ಪ್ರತಿಯೊಂದು ಪ್ರೋಟೀನ್ ಅನ್ನು, ಒಂದು ವಂಶವಾಹಿ ನಿಯಂತ್ರಿಸುತ್ತದೆ
ಸಿ) ಪ್ರತಿ ಕಿಣ್ವದ ಉತ್ಪಾದನೆಯು ವಂಶವಾಹಿಯಿಂದ ನಿಯಂತ್ರಿಸಲ್ಪಡುತ್ತದೆ.
ಡಿ) ಪ್ರತಿ ಕೊಬ್ಬಿನ ಅಣುವನ್ನು, ಒಂದು ವಂಶವಾಹಿ ನಿಯಂತ್ರಿಸುತ್ತದೆ

26. ವಿಕಾಸವನ್ನು ಸಮರ್ಥಿಸುವ ಸಾಕ್ಷ್ಯಗಳಾವುವು?
ಎ) ರಚನಾನುರೂಪಿ ಅಂಗಗಳು
ಬಿ) ಕಾರ್ಯಾನುರೂಪಿ ಅಂಗಗಳು
ಸಿ) ಪಳೆಯುಳಿಕೆಗಳು
ಡಿ) ಮೇಲಿನ ಎಲ್ಲವೂ

27. ಓಝೋನ್ ಪದರದ ಕುಸಿತಕ್ಕೆ ಕಾರಣ
ಎ) ನೇರಳಾತೀತ ವಿಕಿರಣ
ಬಿ) ಕ್ಲೋರೋಫ್ಲೋರೋಕಾರ್ಬನ್
ಸಿ) ಸಿಎಫ್‌ಸಿ ಮುಕ್ತ ರೆಫ್ರಿಜರೇಟರ್
ಡಿ) ಆಕ್ಸಿಜನ್ ಅಣು

28. ಪೀನ ಮಸೂರದ ಸಂಗಮ ದೂರವು 15 cm ಆಗಿದ್ದು, ವಸ್ತುವನ್ನು 10cm ದೂರದಲ್ಲಿ ಇರಿಸಿದರೆ, ಪೀನ ಮಸೂರದಿಂದ ಪ್ರತಿಬಿಂಬ ಸ್ಥಾನ
ಎ) 15cm ಬಿ) 10cm ಸಿ) 20cm ಡಿ) 30cm

29. ಸತ್ಯ ಮತ್ತು ವಸ್ತುವಿನ ಗಾತ್ರದಷ್ಟೆ ಪ್ರತಿಬಿಂಬವನ್ನು ಪಡೆಯಲು ಪೀನ ಮಸೂರದಿಂದ ವಸ್ತುವಿನ ಸ್ಥಾನ
ಎ) ಮಸೂರದ ಪ್ರಧಾನ ಸಂಗಮದಲ್ಲಿ
ಬಿ) ಸಂಗಮ ದೂರದ ಎರಡರಷ್ಟು
ಸಿ) ಅನಂತ ದೂರದಲ್ಲಿ
ಡಿ) ದೃಕ್ ಕೇಂದ್ರ ಮತ್ತು ಪ್ರಧಾನ ಸಂಗಮದ ನಡುವೆ

30. ಮಸೂರದ ಸಾಮರ್ಥ್ಯ -2D ಆಗಿದ್ದು, ಮಸೂರದ ಸಂಗಮ ದೂರ ಮತ್ತು ವಿಧ
ಎ) -50cm ಮತ್ತು ನಿಮ್ನ ಮಸೂರ ಬಿ) -50cm ಮತ್ತು ಪೀನ ಮಸೂರ
ಸಿ) -20cm ಮತ್ತು ನಿಮ್ನ ಮಸೂರ ಡಿ) -25cm ಮತ್ತು ಪೀನ ಮಸೂರ

Subject : Second Language English

21. Baleshwar wanted to thank the tempo truck driver because
A. he had helped him to take Roma to the hospital
B. he had helped him in searching of Roma's belongings
C. he had helped him in his water business
D. he had helped him to get a new job

22. "This was bad, Don Anselmo", I pleaded. This was said by
A. his relative B. the American
C. The storyteller D. the boy who was with him

23. After selling the orchard the trees legally belonged to
A.the children. B. the Americans.
C. people of Rio En Medio D. the storyteller.

24 .Finally the Americans decided to buy the trees individually because
A. they were moved by the generosity of the old man
B. the old man demanded them to buy them from the children
C. the children demanded the money
D. the storyteller suggested them to do so

25.. Dr.Ambedkar was called "A symbol of revolt" by
Gandhiji B. Mahatma Phule
C. K M Munshi D. Nehru

26.Dr. B R Ambedkar spent most of his life in
Purchasing books B. attending conferences
C. reading books D. importing books

27. "A walk in the park might make you feel better" this was said by.
Smitha,s mother B. Aunt Sushila.
C. Smitha,s father D. Anant

28. "It's the chance of a lifetime" this was said by.
A.Smitha's mother B. Aunt Sushila.
C. Smitha's father D. Ananth

29. "You want to do this very badly, don't you?." 'this' refers to
A. drawing and painting B.singing
C. trekking D.sports

30. The whole world opened out for Satish. This happened when he
opened his window B.started reading books
C. fell from the bridge D. went to a new school.

(ಪ್ರಶ್ನೆಪತ್ರಿಕೆ ಸಂಯೋಜನೆ: ಸ್ವಾಮಿ ಎಚ್‌.ಆರ್‌./ ಎ. ಶ್ರೀನಿವಾಸ್/ ಎಚ್‌.ಟಿ. ಪದ್ಮಾವತಿ)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ-23

306. ಯಾವ ಜಲಪಾತವನ್ನು 'ಕರ್ನಾಟಕದ ನಯಾಗರ' ಎಂದು ಕರೆಯುತ್ತಾರೆ?
ಎ) ಗಗನಚುಕ್ಕಿ-ಭರಚುಕ್ಕಿ
ಬಿ) ಜೋಗ ಜಲಪಾತ
ಸಿ) ಅಬ್ಬೆ ಜಲಪಾತ
ಡಿ) ಗೋಕಾಕ್ ಜಲಪಾತ

307. 'ಆನಂದ ಕಂದ' ಇದು ಯಾರ ಕಾವ್ಯ ನಾಮ?
ಎ) ಲಕ್ಷ್ಮೀನಾರಾಯಣಸ್ವಾಮಿ
ಬಿ) ಮಾಸ್ತಿ ವೆಂಕಟೇಶ ಅಯ್ಯಂಗಾರ್
ಸಿ) ಬೆಟಗೇರಿ ಕೃಷ್ಣಶರ್ಮ
ಡಿ) ವಿನಾಯಕ ಕೃಷ್ಣ ಗೋಕಾಕ

308. 'ಅಂಶಿ' ರಾಷ್ಟ್ರೀಯ ಉದ್ಯಾನ ಯಾವ ಜಿಲ್ಲೆಯಲ್ಲಿದೆ?
ಎ) ಉತ್ತರಕನ್ನಡ ಬಿ) ಮಂಡ್ಯ
ಸಿ) ಶಿವಮೊಗ್ಗ ಡಿ) ಬೆಳಗಾವಿ

309. 'ನ್ಯಾಟೋ' ಪ್ರಧಾನ ಕಚೇರಿ ಎಲ್ಲಿದೆ?
ಎ) ಬ್ಯೂನಸ್ ಐರಿಸ್ ಬಿ) ಬೋಗೋಟಾ
ಸಿ) ನ್ಯೂಯಾರ್ಕ್ ಡಿ) ಬ್ರುಸೆಲ್ಸ್

310. ರಾಜ್ಯಪಾಲರಾಗಲು ಇರಬೇಕಾದ ಕನಿಷ್ಠ ವಯೋಮಿತಿ
ಎ) 35 ವರ್ಷಗಳು ಬಿ) 40 ವರ್ಷಗಳು
ಸಿ) 60 ವರ್ಷಗಳು ಡಿ) 50 ವರ್ಷಗಳು

311. ಶ್ರವಣಬೆಳಗೊಳದಲ್ಲಿ ಇರುವ ಗೊಮ್ಮಟನ ಮೂರ್ತಿಯನ್ನು ಕೆತ್ತಿದ ಶಿಲ್ಪಿ ಯಾರು?
ಎ) ಜಕಣಾಚಾರಿ
ಬಿ) ಚಾವುಂಡರಾಯ
ಸಿ) ಡಕಣಾಚಾರಿ
ಡಿ) ಅರಿಷ್ಟನೇಮಿ

312. ಕಬ್ಬು ಮತ್ತು ಸಕ್ಕರೆ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಭಾರತ _____ ಸ್ಥಾನವನ್ನು ಹೊಂದಿದೆ.
ಎ) ಮೊದಲನೆಯ ಬಿ) ಎರಡನೆಯ
ಸಿ) ಮೂರನೆಯ ಡಿ) ಐದನೆಯ

313. ಇವುಗಳಲ್ಲಿ ಯಾವುದು ಕಡಲ ಕೊರೆತವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬಲ್ಲದು?
ಎ) ಸಮುದ್ರ ತೀರದಲ್ಲಿ ಕಟ್ಟಡಗಳನ್ನು ನಿರ್ಮಿಸುವುದು
ಬಿ) ಸಮುದ್ರ ತೀರದಲ್ಲಿ ಮರಳು ಗಣಿಗಾರಿಕೆಯನ್ನು ಪ್ರೋತ್ಸಾಹಿಸುವುದು
ಸಿ) ಸಮುದ್ರ ತೀರದಲ್ಲಿ ಮ್ಯಾಂಗ್ರೋವ್ ಅರಣ್ಯಗಳನ್ನು ಬೆಳೆಸುವುದು
ಡಿ) ಕರಾವಳಿಯಲ್ಲಿ ಮಾನವ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು

314. ಕನ್ನಡ ನಾಡಿನ ಪ್ರಥಮ ಶಾಸನ (ಹಲ್ಮಿಡಿ ಶಾಸನ) ಈ ವಂಶದ ಕೊಡುಗೆಯಾಗಿದೆ
ಎ) ಕದಂಬರು
ಬಿ) ಬಾದಾಮಿ ಚಾಲುಕ್ಯರು
ಸಿ) ಹೊಯ್ಸಳರು
ಡಿ) ರಾಷ್ಟ್ರಕೂಟರು

315. ಬುದ್ಧನು ತನ್ನ ಮೊದಲನೆಯ ಬೋಧನೆಯನ್ನು_______ ದಲ್ಲಿ ಮಾಡಿದನು.
ಎ) ಸಾರನಾಥ ಬಿ) ತಕ್ಷಶಿಲಾ
ಸಿ) ಪಾಟಲೀಪುತ್ರ ಡಿ) ಗಯಾ

316. ಕನ್ನಡದ ಮೊದಲನೆಯ 'ಟಾಕಿ' ಚಿತ್ರ ಯಾವುದು?
ಎ) ಸತಿ ಸುಲೋಚನಾ ಬಿ) ಮೃಚ್ಛಕಟಿಕಾ
ಸಿ) ಉತ್ಸವ ಡಿ) ಅಮರಶಿಲ್ಪಿ ಜಕಣಾಚಾರಿ

317. ಕರ್ನಾಟಕ ರಾಜ್ಯ ಮೀಸಲು ಪಡೆ ಮುಖ್ಯಸ್ಥರು ಈ ಹುದ್ದೆಯವರು ಆಗಿರುತ್ತಾರೆ
ಎ) ಡಿ.ಜಿ.ಪಿ. ಬಿ) ಎ.ಡಿ.ಜಿ.ಪಿ.
ಸಿ) ಕಮಾಂಡೆಂಟ್ ಡಿ) ಡಿ.ಐ.ಜಿ.ಪಿ

318. 1 ರಿಂದ 500 ರ ಒಳಗಿನ ಪೂರ್ಣ ವರ್ಗಗಳ ಸಂಖ್ಯೆ ಎಷ್ಟು?
ಎ) 1 ಬಿ) 16
ಸಿ) 22 ಡಿ) 26

319.ಆಹಾರದೊಳಗಿನ ಅಯೋಡಿನ್ ಕೊರತೆಯಿಂದಾಗಿ ಮನುಷ್ಯನಿಗೆ ಈ ಕಾಯಿಲೆ ಬರುತ್ತದೆ
ಎ) ಸರಳ ಗಳಗಂಡ
ಬಿ) ರಕ್ತಹೀನತೆ
ಸಿ) ಇರುಳುಗಣ್ಣು
ಡಿ) ಫ್ರೈನೋಡರ್ಮಾ

320. ನೀರಿನ ಸಾಂದ್ರತೆ ಗರಿಷ್ಠವಾಗಿ ಇರುವುದು ಯಾವ ಉಷ್ಣಾಂಶದಲ್ಲಿ?
ಎ) 400 C ಬಿ) 40 C
ಸಿ) 00 C ಡಿ) 1000 C

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 22 ರ ಉತ್ತರ: 291. ಎ, 292. ಸಿ, 293. ಬಿ, 294. ಬಿ, 295. ಸಿ, 296. ಡಿ, 297. ಸಿ, 298. ಡಿ, 299. ಡಿ, 300. ಎ, 301. ಬಿ, 302. ಎ, 303. ಬಿ, 304. ಬಿ

ಸುಭಾಷಿತ
ಸಕಾರಾತ್ಮಕ ಮನೋಭಾವ ಹೊಂದಿರುವ ವ್ಯಕ್ತಿಯು ಎಲ್ಲ ಋತುಗಳಲ್ಲೂ ಸಿಗುವ ಹಣ್ಣಿನಂತೆ.
-ಶಿವ್ ಖೇರಾ

ಮೇಕೆದಾಟು ಯೋಜನೆ ವಿವಾದ ಮಾತುಕತೆ ಮೂಲಕ ಬಗೆಹರಿಸಿಕೊಳ್ಳೋಣ

ರಾಮನಗರ ಜಿಲ್ಲೆಯ ಮೇಕೆದಾಟುವಿನಲ್ಲಿ ಕರ್ನಾಟಕ ನಿರ್ಮಿಸಲು ಉದ್ದೇಶಿಸಿರುವ ಅಣೆಕಟ್ಟು ಯೋಜನೆಗೆ ಅನುಮತಿ ನೀಡಬಾರದು ಎಂದು ಕೇಂದ್ರ ಸರ್ಕಾರವನ್ನು ತಮಿಳುನಾಡಿನ ಸರ್ವ ಪಕ್ಷಗಳ ಸಭೆ ಒತ್ತಾಯಿಸಿದೆ. ಈ ಯೋಜನೆ ಜಾರಿಗೊಳಿಸುವುದನ್ನು ತಡೆಯಲು ಸುಪ್ರೀಂ ಕೋರ್ಟ್ ಮೆಟ್ಟಿಲೇರುವುದೂ ಸೇರಿದಂತೆ ಎಲ್ಲ ರೀತಿಯ ಕಾನೂನು ಕ್ರಮಗಳನ್ನು ಕೈಗೊಳ್ಳಲು ಅಲ್ಲಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ನೇತೃತ್ವದ ಸಭೆಯು ತೀರ್ಮಾನಿಸಿದೆ. ಮೇಕೆದಾಟುವಿನಲ್ಲಿ ಕರ್ನಾಟಕ ಅಣೆಕಟ್ಟು ನಿರ್ಮಿಸಿದರೆ ತಮ್ಮ ರೈತರ ಹಿತಾಸಕ್ತಿಗೆ ಧಕ್ಕೆ ಬರುತ್ತದೆ ಎನ್ನುವುದು ತಮಿಳುನಾಡಿನ ವಾದ. ಕಾವೇರಿ ನೀರಿನ ಕುರಿತು ಕರ್ನಾಟಕ ಮತ್ತು ತಮಿಳುನಾಡು ನಡುವಣ ತಿಕ್ಕಾಟಕ್ಕೆ ಸುದೀರ್ಘ ಇತಿಹಾಸವಿದೆ. ಕಾವೇರಿ ನೀರು ಹಂಚಿಕೆಯ ವಿವಾದಕ್ಕೆ ಈಗ ಮತ್ತೆ ಕಾವು ತುಂಬುವ ಕೆಲಸವನ್ನು ತಮಿಳುನಾಡು ಸರ್ಕಾರ ಮಾಡಲು ಹೊರಟಿದೆ. 'ಕಾವೇರಿ ನದಿ ನೀರು ಹಂಚಿಕೆ ಬಗ್ಗೆ ಸುಪ್ರೀಂ ಕೋರ್ಟ್ ಸ್ಪಷ್ಟವಾದ ತೀರ್ಪು ನೀಡಿದೆ. ಅದರ ಪ್ರಕಾರ ತಮಿಳುನಾಡಿಗೆ ಎಷ್ಟು ನೀರು ಬಿಡಬೇಕು ಮತ್ತು ಯಾವಾಗ ಬಿಡಬೇಕು ಎನ್ನುವುದೂ ನಿರ್ಧಾರವಾಗಿದೆ. ತೀರ್ಪನ್ನು ನಾವು ಪಾಲಿಸುತ್ತೇವೆ. ಬೆಂಗಳೂರಿಗೆ ಕುಡಿಯುವ ನೀರು ಪೂರೈಕೆ ಮತ್ತು ವಿದ್ಯುತ್ ಉತ್ಪಾದನೆಗಾಗಿ ಮಾತ್ರ ಮೇಕೆದಾಟು ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಈ ನೀರಿನ ಬಳಕೆಯೂ ಸುಪ್ರೀಂ ಕೋರ್ಟಿನ ಆದೇಶದಂತೆಯೇ ನಡೆಯಲಿದೆ' ಎಂದು ರಾಜ್ಯದ ಗೃಹ ಮತ್ತು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಸ್ಪಷ್ಟ ಪ್ರತಿಕ್ರಿಯೆ ನೀಡಿದ್ದಾರೆ. ಇನ್ನೊಂದೆಡೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ 'ಮೇಕೆದಾಟು ಯೋಜನೆಯನ್ನು ರಾಜ್ಯ ಸರ್ಕಾರ ತಕ್ಷಣ ಆರಂಭಿಸಲಿ. ರಾಜಕೀಯ ಭಿನ್ನಾಭಿಪ್ರಾಯ ಮರೆತು ನಾವೆಲ್ಲರೂ ಸರ್ಕಾರದ ಜೊತೆಗೆ ನಿಲ್ಲುತ್ತೇವೆ' ಎಂದು ಹೇಳಿರುವುದೂ ಸ್ವಾಗತಾರ್ಹ. ತಮಿಳುನಾಡಿನಲ್ಲಿ ಯಾವುದೇ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿದರೂ ಕಾವೇರಿ ನೀರಿನ ಹಂಚಿಕೆ ವಿಷಯವನ್ನು ಭಾವನಾತ್ಮಕಗೊಳಿಸಿ, ರಾಜಕೀಯ ಲಾಭ ಪಡೆಯಲು ಯತ್ನಿಸಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ನೀರಿನ ವ್ಯಾಜ್ಯವನ್ನು ಭಾಷಿಕ ವಿಷಯವಾಗಿ ಮುನ್ನೆಲೆಗೆ ತಂದು ನಡೆಸಿದ ರಾಜಕೀಯ ಮೇಲಾಟಗಳು ಎರಡೂ ರಾಜ್ಯಗಳ ಜನರ ಮನಸ್ಸಿನಲ್ಲಿ ಈ ಹಿಂದೆ ದ್ವೇಷಭಾವ ಮೂಡಲು ಕಾರಣವಾಗಿದ್ದವು. ಅದಕ್ಕೆ ಪುನಃ ಅವಕಾಶ ನೀಡಬಾರದು.

ನೀರಿನ ವಿವಾದದ ವಿಷಯದಲ್ಲಿ ಪದೇ ಪದೇ ಕೋರ್ಟ್ ಮೆಟ್ಟಿಲು ಏರುವುದು, ರಾಜಕೀಯ ಲಾಭ–ನಷ್ಟದ ಲೆಕ್ಕಾಚಾರ ಮುಂದಿಟ್ಟುಕೊಂಡು ಮೇಲಾಟ ನಡೆಸುವುದು ತರವಲ್ಲ

ಕಾವೇರಿ ಜಲವಿವಾದ ನ್ಯಾಯಮಂಡಳಿಯ ಅಂತಿಮ ತೀರ್ಪನ್ನು 2018ರಲ್ಲಿ ಸುಪ್ರೀಂ ಕೋರ್ಟ್ ಪರಿಷ್ಕರಿಸಿ ತೀರ್ಪು ನೀಡಿದೆ. ಕರ್ನಾಟಕಕ್ಕೆ 284.75 ಟಿಎಂಸಿ ಅಡಿ ನೀರಿನ ಬಳಕೆಗೆ ಅನುಮತಿ ನೀಡಿದೆ. ತಮಿಳುನಾಡು 404.25 ಟಿಎಂಸಿ ಅಡಿ, ಕೇರಳ 30 ಟಿಎಂಸಿ ಅಡಿ ಮತ್ತು ಪುದುಚೇರಿ 7 ಟಿಎಂಸಿ ಅಡಿ ನೀರಿನ ಪಾಲು ಪಡೆಯಬೇಕೆಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಕರ್ನಾಟಕವು ತನ್ನ ಪಾಲಿನ ಈ ನೀರಿನ ಸದ್ಬಳಕೆಗೆಂದೇ ಈಗ ಮೇಕೆದಾಟುವಿನಲ್ಲಿ ಅಣೆಕಟ್ಟು ಕಟ್ಟಲು ಉದ್ದೇಶಿಸಿದೆ. ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ಮಹಾನಗರಕ್ಕೆ ಕುಡಿಯುವ ನೀರು ಪೂರೈಸಲು ಇದು ಅನಿವಾರ್ಯವೂ ಹೌದು. 'ಇದರಿಂದ ತಮಿಳುನಾಡಿಗೆ ಬಿಡಬೇಕಾದ ನೀರಿನಲ್ಲಿ ಯಾವುದೇ ಕಡಿತ ಆಗುವುದಿಲ್ಲ' ಎಂದು ಕರ್ನಾಟಕ ಈಗಾಗಲೇ ಸ್ಪಷ್ಟಪಡಿಸಿದೆ. ಸುಪ್ರೀಂ ಕೋರ್ಟಿನ ಆದೇಶದಂತೆ ತಮಿಳುನಾಡಿಗೆ ಕಾಲಕಾಲಕ್ಕೆ ಕರ್ನಾಟಕ ಬಿಡಬೇಕಾದ ನೀರಿನ ಮೇಲ್ವಿಚಾರಣೆಗೆ ಕೇಂದ್ರ ಸರ್ಕಾರವೇ ಸ್ಥಾಪಿಸಿದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವೂ ಕೆಲಸ ಮಾಡುತ್ತಿದೆ. ಹಾಗಿದ್ದೂ ತಮಿಳುನಾಡು ಸರ್ಕಾರವು ತಂಜಾವೂರು, ನಾಗಪಟ್ಟಣಂ, ಪುದುಕೋಟ್ಟೈ ಮೊದಲಾದ ಜಿಲ್ಲೆಗಳ ರೈತರ ಕೃಷಿಗೆ ನೀರಿನ ಕೊರತೆ ಉಂಟಾಗುವ ಆತಂಕ ವ್ಯಕ್ತಪಡಿಸುತ್ತಿರುವುದು ಸಮಂಜಸವಲ್ಲ. ಕರ್ನಾಟಕದಿಂದ ತಮಿಳುನಾಡಿನತ್ತ ಹರಿಯುವ ಕಾವೇರಿ ನೀರಿಗೆ ಕರ್ನಾಟಕದಲ್ಲಿ ಕೊನೆಯ ಅಣೆಕಟ್ಟು ಇರುವುದು ಕಬಿನಿಯಲ್ಲಿ. ಮಳೆಗಾಲದಲ್ಲಿ ಅಲ್ಲಿ ಬಹಳ ಬೇಗ ಅಣೆಕಟ್ಟು ತುಂಬಿ, ತಮಿಳುನಾಡಿಗೆ ಹೆಚ್ಚುವರಿ ನೀರು ಬಹಳ ವರ್ಷ ಹರಿದುಹೋಗಿದೆ. ತಮಿಳುನಾಡು ತನ್ನ ನೆಲದಲ್ಲಿ ಈ ಹೆಚ್ಚುವರಿ ನೀರನ್ನು ಹಿಡಿದಿಡಲು ಬೇಕಾದ ಅಣೆಕಟ್ಟು, ಬ್ಯಾರೇಜ್ ಮತ್ತು ಕಾಲುವೆಗಳ ವ್ಯವಸ್ಥೆಯನ್ನು ಮಾಡಿಕೊಂಡಿಲ್ಲ. ಹಾಗಾಗಿ ಈ ನೀರು ನೇರವಾಗಿ ಬಂಗಾಳ ಕೊಲ್ಲಿ ಸೇರುವುದು ಪ್ರತೀ ಮಳೆಗಾಲದ ವಿದ್ಯಮಾನ. ಮೇಕೆದಾಟುವಿನಲ್ಲಿ ಅಣೆಕಟ್ಟು ನಿರ್ಮಾಣವಾದರೆ ಹೀಗೆ ಪೋಲಾಗುವ ನೀರನ್ನು ಸಮರ್ಥವಾಗಿ ಸದ್ಬಳಕೆ ಮಾಡಬಹುದು. ಮಳೆ ಕೈಕೊಟ್ಟು ಸಂಕಷ್ಟ ಉಂಟಾಗುವ ಸಮಯದಲ್ಲಿ ಈ ನೀರು ಬಳಕೆಯಾದರೆ ತಮಿಳುನಾಡಿನ ರೈತರಿಗೇ ಹೆಚ್ಚು ಅನುಕೂಲ ಎನ್ನುವುದನ್ನು ಅಲ್ಲಿನ ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಪ್ರತಿಯೊಂದಕ್ಕೂ ಕೋರ್ಟ್ ಮೆಟ್ಟಿಲು ಹತ್ತುವುದು ಮುತ್ಸದ್ದಿತನದ ಲಕ್ಷಣವಲ್ಲ. ಈ ವಿಷಯವನ್ನು ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳೋಣ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಈಗಾಗಲೇ ತಮಿಳುನಾಡಿನ ಮುಖ್ಯಮಂತ್ರಿಗೆ ಆಹ್ವಾನ ನೀಡಿದ್ದರೂ ಅವರು ಅದನ್ನು ತಿರಸ್ಕರಿಸಿರುವುದು ಎಳ್ಳಷ್ಟೂ ಸರಿಯಲ್ಲ. ನೀರಿನ ವಿವಾದ ಈ ಹಿಂದಿನಂತೆ, ಉಭಯ ರಾಜ್ಯಗಳ ಜನರ ಮಧ್ಯೆ ಇರುವ ಸದ್ಭಾವನೆಯನ್ನು ಕದಡುವುದಕ್ಕೆ ಉಭಯತ್ರರು ಅವಕಾಶ ಕೊಡಕೂಡದು. ತಮಿಳುನಾಡು ಸರ್ಕಾರವು ತನ್ನ ಹಳೆ ಚಾಳಿಯಾದ ರಾಜಕೀಯ ಲಾಭ ಗಳಿಕೆಯ ಮನೋಭಾವವನ್ನು ಬಿಟ್ಟು ಮಾತುಕತೆಯ ಮೂಲಕ ಈ ವಿವಾದವನ್ನು ಬಗೆಹರಿಸಿಕೊಳ್ಳುವುದು ಒಳ್ಳೆಯದು.

ದಿನದ ಟ್ವೀಟ್

ನಿರ್ಲಕ್ಷ್ಯ ಸಲ್ಲದು

ಕೋವಿಡ್ ಎರಡನೇ ಅಲೆಯಲ್ಲಿ ತನ್ನ ಅಜ್ಜನಿಗಾಗಿ ಆಮ್ಲಜನಕ ಸಿಲಿಂಡರ್ ಕೋರಿ ನನಗೆ ಸಂದೇಶ ಕಳುಹಿಸಿದ್ದ ದೆಹಲಿಯ ಹುಡುಗಿಯೊಬ್ಬಳು ಶಿಮ್ಲಾದಲ್ಲಿ ತನ್ನ ಸ್ನೇಹಿತರೊಂದಿಗೆ ಇರುವ ವಿಡಿಯೊಗಳನ್ನು ಪೋಸ್ಟ್ ಮಾಡಿದ್ದಳು. ಅವರಲ್ಲಿ ಯಾರಾದರೂ ಲಸಿಕೆ ಪಡೆದುಕೊಂಡಿದ್ದಾರೆಯೇ ಎಂದು ಕೇಳಿದೆ. 'ನಮಗೆಲ್ಲರಿಗೂ ಮೇ- ಜೂನ್‌ನಲ್ಲಿ ಕೊರೊನಾ ಪಾಸಿಟಿವ್ ಬಂದಿತ್ತು. ಹಾಗಾಗಿ ನಾವು ಪ್ರತಿಕಾಯಗಳನ್ನು ಹೊಂದಿದ್ದೇವೆ' ಎಂದಳು. ಭಾರತವನ್ನು ಕಾಪಾಡಲು ಸಾಧ್ಯವಿಲ್ಲ.

ಮಾಂಡೊ, ನಾಗರಿಕ

ಕಿಡಿನುಡಿ

ಜನಸಂಖ್ಯೆಯ ನಿಯಂತ್ರಣಕ್ಕಾಗಿ ಉತ್ತರ ಪ್ರದೇಶ ಮತ್ತು ಅಸ್ಸಾಂ ಮಾದರಿಯಲ್ಲಿ ಕರ್ನಾಟಕದಲ್ಲೂ ಹೊಸ ಜನಸಂಖ್ಯಾ ನೀತಿಯೊಂದನ್ನು ಜಾರಿಗೆ ತರಲು ಸಕಾಲ. ಜನಸಂಖ್ಯಾ ಸ್ಫೋಟ ಹೀಗೇ ಮುಂದುವರಿದರೆ ಸೀಮಿತ ನೈಸರ್ಗಿಕ ಸಂಪನ್ಮೂಲದ ಮೂಲಕ ಪ್ರತಿಯೊಬ್ಬ ಪ್ರಜೆಯ ಅಗತ್ಯವನ್ನು ಪೂರೈಸುವುದು ಕಷ್ಟ.

ಸಿ.ಟಿ.ರವಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ

25 ವರ್ಷಗಳ ಹಿಂದೆ

ಭಾನುವಾರ, 14-7-1996

- **ಚುನಾವಣಾ ಆಯುಕ್ತರ ಆಯ್ಕೆ ಪ್ರಧಾನಿ ಮರ್ಜಿಗೆ ಬೇಡ: ಶೇಷನ್**

ನವದೆಹಲಿ, ಜುಲೈ 13 (ಯುಎನ್‌ಐ)– 'ಚುನಾವಣಾ ಆಯೋಗದ ಆಯುಕ್ತರನ್ನು ನೇಮಿಸುವಾಗ ಅದನ್ನು ಒಬ್ಬ ವ್ಯಕ್ತಿಯ, ಅಂದರೆ ಪ್ರಧಾನಮಂತ್ರಿಯ ಇಚ್ಛೆಗೆ ಬಿಟ್ಟುಬಿಡುವುದು ಸರಿಯಲ್ಲ' ಎಂದು ಮುಖ್ಯ ಚುನಾವಣಾ ಆಯುಕ್ತ ಟಿ.ಎನ್. ಶೇಷನ್ ಅವರು ಅಭಿಪ್ರಾಯಪಟ್ಟಿದ್ದಾರೆ.

'ಈನಾಡು ಟಿ.ವಿ'ಗೆ ನೀಡಿದ ಸಂದರ್ಶನದಲ್ಲಿ ಶೇಷನ್ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದರು. 'ನನ್ನನ್ನು ಕೂಡಾ ಪ್ರಧಾನಮಂತ್ರಿಯೇ ನೇಮಿಸಿದ್ದಾರೆ. ಆದರೆ ನನ್ನನ್ನು ಅವರು ಬಳಸಿಕೊಳ್ಳಲು ಅವಕಾಶ ನೀಡಿಲ್ಲ. ಒಟ್ಟಾರೆ ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಹಾಗೂ ಮುಖ್ಯವಾಗಿ ಜನರ ಹಿತರಕ್ಷಣೆಯ ಹಿನ್ನೆಲೆಯಲ್ಲಿ ಚುನಾವಣಾ ಆಯೋಗದ ನೇಮಕ ಹಾಗೂ ಸ್ವರೂಪ ನಿರ್ಧಾರವಾಗಬೇಕು' ಎಂದು ಅವರು ಹೇಳಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 14-7-1971

- **ಮೆಡಿಕಲ್ ಸೀಟ್ ಶುಲ್ಕ: ರಾಜ್ಯದ ಅಭ್ಯರ್ಥಿಗಳಿಗೆ 5 ಸಾವಿರ ರೂ. ಮಿತಿ**

ಬೆಂಗಳೂರು, ಜುಲೈ 13– ಮೈಸೂರು ರಾಜ್ಯದ ಅಭ್ಯರ್ಥಿಗಳಿಂದ ಐದು ಸಾವಿರ ರೂ.ಗಿಂತ ಹೆಚ್ಚು, ಬೇರೆ ರಾಜ್ಯಗಳ ಅಭ್ಯರ್ಥಿಗಳಿಂದ ಏಳು ಸಾವಿರದ ಐದು ನೂರು ರೂ.ಗಳಿಗಿಂತ ಹೆಚ್ಚು ಸೀಟು ಶುಲ್ಕವನ್ನು ಪಡೆಯಬಾರದೆಂದು ರಾಜ್ಯದ ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ರಾಜ್ಯ ಸರ್ಕಾರ ಆದೇಶ ನೀಡಿದೆ.

ವಿದೇಶಿ ವಿದ್ಯಾರ್ಥಿಗಳಿಂದ ಎಷ್ಟು ಬೇಕಾದರೂ ಖಾಸಗಿ ಮೆಡಿಕಲ್ ಕಾಲೇಜುಗಳು ಸೀಟು ಶುಲ್ಕ ಪಡೆಯಬಹುದು. ವಿದೇಶಿ ವಿನಿಮಯ ದೊರಕುವುದೆಂಬ ಕಾರಣದಿಂದ ಈ ರೀತಿ ಅನುಮತಿ ನೀಡಲಾಗಿದೆಯೆಂದು ಸರ್ಕಾರದ ವಕ್ತಾರರೊಬ್ಬರು ಇಂದು ವರದಿಗಾರರಿಗೆ ತಿಳಿಸಿದರು.

ಕನ್ನಡಪ್ರಜ್ಞೆಯ ಆದರ್ಶ ಮತ್ತು ಬರಹಗಾರನ ವ್ಯಕ್ತಿತ್ವ: ಅನಕೃ ತೋರಿದ ಮಾದರಿ

ಅನಕೃ: ಕನ್ನಡದ ಕಾವು ಮತ್ತು ಬೆಳಕು

ಪಡಸಾಲೆ

ರಘುನಾಥ ಚ.ಹ.

ಸಾಮಾಜಿಕ ಜಾಲತಾಣಗಳಲ್ಲಿ ಆಸಕ್ತಿಯುಳ್ಳ ಕನ್ನಡಿಗರ ಗುಂಪೊಂದು 'ಕ್ಲಬ್ ಹೌಸ್' ಎನ್ನುವ ಹೊಸ 'ಡಿಜಿಟಲ್ ಹರಟೆಕಟ್ಟೆ'ಯಲ್ಲಿ ಮಾತಿನ ತಾಲೀಮು ನಡೆಸುತ್ತಿರುವ ಸಂದರ್ಭದಲ್ಲಿ, ಕನ್ನಡ ಸಾರಸ್ವತ ಪರಂಪರೆಯ ಬಹುದೊಡ್ಡ ಭಾಷಣಕಾರರಲ್ಲೊಬ್ಬರಾದ ಅರಕಲಗೂಡು ನರಸಿಂಗರಾವ್ ಕೃಷ್ಣರಾವ್ (ಮೇ 9, 1908– ಜುಲೈ 8, 1971) ನಿಧನರಾಗಿ ಐವತ್ತು ವರ್ಷ ತುಂಬಿದೆ.

ಅನಕೃ ಅವರನ್ನು 'ಕನ್ನಡ ಕಾದಂಬರಿ ಸಾರ್ವಭೌಮ' ಎಂದು ಬಣ್ಣಿಸಲಾಗುತ್ತದೆ. ಸಂಖ್ಯಾದೃಷ್ಟಿಯಿಂದ (111 ಕಾದಂಬರಿಗಳು) ಆ ವಿಶೇಷಣ ಗಮನ ಸೆಳೆಯುತ್ತದಾದರೂ, ಆಶಯ ಹಾಗೂ ಗುಣಮಟ್ಟದ ಕನ್ನಡಿಯಲ್ಲಿ ಎಸ್.ಎಲ್. ಭೈರಪ್ಪನವರ ಸಾತ್ವಿಕ ಆವೃತ್ತಿಯಂತೆ 'ಕಾದಂಬರಿಕಾರ ಅನಕೃ' ಕಾಣಿಸುತ್ತಾರೆ. ಭೈರಪ್ಪ ಹಾಗೂ ಅನಕೃ ಇಬ್ಬರೂ ಕನ್ನಡ ಓದುಗ ವಲಯವನ್ನು ಹಿಗ್ಗಿಸಿದವರು. ಹಾಗೆಂದು ಇಬ್ಬರನ್ನೂ ಒಂದೇ ತಕ್ಕಡಿಯಲ್ಲಿ ತೂಗಲಾಗದು. ಅನಕೃ ಅವರ ಕಾದಂಬರಿಗಳಲ್ಲಿ ಪ್ರಾಚೀನ ಹಿಂದೂ ಧರ್ಮದ ಮೌಲ್ಯಗಳ ಪ್ರತಿಪಾದನೆಯಿದ್ದರೂ ಅದು ಭೈರಪ್ಪನವರ ಕಾದಂಬರಿಗಳಂತೆ ಅಜೆಂಡಾದ ರೂಪದಲ್ಲಿ ಓದುಗರನ್ನು ಪ್ರಭಾವಿಸುವ ಕಸರತ್ತಲ್ಲ. ಸಾಮಾಜಿಕ ಅನಿಷ್ಟಗಳು ಹಾಗೂ ವರ್ತಮಾನದ ಸಮಾಜದಲ್ಲಿನ ಬದಲಾವಣೆಗಳ ಬಗ್ಗೆಯೂ ಅವರ ಕಾದಂಬರಿಗಳು ಚರ್ಚಿಸಿವೆ; ಐತಿಹಾಸಿಕ ಕಥನಗಳನ್ನೂ ಒಳಗೊಂಡಿವೆ. ವಿರಳ ಒಳನೋಟಗಳ, ಕಪ್ಪುಬಿಳುಪು ಪಾತ್ರಗಳ, ಜನರ ಭಾವಕೋಶವನ್ನು ಉದ್ದೀಪಿಸುವ ರಚನೆಗಳ ರೂಪದಲ್ಲಿ ಅನಕೃ ಕಾದಂಬರಿಗಳಿವೆ ಹಾಗೂ ಆ ಕೃತಿಗಳ ರಚನೆಯ ಹಿನ್ನೆಲೆಯಲ್ಲಿ ಬರೆದೇ ಬದುಕಬೇಕಾದ ಬರಹಗಾರನೊಬ್ಬನ ಒತ್ತಡವಿದೆ.

ಕಾದಂಬರಿಗಳ ಕಾರಣದಿಂದಾಗಿಯಷ್ಟೇ ಅನಕೃ ಅವರನ್ನು ನೆನಪಿಸಿಕೊಳ್ಳುವಂತಿದ್ದರೆ ಬಹುಶಃ, ಅವರು ಭೈರಪ್ಪನವರ ಅಣ್ಣನಂತೆ ಕಾಣುತ್ತಿದ್ದರೇನೊ. ಆದರೆ, ಅನಕೃ ಭಿನ್ನವಾಗಿ ನಿಲ್ಲುವುದು ಅವರ ಜನಪರ ನಿಲುವುಗಳು ಹಾಗೂ ಕನ್ನಡ ಚಳವಳಿಗೆ ವಿವೇಕ, ತಾತ್ವಿಕತೆ ಒದಗಿಸಿಕೊಟ್ಟ ಕಾರಣದಿಂದಾಗಿ. ಕಾದಂಬರಿ ರಚನೆ ಹಿನ್ನೆಲೆಯಲ್ಲಿ ಬರವಣಿಗೆಯನ್ನೇ ವೃತ್ತಿಯನ್ನಾಗಿಸಿಕೊಂಡ ಮಹತ್ವಾಕಾಂಕ್ಷೆಯಿಲ್ಲದ ಅವಸರದ ಬರಹಗಾರನೊಬ್ಬ ಇಣುಕಿದರೆ, ಸಾರ್ವಜನಿಕ ಬದುಕಿನಲ್ಲಿ ಅವರ ಸಾಮಾಜಿಕ ಕಾಳಜಿ, ವೈಚಾರಿಕತೆ ಸ್ಪಷ್ಟವಾಗಿ ಕಾಣಿಸುತ್ತವೆ.

ಭಾಷಣಕಾರರಾಗಿ ಅನಕೃ ಬಗ್ಗೆ ದಂತಕಥೆಗಳಂತಹ ಪ್ರಸಂಗಗಳಿವೆ. ಒಂದೇ ದಿನ ನಾಲ್ಕೈದು ಕಡೆ ಯಾವ ಪೂರ್ವಸಿದ್ಧತೆಯೂ ಇಲ್ಲದೆ ಅದ್ಭುತ ಭಾಷಣ ಮಾಡಬಲ್ಲ ಶಕ್ತಿಯಿದ್ದ ಅವರು ಕನ್ನಡನಾಡು ಕಂಡ ಅಪ್ರತಿಮ ವಾಗ್ಮಿಗಳಲ್ಲೊಬ್ಬರು. ಎಡ, ಬಲ, ನಡು ಪಂಥಗಳ ಚಲಾವಣೆಯ ದಿನಗಳಲ್ಲಿ 'ಸಂವಿಧಾನವಾದಿಗಳು' ಎಂದು ಕರೆದುಕೊಳ್ಳುವವರೂ ನಮ್ಮ ನಡುವೆ ಇದ್ದಾರೆ. ಅನಕೃ ಕೂಡ ಸಂವಿಧಾನಪ್ರಿಯರೇ. ಆದರೆ, ಅವರು ಪ್ರತಿಪಾದಿಸಿದ್ದು 'ಕನ್ನಡ ಸಂವಿಧಾನ'ವನ್ನು. 'ನಮ್ಮ ಧರ್ಮ, ನೀತಿ, ಮತ, ಸಾಹಿತ್ಯ, ರಾಜಕಾರಣ ಎಲ್ಲವೂ ಕನ್ನಡಮಯವಾಗಬೇಕು. ಕನ್ನಡದ ಪೂರ್ಣಕಳೆಯನ್ನು ನಾವು ಎಂದು ಕಾಣುತ್ತೇವೆಯೋ ಅಂದು ವಿಶ್ವದ ಹಾಗೂ ವಿಶ್ವೇಶ್ವರನ ಸಾಕ್ಷಾತ್ಕಾರ ಪಡೆಯುತ್ತೇವೆ' ಎನ್ನುವ ಅವರ ಮಾತಿನಲ್ಲಿ 'ಕನ್ನಡ ಸಂವಿಧಾನ'ದ ಪರಿಕಲ್ಪನೆಯಿದೆ. ಕುವೆಂಪು ಅವರಂತೆಯೇ ಅನಕೃ ಕೂಡ ಕನ್ನಡ ಜಗತ್ತಿನ ಮೂಲಕ ಭಾರತವನ್ನು, ವಿಶ್ವವನ್ನು ಪರಿಭಾವಿಸುವ ಮಾದರಿಯನ್ನು ಕಾಣಿಸಿದವರು. 'ನನ್ನಂಥವರು ಕನ್ನಡಕ್ಕೆ ಅನೇಕರಿದ್ದಾರೆ. ಆದರೆ ನನಗಿರುವುದು ಒಂದೇ ಕನ್ನಡ' ಎನ್ನುವುದು ಅವರ ಪ್ರಸಿದ್ಧ ಹೇಳಿಕೆ.

'ಕರ್ನಾಟಕದ ಹಿತವನ್ನು ವಿರೋಧಿಸುವ ವ್ಯಕ್ತಿ ಎಷ್ಟೇ ದೊಡ್ಡ ರಾಷ್ಟ್ರಭಕ್ತನಾದರೂ ಕನ್ನಡಿಗರು ಅವನನ್ನು ವಿರೋಧಿಸಬೇಕು' ಎನ್ನುವ ಅನಕೃ ಮಾತು, ರಾಜಕೀಯ ಕಾರಣಗಳಿಗಾಗಿ ಕನ್ನಡದ ಹಿತಾಸಕ್ತಿಯನ್ನು ನಿರ್ಲಕ್ಷಿಸುವ ಇಂದಿನ ರಾಜ ಕಾರಣಿಗಳ ಬಗ್ಗೆ ಮರುಯೋಚಿಸಲು ಪ್ರೇರಣೆಯಂತಿದೆ. 'ನಮ್ಮ ರಾಜಕೀಯ, ಸಾಮಾಜಿಕ ಜೀವನ ಕುಲಗೆಟ್ಟು ಹೋಗಿರುವುದು ಕೋಮುವಾದ ಭೂತಸ್ಥಾಪನೆಯಿಂದ. ಈ ಬೀದಿಯ ಮಾರಿಯನ್ನು ಮನೆಗೆ ಬರಮಾಡಿಕೊಳ್ಳುವುದು ಸಾಹಿತಿಗೆ ಭೂಷಣವಲ್ಲ; ಜನಾಂಗಕ್ಕೆ ಶ್ರೇಯಸ್ಕರವಲ್ಲ. ಉತ್ತಮ ಸಾಹಿತ್ಯ ಉತ್ತಮ ರಾಷ್ಟ್ರವನ್ನು ಬೆಳೆಸುವುದಕ್ಕೆ ಹೇತುವೆಂದು ನಂಬುವವರು ಇಂತಹ ವಿಷವಾಹಿನಿಗಳನ್ನು ತಡೆಗಟ್ಟಬೇಕು. ಕಲುಷಿತವಾಗಿರುವ ನಮ್ಮ ಸಾಮಾಜಿಕ ಜೀವನ ಮತ್ತಷ್ಟು ಕಲುಷಿತವಾಗಿ ಶಸ್ತ್ರಚಿಕಿತ್ಸೆಗೆ ಒದಗದಂತೆ ಎಚ್ಚರವಾಗಿರಬೇಕು' ಎನ್ನುವ ಅವರ ಮಾತುಗಳು ಹಿಂದಿಗಿಂತ ಇಂದಿಗೇ ಹೆಚ್ಚು ಹೊಂದುವಂತಿವೆ.

ವಿಶ್ವ ಸಿಡಿದೊಡೆಯದಂತೆ ಕಾಪಾಡಬಲ್ಲುದು ಮಾನವೀಯತೆಯೊಂದೆ ಎಂದು ನಂಬಿದ್ದ ಅನಕೃ, ಮಾನವೀಯತೆಯ ಪ್ರವಾದಿಯ ರೂಪದಲ್ಲಿ ಕವಿಯನ್ನು ಕಂಡಿದ್ದರು. 'ಸಾಹಿತ್ಯವೆಂಬ ಮಡಿಕೋಟೆಯನ್ನು ಕಟ್ಟಿಕೊಂಡು ಸುತ್ತಮುತ್ತಲಿನ ಜಗತ್ತಿನ ಹಾಹಾಕಾರದ ಮೇಲೆ ಅವಕುಂಠನ ಹಾಕಿ ತನ್ನ ಭಾವ ಪ್ರಪಂಚದಲ್ಲಿ ಮೈಮರೆಯುವ ಸಾಹಿತಿ ತನ್ನ ಅಥವಾ ದೇಶದ ಹಿತವನ್ನು ಸಾಧಿಸಲಾರ' ಎನ್ನುವ ಅವರ ಮಾತು, ಲೇಖಕನೊಬ್ಬ ಹೇಗಿರಬೇಕು ಎನ್ನುವ ಪ್ರಶ್ನೆಗೆ ಉತ್ತರದಂತಿದೆ. ಈ ಮಾತಿನ ಮುಂದುವರಿಕೆಯಾಗಿ, 'ಸರ್ವೇ ಜನೋ ಸುಖಿನೋ ಭವಂತು ಎಂಬ ತತ್ವವನ್ನು ನಿತ್ಯ ಪಠಿಸುವ ಸಾಹಿತಿಗಳು ಸರ್ವಜನ ಸುಖಾಕಾಂಕ್ಷಿಗಳಾದರೆ ಬಂಡವಾಳ ಭೂತವನ್ನೆದುರಿಸಬೇಕು. ಫ್ಯಾಸಿಸಂ, ಇಂಪೀರಿಯಲಿಸಂ, ಕಮ್ಯುನಿಸಂ ಎಲ್ಲಾ ಹೇಗೆ ಒಂದೊಂದು ದೇಶದ ಸ್ವಾತಂತ್ರ್ಯವನ್ನು ನುಂಗಿವೆಯೋ ಹಾಗೆ ಬಂಡವಾಳಶಾಹಿ ನಮ್ಮ ದೇಶವನ್ನು ನುಂಗುತ್ತದೆ. ಪ್ರಜಾಸ್ವಾಮ್ಯ, ಬಂಡವಾಳಸ್ವಾಮ್ಯಗಳೆಂಬ ಎರಡು ಪಕ್ಷಗಳು ಜಗತ್ತಿನಲ್ಲೆಲ್ಲಾ ಉದಯಿಸುತ್ತಿವೆ. ಇವೇ ಎರಡು ಜಾತಿಗಳು. ಇವುಗಳ ಮುಂದೆ ಉಳಿದವು ಗೌಣ. ಸಾಹಿತಿ ತಾನು ಯಾವ ಜಾತಿಯವನೆಂದು ನಿರ್ಧರಿಸಿಕೊಳ್ಳಬೇಕು' ಎನ್ನುತ್ತಾರೆ.

ರಾಜಕಾರಣ ಮತ್ತು ಧರ್ಮದ ನಡುವಣ ಗೆರೆ ಅಳಿಸಿ ಹೋಗಿರುವ ವಿರೋಧಾಭಾಸದೊಂದಿಗೆ, ಸರ್ಕಾರ ಹಾಗೂ ಕಾರ್ಪೊರೇಟ್ ಕಂಪನಿಯೊಂದರ ಎಚ್.ಆರ್. ವಿಭಾಗಕ್ಕೂ ಹೆಚ್ಚಿನ ವ್ಯತ್ಯಾಸ ಇಲ್ಲವಾಗಿರುವ ಸನ್ನಿವೇಶ ಇಂದಿನದು. 'ಬಂಡವಾಳಶಾಹಿ' ವ್ಯವಸ್ಥೆಗೆ ಆರ್ಥಿಕ ಮುಖದ ಜೊತೆಗೆ ಧಾರ್ಮಿಕ ಮುಖವಾಡವೂ ಇದೆ. 'ಧರ್ಮ ರಾಜಕಾರಣ'ದ ಚರ್ಚೆಯಲ್ಲಿ ಬಂಡವಾಳಿಗರ ಸೊಲ್ಲು ಸದ್ದಿಲ್ಲದೆ ಬಲವಾಗುತ್ತಿದೆ. ಈ ಅಪಾಯದ ಬಗ್ಗೆ ಗಮನಸೆಳೆಯುವುದರ ಜೊತೆಗೆ, ಪ್ರಜಾಸ್ವಾಮ್ಯ ಮತ್ತು ಬಂಡವಾಳಸ್ವಾಮ್ಯಗಳಲ್ಲಿ ಬರಹಗಾರ ಹಾಗೂ ಸಮಾಜ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕೆನ್ನುವುದಕ್ಕೆ ಅನಕೃ ಮಾತು ದಾರಿದೀಪದಂತಿದೆ ಹಾಗೂ ಆ ವಿಚಾರ, ಆರೋಗ್ಯಕರ ಸಮಾಜವನ್ನು ಹಂಬಲಿಸಿದ ಕನ್ನಡ ಸಾಂಸ್ಕೃತಿಕ ಲೋಕದ ವಿವೇಕದ ದನಿಯಾಗಿದೆ. ಅನಕೃ ಅವರ ಪಾಲಿಗೆ, ಧರ್ಮ–ರಾಜಕಾರಣದ ಸಹನಡಿಗೆಯನ್ನು ವಿರೋಧಿಸಿ, ಜಾತ್ಯತೀತ ಪ್ರಜಾಪ್ರಭುತ್ವದ ದಾರಿಯಲ್ಲಿ ನಡೆದ ಬಸವಣ್ಣ 'ಕನ್ನಡದ ಗುರು'. ಆ ಗುರುವಿನ ಪಥದಲ್ಲಿ ಅನಕೃ ನಡೆದ ದಾರಿ ಕನ್ನಡದ ಹಿತಾಸಕ್ತಿಗೆ ಪೂರಕವಾದ ಮಾದರಿ.

'ನಾನು ತಮಿಳು ಕನ್ನಡಿಗ. ಮಿರ್ಜಾ ಇಸ್ಮಾಯಿಲ್ಲರು ಮುಸ್ಲಿಂ ಕನ್ನಡಿಗ, ಅನಕೃ ಅಚ್ಚ ಕನ್ನಡಿಗ' ಎಂದು ಮಾಸ್ತಿ ಹೊಗಳಿದ್ದರು. 'ಅಚ್ಚ ಕನ್ನಡಿಗ' ಹೊಗಳಿಕೆ ಹುಟ್ಟಿಗೆ ಸೀಮಿತವಾಗಿರದೆ, ಕನ್ನಡದ ಕೆಲಸವನ್ನೂ ಸೂಚಿಸುವಂತಹದ್ದು. ತಮಿಳಿನ ಪ್ರಾಬಲ್ಯದಿಂದ ಬೆಂಗಳೂರಿನಲ್ಲಿ ಕನ್ನಡಿಗರು ಅನುಭವಿಸುತ್ತಿದ್ದ ಕೀಳರಿಮೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಅನಕೃ ಹಾಗೂ ಮ. ರಾಮಮೂರ್ತಿ ಎಣ್ಣೆಬತ್ತಿಯಾಗಿ ಕೆಲಸ ಮಾಡಿದರು. ಆ ಬೆಳಕಿನಲ್ಲೀಗ ನಾವು ಬದುಕುತ್ತಿದ್ದೇವೆ. ಕನ್ನಡ ಚಿತ್ರರಂಗ ಮದರಾಸಿನಿಂದ ಬೆಂಗಳೂರಿಗೆ ಸ್ಥಳಾಂತರಗೊಳ್ಳುವುದಕ್ಕೆ ಅಗತ್ಯವಾದ ಭೂಮಿಕೆಯನ್ನು ಸಿದ್ಧಪಡಿಸಿದವರಲ್ಲಿ ಅನಕೃ ಒಬ್ಬರಾಗಿದ್ದರು. ಮಲ್ಲಿಕಾರ್ಜುನ ಮನ್ಸೂರರು ವಚನಗಳನ್ನು ಹಾಡುವುದಕ್ಕೆ ಅನಕೃ ಒತ್ತಾಸೆಯೇ ಕಾರಣವಾಗಿತ್ತು.

ತ್ಯಾಗ ಮತ್ತು ತತ್ವಾಧಾರಿತವಾಗಿದ್ದ ಕನ್ನಡ ಚಳವಳಿ, ರಾಜಕಾರಣ–ಧರ್ಮದೊಂದಿಗೆ ತಳಕು ಹಾಕಿಕೊಂಡ ನಂತರ ತುಂಗೆಯಲ್ಲಿ ಸಾಕಷ್ಟು ನೀರು ಹರಿದಿದೆ. ಕನ್ನಡವನ್ನು ಜೀವದಂತೆ ಕಂಡು ಚಳವಳಿಯ ಭಾಗವಾಗಿದ್ದ ನಾಯಕರು, ಬದಲಾದ ಸಂದರ್ಭದಲ್ಲಿ ನುಡಿಪ್ರಜ್ಞೆಯನ್ನು ಧರ್ಮಪ್ರಜ್ಞೆಯಾಗಿಸಿಕೊಂಡ ರೂಪಾಂತರವನ್ನು ಈ ನಾಡು ಕಂಡಿದೆ. ಆದರೆ, ಅ.ನ.ಕೃ. ಅವರ ಹೃದಯದಲ್ಲಿ ಕನ್ನಡದೀಪ ಕೊನೆಯವರೆಗೂ ನಿಷ್ಕಲ್ಮಶವಾಗಿ ಉರಿಯುತ್ತಿತ್ತು. ಆ ಉರಿ ಮತ್ತು ಬೆಳಕಿನ ಅಗತ್ಯವನ್ನು, ಅನಕೃ ಅಗಲಿಕೆಯ ಐವತ್ತನೇ ವರ್ಷದ ಸಂದರ್ಭ ನಮಗೆ ನೆನಪಿಸಬೇಕಿತ್ತು. ನಮ್ಮ ಕನ್ನಡದ ವರ್ತಮಾನಕ್ಕೋ ಉರಿ ಮತ್ತು ಬೆಳಕುಗಳ ಅರಿವಿನ ಮರೆವೆಯಾದಂತಿದೆ.

ಚುರುಮುರಿ

ಏಟಿನ ಮಹಿಮೆ

• ಮಣ್ಣೆರಾಜು

ಜಿಲ್ಲಾ ಪಂಚಾಯಿತಿ ಎಲೆಕ್ಷನ್‌ಗೆ ಟಿಕೆಟ್ ಕೊಡಿ ಅಂತ ಶಂಕ್ರಿ ಪಕ್ಷದ ನಾಯಕರ ಬೆನ್ನಿಗೆ ಬಿದ್ದಿದ್ದ. ಇವನ ಕಾಟ ತಡೆಯಲಾರದೆ ತಾಳ್ಮೆಗೆಟ್ಟ ನಾಯಕರು ಕಪಾಳಮೋಕ್ಷ ಮಾಡಿದ್ದರು. ಈ ಹಲ್ಲೆ ದೊಡ್ಡ ಸುದ್ದಿಯಾಯಿತು. ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಚರ್ಚೆಯಾಯಿತು.

ಘಟನೆಯಿಂದ ಶಂಕ್ರಿ ಅಭಿಮಾನಿಗಳು ಕೆರಳಿದರು. 'ಹಲ್ಲೆ ಮಾಡಿದ ನಾಯಕರ ವಿರುದ್ಧ ಪೊಲೀಸರಿಗೆ ಕಂಪ್ಲೇಂಟ್ ಕೊಟ್ಟು, ಹೈಕಮಾಂಡ್‌ಗೆ ದೂರು ಕೊಟ್ಟು, ಶಿಸ್ತು ಕ್ರಮಕ್ಕೆ ಹೋರಾಟ ಮಾಡೋಣ' ಎಂದರು.

ಘಟನೆಯಿಂದ ನೊಂದ ಪತ್ನಿ ಸುಮಿ, 'ರಾಜಕಾರಣದ ಸಹವಾಸ ಬೇಡ, ವ್ಯವಸಾಯ ಮಾಡಿಕೊಂಡು ತೆಪ್ಪಗಿರಿ' ಎಂದಳು.

ಶಂಕ್ರಿ ನಕ್ಕ. ಉಳಿ ಪೆಟ್ಟಿನಿಂದ ಶಿಲೆ ಮೂರ್ತಿಯಾದಂತೆ ನಾಯಕರ ಏಟಿನಿಂದ ನಾಯಕತ್ವ ವೃದ್ಧಿಯಾಗುತ್ತದೆ ಎಂದು ಸಮಾಧಾನ ಮಾಡಿದ. ಹಾಗೇ ಆಯಿತು. ಆ ಒಂದೇ ಏಟಿನಿಂದ ಬೆಳಗಾಗುವಷ್ಟರಲ್ಲಿ ಶಂಕ್ರಿ ಲೀಡರ್ ಆಗಿ ರೂಪುಗೊಂಡಿದ್ದ.

ನ್ಯೂಸ್ ಚಾನೆಲ್, ಪೇಪರ್‌ನವರು ಬಂದು ಶಂಕ್ರಿಯ ಸಂದರ್ಶನ ಮಾಡಿ ವರ್ಣರಂಜಿತ ಸುದ್ದಿ ಬಿತ್ತರಿಸಿದರು. ಚಾನೆಲ್‌ಗಳು ಶಂಕ್ರಿಯನ್ನು ಸ್ಟುಡಿಯೊಗೆ ಕರೆಸಿಕೊಂಡು, ಪ್ರಸ್ತುತ ರಾಜಕಾರಣದ ಸ್ಥಿತಿಗತಿ ಬಗ್ಗೆ ಚರ್ಚಿಸಿ ತಮ್ಮ ಹಾಗೂ ಶಂಕ್ರಿಯ ಟಿಆರ್‌ಪಿ ಹೆಚ್ಚಿಸಿದವು.

'ನಿಮ್ಮ ಪಕ್ಷದಲ್ಲಿ ನಿಮ್ಮ ನಿಷ್ಠೆಗೆ ಬೆಲೆ ಇಲ್ಲ, ನಮ್ಮ ಪಕ್ಷಕ್ಕೆ ಬನ್ನಿ. ನಿಮಗೆ ಜಿಲ್ಲಾ ಪಂಚಾಯಿತಿಯೇನು, ಅಸೆಂಬ್ಲಿಗೇ ಟಿಕೆಟ್ ಕೊಡ್ತೀವಿ' ಎಂದು ಇತರ ಪಕ್ಷಗಳ ಮುಖಂಡರು ಶಂಕ್ರಿ ಮನೆ ಬಾಗಿಲಿಗೆ ಬಂದರು.

ಹಲ್ಲೆ ಮಾಡಿದ ನಾಯಕರು ಶಂಕ್ರಿಯನ್ನು ಕರೆಸಿಕೊಂಡು, 'ಸಾರಿ, ಬೇಜಾರು ಮಾಡ್ಕೊಬೇಡ, ನೀನು ನಮ್ಮ ಹುಡುಗ' ಎಂದು ತಲೆ ಸವರಿ, ಬೆನ್ನು ತಟ್ಟಿ, ಜಿಲ್ಲಾ ಪಂಚಾಯಿತಿ ಟಿಕೆಟ್, ಪಕ್ಷದಲ್ಲಿ ಸೂಕ್ತ ಸ್ಥಾನಮಾನ ನೀಡುವ ಭರವಸೆ ಕೊಟ್ಟು, ಶಂಕ್ರಿ ಹೆಗಲ ಮೇಲೆ ಕೈ ಹಾಕಿ ಫೋಟೊಗೆ ಪೋಸ್ ಕೊಟ್ಟರು.

ಚರ್ಚೆ

ಭಾರತೀಯ ಸಂಸ್ಕೃತಿ: ಚಾರಿತ್ರಿಕ ವಾಸ್ತವಾಂಶ

ನಮ್ಮ ದೇಶದ ಮೇಲಿನ ದಾಳಿಕೋರರನ್ನು ಹೊರದಬ್ಬಲು ಹೊರಟರೆ...

• ವೈ.ಎಸ್.ವಿ.ದತ್ತ

'ಮುಸ್ಲಿಮರು ಪಾಕಿಸ್ತಾನಕ್ಕೆ ಹೋಗಲಿ ಎನ್ನುವವರು ಹಿಂದೂಗಳೇ ಅಲ್ಲ' ಎಂಬ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ ಭಾಗವತ್ ಅವರ ಹೇಳಿಕೆಯ ಹಿಂದೆ 'ಹಿಂದೂಕರಣ'ದ ಅಜೆಂಡಾವೇ ಇದೆ ಎಂಬುದನ್ನು ಬಂಜಗೆರೆ ಜಯಪ್ರಕಾಶ್ ಸ್ಫುಟವಾಗಿ ವಿವರಿಸಿದ್ದಾರೆ (ಪ್ರ.ವಾ., ಜುಲೈ 10).

ಆರ್ಯರು ಸಿಂಧೂ ನಾಗರಿಕತೆಯ ನಿರ್ಮಾತೃಗಳು ಮತ್ತು ಇಲ್ಲಿಯ ಮೂಲನಿವಾಸಿಗಳು ಎಂದು ಪ್ರತಿಪಾದಿಸುವುದು, ಹಿಂದೂ ಎಂದರೆ ಅದು ಆರ್ಯ ಸಂಸ್ಕೃತಿ ಎಂದು ಸಾರಲು ಹೊರಟಿರುವ ಹುನ್ನಾರವಾಗಿದೆ. 'ಆರ್ಯಭಾಷಿಕ ಸಮುದಾಯ ಅಥವಾ ವೈದಿಕ ಸಂಸ್ಕೃತಿಯ ಜನರ ವಂಶಾವಳಿಯಲ್ಲಿ ಸಿಂಧೂ ಸಂಸ್ಕೃತಿಯ ಮೂಲನಿವಾಸಿಗಳ ಡಿಎನ್‌ಎ ಕಂಡುಬರುವುದಿಲ್ಲ, ಬದಲಿಗೆ ಅದು ದಕ್ಷಿಣ ಭಾರತೀಯರ ವರ್ಣತಂತುವಿನಲ್ಲಿ ಕಂಡುಬರುವ ಅಂಶ' ಎಂದು ವೈಜ್ಞಾನಿಕ ಸಂಶೋಧನೆಗಳು ಹೇಳಿದೊಡನೆಯೇ ಗಾಬರಿಗೊಂಡಂತೆ ಎಚ್ಚೆತ್ತ ಸಂಘ ಪರಿವಾರವು 'ಭಾರತೀಯ ಇತಿಹಾಸದ ಮರುಸಂಶೋಧನಾ ಮಂಡಳಿ' ರಚಿಸಲು ಮುಂದಾಯಿತು.

ತಮಾಷೆಯೆಂದರೆ, ಆರ್‌ಎಸ್‌ಎಸ್ 'ಗುರೂಜಿ' ಎನ್ನುವ ಎಂ.ಎಸ್.ಗೋಲ್ವಾಲ್ಕರ್ ಅವರು 1960ರ ಮಾರ್ಚ್ 20ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ಮಾತನಾಡುತ್ತಾ 'ಹಿಂದೂ ಮುಸಲ್ಮಾನರಿಬ್ಬರೂ ಇಲ್ಲಿ ಜೀವಿಸುತ್ತಾರೆ, ಇದೊಂದು ಸಂಯುಕ್ತ ರಾಷ್ಟ್ರ ಎನ್ನಲಾಗುತ್ತದೆ. ಆದರೆ ಇವರಲ್ಲಿ ಒಬ್ಬ ಆಕ್ರಮಣಕಾರಿ, ಇನ್ನೊಬ್ಬ ಅದನ್ನು ಪ್ರತಿಭಟಿಸಿದಾತ ಎಂಬುದನ್ನು ಹೇಗೆ ಮರೆಯಲು ಸಾಧ್ಯ? ಇವರಿಬ್ಬರೂ ಸೇರಿ ಒಂದು ರಾಷ್ಟ್ರವಾಗುವುದು ಹೇಗೆ? ಇಲ್ಲಿ ಒಂದು ಸಾರ್ವಭೌಮ ಹಿಂದೂ ರಾಷ್ಟ್ರ ಎಂದು ಸ್ಥಾಪನೆಯಾಗುವುದೋ ಅಂದು ಮಾತ್ರ ನಮಗೆ ನೂತನ ಸ್ವಾತಂತ್ರ್ಯ ದಿನ ಉದಯಿಸಲಿದೆ' ಎಂದು ಅರ್ಭಟಿಸಿದ್ದರು. ಈ ಮಾತಿಗೆ ಪರಿವಾರದವರು ಈಗ ಸಂಪೂರ್ಣ ವ್ಯತಿರಿಕ್ತವಾಗಿ ಮಾತನಾಡುತ್ತಿದ್ದಾರೆ.

ಭಾರತವನ್ನು ಮೊದಲು ಪ್ರವೇಶಿಸಿದ ಎರಡು ಪಂಗಡಗಳೆಂದರೆ ಪ್ರೋಟೋ ಆಸ್ಟ್ರೋಲಾಯಿಡ್‌ರು ಮತ್ತು ದ್ರಾವಿಡರು. ಪ್ರೋಟೋಗಳು ಮೆಡಿಟರೇನಿಯನ್ ಪ್ರಾಂತದ ಪೂರ್ವ ಭಾಗದ ಪ್ಯಾಲೆಸ್ತೀನ್ ಸಮೀಪದಿಂದ ಬಂದ ಕಪ್ಪುಜನರಾದರೆ, ದ್ರಾವಿಡರು ಅದೇ ಪ್ರಾಂತ್ಯದ ಹೆಚ್ಚು ನಾಗರಿಕರಾದ ಕಪ್ಪು ಚರ್ಮದವರು. ಆರ್ಯರಿಗಿಂತ ಮೊದಲೇ ಇಲ್ಲಿ ಬೇರುಬಿಟ್ಟಿದ್ದ ದ್ರಾವಿಡರು ತಮ್ಮ ಆದಿಮಾನವ ಗುಣಗಳಿಂದ ಹೊರಬಂದು, ಪ್ರಗತಿಯ ಹಾದಿಯಲ್ಲಿ ಮುನ್ನಡೆದಿದ್ದರು. ಆದರೆ ಕ್ರೂರ ಆಕ್ರಮಣಕಾರಿಗಳಾಗಿದ್ದ ಆರ್ಯರು ಭೂಮಿಗಾಗಿ ನಡೆದ ಸೆಣಸಾಟದಲ್ಲಿ ಗೆಲುವು ಪಡೆದು, ತಮ್ಮ ಶತ್ರುಗಳಾದ ಮೂಲನಿವಾಸಿ ದ್ರಾವಿಡರನ್ನು ಕಪ್ಪುಚರ್ಮದವರು, ಆಚಾರಹೀನರು, ಲಿಂಗಾರಾಧಕರು ಎಂದೆಲ್ಲ ತುಚ್ಛವಾಗಿ ಸಂಬೋಧಿಸುತ್ತಿದ್ದರು. ಆದರೆ ಕ್ರಮೇಣ ಅವರಲ್ಲಿ ಆಕ್ರಮಣಕಾರಿ ಮನೋಭಾವ ಕುಂದಿ, ಅವರೂ ನಮ್ಮ ಸಿಂಧೂ ನದಿಬಯಲಿನ ನಾಗರಿಕತೆಗೆ ಶರಣುಹೋದರು. ಮೊದಮೊದಲು ದ್ರಾವಿಡರ ಪೂಜೆ-ಪುನಸ್ಕಾರಗಳನ್ನು ಅಸಹ್ಯವಾಗಿ ಕಾಣುತ್ತಿದ್ದ ಆರ್ಯರು, ಶಿವನ ಪ್ರಾಧಾನ್ಯತೆಯನ್ನು ಒಪ್ಪಿಕೊಂಡರು. ಆರ್ಯರ ಜಾತಿ ಪದ್ಧತಿಯೊಳಕ್ಕೆ ದ್ರಾವಿಡರು ಗುಂಪುಗುಂಪಾಗಿ ಸೇರಿದ್ದರಿಂದ ಶೂದ್ರವರ್ಗವು ಬಲಿಷ್ಠವಾಗಿ ಬೆಳೆಯಿತು. ಇವೆಲ್ಲವೂ ಬೆಸೆದುಕೊಂಡು ಹಿಂದೂ ಸಂಸ್ಕೃತಿಯ ನಿರ್ಮಾಣವಾಯಿತು.

ಮುಸಲ್ಮಾನರು, ಕ್ರೈಸ್ತರನ್ನು ಆಕ್ರಮಣಕಾರರು ಎನ್ನುವವರು ಭಾರತವನ್ನು ಆಳಿದ ಶಕರು, ಕುಷಾಣರನ್ನು ಏನೆನ್ನುತ್ತಾರೆ? ಶಕರು ಮೂಲತಃ ಈಗಿನ ಪೂರ್ವ ಇರಾನ್ ಮತ್ತು ದಕ್ಷಿಣ ಆಫ್ಘಾನಿಸ್ತಾನದ ವ್ಯಾಪ್ತಿಯ ಸಿಯೆಸ್ತಾನ್ ಪ್ರಾಂತದವರು. ಭಾರತದ ಜೈನ ಆಚಾರ್ಯ ಕಲಕನು, ತನ್ನ ಸುಂದರ ಸನ್ಯಾಸಿ ತಂಗಿಯ ಶೀಲಭಂಗ ಮಾಡಿದ ಉಜ್ಜಯಿನಿ ದೊರೆಯ ವಿರುದ್ಧ ಸೇಡು ತೀರಿಸಿಕೊಳ್ಳಲು ಶಕರನ್ನು ಕರೆತಂದನು. ಹೀಗೆ ಬಂದ ಶಕರು ಸೌರಾಷ್ಟ್ರ, ಗುಜರಾತ್‌ಗಳನ್ನು ಗೆದ್ದು ಆಡಳಿತ ನಡೆಸಿದರು. ಅವರಿಂದಲೇ ಶಕ ಸಂವತ್ಸರ ಎಂಬುದು ಬಳಕೆಗೆ ಬಂದಿತು. ವಿಕ್ರಮ ಸಂವತ್ಸರಕ್ಕಿಂತ ಹೆಚ್ಚು ಪವಿತ್ರವೆಂದು ಪರಿಗಣಿತವಾಗಿರುವ ಇದನ್ನು ಭಾರತೀಯ ಪಂಚಾಂಗ, ಜಾತಕಗಳಲ್ಲಿ ಬಳಸಲಾಗುತ್ತಿದೆ. ಭಾರತ ಸರ್ಕಾರವು ತನ್ನ ದಾಖಲೆಗಳಲ್ಲಿ ಬಳಸುತ್ತಾ ಅದಕ್ಕೆ ರಾಷ್ಟ್ರೀಯ ಮಾನ್ಯತೆ ನೀಡಿದೆ.

ಹೀಗೆ ಇಸ್ಲಾಂ ಮತ್ತು ಯುರೋಪಿಯನ್ ಸಂಸ್ಕೃತಿಗೆ ಮೊದಲೇ ಪ್ರೋಟೋ ಆಸ್ಟ್ರೋಲಾಯಿಡ್, ದ್ರಾವಿಡ, ಆರ್ಯನ್, ಪರ್ಷಿಯನ್, ಗ್ರೀಕ್ ಮೊದಲಾದ ಸಂಸ್ಕೃತಿಗಳು ಈ ನೆಲಕ್ಕೆ ದಾಳಿಯಿಟ್ಟಿದ್ದವು. ಇದರಿಂದಾಗಿ ಭಾರತೀಯ ಸಂಸ್ಕೃತಿಯು ಅನೇಕ ಜನಾಂಗಿಕ ಘಟಕಗಳ ಬೆಸುಗೆಯಾಯಿತು. ಪ್ರತಿಯೊಂದು ಸಾಂಸ್ಕೃತಿಕ ಸಂಪರ್ಕವೂ ಭಾರತವನ್ನು ಹೊಸ ಹೊಸ ಆಲೋಚನೆಗೆ ಹಚ್ಚಿತು. ಹೀಗಿರುವಾಗ, ನಾವು ಅಭಿಮಾನದಿಂದ ಹೇಳಿಕೊಳ್ಳುವ ಹಿಂದೂ ಸಂಸ್ಕೃತಿಯಲ್ಲಿ, ದಾಳಿಕೋರರನ್ನು ಹೊರದಬ್ಬಿ ಮೂಲನಿವಾಸಿಗಳನ್ನಷ್ಟೇ ಉಳಿಸಿಕೊಳ್ಳಬೇಕೆಂಬ ಆರ್‌ಎಸ್‌ಎಸ್ ವಾದವನ್ನು ಅನುಷ್ಠಾನಕ್ಕೆ ತರಲು ಹೊರಟಲ್ಲಿ, ನಮ್ಮಲ್ಲಿ ಬಹುಸಂಖ್ಯಾತರು ಈ ದೇಶವನ್ನು ಬಿಟ್ಟು ಹೊರನಡೆಯಬೇಕಾದೀತೇನೊ!

ಭಗವತ್‌ಶರಣ ಉಪಾಧ್ಯಾಯರು ಹೇಳುವಂತೆ, 'ಉತ್ಪ್ರೇಕ್ಷಿತ ರಾಷ್ಟ್ರೀಯತೆಯೇ ಆಕ್ರಮಣಶೀಲ ಅಂಧಾಭಿಮಾನವಾಗಿ ಹಿಂಸಾಚಾರ, ಸಾರ್ವಜನಿಕ ಸುಳ್ಳುಗಳಿಗೆ ದಾರಿಯಾಗುತ್ತದೆ. ಹಾಗಾಗಿ ರಾಷ್ಟ್ರೀಯ ಅಂಧಾಭಿಮಾನದಿಂದ ಇತಿಹಾಸಕಾರರು ದೂರವಿರಬೇಕು'. ಆದುದರಿಂದ ಸಂಘ ಪರಿವಾರದವರು ಈಗ ಮುಸಲ್ಮಾನರ ಬಗ್ಗೆ ಉತ್ತರಪ್ರದೇಶದ ಚುನಾವಣೆಯ ಸಂದರ್ಭದಲ್ಲಿ ತಳೆದಿರುವ ಮೃದು ಧೋರಣೆಯನ್ನು ನಾವು ಬಹಳಷ್ಟು ಅನುಮಾನದಿಂದ ಅಪಾಯಕಾರಿ ಎಂದೇ ಎಚ್ಚರ ತಾಳಬೇಕಾಗಿದೆ.

ಲೇಖಕ: ರಾಜಕೀಯ ವಿಶ್ಲೇಷಕ, ಜೆಡಿಎಸ್ ಮುಖಂಡ

ವಾಚಕರ ವಾಣಿ

ದಾಖಲೆಗೆ ಸೂಚನೆ: ಆಯೋಗದ ಎಡವಟ್ಟು

ಕರ್ನಾಟಕ ಲೋಕಸೇವಾ ಆಯೋಗವು ಚಿತ್ರಕಲಾ ಶಿಕ್ಷಕರ ತಾತ್ಕಾಲಿಕ ನೇಮಕಾತಿ ಪಟ್ಟಿಯಲ್ಲಿ, ಅಗತ್ಯ ದಾಖಲೆಗಳನ್ನು ಕಳುಹಿಸುವಂತೆ ಅಭ್ಯರ್ಥಿಗಳಿಗೆ ಸೂಚನೆ ನೀಡಿದೆ. ಮೊರಾರ್ಜಿ ದೇಸಾಯಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಚಿತ್ರಕಲಾ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಕಳೆದ ಐದು ವರ್ಷಗಳಿಂದ ನಡೆಯುತ್ತಿದೆ. ಇದು ಆರನೇ ಪಟ್ಟಿ. ಇದರ ಬಗ್ಗೆ ಇದೇ 7ರಂದು ಇ- ಮೇಲ್ ಮೂಲಕ ಮಾಹಿತಿ ಕಳುಹಿಸಲಾಗಿದ್ದು, ಯಾವ್ಯಾವ ದಾಖಲೆಗಳನ್ನು ಎಷ್ಟೆಷ್ಟು ನೀಡಬೇಕೆಂದು ಹೇಳಿಲ್ಲ. ಜೊತೆಗೆ ದಾಖಲೆಗಳನ್ನು ಕಳುಹಿಸಲು ಕೊನೆಯ ದಿನಾಂಕ 9 ಎಂದು ಹೇಳಲಾಗಿದೆ. ಬಹಳಷ್ಟು ಮಂದಿಗೆ ಈ ಬಗ್ಗೆ ಲಿಖಿತ ಪತ್ರವು 10ರಂದು ತಲುಪಿದೆ. ಇಂತಹ ಸಂದರ್ಭದಲ್ಲಿ ಅವರು ದಾಖಲೆಗಳನ್ನು ಕಳುಹಿಸಿಕೊಡುವುದಾದರೂ ಹೇಗೆ? ಈ ತಪ್ಪಿಗೆ ಯಾರು ಹೊಣೆ? ಆಯೋಗವು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೂ ಅಗತ್ಯ ಸಮಯವನ್ನು ನೀಡಬೇಕು.

ಟಿ.ಪ್ರಭಾಕರ್, ಬೆಂಗಳೂರು

ಪಠ್ಯಪುಸ್ತಕ ಮುದ್ರಣದಲ್ಲಿ ಉದಾಸೀನ

ಸರ್ಕಾರಿ ಶಾಲೆಗಳಿಗೆ ದಾಖಲಾಗುತ್ತಿರುವ ಮಕ್ಕಳಿಗೆ ಹಿಂದಿನ ಸಾಲಿನ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಹಳೆಯ ಪಠ್ಯಪುಸ್ತಕಗಳನ್ನು ನೀಡಲಾಗುತ್ತಿದೆ. ಕೊಳಕಾದ ಹರಿದ ಪುಸ್ತಕಗಳು ಇದರಲ್ಲಿ ಸೇರಿವೆ. ಉಚಿತವೆಂದು ಒಮ್ಮೆ ವಿತರಣೆ ಮಾಡಿದ ಪುಸ್ತಕಗಳನ್ನು ವಾಪಸ್ ಪಡೆದುಕೊಂಡರೆ ಉಚಿತ ಎನ್ನುವ ಪದಕ್ಕೆ ಇರುವ ಅರ್ಥವಾದರೂ ಏನು? ಪಠ್ಯಪುಸ್ತಕ ವಿತರಣೆಯನ್ನು ಆದ್ಯತೆಯ ವಿಷಯವಾಗಿ ಪರಿಗಣಿಸದಿರುವುದು ಎಷ್ಟು ಸರಿ? ಕೋವಿಡ್ ಹಾವಳಿಯ ನಡುವೆ ಶಾಲೆಗಳು ಆರಂಭವಾಗದಿದ್ದ ಕಾರಣ ಪಠ್ಯಪುಸ್ತಕಗಳನ್ನು ಮುದ್ರಿಸಲು ಬಹಳಷ್ಟು ಸಮಯ ದೊರೆತಿದ್ದರೂ ಈ ವಿಷಯದಲ್ಲಿ ಉದಾಸೀನ ತಳೆದಿದ್ದು ಸ್ಪಷ್ಟವಾಗಿದೆ.

'ಪುಸ್ತಕ ಕೊಡೂದು ಲೇಟಾಗುತ್ತೆ ಅಂತ ಹಳೆಪುಸ್ತಕ ಈಸ್ಕತಾ ಇದ್ದೀರಲ್ಲ ಸ್ವಾಮಿ, ಯೂನಿಫಾರಮ್ಮು ಕೊಡೂದು ಲೇಟ್ ಆದ್ರೆ ಹಳೆ ಯೂನಿಫಾರಮ್ ಏನಾದ್ರು ಬಿಚ್ಚಿಸ್ಕಂಡು ವಾಪಸ್ ಕೊಡ್ಬೇಕ?'– ಇಂಥ ಹಳೆಯ ಪುಸ್ತಕ ವಾಪಸ್ ಮಾಡಿ ಬರುತ್ತಿದ್ದ ಪೋಷಕರೊಬ್ಬರು ಹೇಳಿದ ಈ ಮಾತು ತಮಾಷೆಯೆನಿಸಿದರೂ ಮಾರ್ಮಿಕವಾಗಿದೆ.

ಪುಟ್ಟದಾಸು, ಮಂಡ್ಯ

ದಂಡ ತೆರಬೇಕಾದೀತು ಮುಂದಿನ ತಲೆಮಾರು

ಅಕ್ರಮ ಗಣಿಗಾರಿಕೆಯಿಂದ ಮಂಡ್ಯದ ಬೇಬಿ ಬೆಟ್ಟ ದಿನೇ ದಿನೇ ಕರಗುತ್ತಿದೆ, ಆದರೆ ಗಣಿ ಮಾಲೀಕರು ಉಳಿಸಿಕೊಂಡಿರುವ ರಾಜಧನ ಹಾಗೂ ದಂಡದ ಬಾಕಿ ಮೊತ್ತವು ಬೆಟ್ಟಕ್ಕಿಂತ ಎತ್ತರವಾಗಿ ಏರತೊಡಗಿರುವುದು (ಪ್ರ.ವಾ., ಜುಲೈ 12) ಸರ್ಕಾರ ಹಾಗೂ ಸಂಬಂಧಪಟ್ಟ ಇಲಾಖೆಗಳ ನಿರ್ಲಕ್ಷ್ಯಕ್ಕೆ ನಿದರ್ಶನ. ಗಣಿಗಾರಿಕೆಯು ಜಿಲ್ಲಾಡಳಿತದ ಕಣ್ಣು ತಪ್ಪಿಸಿ ನಡೆಯಲು ಸಾಧ್ಯವಿಲ್ಲ. ಹಾಗೆಯೇ ಇದು ಒಂದೆರಡು ದಿನಗಳಲ್ಲಿ ನಡೆಯುವ ಚಟುವಟಿಕೆ ಕೂಡ ಅಲ್ಲ. ಜನಪ್ರತಿನಿಧಿಗಳು ಈ ವಿಚಾರವಾಗಿ ಸಂಬಂಧಪಟ್ಟ ಇಲಾಖೆಗೆ ಸರಿಯಾದ ಮಾಹಿತಿ ಒದಗಿಸಿ ತನಿಖೆಗೆ ಸಹಕರಿಸುವುದನ್ನು ಬಿಟ್ಟು, ಪರಸ್ಪರ ವೈಯಕ್ತಿಕ ಪ್ರತಿಷ್ಠೆಯ ಮಟ್ಟಕ್ಕೆ ವಿಷಯವನ್ನು ಬೆಳೆಸುವುದರಿಂದ ಮೂಲ ಆಶಯ ಮರೆಯಾಗುತ್ತದೆ.

ಅಕ್ರಮ ಗಣಿಗಾರಿಕೆಯಿಂದ ಗಣಿ ಮಾಲೀಕರು ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ದಂಡದ ಹಣ ಉಳಿಸಿಕೊಂಡಿದ್ದಾರೆ ಎಂದರೆ ಇದರ ಅರ್ಥ ನಮ್ಮ ಆಡಳಿತವು ಅಕ್ರಮ ನಡೆಯುವವರೆಗೂ ಕಾದು ದಂಡಾಸ್ತ್ರ ಪ್ರಯೋಗ ಮಾಡಿದಂತೆ ಆಗುವುದಿಲ್ಲವೇ? ಪರಿಸರ ನಾಶಕ್ಕೆ ಕಾರಣವಾಗುವ ಇಂಥ ಕೃತ್ಯಗಳಿಗೆ ದಂಡ ಹಾಕುವ ಕ್ರಮದಿಂದ ಸರ್ಕಾರದ ಬೊಕ್ಕಸ ತುಂಬುತ್ತದೆಯೇ ವಿನಾ ನಾಶವಾದ ಪರಿಸರವನ್ನು ಪುನರುಜ್ಜೀವನಗೊಳಿಸುವುದು ಸಾಧ್ಯವಿಲ್ಲ. ಇದಕ್ಕೆ ನಿಜವಾಗಿ ದಂಡ ತೆರುವಂತಾಗುವುದು ಮುಂದಿನ ತಲೆಮಾರಿನ ಜನರ ಬದುಕು.

ಡಾ. ಜಿ.ಬೈರೇಗೌಡ, ಬೆಂಗಳೂರು

ತಡೆವುದು ಹೇಗೆ?

ಒಂದು ಸಣ್ಣಬಂಡೆಗಲ್ಲಿಗ್ಹತ್ತು
ಏಟು ಹೊಡೆದರೂ
ಏನೂ ಆಗದಂತೆ ಇದ್ದು
ಕೊನೆಗೆ ಬಿದ್ದ ಒಂದೇ ಏಟಿಗಡ್ಡಡ್ಡ ಸೀಳ್ವುದು,
ಅಂತೆ ಕಣಾ ಕಟ್ಟೆಯೊಡಲು
ಸುತ್ತಮುತ್ತ ಸಾವಿರಾರು
ಬಾರಿ ಮದ್ದು ಸಿಡಿದರೂ
ಏನೂ ಆಗಿಲ್ಲ ಎಂದು
ವಾದಿಸಬಹುದು ನೀವು ಇಂದು
ದಿಢೀರೆಂದು ನಾಳೆ ಬರುವ
ಕೇಡ ತಡೆವುದ್ಹೇಗೆ?

ಜೆ.ಬಿ.ಮಂಜುನಾಥ, ಪಾಂಡವಪುರ

ಶಾಲಾ ಪಾಠ: ವೇಳಾಪಟ್ಟಿ ಪ್ರಕಟವಾಗಲಿ

ಹೊಸ ಶೈಕ್ಷಣಿಕ ವರ್ಷದಲ್ಲಿ, ದೂರದರ್ಶನದ ಚಂದನ ವಾಹಿನಿಯು ಶಾಲಾ ವಿದ್ಯಾರ್ಥಿಗಳಿಗಾಗಿ ಆರಂಭಿಸಿರುವ ವಿಡಿಯೊ ಪಾಠಗಳು ಹಿಂದಿನ ವರ್ಷಕ್ಕಿಂತಲೂ ಚೆನ್ನಾಗಿ ಮೂಡಿಬರುತ್ತಿವೆ. ಆದರೆ ಯಾವ ದಿನ ಯಾವ ತರಗತಿಯ ಪಾಠಗಳನ್ನು ಬಿತ್ತರಿಸಲಾಗುತ್ತದೆ ಎಂಬುದು ತಿಳಿಯದೆ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ತೀವ್ರ ತೊಂದರೆ ಆಗಿದೆ. ತನ್ನ ತರಗತಿಯ ಪಾಠ ಇವತ್ತು ಇದೆಯೋ ಇಲ್ಲವೋ ಇದ್ದರೆ ಎಷ್ಟು ಗಂಟೆಗೆ ಇದೆ ಎಂಬ ಮಾಹಿತಿ ತಿಳಿಯದೆ ವಿದ್ಯಾರ್ಥಿಗಳು ಅತ್ಯಮೂಲ್ಯವಾದ ಪಾಠಗಳನ್ನು ತಪ್ಪಿಸಿಕೊಳ್ಳುತ್ತಿದ್ದಾರೆ. ಶನಿವಾರ ಮತ್ತು ಭಾನುವಾರಗಳಂದು ಪಾಠಗಳು ಬಹುತೇಕ ಇರುವುದಿಲ್ಲ. ಆದರೂ ಅಂದು ಕೆಲವೊಮ್ಮೆ ಹಠಾತ್ತನೆ ಯಾವುದಾದರೂ ತರಗತಿಯ ಪಾಠಗಳನ್ನು ಬಿತ್ತರಿಸುವುದು ಕಂಡುಬಂದಿದೆ. ನನ್ನ ಹೆಂಡತಿ, ಮಕ್ಕಳು ಬೆಳಿಗ್ಗೆಯಿಂದ ಸಂಜೆಯವರೆಗೆ ಟಿ.ವಿ ಮುಂದೆ ಕೂತು, ಇವತ್ತು ಯಾವಾಗ ಯಾವ ತರಗತಿಯ ಪಾಠ ಇದೆ ಎಂಬುದನ್ನು ತಿಳಿಯಲು ಪರದಾಡುವುದನ್ನು ನೋಡಿದರೆ, ನನಗೆ ಮಳೆಗಾಗಿ ಆಕಾಶವನ್ನೇ ನೋಡುತ್ತಿರುವ ರೈತನ ನೆನಪಾಗುತ್ತದೆ.

ಹಿಂದಿನ ವರ್ಷದ ಅನುಭವದಲ್ಲಿ ಹೇಳುವುದಾದರೆ, ಮೊಬೈಲ್ ಮೂಲಕ ನಡೆದ ಆನ್‌ಲೈನ್ ಪಾಠಗಳು ಬಹುತೇಕ ಯಶಸ್ವಿಯಾಗಿಲ್ಲ. ಇಂದು ಪ್ರತಿಯೊಬ್ಬರ ಮನೆಯಲ್ಲೂ ಟಿ.ವಿ ಇರುವುದರಿಂದ ಆನ್‌ಲೈನ್ ಮೊಬೈಲ್ ಪಾಠಕ್ಕಿಂತಲೂ ಚಂದನ ವಾಹಿನಿಯಲ್ಲಿ ಬಿತ್ತರಿಸುವ ಶಾಲಾ ಪಾಠಗಳು ಬಹಳ ಪ್ರಯೋಜನಕಾರಿ ಆಗುವುದರಲ್ಲಿ ಸಂಶಯವೇ ಇಲ್ಲ. ಆದ್ದರಿಂದ ತರಗತಿವಾರು ಪಾಠಗಳು ಬಿತ್ತರಿಸುವ ಕಾರ್ಯಕ್ರಮದ ವೇಳಾಪಟ್ಟಿಯನ್ನು ಮುಂಚಿತವಾಗಿ ಪ್ರಕಟಿಸಿದರೆ ವಿದ್ಯಾರ್ಥಿಗಳು ಪೂರ್ಣ ಪ್ರಯೋಜನ ಪಡೆಯಬಹುದು. ಶಾಲೆಗಳಲ್ಲಿರುವ ವೇಳಾಪಟ್ಟಿಯಂತೆ ಇಡೀ ಶೈಕ್ಷಣಿಕ ವರ್ಷಕ್ಕೆ ಒಂದು ನಿಶ್ಚಿತ ವೇಳಾಪಟ್ಟಿ ಇದ್ದರೆ ಇನ್ನೂ ಉತ್ತಮ.

ಪ್ರಕಾಶ ವಿ. ಹೆಬ್ಬಳ್ಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೇರಳಕ್ಕೆ ಝೀಕಾ ಕಳವಳ

ಕೋವಿಡ್-19ರ ಒಂದನೇ ಅಲೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿ ಜಾಗತಿಕ ಮಟ್ಟದಲ್ಲಿ ಮೆಚ್ಚುಗೆ ಪಡೆದಿದ್ದ ಕೇರಳ ರಾಜ್ಯದಲ್ಲಿ ಎರಡನೇ ಅಲೆ ನಿಯಂತ್ರಣಕ್ಕೇ ಬರುತ್ತಿಲ್ಲ. ಅದರ ನಡುವೆಯೇ ಝೀಕಾ ವೈರಸ್ ಹಾವಳಿ ಕೇರಳವನ್ನು ಕಂಗೆಡಿಸಿದೆ.

ಝೀಕಾ ವೈರಸ್‌ನ ಹೊಸ ಎರಡು ಪ್ರಕರಣಗಳು ಮಂಗಳವಾರ ಪತ್ತೆಯಾಗಿವೆ. ಹಾಗಾಗಿ, ಒಟ್ಟು ಪ್ರಕರಣಗಳ ಸಂಖ್ಯೆ 21ಕ್ಕೆ ಏರಿಕೆಯಾಗಿದೆ. ಮೊದಲ ಪ್ರಕರಣ ಇದೇ 8ರಂದು ಪತ್ತೆಯಾಗಿತ್ತು. ತಿರುವನಂತಪುರ ಜಿಲ್ಲೆಯ 24 ವರ್ಷ ವಯಸ್ಸಿನ ಗರ್ಭಿಣಿಯಲ್ಲಿ ಸೋಂಕು ಕಾಣಿಸಿಕೊಂಡಿತ್ತು. ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮಹಿಳೆಯು ಇದೇ 7ರಂದು ಮಗುವಿಗೆ ಜನ್ಮ ನೀಡಿದ್ದರು. ಜ್ವರ, ತಲೆನೋವು ಜತೆಗೆ, ದೇಹದಲ್ಲಿ ಕೆಂಪು ದದ್ದುಗಳು ಮೂಡಿದ್ದ ಮಹಿಳೆಯನ್ನು ಜೂನ್ 7ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆಯಲ್ಲಿ ನಡೆಸಿದ ಪರೀಕ್ಷೆಯಲ್ಲಿ ಮಹಿಳೆಗೆ ಝೀಕಾ ಸೋಂಕು ದೃಢಪಟ್ಟಿತ್ತು.

ತಮಿಳುನಾಡು ಗಡಿ ಸಮೀಪದ ನಿವಾಸಿಯಾಗಿರುವ ಆ ಮಹಿಳೆಯು ಕೇರಳದಿಂದ ಹೊರಗೆ ಹೋಗಿಯೇ ಇರಲಿಲ್ಲ ಎಂಬುದು ಆಶ್ಚರ್ಯಕ್ಕೆ ಕಾರಣವಾಗಿದೆ.

ಹೆಚ್ಚು ಹೆಚ್ಚು ಪ್ರಕರಣಗಳು ಧೃಢಪಡುತ್ತಿದ್ದಂತೆಯೇ ಕೇರಳದಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಕೇಂದ್ರ ಸರ್ಕಾರ ಕೂಡ ಝೀಕಾ ವೈರಸ್ ಅನ್ನು ಗಂಭೀರವಾಗಿ ಪರಿಗಣಿಸಿದೆ. ಕೇರಳಕ್ಕೆ ಏಮ್ಸ್‌ನ ಆರು ಸದಸ್ಯರು ಇರುವ ಪರಿಣತರ ತಂಡವೊಂದನ್ನು ಈಗಾಗಲೇ ಕಳುಹಿಸಿದೆ.

ಝೀಕಾ ಪರೀಕ್ಷೆಗಾಗಿ 2,100 ಪರೀಕ್ಷಾ ಕಿಟ್‌ಗಳನ್ನು ಪುಣೆಯ ವೈರಾಣು ಸಂಸ್ಥೆಯಿಂದ ಕೇರಳಕ್ಕೆ ಕಳುಹಿಸಲಾಗಿದೆ. ತಿರುವನಂತಪುರ, ತ್ರಿಶ್ಶೂರು ಮತ್ತು ಕೋಯಿಕ್ಕೋಡ್‌ನ ವೈದ್ಯಕೀಯ ಕಾಲೇಜುಗಳು ಮತ್ತು ಆಲಪ್ಪುಳದಲ್ಲಿರುವ ರಾಷ್ಟ್ರೀಯ ವೈರಾಣು ಸಂಸ್ಥೆಯ ಶಾಖೆಯಲ್ಲಿ ಪರೀಕ್ಷೆಯ ವ್ಯವಸ್ಥೆ ಮಾಡಲಾಗಿದೆ.

ರಾಜ್ಯದ ಇತರ ಪ್ರಯೋಗಾಲಯಗಳಲ್ಲಿಯೂ ಪರೀಕ್ಷೆ ವ್ಯವಸ್ಥೆ ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ. ರಾಜ್ಯದಲ್ಲಿ ಒಟ್ಟು 27 ಸರ್ಕಾರಿ ಪ್ರಯೋಗಾಲಯಗಳಿದ್ದು, ಹೆಚ್ಚಿನವುಗಳಲ್ಲಿ ಪರೀಕ್ಷೆಗೆ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದ್ದಾರೆ. ಝೀಕಾ ಲಕ್ಷಣಗಳು ಇದ್ದವರನ್ನು ವಿಶೇಷವಾಗಿ ಗರ್ಭಿಣಿಯರನ್ನು ಪರೀಕ್ಷೆಗೆ ಒಳಪಡಿಸಬೇಕು ಎಂದು ಕೇರಳದ ಖಾಸಗಿ ಆಸ್ಪತ್ರೆಗಳಿಗೂ ಸೂಚನೆ ನೀಡಲಾಗಿದೆ.

ಭಾರತಕ್ಕೆ ಹೊಸದಲ್ಲ

ವೈರಾಣು ಕುಟುಂಬಕ್ಕೆ ಸೇರಿದ ಝೀಕಾ ವೈರಸ್ ಸೊಳ್ಳೆಗಳಿಂದ ಮನುಷ್ಯರಿಗೆ ಹರಡುತ್ತದೆ. ಈಡಿಸ್ ಜಾತಿಯ ಸೊಳ್ಳೆಗಳು ಕಚ್ಚುವುದರಿಂದ ಮನುಷ್ಯನು ಸೋಂಕಿಗೆ ಒಳಗಾಗುತ್ತಾನೆ. ವ್ಯಕ್ತಿ ಸೋಂಕಿಗೆ ಒಳಗಾಗಿರುವುದು ತಕ್ಷಣಕ್ಕೆ ತಿಳಿಯುವುದಿಲ್ಲ. ವೈರಾಣುವಿಗೆ ಲಸಿಕೆ ಲಭ್ಯವಿಲ್ಲ.

ಈಡಿಸ್ ಈಜಿಪ್ಟಿ ಮತ್ತು ಈಡಿಸ್ ಅಲ್ಬೋಪಿಕ್ಟಸ್ ಎಂಬ ಜಾತಿಯ ಸೊಳ್ಳೆಗಳು ಈ ವೈರಸ್‌ನ ವಾಹಕಗಳು. ಇದೇ ಜಾತಿಯ ಸೊಳ್ಳೆಗಳು ಡೆಂಘಿ ಮತ್ತು ಚಿಕೂನ್‌ಗುನ್ಯ ಸೋಂಕನ್ನೂ ಹರಡುತ್ತವೆ. ಪ್ರಾಣಿಗಳ ಭಕ್ಷ್ಯಗಳು, ಕೊಳಗಳು, ಟೈರ್‌ಗಳು, ಬಕೆಟ್‌ಗಳು ಅಥವಾ ಸಸ್ಯ ಮತ್ತು ಹೂವಿನಕುಂಡಗಳಂತಹ ಸ್ಥಳಗಳಲ್ಲಿ, ನಿಂತ ನೀರಿನಲ್ಲಿ ಈ ಸೊಳ್ಳೆಗಳು ಮೊಟ್ಟೆಗಳನ್ನು ಇಡುತ್ತವೆ.

ಈಡಿಸ್ ಸೊಳ್ಳೆಗಳು ಒಳಾಂಗಣ ಮತ್ತು ಹೊರಾಂಗಣದಲ್ಲೂ ವಾಸಿಸುತ್ತವೆ. ಹಗಲಿನ ವೇಳೆಯಲ್ಲಿ ಜನರನ್ನು ಹೆಚ್ಚಾಗಿ ಕಚ್ಚುತ್ತವೆ. ಝೀಕಾ ಸೋಂಕಿಗೆ ಒಳಗಾದ ವ್ಯಕ್ತಿಯನ್ನು ಸೊಳ್ಳೆಯು ಕಚ್ಚಿದರೆ, ಆ ಸೊಳ್ಳೆಯೊಳಗೆ ಝೀಕಾ ವೈರಸ್ ಸೇರಿಕೊಳ್ಳುತ್ತದೆ. ಸೋಂಕುಪೀಡಿತ ಸೊಳ್ಳೆಯು ಆರೋಗ್ಯವಂತ ಮನುಷ್ಯನನ್ನು ಕಚ್ಚಿದಾಗ, ವೈರಾಣು ಸೊಳ್ಳೆಯಿಂದ ವ್ಯಕ್ತಿಗೆ ಹರಡುತ್ತದೆ.

ಸೋಂಕು ತಗಲಿರುವ ಶಂಕಿತ ವ್ಯಕ್ತಿಯ ರಕ್ತದ ಮಾದರಿ ಅಥವಾ ಮೂತ್ರದ ಮಾದರಿಯನ್ನು ಪರೀಕ್ಷೆಗೆ ಕಳುಹಿಸಿ ದೃಢಪಡಿಸಿಕೊಳ್ಳಲಾಗುತ್ತದೆ. ಡೆಂಘಿ ಮತ್ತು ಚಿಕೂನ್‌ಗುನ್ಯಾಕ್ಕೆ ಅನುಸರಿಸುವ ರಕ್ತದ ಮಾದರಿ ಪರೀಕ್ಷೆಯ ರೀತಿಯಲ್ಲೇ ಇದನ್ನೂ ಪತ್ತೆಹಚ್ಚಲಾಗುತ್ತದೆ.

ಇದೀಗ ಕೇರಳದಲ್ಲಿ ಕಾಣಿಸಿಕೊಂಡಿರುವ ಝೀಕಾ ವೈರಸ್‌ಗೆ ಏಳು ದಶಕಗಳ ಹಿನ್ನೆಲೆಯಿದೆ. ಇದು ಮೊದಲಿಗೆ ಕಂಡುಬಂದಿದ್ದು ಉಗಾಂಡದಲ್ಲಿ. 1947ರಲ್ಲಿ ಪತ್ತೆಯಾದ ಈ ವೈರಸ್‌ಗೆ ಇಲ್ಲಿನ ಅರಣ್ಯವೊಂದರ ಹೆಸರನ್ನೇ ಇರಿಸ ಲಾಗಿದೆ. 1951-1981ರ ಅವಧಿಯಲ್ಲಿ ಈ ವೈರಸ್ ಆಫ್ರಿಕಾದ ಇತರ ದೇಶಗಳಿಗೆ ಹರಡಿತು.

1969-1983ರ ಅವಧಿಯಲ್ಲಿ ಭಾರತ, ಇಂಡೊನೇಷ್ಯಾ, ಮಲೇಷ್ಯಾ ಮತ್ತು ಪಾಕಿಸ್ತಾನ ಸೇರಿದಂತೆ ಏಷ್ಯಾಕ್ಕೆ ವಿಸ್ತರಿಸಿತು. 2007ರಲ್ಲಿ ಇಂಡೋ-ಪೆಸಿಫಿಕ್‌ನ ಯಾಪ್ ದ್ವೀಪದಲ್ಲಿ ಪತ್ತೆಯಾಯಿತು. ಉತ್ತರ ಮತ್ತು ದಕ್ಷಿಣ ಅಮೆರಿಕಾಕ್ಕೆ ಹರಡುತ್ತಲೇ ಇದೆ. ಬ್ರೆಜಿಲ್‌ನಲ್ಲಿ ಮೇ 2015ರಲ್ಲಿ ಮೊದಲ ಪ್ರಕರಣ ವರದಿಯಾಯಿತು.

ಭಾರತದಲ್ಲಿ 2017 ಮತ್ತು 2018ರಲ್ಲಿ ಝೀಕಾ ವೈರಸ್ ಪ್ರಕರಣಗಳು ಹೆಚ್ಚಾದವು. ಗುಜರಾತ್, ರಾಜಸ್ಥಾನ ಮತ್ತು ಮಧ್ಯಪ್ರದೇಶದಲ್ಲಿ ನೂರಾರು ಸೋಂಕಿತರು ಕಂಡುಬಂದರು.

ಕರ್ನಾಟಕ, ತಮಿಳುನಾಡು ಗಡಿಯಲ್ಲಿ ಕಟ್ಟೆಚ್ಚರ

ಕೇರಳದಲ್ಲಿ ಝೀಕಾ ವೈರಸ್ ಪತ್ತೆಯಾಗಿರುವುದರಿಂದ ಪಕ್ಕದ ಕರ್ನಾಟಕ ಹಾಗೂ ತಮಿಳುನಾಡಿನಲ್ಲಿ ವೈರಸ್ ಹರಡುವ ಸಾಧ್ಯತೆಯಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಕೇರಳ ಗಡಿಯತ್ತ ಗಮನ ಕೇಂದ್ರೀಕರಿಸಿದೆ. ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಚಾಮರಾಜನಗರದಲ್ಲಿ ಹೆಚ್ಚು ಜಾಗರೂಕರವಾಗಿ ಇರುವಂತೆ ನಿರ್ದೇಶನ ನೀಡಲಾಗಿದೆ.

ಪ್ರಸಕ್ತ ಮುಂಗಾರು ಮಳೆಯು ಝೀಕಾ ವೈರಸ್ ಕಾಯಿಲೆ ಹರಡುವ ಸೊಳ್ಳೆಗಳ ಉತ್ಪತ್ತಿಯನ್ನು ವೇಗಗೊಳಿಸುತ್ತದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೊರಡಿಸಿದ ಸುತ್ತೋಲೆ ತಿಳಿಸಿದೆ.

ಈಡಿಸ್ ಈಜಿಪ್ಟಿ ತಳಿಯ ಸೊಳ್ಳೆಯು ಈಗಾಗಲೇ ರಾಜ್ಯದಲ್ಲಿ ಡೆಂಘಿ ಹಾಗೂ ಚಿಕೂನ್‌ಗುನ್ಯಾ ಹರಡಿದೆ. ಇದನ್ನು ಪರಿಗಣಿಸಿ, ಗ್ರಾಮೀಣ ಪ್ರದೇಶಗಳಲ್ಲಿ ಆಶಾ ಮತ್ತು ಆರೋಗ್ಯ ಸಹಾಯಕರು ಕಟ್ಟುನಿಟ್ಟಾದ ಮೇಲ್ವಿಚಾರಣೆಯನ್ನು ಸಮರೋಪಾದಿಯಲ್ಲಿ ನಡೆಸಬೇಕು ಎಂದು ಸರ್ಕಾರ ಸೂಚಿಸಿದೆ.

ತಮಿಳುನಾಡು ಸರ್ಕಾರವು ಕೇರಳದ ಗಡಿಯಲ್ಲಿ ತಪಾಸಣೆ ತೀವ್ರಗೊಳಿಸಿದೆ. ತಮಿಳುನಾಡು ಆರೋಗ್ಯ ಸಚಿವ ಸುಬ್ರಮಣಿಯನ್ ಅವರ ಪ್ರಕಾರ, ಇದುವರೆಗೆ ರಾಜ್ಯಕ್ಕೆ ಯಾವುದೇ ಝೀಕಾ ವೈರಸ್ ಪ್ರಕರಣ ಬಂದಿಲ್ಲ. ಆದರೆ, ಕೇರಳದಿಂದ ರಾಜ್ಯಕ್ಕೆ ಬರುವ ಜನರನ್ನು ವೈರಸ್‌ಗಾಗಿ ಪರೀಕ್ಷಿಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಕೊಯಮತ್ತೂರು ಜಿಲ್ಲಾಡಳಿತವು ತಮಿಳುನಾಡು-ಕೇರಳ ಗಡಿಯಲ್ಲಿ ವಾಹನ ತಪಾಸಣೆ ತೀವ್ರಗೊಳಿಸಿದೆ. ಒಟ್ಟು 14 ಸ್ಥಳಗಳ ಚೆಕ್‌ಪೋಸ್ಟ್‌ಗಳಲ್ಲಿ ಕಣ್ಗಾವಲು ಹಾಕಲಾಗಿದೆ.

ಲಕ್ಷಣಗಳು ಮತ್ತು ತೆಗೆದುಕೊಳ್ಳಬೇಕಾದ ಎಚ್ಚರಿಕೆ

ಝೀಕಾ ವೈರಸ್ ಸೋಂಕಿತರಾದ ಬಹುತೇಕರಿಗೆ ರೋಗ ಲಕ್ಷಣಗಳು ಕಾಣಿಸಿಕೊಳ್ಳುವುದಿಲ್ಲ. ಇದ್ದರೂ ಸೌಮ್ಯರೂಪದಲ್ಲಿರುತ್ತವೆ. ಜ್ವರ, ಚರ್ಮದ ಮೇಲೆ ಕೆಂಪು ದದ್ದು, ತಲೆನೋವು, ಕೀಲುನೋವು, ಕಣ್ಣು ಕೆಂಪಾಗುವಿಕೆ ಹಾಗೂ ಮಾಂಸಖಂಡಗಳ ಸೆಳೆತದಂಥ ಲಕ್ಷಣಗಳು ಕೆಲವು ದಿನಗಳಿಂದ ವಾರದವರೆಗೆ ಕಾಣಿಸಿಕೊಳ್ಳುತ್ತವೆ. ಸೊಳ್ಳೆ ಕಡಿತದಿಂದ ಬರುವ ಚಿಕೂನ್ ಗುನ್ಯ, ಡೆಂಘಿಯ ಲಕ್ಷಣಗಳೇ ಇಲ್ಲಿಯೂ ಸಾಮಾನ್ಯ.

ಝೀಕಾ ಸೋಂಕಿತರು ಸಾಮಾನ್ಯವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಮಟ್ಟಿಗೆ ಕಾಯಿಲೆ ಬೀಳುವುದಿಲ್ಲ. ಸಾವು ಸಂಭವಿಸುವುದೂ ಅಪರೂಪ. ಹೀಗಾಗಿ, ಬಹಳಷ್ಟು ಜನರಿಗೆ ತಾವು ಸೋಂಕಿಗೆ ಒಳಗಾಗಿರುವುದು ಕೂಡ ಅರಿವಿಗೆ ಬರುವುದಿಲ್ಲ.

ಗರ್ಭಿಣಿಯರಿಗೆ ಹೆಚ್ಚಿನ ಆತಂಕ

ಸೋಂಕಿತ ವ್ಯಕ್ತಿಯನ್ನು ಕಚ್ಚುವ ಈಡಿಸ್ ಸೊಳ್ಳೆ, ಈ ವೈರಸ್ ಹಬ್ಬಲು ಪ್ರಮುಖ ಕಾರಣ. ಹೀಗಾಗಿ ಸೋಂಕು ಹರಡಲು ಕಾರಣವಾದ ಸೊಳ್ಳೆಯಿಂದ ರಕ್ಷಣೆ ಪಡೆಯುವುದು ಸದ್ಯದ ಮೊದಲ ರಕ್ಷಣಾ ಕ್ರಮ.

ಪ್ರತಿಯೊಬ್ಬರು ಅದರಲ್ಲೂ ವಿಶೇಷವಾಗಿ ಗರ್ಭಿಣಿಯರು ಹಾಗೂ ಬಾಣಂತಿಯರು ಹೆಚ್ಚಿನ ಕಾಳಜಿ ವಹಿಸಬೇಕು. ಸೋಂಕಿತ ಗರ್ಭಿಣಿಯು, ತನ್ನ ಗರ್ಭದಲ್ಲಿರುವ ಭ್ರೂಣ ಅಥವಾ ಮಗುವಿಗೂ ಸೋಂಕನ್ನು ದಾಟಿಸುತ್ತಾಳೆ. ಹೀಗಾಗಿ, ಇದು ಮಗುವಿನ ಬೆಳವಣಿಗೆಗೆ ಸಂಬಂಧಿಸಿದ ಗಂಭೀರ ಸಮಸ್ಯೆಗಳನ್ನು ತಂದೊಡ್ಡುತ್ತದೆ.

ಅವಧಿ ಪೂರ್ವ ಜನನ ಅಥವಾ ಗರ್ಭಪಾತ ಆಗುವ ಸಾಧ್ಯತೆಯ ಜೊತೆಗೆ, ಮಿದುಳಿನ ಬೆಳವಣಿಗೆ ಪೂರ್ಣಗೊಳ್ಳದ ಅಥವಾ ಹಾಗೂ ತಲೆ ಚಿಕ್ಕದಾಗಿರುವ ಶಿಶುಗಳು (ಮೈಕ್ರೊಸೆಫಲಿ) ಜನಿಸುವ ಅಪಾಯವಿದೆ.

ಸೊಳ್ಳೆಗಳಿಗೆ ಆಶ್ರಯತಾಣವಾಗಬಹುದಾದ ಪರಿಸರವನ್ನು ಶುಚಿಗೊಳಿಸಬೇಕು. ಸುರಕ್ಷಿತವಾದ ಹಾಗೂ ಪರಿಣಾಮಕಾರಿಯಾದ ಸೊಳ್ಳೆ ಪರದೆ ಬಳಸುವುದಕ್ಕೆ ಆದ್ಯತೆ ನೀಡಬೇಕು.

ಲಕ್ಷಣ ರಹಿತ ಸೋಂಕಿತ ವ್ಯಕ್ತಿಯೊಂದಿಗಿನ ಅಸುರಕ್ಷಿತ ಲೈಂಗಿಕ ಸಂಪರ್ಕ ಅಥವಾ ಅಂಥ ವ್ಯಕ್ತಿಯಿಂದ ಪಡೆದ ರಕ್ತದ ಮೂಲಕವೂ ಸೋಂಕು ತಗುಲುವ ಸಾಧ್ಯತೆ ಇದೆ.

ಸುರಕ್ಷಿತ ಲೈಂಗಿಕತೆಗಾಗಿ ಕಾಂಡೋಮ್ ಬಳಕೆ ಮಾಡುವುದು ಹಾಗೂ ರಕ್ತದಾನಕ್ಕೂ ಮೊದಲು ರಕ್ತ ದಾನಿಯ ಆರೋಗ್ಯ ತಪಾಸಣೆ, ಪರೀಕ್ಷೆಯ ಬಗ್ಗೆ ನಿಗಾ ವಹಿಸಬೇಕು.

ಲಕ್ಷಣಗಳಿಗೆ ಚಿಕಿತ್ಸೆ

ಈಡಿಸ್ ಈಜಿಪ್ಟಿ ಸೊಳ್ಳೆ

ಝೀಕಾ ವೈರಸ್, ಸೋಂಕಿತ ವ್ಯಕ್ತಿಯ ರಕ್ತದಲ್ಲಿ ಸಾಮಾನ್ಯವಾಗಿ ಒಂದು ವಾರದವರೆಗೆ ಇರುತ್ತದೆ. ಹೀಗಾಗಿ, ಇಂಥ ಲಕ್ಷಣಗಳು ಕಂಡುಬಂದಲ್ಲಿ ಅಥವಾ ಈ ವೈರಸ್ ಕಾಣಿಸಿಕೊಂಡಿರುವ ಪ್ರದೇಶಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ತಪ್ಪದೇ ವೈದ್ಯರಿಂದ ತಪಾಸಣೆಗೊಳಗಾಗಬೇಕು.

ರೋಗ ಲಕ್ಷಣಗಳನ್ನು ಆಧರಿಸಿ, ರಕ್ತ ಅಥವಾ ಮೂತ್ರ ಪರೀಕ್ಷೆ ನಡೆಸುವ ಮೂಲಕ ವ್ಯಕ್ತಿಯಲ್ಲಿ ಸೋಂಕು ಇದೆ ಅಥವಾ ಇಲ್ಲ ಎಂಬುದನ್ನು ವೈದ್ಯರು ನಿರ್ಧರಿಸುತ್ತಾರೆ. ವ್ಯಕ್ತಿಯ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಾದ ಮೇಲೂ ಝೀಕಾ ವೈರಸ್ ಪರೀಕ್ಷಾ ವರದಿಯನ್ನು ತಪ್ಪದೇ ಪರಿಶೀಲಿಸಬೇಕು.

ಈ ವೈರಸ್‌ಗೆ ಇದುವರೆಗೆ ಯಾವುದೇ ನಿರ್ದಿಷ್ಟ ಔಷಧಿ ಇಲ್ಲ. ಈ ಬಗ್ಗೆ ಇನ್ನೂ ಅಧ್ಯಯನಗಳು ನಡೆಯುತ್ತಿವೆ. ಹೀಗಾಗಿ, ಸದ್ಯಕ್ಕೆ ರೋಗ ಲಕ್ಷಣಗಳಿಗೆ ಮಾತ್ರ ಚಿಕಿತ್ಸೆ ನೀಡಲಾಗುತ್ತಿದೆ. ಇದರೊಂದಿಗೆ ದೇಹದಲ್ಲಿ ನೀರಿನಂಶ ಕಡಿಮೆಯಾಗದಂತೆ ನೋಡಿಕೊಳ್ಳಲು ಯಥೇಚ್ಛವಾಗಿ ನೀರು ಕುಡಿಯಬೇಕು. ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳಬೇಕು. ಕಡ್ಡಾಯವಾಗಿ, ವೈದ್ಯರ ಸಲಹೆ ಪಡೆದೇ ಜ್ವರ ಹಾಗೂ ಮೈಕೈ ನೋವಿಗೆ ಮಾತ್ರೆಗಳನ್ನು ತೆಗೆದುಕೊಳ್ಳಬೇಕು.

ಒಮ್ಮೆ ಸೋಂಕಿಗೆ ಒಳಗಾದ ವ್ಯಕ್ತಿಗೆ ಮುಂದಿನ ದಿನಗಳಲ್ಲಿ ಮತ್ತೊಮ್ಮೆ ಸೋಂಕು ತಗಲುವುದನ್ನು ತಪ್ಪಿಸಿಕೊಳ್ಳಲು ಜಾಗ್ರತೆ ವಹಿಸುವುದರೊಂದಿಗೆ ಇತರರಿಗೂ ಸೋಂಕು ಹರಡದಂತೆ ಎಚ್ಚರಿಕೆ ವಹಿಸಬೇಕು.

ಝೀಕಾ ಸೋಂಕಿನಿಂದ ರಕ್ಷಣೆ ಪಡೆಯಬೇಕಾದರೆ ಸೋಂಕಿತ ವ್ಯಕ್ತಿಯ ರಕ್ತ, ಮೂತ್ರ, ವಾಂತಿ ಇವುಗಳ ಸಂಪರ್ಕಕ್ಕೆ ಬರದಂತೆ ಎಚ್ಚರಿಕೆ ವಹಿಸಬೇಕು. ಸೋಂಕಿತನ ಸ್ಪರ್ಶದಿಂದ ದೂರವಿರಬೇಕು. ಅಂಥ ವ್ಯಕ್ತಿಯ ಆರೈಕೆ ಮಾಡುವವರು, ಅಗತ್ಯ ಸೇವೆ ಒದಗಿಸಿದ ಮೇಲೆ ಸಾಬೂನು ಮತ್ತು ನೀರಿನಿಂದ ಸ್ವಚ್ಛವಾಗಿ ಕೈತೊಳೆದುಕೊಳ್ಳಬೇಕು. ಧರಿಸಿದ್ದ ಬಟ್ಟೆಯನ್ನೂ ತಕ್ಷಣವೇ ತೊಳೆದುಹಾಕುವುದು ಒಳ್ಳೆಯದು, ಸೋಂಕಿತನು ಇರುವ ಪರಿಸರವನ್ನೂ ಶುಚಿಯಾಗಿ ಇರಿಸಬೇಕು.

ಆಧಾರ: ಡಬ್ಲ್ಯುಎಚ್‌ಒ, ಸಿಡಿಸಿ, ಮೆಡಿಸಿನ್‌ನೆಟ್, ಪಿಟಿಐ

ಯುನಿಸೆಫ್ ಸಮೀಕ್ಷಾ ವರದಿ

ಮಕ್ಕಳ ಕಲಿಕೆ ನಾಲ್ಕೇ ತಾಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್-19 ಸಾಂಕ್ರಾಮಿಕದ ಸಂದರ್ಭದಲ್ಲಿ ವಿದ್ಯಾರ್ಥಿಗಳ ಕಲಿಕೆಯ ಅವಧಿ ದಿನಕ್ಕೆ ನಾಲ್ಕು ಗಂಟೆಗಿಂತ ಕಡಿಮೆಯಾಗಿದೆ. ಶೇ 10ರಷ್ಟು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಮೊಬೈಲ್, ಟಿ.ವಿ. ಮೊದಲಾದ ಸಾಧನಗಳು ಇಲ್ಲ. ಕೋವಿಡ್ ಅವಧಿಯಲ್ಲಿ ಶೇ 50ರಷ್ಟು ಶಿಕ್ಷಕರು ಬೋಧನಾ ಸಾಧನಗಳಿಗಾಗಿ ಹೆಚ್ಚು ಹಣವನ್ನು ಖರ್ಚು ಮಾಡಿದ್ದಾರೆ ಎಂದು ಯುನಿಸೆಫ್ ನಡೆಸಿದ ಸಮೀಕ್ಷೆ ತಿಳಿಸಿದೆ.

ಶೇ 97ರಷ್ಟು ವಿದ್ಯಾರ್ಥಿಗಳು ಪ್ರತಿದಿನ ಮೂರರಿಂದ ನಾಲ್ಕು ಗಂಟೆ ಸಮಯವನ್ನು ಅಧ್ಯಯನಕ್ಕಾಗಿ ಮೀಸಲಿಡುತ್ತಾರೆ ಎಂದು ಸಮೀಕ್ಷೆ ತಿಳಿಸಿದೆ. ಗ್ರಾಮೀಣ ಭಾರತದ ವಿದ್ಯಾರ್ಥಿಗಳು ನಗರ ಪ್ರದೇಶಗಳಿಗಿಂತ ಸ್ವಲ್ಪ ಹಿಂದಿದ್ದಾರೆ.

ವಲಸೆ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಮೇಲೆ ಕೋವಿಡ್ ಹೆಚ್ಚು ಪರಿಣಾಮ ಉಂಟು ಮಾಡಿದೆ. ಈ ಅವಧಿಯಲ್ಲಿ ಕಲಿಕೆ ಮತ್ತು ಒಟ್ಟಾರೆ ಪ್ರಗತಿಯಲ್ಲಿ ತಾವು ಹಿಂದುಳಿದಿದ್ದೇವೆ ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳ ಮೌಲ್ಯಮಾಪನಕ್ಕೆ ಸರ್ಕಾರಗಳು ಮುಂದಾಗಬೇಕು ಎಂದು ಯುನಿಸೆಫ್ ಸಲಹೆ ನೀಡಿದೆ. 'ಇದರಿಂದ, ಹೆಚ್ಚುವರಿ ಗಮನ ಅಗತ್ಯವಿರುವ ಮಕ್ಕಳಿಗೆ ಪರಿಹಾರ ಬೋಧನೆಯಂತಹ ತರಗತಿ ನಡೆಸಲು ಅನುಕೂಲವಾಗುತ್ತದೆ' ಎಂದು ಅಭಿಪ್ರಾಯಪಟ್ಟಿದೆ.

ಶಿಕ್ಷಣ ಹಕ್ಕು ಕಾಯ್ದೆ 2010ರ ಪ್ರಕಾರ, 1-5 ತರಗತಿಯ ವಿದ್ಯಾರ್ಥಿಗಳಿಗೆ ವರ್ಷಕ್ಕೆ 200 ದಿನಗಳಲ್ಲಿ ನಾಲ್ಕು ಗಂಟೆಗಳ ಸರಾಸರಿ ಶಾಲಾ ದಿನ ಇರಬೇಕು, 6-8 ತರಗತಿಯ ವಿದ್ಯಾರ್ಥಿಗಳಿಗೆ ವರ್ಷಕ್ಕೆ 220 ದಿನಗಳಲ್ಲಿ, ದಿನಕ್ಕೆ 4-5 ಗಂಟೆ ಶಾಲಾವಧಿ ಇರಬೇಕು.

ಎಲ್ಲೆಲ್ಲಿ ಅಧ್ಯಯನ?

ಅಸ್ಸಾಂ, ಗುಜರಾತ್, ಬಿಹಾರ, ಕೇರಳ, ಮಧ್ಯಪ್ರದೇಶ, ಉತ್ತರ ಪ್ರದೇಶ

6,435

ಸಮೀಕ್ಷೆಗೆ ಒಳಪಟ್ಟವರು

ಅಂಕಿ-ಅಂಶಗಳು

75% ಶಾಲೆಗಳು ತೆರೆದಿದ್ದ ದಿನಗಳಿಗೆ ಹೋಲಿಸಿದರೆ ತಮ್ಮ ಮಗುವಿನ (5-13 ವರ್ಷ) ಕಲಿಕಾ ಮಟ್ಟ ಕುಸಿದಿದೆ ಎಂದು ಹೇಳಿದ ಪೋಷಕರ ಪ್ರಮಾಣ

67% ಶಾಲೆಗಳು ತೆರೆದಿದ್ದ ದಿನಗಳಿಗೆ ಹೋಲಿಸಿದರೆ ತಮ್ಮ ಮಗುವಿನ ಒಟ್ಟಾರೆ ಪ್ರಗತಿಯು ಹಿಂದಿದೆ ಎಂದ ಪೋಷಕರ ಪ್ರಮಾಣ

80% ತಮ್ಮ ಮಕ್ಕಳ ಕಲಿಕೆಗೆ ತೊಂದರೆಯಾಗಿದೆ ಎಂದ ವಲಸೆ ಮತ್ತು ಪರಿಶಿಷ್ಟ ಪಂಗಡದ ಪೋಷಕರ ಪ್ರಮಾಣ

ತಂತ್ರಜ್ಞಾನದ ಸೌಲಭ್ಯದಿಂದ ವಂಚಿತರಾದ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಮತ್ತು ಇತರೆ ಮುದ್ರಿತ ಸಾಮಗ್ರಿಗಳನ್ನು ಸರ್ಕಾರಗಳು ಆದ್ಯತೆಯ ಮೇರೆಗೆ ಪೂರೈಸಬೇಕು

ಯುನಿಸೆಫ್ ವರದಿ

ಅಧ್ಯಯನಕ್ಕೆ ವಾಟ್ಸ್‌ಆ್ಯಪ್

'ವಾಟ್ಸ್‌ಆ್ಯಪ್' ಸಾಮಾಜಿಕ ಜಾಲತಾಣವು ಮಕ್ಕಳ ದೂರಶಿಕ್ಷಣಕ್ಕೆ ಬಳಕೆಯಾಗುತ್ತಿದೆ. 5-13 ವಯಸ್ಸಿನ ಶೇ 47ರಷ್ಟು ಮಕ್ಕಳು, 14-18 ವರ್ಷದ ಶೇ 55ರಷ್ಟು ಮಕ್ಕಳು ವಾಟ್ಸ್‌ಆ್ಯಪ್ ಬಳಸುತ್ತಾರೆ. ಬಾಲಕಿಯರಿಗೆ (ಶೇ 51) ಹೋಲಿಸಿದರೆ ಶೇ 59ರಷ್ಟು ಬಾಲಕರು ಅಧ್ಯಯನಕ್ಕಾಗಿ ವಾಟ್ಸ್‌ಆ್ಯಪ್ ಬಳಸುತ್ತಾರೆ ಎಂದು ವರದಿ ತಿಳಿಸಿದೆ.

5-13 ವರ್ಷ ವಯಸ್ಸಿನ ವಿದ್ಯಾರ್ಥಿಗಳ ಪೈಕಿ, ಖಾಸಗಿ ಶಾಲಾ ವಿದ್ಯಾರ್ಥಿಗಳು ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗಿಂತ ಹೆಚ್ಚಾಗಿ ವಾಟ್ಸ್‌ಆ್ಯಪ್ ಬಳಸುತ್ತಾರೆ. ಸರ್ಕಾರಿ ಶಾಲಾ ವಿದ್ಯಾರ್ಥಿಗಳು (5-13 ವರ್ಷ ವಯೋಮಿತಿ) ಮುಖ್ಯವಾಗಿ ಪಠ್ಯಪುಸ್ತಕಗಳ ಮೇಲೆ ಅವಲಂಬಿತರಾಗಿದ್ದಾರೆ. ಜೊತೆಗೆ ಶಿಕ್ಷಕರ ಮನೆಗೆ ಭೇಟಿ ನೀಡುತ್ತಾರೆ ಮತ್ತು ಯೂಟ್ಯೂಬ್ ನೋಡಿ ಕಲಿಯುತ್ತಾರೆ.

5-13 ವರ್ಷ ವಯಸ್ಸಿನ ನಗರ ಮತ್ತು ಗ್ರಾಮೀಣ ವಿದ್ಯಾರ್ಥಿಗಳ ನಡುವೆ ವಾಟ್ಸ್‌ಆ್ಯಪ್ ಬಳಕೆಯಲ್ಲಿ ಶೇ 24ರಷ್ಟು ಅಂತರವಿದೆ. 14 -18 ವರ್ಷ ವಯಸ್ಸಿನ ವಿದ್ಯಾರ್ಥಿಗಳಲ್ಲಿ ಶೇ 15ರಷ್ಟು ಅಂತರವಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

ಗುಜರಾತ್‌ನಲ್ಲಿ ಆಮ್ ಆದ್ಮಿ ಪಕ್ಷವು ಇಸ್ಲಾಂಗೆ ಆದ್ಯತೆ ನೀಡುತ್ತಿದೆಯೇ? ಹೌದು, ಎನ್ನುತ್ತಿವೆ ಈ ಪೋಸ್ಟರ್‌ಗಳು. 'ನಮಾಜ್‌ಗೆ ಗುಜರಾತ್ ಆದ್ಯತೆ ನೀಡಲಿದೆ', 'ಭಗವತ್ ಸಪ್ತ ಮತ್ತು ಸತ್ಯನಾರಾಯಣ್ ಕಥೆಯಂತಹ ಅನಗತ್ಯ ಆಚರಣೆಗಳನ್ನು ಬಿಟ್ಟುಬಿಡಿ' ಎಂಬ ಉಲ್ಲೇಖಗಳು ಆಮ್ ಆದ್ಮಿ ಪಕ್ಷದ ಮುಖಂಡರು ಗುಜರಾತಿನಲ್ಲಿ ಹಾಕಿಸಿರುವ ಫ್ಲೆಕ್ಸ್‌ಗಳಲ್ಲಿ ಕಂಡುಬಂದಿವೆ. ನೂರಾರು ಸಾಮಾಜಿಕ ಜಾಲತಾಣ ಬಳಕೆದಾರರು ಈ ಪೋಸ್ಟರ್‌ಗಳನ್ನು ಹಂಚಿಕೊಂಡಿದ್ದು, ಎಎಪಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.



ಸಾಮಾಜಿಕ ಜಾಲತಾಣಗಳನ್ನು ಪರೀಕ್ಷಿಸಿದಾಗ, ಆಮ್ ಆದ್ಮಿ ಪಕ್ಷದ ವಿವಿಧ ಘಟಕಗಳು ಮೂಲ ಪೋಸ್ಟರ್ ಅನ್ನು ಹಂಚಿಕೊಂಡಿವೆ. 'ಈಗ ಗುಜರಾತ್ ಬದಲಾಗುತ್ತದೆ' ಎಂಬ ಒಕ್ಕಣೆಯನ್ನು 'ನಮಾಜ್‌ಗೆ ಗುಜರಾತ್ ಆದ್ಯತೆ ನೀಡಲಿದೆ' ಎಂದು ಬದಲಿಸಲಾಗಿದೆ. ಗೋಪಾಲ್ ಇಟಾಲಿಯಾ ಅವರ ಚಿತ್ರದ ಬದಲಿಗೆ ಗಡ್ಡ ಮತ್ತು ಟೋಪಿ ಧರಿಸಿದ ವ್ಯಕ್ತಿಯ ಚಿತ್ರ ಹಾಕಲಾಗಿದೆ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ. ಗೋಪಾಲ್ ಅವರನ್ನು ಸಂಪರ್ಕಿಸಿದಾಗ, 'ಪೋಸ್ಟರ್ ತಿದ್ದಿ, ಹಂಚಿಕೊಂಡವರ ವಿರುದ್ಧ ಸೈಬರ್ ಪೊಲೀಸರಿಗೆ ದೂರು ನೀಡಲಾಗುವುದು' ಎಂದು ತಿಳಿಸಿದ್ದಾರೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಆನಂದದ ನೆಲೆಗಳು

ತಳಿರನಸುಕೆಂಪು, ಬಳುಕೆಲೆಯ ಹಸುರಿನ ಸೊಂಪು |
ತಿಳಿಮನದ ಯುವಜನದ ನಗುಗಣ್ಣ ಹೊಳಪು ||
ಬೆಳೆವರಿವು ಮಗುದುಟಿಯಿನ್ನುಣ್ಣಿಸುವ ನುಡಿಚಿಗುರು |
ಇಳೆಯೊಳಿವನೊಲ್ಲರಾರ್ ? – ಮಂಕುತಿಮ್ಮ || 438 ||

ಪದ-ಅರ್ಥ: ತಳಿರ = ಚಿಗುರಿನ, ಬಳುಕೆಲೆಯ = ಬಳಕುವ ಎಲೆಯ, ಬೆಳವರಿವು = ಬೆಳೆವ + ಅರಿವು, ಮಗುದುಟಿಯಿನುಣ್ಣಿಸುವ = ಮಗುದುಟಿಯಿನ್ (ಮಗುವಿನ ಎಳೆಯ ತುಟಿಗಳಿಂದ) + ಉಣ್ಮಿಸುವ (ಉಕ್ಕಿಸುವ), ಇಳೆಯೊಳಿವನೊಲ್ಲರಾರ್ = ಇಳೆಯೊಳು + ಇವನ್ನು + ಒಲ್ಲರಾರ್

ವಾಚ್ಯಾರ್ಥ: ಚಿಗುರಿನ ನಸುಕೆಂಪು, ಬಳಕುವ ಎಲೆಯ ಹಸುರಿನ ಸೌಂದರ್ಯ, ನಿರ್ಮಲ ಮನಸ್ಸಿನ ಯುವಜನರ ನಗೆಗಣ್ಣಿನ ಕಾಂತಿ, ಬೆಳೆಯುತ್ತಿರುವ ತಿಳಿವು, ಮಗುವಿನ ಎಳೆತುಟಿಗಳಿಂದ ಉಕ್ಕುವ ತೊದಲು ಮಾತುಗಳು ಇವನ್ನೆಲ್ಲ ಬೇಡವೆನ್ನುವರಾರು ಪ್ರಪಂಚದಲ್ಲಿ?

ವಿವರಣೆ: ಬದುಕಿನಲ್ಲಿ ಆನಂದವೇ ಮುಖ್ಯ. ಬದುಕಿನ ಮೂಲ ಉದ್ದೇಶವೇ ಆನಂದದ, ಶಾಶ್ವತ ಸಂತೋಷದ ಹುಡುಕಾಟ. ಎಲ್ಲ ಕ್ಷೇತ್ರಗಳಲ್ಲಿ ಮನುಷ್ಯನ ಸಾಧನೆಯ ಕ್ರಿಯೆಗಳೆಲ್ಲ ಆನಂದದ ಅನ್ವೇಷಣೆಯೇ. ಪ್ರತಿಯೊಬ್ಬ ಮನುಷ್ಯನಿಗೂ ಆತನ ಆನಂದದ ನೆಲೆ ಬೇರೆಯೇ ಆಗಿರುತ್ತದೆ. ಕೆಲವರಿಗೆ ಆನಂದ ಭೋಗಗಳಲ್ಲಿ ದೊರೆತರೆ ಕೆಲವರಿಗೆ ಭೋಗತ್ಯಾಗದಲ್ಲೇ ಆನಂದ. ನಾಯಕರುಗಳಿಗೆ ತಮ್ಮ ಸುತ್ತ ಸಹಸ್ರಾರು ಹಿಂಬಾಲಕರ ಉನ್ಮತ್ತ ಧ್ವನಿಗಳನ್ನು ಕೇಳಿದಾಗ ಆನಂದವಾದರೆ ಆಧ್ಯಾತ್ಮ ಚಿಂತಕನಿಗೆ ಹಿಮಾಲಯದ ಶಾಂತವಾದ ಗುಹೆಗಳಲ್ಲಿ ಅದು ದೊರೆತೀತು. ಕವಿ ಸುಂದರವಾದ ಹೂವನ್ನು ಕಂಡು ಆನಂದದಿಂದ ಕವಿತೆಯನ್ನು ರಚಿಸಿದರೆ ಒಬ್ಬ ಸಸ್ಯಶಾಸ್ತ್ರಜ್ಞ, ಆ ಹೂವನ್ನು ಕತ್ತರಿಸಿ ಬೇರೆ ಬೇರೆ ಭಾಗಗಳನ್ನಾಗಿ ಮಾಡಿ ಸಂಶೋಧನೆಯಲ್ಲಿ ಸಂತೋಷವನ್ನು ಪಡೆಯುತ್ತಾನೆ. ಒಬ್ಬ ಉಗ್ರನಾದವನು ಜೀವಹಾನಿಯಲ್ಲಿ ತೃಪ್ತಿಯನ್ನು ಪಡೆದರೆ ಒಬ್ಬ ಸೈನಿಕ ಜೀವರಕ್ಷಣೆಯಲ್ಲಿ ಕೃತಕೃತ್ಯತೆಯನ್ನು ಪಡೆಯುತ್ತಾನೆ. ಆದರೆ ಬದುಕಿನಲ್ಲಿ ಕೆಲವು ಸೊಗಸಿನ ನೆಲೆಗಳಿವೆ. ಅವುಗಳನ್ನು ಯಾವ ಮನುಷ್ಯನೂ ಇಷ್ಟಪಡದೆ ಇರಲು ಸಾಧ್ಯವಿಲ್ಲ. ನಮ್ಮ ಹಿನ್ನಲೆ, ಓದು, ಸಂಸ್ಕಾರಗಳು ಏನೇ ಇದ್ದರೂ ಕೆಲವು ಸಂಗತಿಗಳು ಮುದ ನೀಡುತ್ತವೆ. ಈ ಕಗ್ಗ ಅಂಥ ಕೆಲವು ನೆಲೆಗಳನ್ನು ಗುರುತಿಸಿ ಹೇಳುತ್ತದೆ.

ವಸಂತ ಮಾಸ ಕಾಲಿಡುತ್ತಿದ್ದಂತೆ ಮರಗಿಡಗಳಲ್ಲಿ ಸಂತೋಷದ ಹೊನಲು ಉಕ್ಕುತ್ತದೆ, ಮುಗುಳೊಡೆಯುತ್ತದೆ. ಚಳಿಗಾಲದಲ್ಲಿ ಎಲೆಗಳನ್ನೆಲ್ಲ ಉದುರಿಸಿಕೊಂಡು ಬೋಳಾದ ಗಿಡಬಳ್ಳಿಗಳು ಚಿಗುರಿನಿಂದ ಕಂಗೊಳಿಸುತ್ತವೆ ಆ ನಸುಗೆಂಪು ಬಣ್ಣದ ಚಿಗುರುಗಳನ್ನು ನೋಡುವ, ಮೃದುವಾಗಿ ತಟ್ಟುವ ಸಂತೋಷ ಅದ್ಭುತ. ಅದೆಷ್ಟು ಕವಿಗಳಿಗೆ ಈ ಹೊಸಚಿಗುರು ಪ್ರೇರಣೆಯಾಗಿದೆಯೋ? ಕವಿ ಕೆ.ಎಸ್. ನರಸಿಂಹಸ್ವಾಮಿಯವರ ಒಂದು ಕವನದಲ್ಲಿ 'ನೀ ಬರುವ ದಾರಿಯಲಿ ಹಗಲು ತಂಪಾಗಿ, ಬೇಲಿಗಳ ಸಾಲಿನಲಿ ಹಸಿರು ಕೆಂಪಾಗಿ' ಎನ್ನುತ್ತಾರೆ. ಹಸಿರು ಚಿಗುರು ಕೆಂಪಾಗಿರುವ ಬಗೆ ಮನವನ್ನು ತಟ್ಟುತ್ತದೆ. ಅಂತೆಯೇ ಗಾಳಿಗೆ ತೊನೆಯುವ ಹಸುರೆಲೆಗಳ ಸೌಂದರ್ಯ ಯಾರಿಗೆ ಸಂತೋಷ ನೀಡದು? ಯುವ ತರುಣ-ತರುಣಿಯರು ನಿಷ್ಕಲ್ಮಷ ಮನದಿಂದ ಮಾತನಾಡುತ್ತಿರುವಾಗ, ಹೃದಯ ತುಂಬಿ ನಗುವಾಗ, ಅವರ ಕಣ್ಣುಗಳಿಂದುಕ್ಕುವ ಹೊಳಪು ಎಷ್ಟು ಆಕರ್ಷಕ! ಮನುಷ್ಯ ಬೆಳೆಯುವಾಗ ವಿವಿಧ ಹಂತಗಳಲ್ಲಿ ಹೊಳೆದ ಅರಿವು, ತಿಳುವಳಿಕೆ, ಆನಂದವನ್ನು ನೀಡುತ್ತದೆ. ಮುಗ್ಧ ಮಗುವಿನ ತುಟಿಗಳಿಂದ ಒಸರುವ ತೊದಲು ನುಡಿ ಅದೆಷ್ಟು ಹೃದಯಕ್ಕೆ ತಂಪು ನೀಡುತ್ತದೆ! ಭೂಮಿಯಲ್ಲಿರುವ ಯಾರಾದರೂ ಇಂಥ ಸುಲಭವಾಗಿ ಸಿಗುವ, ಅನಾಯಾಸವಾಗಿ ಸುಳಿಯುವ ಅವಕಾಶಗಳನ್ನು ತಪ್ಪಿಸಿಕೊಂಡಾರೆಯೇ? ಇಷ್ಟಪಡದಿರುವುದು ಸಾಧ್ಯವೇ? ❖

ದಿನ ಭವಿಷ್ಯ

ಬುಧವಾರ ಜುಲೈ 14, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ಆಷಾಢ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಪುನರ್ವಸು ಚತುರ್ಥೀ ಗಂ. 0-34 (ಬೆ. 6-22) ಉಪರಿ ಪಂಚಮೀ ಗಂ. 57-8 (ಬೆ.ಝಾ. 5-13) ಬುಧವಾರ ನಿತ್ಯ ನಕ್ಷತ್ರ ಪೂರ್ವ ಫಲ್ಗುಣಿ ಗಂ. 51-16 (ರಾ 2-39) ವ್ಯತೀಪಾತ ನಾಮ ಯೋಗ ಗಂ. 18-4 ಭದ್ರೆ ಕರಣ ಗಂ. 0-34 ಉಪರಿ ಬವ ಕರಣ ಗಂ. 28-34 ವಿಷ ಗಂ. 11-26 ಅಮೃತ ಗಂ. 35-4 ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 6-04 ಸೂರ್ಯಾಸ್ತ: 6-46 ಅದೃಷ್ಟ ಸಂಖ್ಯೆ 3 7 9

ಮೇಷ: ಸಂತಾನ ಪ್ರಾಪ್ತಿಯ ಸುದ್ದಿಯಿಂದಾಗಿ ಸಂತಸವನ್ನು ಅನುಭವಿಸಲಿದ್ದೀರಿ. ಮರಮುಟ್ಟುಗಳ ವ್ಯಾಪಾರದಿಂದಾಗಿ ಅಧಿಕ ಲಾಭವನ್ನು ಹೊಂದಲಿದ್ದೀರಿ. ಮಕ್ಕಳಿಗೆ ಉತ್ತಮ ಸ್ಥಾನ ಲಭಿಸಿದ್ದನ್ನು ಕಂಡು ಸಂತೋಷ ಪಡಲಿದ್ದೀರಿ.

ವೃಷಭ: ಆರೋಗ್ಯದಲ್ಲಿ ಸುಧಾರಣೆ. ಮನೆಯ ವಿಸ್ತರಣೆ ಅಥವಾ ನವೀಕರಣಕ್ಕಾಗಿ ವೆಚ್ಚ ಭರಿಸಬೇಕಾದೀತು. ನಿಮ್ಮ ವಿಚಾರಗಳಿಂದ ವ್ಯಕ್ತಿಯೊಬ್ಬರೊಡನೆ ವಾದ ಮಂಡಿಸಿ ಮನ ಗೆಲ್ಲಲಿದ್ದೀರಿ. ಗೆಳೆಯರೊಂದಿಗೆ ಪ್ರವಾಸ ಸಾಧ್ಯತೆ.

ಮಿಥುನ: ಕಬ್ಬಿಣ, ಸಿಮೆಂಟ್ ಮುಂತಾದ ಕಟ್ಟಡ ಸಾಮಗ್ರಿಗಳ ವ್ಯಾಪಾರಸ್ಥರಿಗೆ ಅತೀವ ಲಾಭದ ನಿರೀಕ್ಷೆ. ಮನೆಯಲ್ಲಿ ಹಿರಿಯರ ಆರೋಗ್ಯದಲ್ಲಿ ಸುಧಾರಣೆ ಕಂಡುಬರಲಿದೆ. ಲಲಿತ ಕಲೆಗಳಲ್ಲಿ ಉನ್ನತ ಸ್ಥಾನ.

ಕರ್ಕಾಟಕ: ಬಂಧುಮಿತ್ರರೊಡಗೂಡಿ ನೆನಪಿನ ದಿನವೊಂದನ್ನು ಸಂಭ್ರಮದಿಂದ ಆಚರಿಸಿಕೊಳ್ಳಲಿದ್ದೀರಿ. ಹಲವರಿಗೆ ಮದುವೆ ವಿಷಯ ಪ್ರಸ್ತಾಪವಾಗುವ ಸಾಧ್ಯತೆ ಕಂಡುಬರುವುದು. ಮಕ್ಕಳಿಂದ ಶುಭ ಸುದ್ದಿ.

ಸಿಂಹ: ಸಾಮಾಜಿಕ ಗೌರವ ಮನ್ನಣೆಗಳು ನಿಮ್ಮ ಪಾಲಿಗೆ ದೊರಕಲಿದೆ. ದೇವತಾನುಗ್ರಹದಿಂದ ಕೆಲಸಕಾರ್ಯಗಳು ಕೈಗೂಡಲಿದೆ. ಮನರಂಜನೆಗಾಗಿ ವ್ಯಯ. ಮಿತ್ರರೊಂದಿಗೆ ಕಾಲ ಹರಣ ಮಾಡಲಿದ್ದೀರಿ.

ಕನ್ಯಾ: ವೃತ್ತಿಯಲ್ಲಿನ ಬದಲಾವಣೆ ಅಥವಾ ಸ್ಥಾನ ಬದಲಾವಣೆಯ ಬಗ್ಗೆ ಸಂಗಾತಿಯೊಡನೆ ಚರ್ಚಿಸಲಿದ್ದೀರಿ. ರೈತರು ರಸಗೊಬ್ಬರ ಮತ್ತು ಕೀಟನಾಶಕ ಮುಂತಾದ ಕೃಷಿ ರಕ್ಷಣಾ ಖರೀದಿಗಾಗಿ ಹಣ ವ್ಯಯಿಸಬೇಕಾದೀತು.

ತುಲಾ: ನಿರೀಕ್ಷಿತ ಕಾರ್ಯಕಲಾಪಗಳು ನೆರವೇರಿ ನೆಮ್ಮದಿಯನ್ನು ತಂದುಕೊಡಲಿವೆ. ಯಂತ್ರೋಪಕರಣ ಮಾರಾಟದಿಂದಾಗಿ ಅಧಿಕ ಲಾಭದ ನಿರೀಕ್ಷೆ. ಸಾಲ ಮರುಪಾವತಿಸುವ ಕ್ಷಣಗಳು ಕಂಡುಬರುವುದು.

ವೃಶ್ಚಿಕ: ವಾಹನ ಪ್ರಯಾಣ ಅನುಕೂಲಕರವಾಗಿ ಪರಿಣಮಿಸಲಿದೆ. ಚಿನ್ನ ಬೆಳ್ಳಿ ಮುಂತಾದ ಆಭರಣ ಮಾರಾಟಗಾರರಿಗೆ ಗಳಿಕೆಯಲ್ಲಿ ಹೆಚ್ಚಳ. ಕೆಲಸವೊಂದನ್ನು ಪ್ರಾರಂಭಿಸುವ ಸಲುವಾಗಿ ಹಿರಿಯರೊಂದಿಗೆ ಚರ್ಚೆ.

ಧನು: ನಿಮ್ಮ ಇಷ್ಟದಂತೆಯೇ ಕೆಲಸ ಕಾರ್ಯಗಳು ಸಾಗುವುದರಿಂದ ನೆಮ್ಮದಿಯೊಂದಿಗೆ ಆತ್ಮವಿಶ್ವಾಸ ಮೂಡಲಿದೆ. ಕೆಲಸದ ವಿಷಯದಲ್ಲಿ ಬಿಡುವು. ಅತಿವಿಶ್ವಾಸದಿಂದಾಗಿ ಬೀಗದೆ ಮುಂದಿನ ಯೋಜನೆ ಬಗ್ಗೆ ಯೋಚಿಸಿ.

ಮಕರ: ಮದುವೆ ಮುಂತಾದ ಮಂಗಳ ಕಾರ್ಯಗಳಿಗೆ ಸಹಾಯ ಮಾಡಬೇಕಾದೀತು. ವಾಣಿಜ್ಯ ಬೆಳೆ ಬೆಳೆಗಾರರಿಗೆ ಉತ್ತಮ ಲಾಭ. ದೇವತಾ ದರ್ಶನಕ್ಕಾಗಿ ಮನೆಯವರೊಂದಿಗೆ ಪ್ರಯಾಣ.

ಕುಂಭ: ಬದುಕಿಗೊಂದು ಹೊಸ ಆಯಾಮ ಕಂಡುಕೊಳ್ಳಲಿದ್ದೀರಿ. ನಿಮ್ಮ ಬದುಕಿನ ತಿರುವಿಗೆ ಸ್ನೇಹಿತರ ಕೊಡುಗೆ ಬಹಳವಾದುದು ಎಂದು ತಿಳಿದುಕೊಳ್ಳುವಿರಿ. ಮನೆಯವರ ಭಾವನೆಗಳಿಗೆ ಬೆಲೆ ಕೊಡಲಿದ್ದೀರಿ.

ಮೀನ: ಸ್ಟೇಷನರಿ, ದಿನಬಳಕೆ ವಸ್ತುಗಳ ಮಾರಾಟಗಾರರಿಗೆ ಉತ್ತಮ ವ್ಯವಹಾರ ನಡೆಯಲಿದೆ. ಹೊಸ ವ್ಯಾಪಾರ ಆರಂಭಿಸಲು ಯೋಚಿಸಲಿದ್ದೀರಿ. ಸಂಗಾತಿಯ ಆರೋಗ್ಯದ ಬಗ್ಗೆ ಗಮನ ಅಗತ್ಯ.

ನಿಮ್ಮ ಜನ್ಮದಿನ 14-ಜುಲೈ ಇಂದು ಅತ್ಯಂತ ಶುಭದಾಯಕವಾಗಿದ್ದು, ಈ ವರ್ಷ ವ್ಯಾಪಾರ ವ್ಯವಹಾರಗಳಲ್ಲಿ ಅಭಿವೃದ್ಧಿಯನ್ನು ಕಂಡುಕೊಳ್ಳುವಿರಿ. ವ್ಯವಹಾರದ ವಿಸ್ತರಣೆಗೆ ಮನ ಮಾಡಿ ಯಶಸ್ಸನ್ನು ಸಾಧಿಸಲಿದ್ದೀರಿ. ವ್ಯವಹಾರದಲ್ಲಿ ಅನುಕೂಲ. ಕುಟುಂಬದಲ್ಲಿ ಸಾಮರಸ್ಯ ಮೂಡುವುದಲ್ಲದೇ ಬಂಧುಗಳೊಡನೆ ಮಧುರ ಬಾಂಧವ್ಯ ಹೊಂದುವಿರಿ.

ಪದಬಂಧ 4657

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಆಯುರ್ವೇದ ವೈದ್ಯ ಪದ್ಧತಿಯ ಜನಕ (3)
3.ತೆಳುವಾದ ಸೀರೆ (3)
5.ಕರೆಯೋಲೆಯಲ್ಲಿನ ಕೂಗು (2)
6.ಗಂಡು ಕುರಿ ಇಲ್ಲಿದೆ (3)
7.ನೆನಪಲ್ಲೇ ಇರುವ ಕಾರಣ (2)
9.ಶಸ್ತ್ರದ ಹತ್ತಿರವಿರುವ ಅರಿವೆ (2)
10.ಹಸಿಯನ್ನು ಹೀಗೂ ಹೇಳುವರು (2)
11.ತಿರುವು ಮುರುವಾಗಿರುವ ರಂಗೋಲಿ (2)
13.ಗರ ಬಡಿದಂತಿರುವ ಪತಿವ್ರತೆ (3)
15.ಸೊಂಡಿಲಿರುವ ದೊಡ್ಡ ಪ್ರಾಣಿ (2)
16.ಸೂರ್ಯ ಇಲ್ಲಿದ್ದಾನೆ (3)
17.ಗೋಪುರಕ್ಕೆ ಹಾಕುವ ಲೋಹ ಶಿಖರ (3)

ಮೇಲಿಂದ ಕೆಳಕ್ಕೆ

1.ಚಹ ತಂದವನ ಲಕ್ಷಣ! (3)
2.ಕೈ ಮುಂದಿರಿಸಿದಾಗ ಕಾಣಿಸಿದ ಚಿಪ್ಪು (3)
3.ಸುಗಂಧಯುಕ್ತ ಜಲ (3)
4.ಈಕೆ ಹೆಂಗಸು (3)
5.ಖಡ್ಗದಿಂದ ಮಾಡುವ ಸಾಧನೆ (5)
8.ಈ ಪರಿ ಬಂದಿರುವ ಮಾರ್ಪಾಟು (5)
12.ಕೆಟ್ಟಹೆಂಗಸು (3)
13.ಸಣ್ಣ ಸಣ್ಣಗೆಜ್ಜೆಗಳ ಕಾಲಿನ ಕಡಗ (3)
14.ಭಿಕ್ಷುಕ ಇಲ್ಲಿದ್ದಾನೆ (3)
15.ಆಯಾಳಿಗಾಗಿರುವ ಸುಸ್ತು (3)



4656ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉದಾಹರಣೆ 3.ಅನರ್ಘ್ಯ 5.ಕರತಾಡನ 7.ಡಿರಾ 9.ಒನಪು 11.ತೂಕ 13.ರಕ್ತತಿಲಕ 14.ಹಂತಕ 16.ಪಾಕಪ್ರವೀಣ

ಮೇಲಿಂದ ಕೆಳಕ್ಕೆ: 1.ಉಗಿಬಂಡಿ 2.ರಜಕ 4.ನಯನ 6.ತಾರೀಫು 8.ರಾಟೆ 9.ಒಡತಿ 10.ತುತೂ 12.ಕಡಿವಾಣ 13.ರಥಿಕ 14.ಕಟುಕ

ಸುಡೊಕು 5043

2				9		7		
	1		4		7		5	
		9		5			6	
	9			2		8		6
3		7	1		6			
	2			7		1		4
1			9	8			4	
	7					2		8
8		2		1	3		9	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5042 ಸುಡೊಕು

9	6	4	1	3	8	7	2	5
1	5	3	7	6	2	8	9	4
2	8	7	5	4	9	1	6	3
3	9	1	2	7	4	6	5	8
6	2	5	9	8	3	4	7	1
7	4	8	6	1	5	2	3	9
5	7	2	8	9	1	3	4	6
4	1	9	3	2	6	5	8	7
8	3	6	4	5	7	9	1	2

ನಿಂದನಾತ್ಮಕ ಟ್ವೀಟ್‌ಗಳನ್ನು ಅಳಿಸಲು ಹೈಕೋರ್ಟ್ ನಿರ್ದೇಶನ

ನವದೆಹಲಿ (ಪಿಟಿಐ): ಮಾಜಿ ರಾಜತಾಂತ್ರಿಕ ಅಧಿಕಾರಿ ಲಕ್ಷ್ಮಿ ಮುರ್ಡೇಶ್ವರ ಪುರಿ ಅವರ ವಿರುದ್ಧದ ನಿಂದನಾತ್ಮಕ ಟ್ವೀಟ್‌ಗಳನ್ನು ತೆಗೆದು ಹಾಕುವಂತೆ ದೆಹಲಿ ಹೈಕೋರ್ಟ್ ಮಂಗಳವಾರ ಹೋರಾಟಗಾರ ಸಾಕೇತ್ ಗೋಖಲೆ ಅವರಿಗೆ ನಿರ್ದೇಶಿಸಿತು.

ಈ ಕುರಿತು ಮಧ್ಯಂತರ ಆದೇಶ ನೀಡಿರುವ ನ್ಯಾಯಮೂರ್ತಿ ಸಿ. ಹರಿ ಶಂಕರ್ ಅವರು, ನ್ಯಾಯಾಲಯದಲ್ಲಿ ಗೋಖಲೆ ವಿರುದ್ಧ ಮಾನಹಾನಿ ಪ್ರಕರಣ ಬಾಕಿ ಇರುವ ಹಿನ್ನೆಲೆಯಲ್ಲಿ, ಲಕ್ಷ್ಮಿ ಪುರಿ ಮತ್ತು ಅವರ ಪತಿ ಕೇಂದ್ರ ಸಚಿವ ಹರದೀಪ್ ಸಿಂಗ್ ಪುರಿ ವಿರುದ್ಧ ನಿಂದನಾತ್ಮಕ ಟ್ವೀಟ್‌ಗಳನ್ನು ಪೋಸ್ಟ್ ಮಾಡುವುದಕ್ಕೆ ತಡೆ ನೀಡಿದ್ದಾರೆ.

ಈ ಆದೇಶ ಜಾರಿಯಾದ 24 ಗಂಟೆಗಳ ಒಳಗೆ ಗೋಖಲೆ ಟ್ವೀಟ್‌ಗಳನ್ನು ಅಳಿಸಲು ವಿಫಲವಾದರೆ, ಟ್ವಿಟರ್ ಯುಆರ್‌ಎಲ್‌ಗಳನ್ನು ಗುರುತಿಸಿ, ಅವರ ವಿರುದ್ಧ ಅಗತ್ಯ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ನ್ಯಾಯಾಲಯ ಎಚ್ಚರಿಸಿದೆ.

'ಗೋಖಲೆ ಅವರು, ನನ್ನ ಮತ್ತು ನನ್ನ ಕುಟುಂಬದ ವಿರುದ್ಧ ಸುಳ್ಳು ಮತ್ತು ತಪ್ಪಾದ, ಮಾನಹಾನಿಕರವಾದ ಮಾಹಿತಿಗಳನ್ನು ಟ್ವೀಟ್ ಮಾಡಿದ್ದಾರೆ' ಎಂದು ಆರೋಪಿಸಿ ಲಕ್ಷ್ಮಿ ಪುರಿ ಅವರು, ಗೋಖಲೆ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು. ₹5 ಕೋಟಿ ನಷ್ಟ ಪರಿಹಾರ ನೀಡುವಂತೆ ನ್ಯಾಯಾಲಯದ ಮೊರೆ ಹೋಗಿದ್ದರು. ಈ ಮೊಕದ್ದಮೆ ಆಧರಿಸಿ, ನ್ಯಾಯಾಲಯ ಮಧ್ಯಂತರ ಆದೇಶ ನೀಡಿದೆ.

ಮಲಾಲಾ ಚಿತ್ರವಿದ್ದ ಪಠ್ಯಪುಸ್ತಕ ಮುಟ್ಟುಗೋಲು

ಇಸ್ಲಾಮಾಬಾದ್: ನೊಬೆಲ್ ಪ್ರಶಸ್ತಿ ಪುರಸ್ಕೃತೆ ಮಲಾಲಾ ಯೂಸುಫ್‌ಝೈ ಅವರ ಚಿತ್ರವಿದ್ದ ಪಠ್ಯಪುಸ್ತಕಗಳನ್ನು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಪಠ್ಯಕ್ರಮ ಮತ್ತು ಪಠ್ಯಪುಸ್ತಕ ಮಂಡಳಿಯು (ಪಿಸಿಟಿಬಿ) ಮುಟ್ಟುಗೋಲು ಹಾಕಿಕೊಂಡಿದೆ.

ಮಲಾಲಾ ಅವರು ಇಸ್ಲಾಂ ಧರ್ಮದ ಕುರಿತು ನೀಡಿರುವ ಹೇಳಿಕೆಗಳು ವಿವಾದಾತ್ಮಕವಾಗಿರುವ ಹಿನ್ನೆಲೆಯಲ್ಲಿ ಅವರ ಚಿತ್ರವಿದ್ದ ಪಠ್ಯಪುಸ್ತಕಗಳನ್ನು ಪಿಸಿಟಿಬಿ ಮುಟ್ಟುಗೋಲು ಹಾಕಿಕೊಂಡಿದೆ ಎಂದು ಮೂಲಗಳು ತಿಳಿಸಿವೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ನೇಪಾಳ: 5ನೇ ಬಾರಿಗೆ ಪ್ರಧಾನಿಯಾಗಿ ಶೇರ್ ಬಹದ್ದೂರ್ ಅಧಿಕಾರ ಸ್ವೀಕಾರ

ಕಠ್ಮಂಡು (ಪಿಟಿಐ): ನೇಪಾಳದ ಪ್ರಧಾನಮಂತ್ರಿಯಾಗಿ ನೇಪಾಳಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಶೇರ್ ಬಹದ್ದೂರ್ ದೇವುಬಾ ಅವರು ಐದನೇ ಬಾರಿಗೆ ಮಂಗಳವಾರ ಅಧಿಕಾರ ವಹಿಸಿಕೊಂಡರು.

ಸಂವಿಧಾನದ ವಿಧಿ 75 (6)ರ ಅನ್ವಯ ಅಧ್ಯಕ್ಷೆ ವಿದ್ಯಾದೇವಿ ಭಂಡಾರಿ ಅವರು ದೇವುಬಾ ಅವರನ್ನು ನೇಮಕ ಮಾಡಿದರು ಎಂದು ಸ್ಥಳೀಯ ದೈನಿಕ ಹಿಮಾಲಯನ್ ಟೈಂಸ್ ವರದಿ ಮಾಡಿದೆ.

ಹಾಲಿ ಪ್ರಧಾನಿಯಾಗಿದ್ದ ಕೆ.ಪಿ.ಒಲಿ ಅವರ ಸ್ಥಾನದಲ್ಲಿ ದೇವುಬಾ ಅಧಿಕಾರ ವಹಿಸಿಕೊಂಡಿದ್ದು, ಸಂವಿಧಾನದ ನಿಯಮಗಳ ಪ್ರಕಾರ, 30 ದಿನಗಳಲ್ಲಿ ಅವರು ಬಹುಮತ ಸಾಬೀತುಪಡಿಸಬೇಕಿದೆ.

ಸಂಸತ್ತು ವಿಸರ್ಜಿಸುವ ಹಾಲಿ ಪ್ರಧಾನಿ ಕೆ.ಪಿ.ಒಲಿ ಅವರ ಮೇ 21ರ ತೀರ್ಮಾನವನ್ನು ಸೋಮವಾರ ಅನೂರ್ಜಿತಗೊಳಿಸಿದ್ದ ಸುಪ್ರೀಂ ಕೋರ್ಟ್, ದೇವುಬಾ ಅವರನ್ನು ಪ್ರಧಾನಿಯಾಗಿ ನೇಮಿಸಬೇಕು ಎಂದು ಆದೇಶಿಸಿತ್ತು.

ಮುಖ್ಯ ನ್ಯಾಯಮೂರ್ತಿ ಚೋಳೇಂದ್ರ ಶಮ್‌ಶೇರ್ ರಾಣಾ ನೇತೃತ್ವದ ಪಂಚ ಸದಸ್ಯರ ಪೀಠವು, ಪ್ರಧಾನಮಂತ್ರಿ ಸ್ಥಾನದ ಹಕ್ಕು ಪ್ರತಿಪಾದಿಸುವ ಒಲಿ ಅವರ ಕ್ರಮ ಅಸಾಂವಿಧಾನಿಕವಾದುದು ಎಂದು ಅಭಿಪ್ರಾಯಪಟ್ಟಿತ್ತು.

ದೇವುಬಾ ಈ ಹಿಂದೆ ಜೂನ್ 2017–ಫೆಬ್ರುವರಿ 2018, ಜೂನ್ 2004 –ಫೆಬ್ರುವರಿ2005, ಜುಲೈ 2001–ಅಕ್ಟೋಬರ್ 2002 ಮತ್ತು ಸೆಪ್ಟೆಂಬರ್ 1995–ಮಾರ್ಚ್ 1997ರವರೆಗೆ ನಾಲ್ಕು ಬಾರಿ ಪ್ರಧಾನಿಯಾಗಿದ್ದರು.

ವಿಪಕ್ಷಗಳ ಪರ 'ಸುಪ್ರೀಂ' ಉದ್ದೇಶಪೂರ್ವಕ ತೀರ್ಪು

ಕಠ್ಮಂಡು (ಪಿಟಿಐ): 'ವಿರೋಧ ಪಕ್ಷಗಳ ಪರವಾಗಿ ಸುಪ್ರೀಂ ಕೋರ್ಟ್ ಉದ್ದೇಶಪೂರ್ವಕವಾಗಿ ತೀರ್ಪು ನೀಡುತ್ತಿದೆ' ಎಂದು ನೇಪಾಳದ ಮಾಜಿ ಪ್ರಧಾನಿ ಕೆ.ಪಿ. ಶರ್ಮಾ ಒಲಿ ಆರೋಪಿಸಿದ್ದು, 'ಈ ರೀತಿಯ ತೀರ್ಪು, ಬಹುಪಕ್ಷಗಳಿರುವ ಸಂಸದೀಯ ವ್ಯವಸ್ಥೆಯ ಮೇಲೆ ದೀರ್ಘಕಾಲೀನ ಪರಿಣಾಮ ಬೀರಲಿದೆ' ಎಂದು ಹೇಳಿದ್ದಾರೆ.

ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಒಲಿ, 'ಜನರಿಂದ ಆಯ್ಕೆಯಾಗಿದ್ದರೂ ನಾನು ಈ ಹುದ್ದೆಗೆ ರಾಜೀನಾಮೆ ನೀಡುತ್ತಿದ್ದೇನೆ. ಏಕೆಂದರೆ ಸುಪ್ರೀಂ ಕೋರ್ಟ್, ನೇಪಾಳಿ ಕಾಂಗ್ರೆಸ್ ಅಧ್ಯಕ್ಷ ಶೇರ್ ಬಹದ್ದೂರ್ ದೇವುಬಾ ಅವರನ್ನು ಎರಡು ದಿನದೊಳಗೆ ಪ್ರಧಾನಿಯನ್ನಾಗಿ ನೇಮಕ ಮಾಡಬೇಕೆಂದು ಆದೇಶ ನೀಡಿದೆ' ಎಂದರು.

'ಸುಪ್ರೀಂ ಕೋರ್ಟ್ ಉದ್ದೇಶಪೂರ್ವಕವಾಗಿ ವಿರೋಧ ಪಕ್ಷಗಳ ಪರವಾಗಿ ತೀರ್ಪು ನೀಡಿದೆ. ಈ ತೀರ್ಪಿನಲ್ಲಿ ಬಳಸಲಾದ ನಿಯಮಗಳು ಮತ್ತು ಭಾಷೆಯು ಬಹುಪಕ್ಷೀಯ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟವರಿಗೆ ಎಚ್ಚರಿಕೆಯ ಗಂಟೆಯಾಗಿದೆ. ಇದು ತಾತ್ಕಾಲಿಕ ಸಂತೋಷದ ವಿಷಯವಾಗಿದ್ದು, ಇದರ ಪರಿಣಾಮವು ದೀರ್ಘಕಾಲ ಇರಲಿದೆ' ಎಂದು ಒಲಿ ಅಭಿಪ್ರಾಯ ವ್ಯಕ್ತಪಡಿಸಿದರು ಎಂದು ಸ್ಥಳೀಯ 'ರಿಪಬ್ಲಿಕಾ' ಪತ್ರಿಕೆಯು ವರದಿ ಮಾಡಿದೆ.

ತಮಿಳುನಾಡು: ಆಂಥ್ರಾಕ್ಸ್‌ನಿಂದಾಗಿ ಹೆಣ್ಣು ಆನೆ ಸಾವು

ಕೊಯಮತ್ತೂರು (ಪಿಟಿಐ): 'ಇಲ್ಲಿನ ಅನೈಕಟ್ಟಿ ಹೊರವಲಯದಲ್ಲಿರುವ ಅರಣ್ಯ ಪ್ರದೇಶದಲ್ಲಿ ಹೆಣ್ಣು ಆನೆಯ ಕಳೇಬರ ಪತ್ತೆಯಾಗಿತ್ತು. ಈ ಆನೆಯು ಆಂಥ್ರಾಕ್ಸ್‌ನಿಂದಾಗಿ ಮೃತಪಟ್ಟಿದೆ' ಎಂದು ಅರಣ್ಯ ಇಲಾಖೆಯ ಮೂಲಗಳು ಮಂಗಳವಾರ ತಿಳಿಸಿವೆ.

ಕೊಯಮತ್ತೂರು ಅರಣ್ಯ ವ್ಯಾಪ್ತಿ ಪ್ರದೇಶದಲ್ಲಿ ಅಧಿಕಾರಿಗಳು ಸೋಮವಾರ ಗಸ್ತು ತಿರುಗುತ್ತಿದ್ದಾಗ 13 ವರ್ಷದ ಹೆಣ್ಣು ಆನೆಯ ಕಳೇಬರ ಪತ್ತೆಯಾಗಿತ್ತು.

'ಆನೆಯ ಬಾಯಿ, ಗುದದ್ವಾರದಿಂದ ಹೊರಬಂದಿದ್ದ ರಕ್ತದ ಮಾದರಿಯಲ್ಲಿ ಆಂಥ್ರಾಕ್ಸ್ ಬ್ಯಾಕ್ಟೀರಿಗಳಿರುವುದು ಪರೀಕ್ಷೆಯಿಂದ ತಿಳಿದುಬಂದಿದೆ' ಎಂದು ಮೂಲಗಳು ತಿಳಿಸಿವೆ.

ಸೈನಿಕರ ಗಸ್ತು ಭಾರತ ಮತ್ತು ಪಾಕಿಸ್ತಾನ ಗಡಿ ನಡುವಿನ ಪೂಂಚ್‌ನಲ್ಲಿರುವ ಗಡಿ ನಿಯಂತ್ರಣ ರೇಖೆಯಲ್ಲಿ (ಎಲ್‌ಒಸಿ) ಗಸ್ತು ಕಾರ್ಯಕೈಗೊಂಡ ಭಾರತೀಯ ಸೇನಾ ಸೈನಿಕರು ಪಿಟಿಐ– ಚಿತ್ರ

20ನೇ ವರ್ಷದ ಚಿರಸ್ಮರಣೆ

ಶ್ರೀ ಎಂ. ಅಣ್ಣಯ್ಯ ರೆಡ್ಡಿ
ನಿಧನ: 14.07.2001
"ನೀವು ನಮ್ಮನ್ನಗಲಿ ಇಂದಿಗೆ 20 ವರ್ಷವಾದರೂ ನಿಮ್ಮ ಸವಿನೆನಪು ಸದಾ ಹಸಿರಾಗಿರುತ್ತದೆ, ನೀವು ತೋರಿದ ಬೆಳಕಿನಲ್ಲಿ ಮುನ್ನಡೆಯುತ್ತಿರುವ"
ಸದಾ ನಿಮ್ಮ ನೆನಪಿನಲ್ಲಿರುವ
ಜಯಮ್ಮ ಅಣ್ಣಯ್ಯ ರೆಡ್ಡಿ, ಮಕ್ಕಳು ಮತ್ತು ಕುಟುಂಬ ವರ್ಗದವರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

LOOKING TO BUILD, BUY OR SELL A PROPERTY
Please refer Classifieds on Sunday

ಎಎಪಿ ನನ್ನ ಕೆಲಸ ಗುರುತಿಸಿದೆ: ಸಿಧು

ಚಂಡಿಗಡ (ಪಿಟಿಐ): ಕಾಂಗ್ರೆಸ್‌ನ ಪಂಜಾಬ್ ಘಟಕದಲ್ಲಿ ಉದ್ಭವಿಸಿರುವ ಆಂತರಿಕ ಭಿನ್ನಾಭಿಪ್ರಾಯಗಳನ್ನು ಪರಿಹರಿಸಲು ಹೈಕಮಾಂಡ್ ಪ್ರಯತ್ನ ನಡೆಸುತ್ತಿರುವ ಮಧ್ಯೆಯೇ, ಪಕ್ಷದ ಶಾಸಕ ನವಜೋತ್ ಸಿಂಗ್ ಸಿಧು ಅವರು, ವಿರೋಧ ಪಕ್ಷವಾಗಿರುವ ಆಮ್ ಆದ್ಮಿ ಪಾರ್ಟಿ (ಎಎಪಿ) ಬಗ್ಗೆ ಮೃದುಧೋರಣೆ ವ್ಯಕ್ತಪಡಿಸಿದ್ದಾರೆ. ಪಂಜಾಬ್ ಬಗೆಗಿನ ತಮ್ಮ ದೂರದೃಷ್ಟಿ ಮತ್ತು ಕಾರ್ಯವನ್ನು ಎಎಪಿ ಯಾವಾಗಲೂ ಗುರುತಿಸುತ್ತ ಬಂದಿದೆ ಎಂದು ಸಿಧು ಹೇಳಿದ್ದಾರೆ.

ಖಾಸಗಿ ವಿದ್ಯುತ್ ಕಂಪನಿಗಳಿಂದ ಆಡಳಿತಾರೂಢ ಕಾಂಗ್ರೆಸ್ ಪಕ್ಷವು ನಿಧಿ ಪಡೆದಿದೆ ಎಂದು ಎಎಪಿ ಪಂಜಾಬ್ ಘಟಕದ ಮುಖ್ಯಸ್ಥ ಭಗವಂತ್ ಮಾನ್ ಆರೋಪಿಸಿ, ಈ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಬೇಕು ಎಂದು ನವಜೋತ್ ಸಿಂಗ್ ಸಿಧು ಅವರನ್ನು ಕೇಳಿಕೊಂಡ ಮರುದಿವಸವೇ ಸಿಧು ಟ್ವೀಟ್ ಮೂಲಕ ಈ ರೀತಿಯ ಹೇಳಿಕೆ ನೀಡಿದ್ದಾರೆ.

'ವಿರೋಧ ಪಕ್ಷವಾಗಿರುವ ಎಎಪಿ ಯಾವಾಗಲೂ ಪಂಜಾಬ್‌ಗಾಗಿ ನಾನು ಹೊಂದಿರುವ ದೂರದೃಷ್ಟಿ ಮತ್ತು ನನ್ನ ಕೆಲಸವನ್ನು ಗುರುತಿಸಿದೆ. 2017ರ ಮೊದಲು ಸಹ ರೈತರ ಸಮಸ್ಯೆಗಳು, ವಿದ್ಯುತ್ ಬಿಕ್ಕಟ್ಟು ಹಾಗೂ ಭ್ರಷ್ಟಾಚಾರದ ಬಗ್ಗೆ ಮತ್ತು ಪಂಜಾಬ್ ಜನರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಿದ್ದೇನೆ. ಅಂದಿನಿಂದಲೂ ಎಎಪಿ ನನ್ನ ಕೆಲಸವನ್ನು ಗುರುತಿಸಿದೆ. ನಾನು ಪಂಜಾಬ್‌ಗಾಗಿ ಹೋರಾಡುತ್ತಿರುವುದನ್ನು ಎಎಪಿ ತಿಳಿದುಕೊಂಡಿದೆ' ಎಂದು ಸಿಧು ಸರಣಿ ಟ್ವೀಟ್‌ಗಳಲ್ಲಿ ಹೇಳಿದ್ದಾರೆ.

'ನನ್ನನ್ನು ಪ್ರಶ್ನಿಸಲು ಪ್ರತಿಪಕ್ಷಗಳಿಗೆ ಧೈರ್ಯವಿದ್ದರೆ, ಅವರು ನನ್ನ ಜನಪರವಾದ ಕಾರ್ಯಸೂಚಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ' ಎಂದಿರುವ ಸಿಧು, ಹಿಂದಿನ ಎಸ್‌ಎಡಿ-ಬಿಜೆಪಿ ಆಡಳಿತದ ಅವಧಿಯಲ್ಲಿ ಡ್ರಗ್ ಮಾಫಿಯಾ ಮತ್ತು ಭ್ರಷ್ಟಾಚಾರ ಸೇರಿದಂತೆ ಹಲವಾರು ವಿಷಯಗಳ ಬಗ್ಗೆ ಧ್ವನಿ ಎತ್ತಿದ್ದಕ್ಕಾಗಿ ಎಎಪಿ ನಾಯಕರು ಹೊಗಳಿದ ಹಳೆಯ ವಿಡಿಯೊಗಳನ್ನು ಹಂಚಿಕೊಂಡಿದ್ದಾರೆ.

ಚೋಕ್ಸಿಗೆ ಮಧ್ಯಂತರ ಜಾಮೀನು

ನವದೆಹಲಿ: ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ಸಾವಿರಾರು ಕೋಟಿ ರೂಪಾಯಿ ವಂಚಿಸಿದ ಪ್ರಕರಣದ ಆರೋಪಿ, ವಜ್ರದ ವ್ಯಾಪಾರಿ ಮೆಹುಲ್ ಚೋಕ್ಸಿಗೆ ಡೊಮಿನಿಕಾ ಹೈಕೋರ್ಟ್ ಮಧ್ಯಂತರ ಜಾಮೀನು ನೀಡಿದೆ.

ಚಿಕಿತ್ಸೆಗಾಗಿ ಆಂಟಿಗುವಾ ಮತ್ತು ಬಾರ್ಬುಡಾಗೆ ತೆರಳಲು ಮಾತ್ರ ಈ ಜಾಮೀನು ನೀಡಲಾಗಿದ್ದು, ಅವರನ್ನು ಭಾರತಕ್ಕೆ ಹಸ್ತಾಂತರಿಸುವ ಪ್ರಕ್ರಿಯೆ ಮತ್ತಷ್ಟು ವಿಳಂಬವಾಗಲಿದೆ.

2017 ನವೆಂಬರ್‌ನಿಂದ ಕೆರಿಬಿಯನ್ ದ್ವೀಪ ಆಂಟಿಗುವಾ ಮತ್ತು ಬಾರ್ಬುಡಾದ ಪೌರತ್ವ ಪಡೆದಿರುವ 62 ವರ್ಷದ ಚೋಕ್ಸಿಯನ್ನು, ದ್ವೀಪ-ರಾಷ್ಟ್ರವನ್ನು ಅಕ್ರಮವಾಗಿಪ್ರವೇಶಿಸಿದ ಆರೋಪದಡಿ ಬಂಧಿಸಲಾಗಿತ್ತು.

ರಾಹುಲ್, ಪ್ರಿಯಾಂಕಾ ಭೇಟಿಯಾದ ಪ್ರಶಾಂತ್ ಕಿಶೋರ್

ನವದೆಹಲಿ: ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಮಂಗಳವಾರ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರನ್ನು ದೆಹಲಿಯ ನಿವಾಸದಲ್ಲಿ ಭೇಟಿಯಾಗಿದ್ದಾರೆ. ಕಾಂಗ್ರೆಸ್‌ನ ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ಕೆ.ಸಿ.ವೇಣುಗೋಪಾಲ್ ಅವರೊಂದಿಗೂ ಚರ್ಚೆ ನಡೆಸಿದ್ದಾರೆ.

ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿಯ (ಎನ್‌ಸಿಪಿ) ಮುಖಂಡ ಶರದ್ ಪವಾರ್ ಅವರನ್ನು ಜೂನ್ 21ರಂದು ಎರಡನೇ ಬಾರಿಗೆ ಪ್ರಶಾಂತ್ ಕಿಶೋರ್ ಭೇಟಿ ಮಾಡಿದ್ದರು. ಈಗ ಕಿಶೋರ್ ಕಾಂಗ್ರೆಸ್ ಮುಖಂಡರೊಂದಿಗೆ ಮಾತುಕತೆ ನಡೆಸಿದ್ದಾರೆ.

ಪ್ರಶಾಂತ್ ಕಿಶೋರ್

2024ರಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿದ್ದು, ಕೇಂದ್ರದಲ್ಲಿ ಬಿಜೆಪಿ ಎದುರು ವಿರೋಧ ಪಕ್ಷಗಳ ರಾಷ್ಟ್ರೀಯ ಮೋರ್ಚಾ ರಚನೆಯಾಗುವ ಬಗ್ಗೆ ವದಂತಿ ಹಬ್ಬಿದೆ. ಎನ್‌ಸಿಪಿ ಮುಖಂಡ ಪವಾರ್ ಅವರ ನಿವಾಸದಲ್ಲಿ ಕಿಶೋರ್ ಒಂದೂವರೆ ಗಂಟೆಗೂ ಹೆಚ್ಚು ಸಮಯ ಮಾತುಕತೆ ನಡೆಸಿದ್ದರು.

ಪಂಜಾಬ್ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಮತ್ತು ಮುಖಂಡ ನವಜೋತ್ ಸಿಂಗ್ ಸಿಧು ನಡುವಿನ ತಿಕ್ಕಾಟ ಶಮನಕ್ಕಾಗಿ ಕಾಂಗ್ರೆಸ್ ಹೈಕಮಾಂಡ್ ಪ್ರಯತ್ನಿಸುತ್ತಿದೆ. ಪಂಜಾಬ್ ವಿಧಾನಸಭೆಗೆ ಮುಂದಿನ ವರ್ಷ ಚುನಾವಣೆ ನಡೆಯಲಿದ್ದು, ಅಲ್ಲಿ ಕಾಂಗ್ರೆಸ್ ಮತ್ತೆ ಚುಕ್ಕಾಣಿ ಹಿಡಿಯಲು ಮತ್ತು ಪಕ್ಷದಲ್ಲಿನ ಪರಿಸ್ಥಿತಿ ಶಾಂತಗೊಳಿಸುವ ನಿಟ್ಟಿನಲ್ಲಿ ಕಿಶೋರ್ ಜೊತೆಗೆ ಚರ್ಚೆ ನಡೆದಿದೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಜಮ್ಮು: ಸತತ ಎರಡನೇ ವರ್ಷ ಹುತಾತ್ಮರ ದಿನ ಆಚರಣೆ ಇಲ್ಲ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ಸತತ ಎರಡನೇ ವರ್ಷವೂ ಹುತಾತ್ಮರ ದಿನಾಚರಣೆಯ ಸ್ಮರಣಾರ್ಥ ಅಧಿಕೃತ ರಜೆ ನೀಡಿಲ್ಲ. ಹಾಗೆಯೇ ಕಾರ್ಯಕ್ರಮವನ್ನು ಆಯೋಜಿಸಿಲ್ಲ.

1931ರ ಜುಲೈ 13 ರಂದು ತಮ್ಮ ಹಕ್ಕುಗಳಿಗಾಗಿ ಹೋರಾಡಿದ 22 ಕಾಶ್ಮೀರಿಗಳನ್ನು ಡೋಗ್ರಾ ಆಡಳಿತಗಾರರು ಗುಂಡು ಹಾರಿಸಿ, ಹತ್ಯೆ ಮಾಡಿದ್ದರು. ಈ ಘಟನೆ ಸ್ಮರಣಾರ್ಥವಾಗಿ ಜುಲೈ13 ಅನ್ನು ಹುತಾತ್ಮರ ದಿನವನ್ನಾಗಿ ಆಚರಿಸಲಾಗುತ್ತದೆ.

1947ರಿಂದ 2019ರ ತನಕ ಹುತಾತ್ಮರ ದಿನದ ಸ್ಮರಣಾರ್ಥವಾಗಿ ಅಧಿಕೃತ ರಜೆ ಮತ್ತು ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿತ್ತು. ಸ್ಥಳೀಯ ನಾಯಕರು ಹುತಾತ್ಮರ ಸ್ಮಾರಕಕ್ಕೆ ಭೇಟಿ ನೀಡಿ ಗೌರವ ನಮನ ಸಲ್ಲಿಸುತ್ತಿದ್ದರು. ಆದರೆ 2019, ಆಗಸ್ಟ್ 5ರಂದು 370ನೇ ವಿಧಿ ರದ್ಧತಿ ಬಳಿಕ ಜುಲೈ 13ರ ಅಧಿಕೃತ ರಜೆಯನ್ನು ತೆಗೆದು ಹಾಕಲಾಯಿತು.

ಫಾರೂಕ್ ಅಬ್ದುಲ್ಲಾ

ಹಾಗಾಗಿ 2019ರ ಬಳಿಕದಿಂದ ಜಮ್ಮು-ಕಾಶ್ಮೀರದಲ್ಲಿ ಹುತಾತ್ಮರ ದಿನದಂದು ಅಧಿಕೃತ ರಜೆಯಾಗಲಿ, ಕಾರ್ಯಕ್ರಮವನ್ನಾಗಲಿ ಆಯೋಜಿಸಲಾಗುತ್ತಿಲ್ಲ. ಅಷ್ಟೇ ಅಲ್ಲದೆ ಈ ವರ್ಷವೂ ಹುತಾತ್ಮರ ದಿನದಂದು ಪ್ರತ್ಯೇಕವಾದಿಗಳು ಯಾವುದೇ ಮುಷ್ಕರಕ್ಕೆ ಕರೆ ನೀಡಿಲ್ಲ.

'ಹುತಾತ್ಮರ ಸ್ಮಾರಕದ ಬಳಿ ತೆರಳಿ, ಪುಷ್ಪನಮನ ಸಲ್ಲಿಸಲು ಅವಕಾಶ ಕಲ್ಪಿಸುವಂತೆ ಜಮ್ಮು-ಕಾಶ್ಮೀರದ ಆಡಳಿತಕ್ಕೆ ಮನವಿ ಮಾಡಿದ್ದೆವು. ಆದರೆ ಅವರು ಅನುಮತಿ ನಿರಾಕರಿಸಿದ್ದಾರೆ' ಎಂದು ನ್ಯಾಷನಲ್ ಕಾನ್ಫರೆನ್ಸ್ ವಕ್ತಾರ ಇಮ್ರಾನ್ ನಬಿ ತಿಳಿಸಿದ್ದಾರೆ.

ಹುತಾತ್ಮರನ್ನು ಸ್ಮರಿಸಿರುವ ಎನ್‌ಸಿ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಮತ್ತು ಉಪಾಧ್ಯಕ್ಷ ಒಮರ್ ಅಬ್ದುಲ್ಲಾ ಅವರು, 'ಜಮ್ಮು-ಕಾಶ್ಮೀರದ ಇತಿಹಾಸದಲ್ಲಿ ಜುಲೈ 13 ಮರೆಯಲಾಗದ ದಿನ' ಎಂದು ಹೇಳಿದ್ದಾರೆ.

'ಸರ್ಕಾರವು ಜುಲೈ 13 ಅನ್ನು ರಜಾದಿನದ ಪಟ್ಟಿಯಿಂದ ತೆಗೆದಿದೆ. ಹಾಗಾಗಿ ಜನರು ಹುತಾತ್ಮರ ಸ್ಮಾರಕಕ್ಕೆ ಭೇಟಿ ನೀಡದಂತೆ ತಡೆಯಲು ಶ್ರೀನಗರ ಮತ್ತು ಹಳೆ ನಗರದ ಭಾಗಗಳಲ್ಲಿ ಬಿಗಿ ಭದ್ರತೆಯನ್ನು ಕೈಗೊಳ್ಳಲಾಗಿದೆ' ಎಂದರು.

ಮಾಜಿ ಅಧ್ಯಕ್ಷ ಜುಮಾಗೆ ಜೈಲು ಶಿಕ್ಷೆಯಾದ ಬೆನ್ನಲ್ಲೇ ಭುಗಿಲೆದ್ದ ಗಲಭೆ

ದಕ್ಷಿಣ ಆಫ್ರಿಕಾ: ಕಾಲ್ತುಳಿತ– ಸತ್ತವರ ಸಂಖ್ಯೆ 45ಕ್ಕೆ ಏರಿಕೆ

ಜೋಹಾನ್ಸ್‌ಬರ್ಗ್ (ಎಎಫ್‌ಪಿ/ರಾಯಿಟರ್ಸ್): ಜೋಹಾನ್ಸ್‌ಬರ್ಗ್ ಹೊರವಲಯದ ಸೊವೆಟೊದಲ್ಲಿನ ವಾಣಿಜ್ಯ ಸಂಕೀರ್ಣವನ್ನು ಗಲಭೆಕೋರರು ಲೂಟಿ ಮಾಡಿದ್ದು, ಈ ಸಂದರ್ಭದಲ್ಲಿ ಉಂಟಾದ ಕಾಲ್ತುಳಿತದಲ್ಲಿ ಹಲವರು ಮೃತಪಟ್ಟಿದ್ದಾರೆ.

'ಈ ವಾಣಿಜ್ಯ ಸಂಕೀರ್ಣದಲ್ಲಿ ಸೋಮವಾರ ತಡರಾತ್ರಿ 10 ಮೃತದೇಹಗಳು ಪತ್ತೆಯಾಗಿವೆ. ಇದರೊಂದಿಗೆ ಪ್ರಾಂತ್ಯದಲ್ಲಿ ಮೃತಪಟ್ಟವರ ಸಂಖ್ಯೆ 19ಕ್ಕೇರಿದಂತಾಗಿದೆ' ಎಂದು ಗೌಟೆಂಗ್ ಪ್ರಾಂತ್ಯದ ಪ್ರಧಾನಿ ಡೇವಿಡ್ ಮಖುರಾ ಮಂಗಳವಾರ ಹೇಳಿದ್ದಾರೆ. ಜೋಹಾನ್ಸ್‌ಬರ್ಗ್ ನಗರ ಗೌಟೆಂಗ್ ಪ್ರಾಂತ್ಯದಲ್ಲಿದೆ.

ಕ್ವಾಜುಲು–ನಟಾಲ್ ಪ್ರಾಂತ್ಯದಲ್ಲಿ ನಡೆದ ಗಲಭೆ, ಹಿಂಸಾಚಾರದಲ್ಲಿ 26 ಜನರು ಮೃತಪಟ್ಟಿದ್ದಾರೆ. ಹೀಗಾಗಿ ಎರಡು ಪ್ರಾಂತ್ಯಗಳಲ್ಲಿನ ಗಲಭೆ, ಕಾಲ್ತುಳಿತದಲ್ಲಿ ಸತ್ತವರ ಸಂಖ್ಯೆ 45ಕ್ಕೇರಿದಂತಾಗಿದೆ.

ಗೌಟೆಂಗ್ ಹಾಗೂ ಕ್ವಾಜುಲು–ನಟಾಲ್ ಪ್ರಾಂತ್ಯಗಳಲ್ಲಿ ಕಳೆದ ಐದು ದಿನಗಳಿಂದ ಗಲಭೆ, ಅಂಗಡಿಗಳ ಲೂಟಿ ನಡೆಯುತ್ತಿದೆ. ಮಂಗಳವಾರವೂ ಈ ಪ್ರಾಂತ್ಯಗಳಲ್ಲಿ ಅಂಗಡಿಗಳ ಲೂಟಿ ನಡೆದಿದ್ದು, ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರುವ ಸಲುವಾಗಿ ಅಧ್ಯಕ್ಷ ಸಿರಿಲ್ ರಾಮಫೊಸಾ ಅವರು ಭದ್ರತಾ ಪಡೆಗಳನ್ನು ನಿಯೋಜಿಸಿದ್ದಾರೆ.

ಗಲಭೆಗೆ ಸಂಬಂಧಿಸಿದಂತೆ ಈ ವರೆಗೆ 757 ಜನರನ್ನು ಬಂಧಿಸಲಾಗಿದೆ ಎಂದು ಗೃಹ ಸಚಿವ ಭೇಕಿ ಸೆಲೆ ತಿಳಿಸಿದ್ದಾರೆ. 'ಪರಿಸ್ಥಿತಿ ಮತ್ತಷ್ಟೂ ವಿಕೋಪಕ್ಕೆ ಹೋಗದಂತೆ ಪೊಲೀಸರು ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ' ಎಂದೂ ಅವರು ಹೇಳಿದ್ದಾರೆ.

ಭ್ರಷ್ಟಾಚಾರ ಪ್ರಕರಣದಲ್ಲಿ ದಕ್ಷಿಣ ಆಫ್ರಿಕಾದ ಮಾಜಿ ಅಧ್ಯಕ್ಷ ಜಾಕೋಬ್ ಜುಮಾ ಅವರಿಗೆ 15 ತಿಂಗಳ ಜೈಲು ಶಿಕ್ಷೆಯಾಗಿದೆ. ಅವರನ್ನು ಜೈಲಿಗೆ ಕಳಿಸಿದ ನಂತರ ಹಿಂಸಾಚಾರ, ಗಲಭೆ ಭುಗಿಲೆದ್ದಿದೆ.

ಡರ್ಬಾನ್‌ನಲ್ಲೂ ಗಲಭೆ: ದಕ್ಷಿಣ ಆಫ್ರಿಕಾದ ಬಂದರು ನಗರ ಡರ್ಬಾನ್‌ನಲ್ಲಿ ಸಹ ಉಗ್ರಾಣಗಳು ಹಾಗೂ ಸೂಪರ್‌ಮಾರ್ಕೆಟ್‌ಗಳನ್ನು ಗಲಭೆಕೋರರು ಲೂಟಿ ಮಾಡಿದ್ದಾರೆ.

ದಿನಸಿ, ಗೃಹೋಪಯೋಗಿ ವಸ್ತುಗಳು ಹಾಗೂ ಮಾಂಸದ ಪೊಟ್ಟಣಗಳನ್ನು ಲೂಟಿಕೋರರು ಉಗ್ರಾಣಗಳಿಂದ ಹೊತ್ತೊಯ್ಯುತ್ತಿದ್ದ ದೃಶ್ಯಗಳು ವಿಡಿಯೊದಲ್ಲಿ ಸೆರೆಯಾಗಿವೆ ಎಂದು ರಾಯಿಟರ್ಸ್ ಸುದ್ದಿಸಂಸ್ಥೆ ವರದಿ ಮಾಡಿದೆ.

ಜನರು ಕೈಗೆ ಸಿಕ್ಕ ವಸ್ತುಗಳನ್ನು ತೆಗೆದುಕೊಂಡು ಓಡಿ ಹೋಗುತ್ತಿದ್ದರು. ಕೆಲವರು ಟ್ರಕ್‌ಗಳ ನಂಬರ್ ಪ್ಲೇಟ್‌ಗಳನ್ನು ಮರೆ ಮಾಚಿ, ಲೂಟಿ ಮಾಡಿದ ವಸ್ತುಗಳನ್ನುಈ ಟ್ರಕ್‌ಗಳಲ್ಲಿ ಹೇರಿಕೊಂಡು ಪರಾರಿಯಾಗುತ್ತಿದ್ದ ದೃಶ್ಯಗಳು ಕಂಡು ಬಂದವು ಎಂದು ಸುದ್ದಿಸಂಸ್ಥೆ ತಿಳಿಸಿದೆ.

ಜೋಹಾನ್ಸ್‌ಬರ್ಗ್ ಹೊರವಲಯದ ಸೊವೆಟೊದಲ್ಲಿನ ಮಾಲ್‌ವೊಂದರ ಲೂಟಿಗೆ ಸಂಬಂಧಿಸಿದಂತೆ ದಕ್ಷಿಣ ಆಫ್ರಿಕಾ ರಾಷ್ಟ್ರೀಯ ರಕ್ಷಣಾ ಪಡೆ ಶಂಕಿತ ಲೂಟಿಕೋರರನ್ನು ಮಂಗಳವಾರ ಬಂಧಿಸಿದೆ –ಎಎಫ್‌ಪಿ ಚಿತ್ರ

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಬಂದ ದಿನವೇ ಕೆಲಸ (ಮಾರ್ಕೆಟಿಂಗ್‌ಅಲ್ಲ) MNC ಕಂಪನಿಗಳಿಗೆ Primary,SSLC, PUC, ITI, any Degree Pass/Fail. ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI/ PFನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ.15,000 - 86,000. 7259685221, 7760116548

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010

ಬೆಂಗಳೂರಿನಲ್ಲಿ ಉಳಿದುಕೊಂಡು ಮನೆಗೆಲಸ, ಅಡುಗೆ, ಮಕ್ಕಳು ನೋಡಿಕೊಳ್ಳಲು ಹಿಂದಿ/ ಕನ್ನಡಬಲ್ಲ ಮಹಿಳೆಯರು ಬೇಕಾಗಿದ್ದಾರೆ. ಊಟ, ವಸತಿ ಸಂಬಳ. ಸಂಪರ್ಕಿಸಿ: 7411548115.

WORK STUDY and SETTLE YOUR FUTURE with Salary.Are you a student with 10th, Plus-2, Willing to work in HOMECARE SERVICES, If yes call: 6366883838, 9606347575. MAJ HEALTH CARE SERVICES, Gandhinagar,Bangalore.

Wanted

ಮನೆಯಿಂದಲೆ ಕುಳಿತು ಡಾಟಾ ಎಂಟ್ರಿ ಫಾರಂಫಿಲ್ಲಿಂಗ್ ಬರವಣಿಗೆ Offline. Weekly ಪೇಮೆಂಟ್ಸ್ 3000- 5000. ಸಂಪರ್ಕಿಸಿ: 7624918246, 7259848246.

ಹನಿ ನೀರಾವರಿ ಕೆಲಸಕ್ಕೆ ಸಹಾಯಕರು ಪ್ಲಂಬರ್, 0-4 ಅನುಭವ, ಆಟೋಕ್ಯಾಡ್ ಡ್ರಾಫ್ಟ್ಸ್ ಮೆನ್ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. 9886144133 .

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು-56 ಸಂಪರ್ಕಿಸಿ : 9606385001, 9606523337

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ 8095344488/ 8095344466

ಬೆಂಗಳೂರಿನಲ್ಲಿರುವ ಆರ್ಯವೇದಿಕ್ ಕಂಪನಿಗೆ ಪ್ರತಿ ಜಿಲ್ಲೆಯಿಂದ ಆರ್ಯವೇದಿಕ್ ವೈದ್ಯರು, ನೇರ ಮಾರಾಟ ಪ್ರತಿನಿದಿಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ. 8892501007/ 9606701007

ವ್ಯಾಪಾರ

Business to Business

Engineering Products

CABLE PULLING machine available for rent (11 KV to 220 KV) ,We are under taking all kinds of power cable pulling works Contact .9326110796, 9730258082, www.kalaelectricals.com

Others

BECOME PARTNER in International Company. NO MLM.Change Life. WhatsApp,GOAL 7276300495. www.gethealthwealth.com

ಭವಿಷ್ಯ

Astrology

★ಮಂತ್ರದುರ್ಗಿ ಮಾಂತ್ರಿಕರು★ ಕೇರಳ, ಕೊಳ್ಳೆಗಾಲದ ಮಂತ್ರಸಿದ್ಧ ವಾಕ್ಸಿದ್ದಿಯಿಂದ ಸ್ತ್ರೀಪುರುಷ ವಶೀಕರಣ ಕೆಲವೇ ಗಂಟೆಗಳಲ್ಲಿ.ಫೋನಿನ ಮುಖಾಂತರ ಶಾಶ್ವತ ಪರಿಹಾರ. (ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್) ಪಂ.ರಾಮಚಂದ್ರಭಟ್. 9008711329

★ಅಂಭಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ)ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ. 9886755306

★ಶ್ರೀಸಾಯಿಗುರು ಜ್ಯೋತಿಷ್ಯ★ ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಸಂತಾನಭಾಗ್ಯ, ಇನ್ಯಾವುದೇ ಎಲ್ಲಿಯೂ ಪರಿಹಾರ ಕಾಣದ ಎಷ್ಟೇಕಠಿಣವಾದ ಗುಪ್ತಸಮಸ್ಯೆಗಳಿಗೆ100% ಪರಿಹಾರ 7829724990

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರಾಪರ್ಟಿಗೆ ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ: 9880856233

ವಾಹನ

Four Wheelers Selling

Others

ಟಾಟಾ Intra V10 ದೊಡ್ಡ ಗಾಡಿಯ ಲೋಡ್ ಅಧಿಕ ಆದಾಯ
TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳು
4.99%* ಬಡ್ಡಿದರ 48 ತಿಂಗಳು
ಅಥವಾ
5.99%* ಬಡ್ಡಿದರ 60 ತಿಂಗಳು
ಕೊಡುಗೆಗಳು ₹25 000/-* ದವರೆಗೆ
ಎಕ್ಸ್‌ಚೇಂಜ್ ₹15 000/-* ದವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore/Mysore 95389 35533
Bangalore -7259784441
Tumkur/Davanagere/Chitradurga 98950 23373
Mangalore/Shivamogga/Udupi/Hassan/Chikkamagalur/Karwar 96208 63338
Hubli/Haveri/Gadag/Bellary/Raichur - 9620955858
Bagalkot/Bijapur/Gulbarga/Bidar - 73899 44057
Hubli/Belgaum- 91088 64572
* ಷರತ್ತುಗಳು ಅನ್ವಯಿಸುತ್ತದೆ.

ಪ್ರವಾಸ

Travel

23-7-2021 ಕಾರವಾರ, ಹೊನ್ನಾವರ, 13-8-2021 ಚಿಕ್ಕಮಗಳೂರು, ಶೃಂಗೇರಿ, ಸಿರಿಮನೆಫಾಲ್ಸ್. 27-8-2021 ಅಷ್ಟವಿನಾಯಕ, 27-9-2021 ಕಾಶಿ, ಗಯಾ, ಅಲಹಾಬಾದ್. ಅನುಗ್ರಹಯಾತ್ರ. 9880079351

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION SPECIAL
DH Classifieds | PV Classifieds
We are coming out with special offer for Admission Notice, Education Success Congratulation Ads
For details contact:
Jerry: 9731810277 Vishal: 9845114560
Tanveer: 9886213331
E-mail: dhclassifieds@deccanherald.co.in
DH Classifieds

ಚೆಸ್: ಪ್ರಜ್ಞಾನಂದ ಎರಡನೇ ಸುತ್ತಿಗೆ

ಸೋಚಿ, ರಷ್ಯಾ (ಪಿಟಿಐ): ಭಾರತದ ಆರ್.ಪ್ರಜ್ಞಾನಂದ, ನಿಹಾಲ್ ಸರಿನ್ ಮತ್ತು ಪಿ.ಇನಿಯನ್ ಅವರು ಫಿಡೆ ವಿಶ್ವಕಪ್ ಚೆಸ್ ಟೂರ್ನಿಯಲ್ಲಿ ಎರಡನೇ ಸುತ್ತು ಪ್ರವೇಶಿಸಿದರು.

ಇಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಮಂಗಳವಾರ ಪ್ರಜ್ಞಾನಂದ ಮೊದಲ ಸುತ್ತಿನಲ್ಲಿ ಫಿಲಿಪ್ಪೀನ್ಸ್‌ನ ಪೌಲೊ ಬೆರ್ಸಾಮಿನಾ ಎದುರು 1.5-0.5ರಿಂದ ಗೆದ್ದರು. ನಿಹಾಲ್ ಸರಿನ್ ಮೊದಲ ಸುತ್ತಿನಲ್ಲಿ 1.5-0.5ರಿಂದ ಉಗಾಂಡದ ಆರ್ಥರ್ ಸೆಗಾನ್ಸ್ಯ ಅವರನ್ನು ಮಣಿಸಿದರು.

ಪಿ.ಇನಿಯನ್ ಅವರು ಮೊದಲ ಸುತ್ತಿನಲ್ಲಿ 1.5-0.5ರಿಂದ ಸ್ವಿಟ್ಜರ್ಲೆಂಡ್‌ನ ಸೆಬಾಸ್ಟಿಯನ್ ಬೋಗ್ನರ್ ಸವಾಲು ಮೀರಿದರು.

ಮೂರನೇ ಟಿ20 ಪಂದ್ಯ: ಹರ್ಮನ್‌ಪ್ರೀತ್ ಬಳಗಕ್ಕೆ ಇಂಗ್ಲೆಂಡ್ ಸವಾಲು

ಭಾರತಕ್ಕೆ ಸರಣಿ ಜಯದ ಹಂಬಲ

ದೀಪ್ತಿ ಶರ್ಮಾ ಮತ್ತು ಸಹ ಆಟಗಾರ್ತಿಯರು– ಎಪಿ ಚಿತ್ರ

ಚೆಮ್ಸ್‌ಫೋರ್ಡ್ (ಪಿಟಿಐ): ಎರಡು ವರ್ಷಗಳ ಬಳಿಕ ಟಿ20 ಸರಣಿ ಗೆಲುವಿನ ಸಿಹಿ ಸವಿಯುವ ತವಕದಲ್ಲಿರುವ ಭಾರತ ಮಹಿಳಾ ತಂಡವು ಮೂರನೇ ಮತ್ತು ಅಂತಿಮ ಟ್ವೆಂಟಿ-20 ಪಂದ್ಯದಲ್ಲಿ ಬುಧವಾರ ಇಂಗ್ಲೆಂಡ್ ತಂಡದ ಸವಾಲು ಎದುರಿಸಲಿದೆ.

ಎರಡನೇ ಟಿ-20 ಪಂದ್ಯದಲ್ಲಿ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ತಂಡ ಭಾನುವಾರ ಆತಿಥೇಯ ತಂಡಕ್ಕೆ ಸೋಲುಣಿಸಿತ್ತು. ಮೂರು ಪಂದ್ಯಗಳ ಸರಣಿಯಲ್ಲಿ 1-1ರ ಸಮಬಲ ಸಾಧಿಸಿತ್ತು. ಅದ್ಭುತ ಫೀಲ್ಡಿಂಗ್ ಮತ್ತು ಡೆತ್ ಓವರ್‌ಗಳಲ್ಲಿ ಸ್ಪಿನ್ನರ್‌ಗಳಾದ ಪೂನಂ ಯಾದವ್ ಮತ್ತು ದೀಪ್ತಿ ಶರ್ಮಾ ಅವರ ಬಿಗು ಬೌಲಿಂಗ್ ದಾಳಿ ಈ ಜಯಕ್ಕೆ ಪ್ರಮುಖ ಕಾರಣವಾಗಿದ್ದವು.

ಭಾರತ ಕೊನೆಯ ಬಾರಿ ಟಿ20 ಸರಣಿ ಜಯಿಸಿದ್ದು 2019ರಲ್ಲಿ. ಹರ್ಮನ್‌ಪ್ರೀತ್ ಬಳಗವು ಆಗ ವೆಸ್ಟ್ ಇಂಡೀಸ್ ತಂಡವನ್ನು ಅದರ ನೆಲದಲ್ಲೇ ಪರಾಭವಗೊಳಿಸಿತ್ತು.

ಬ್ಯಾಟಿಂಗ್‌ನ ಅಗ್ರಕ್ರಮಾಂಕದಲ್ಲಿ ಶಫಾಲಿ ವರ್ಮಾ ಪರಿಣಾಮಕಾರಿಯಾಗಿದ್ದಾರೆ. ಸ್ಪಿನ್ನರ್‌ಗಳು ಎದುರಾಳಿಗಳ ರನ್ ಗಳಿಕೆಗೆ ಕಡಿವಾಣ ಹಾಕುತ್ತಿದ್ದಾರೆ. ಇದೇ ರೀತಿಯ ಸಾಮರ್ಥ್ಯವು ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಮತ್ತು ವೇಗದ ಬೌಲರ್‌ಗಳಿಂದ ಹೊಮ್ಮಬೇಕಿದೆ.

ಮೂರನೇ ಕ್ರಮಾಂಕಕ್ಕೆ ಬಡ್ತಿ ಪಡೆದು ಬ್ಯಾಟಿಂಗ್‌ಗೆ ಇಳಿಯುತ್ತಿರುವ ಹರ್ಮನ್‌ಪ್ರೀತ್ ಅಗತ್ಯ ರನ್‌ಗಳನ್ನು ಗಳಿಸಿಕೊಡುತ್ತಿದ್ದಾರೆ. ವಿಕೆಟ್‌ಗಳು ಕೈಯಲ್ಲಿದ್ದರೂ ಭಾರತದ ಬ್ಯಾಟರ್‌ಗಳು ವೇಗದ ಆಟಕ್ಕೆ ಒತ್ತು ಕೊಡುತ್ತಿಲ್ಲ ಎಂಬುದು ಕಳವಳಕ್ಕೆ ಕಾರಣವಾಗಿದೆ.

ಶಿಖಾ ಪಾಂಡೆ ಮತ್ತು ಅರುಂಧತಿ ರೆಡ್ಡಿ ನಿಖರ ಬೌಲಿಂಗ್ ದಾಳಿ ಸಂಘಟಿಸಬೇಕಿದೆ.

ಆದರೆ ಇದಕ್ಕೆ ತದ್ವಿರುದ್ಧವಾಗಿರುವ ಹೀದರ್ ನೈಟ್ ನಾಯಕತ್ವದ ಇಂಗ್ಲೆಂಡ್, ಸತತ ವಿಕೆಟ್ ಕಳೆದುಕೊಳ್ಳುವ ಹಂತದಲ್ಲಿಯೂ ವೇಗದ ಆಟ ಬಿಟ್ಟುಕೊಟ್ಟಿಲ್ಲ.

ಅಗ್ರಸ್ಥಾನ ಕಳೆದುಕೊಂಡ ಮಿಥಾಲಿ: ಭಾರತ ಮಹಿಳಾ ಏಕದಿನ ಕ್ರಿಕೆಟ್ ತಂಡದ ನಾಯಕಿ ಮಿಥಾಲಿ ರಾಜ್ ಅವರು ಐಸಿಸಿ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಕಳೆದುಕೊಂಡಿದ್ದಾರೆ. ಮಂಗಳವಾರ ಪ್ರಕಟವಾದ ಏಕದಿನ ಬ್ಯಾಟರ್‌ಗಳ ಕ್ರಮಾಂಕದಲ್ಲಿ ವೆಸ್ಟ್ ಇಂಡೀಸ್ ತಂಡದ ನಾಯಕಿ ಸ್ಟೆಫಾನಿ ಟೇಲರ್ ಮೊದಲ ಸ್ಥಾನಕ್ಕೇರಿದರು.

ಪಂದ್ಯ ಆರಂಭ: ರಾತ್ರಿ 11.00 (ಭಾರತೀಯ ಕಾಲಮಾನ)

ನೇರ ಪ್ರಸಾರ: ಸೋನಿ ನೆಟ್‌ವರ್ಕ್

ವಿಶ್ವಕಪ್ ವಿಜಯದಲ್ಲಿ ಯಶ್ ಪಾಲು ದೊಡ್ಡದು: ಕಿರ್ಮಾನಿ

• ಗಿರೀಶ ದೊಡ್ಡಮನಿ

ಯಶ್‌ಪಾಲ್ ಶರ್ಮಾ



ಸೈಯದ್ ಕಿರ್ಮಾನಿ

ಬೆಂಗಳೂರು: 'ಇವತ್ತು ಬೆಳಿಗ್ಗೆ ನಮ್ಮ 'ಚಾಂಪಿಯನ್ಸ್ ಫಾರೆವರ್' ವಾಟ್ಸ್‌ಆ್ಯಪ್ ಗುಂಪಿನಲ್ಲಿ 'ಸಹೋದರ' ಯಶಪಾಲ್ ಶರ್ಮಾ ಇನ್ನಿಲ್ಲ. ಹೃದಯಸ್ತಂಭನದಿಂದ ನಿಧನರಾದರು ಎಂಬ ಸಂದೇಶ ನೋಡಿ ಆಘಾತಗೊಂಡೆ. ಮಾತೇ ಹೊರಡಲಿಲ್ಲ'–

1983ರಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ವಿಜೇತ ತಂಡದಲ್ಲಿ ಯಶಪಾಲ್ ಶರ್ಮಾ ಅವರೊಂದಿಗೆ ಆಡಿದ್ದ ಕರ್ನಾಟಕದ ಸೈಯದ್ ಕಿರ್ಮಾನಿಯವರ ಮಾತುಗಳಿವು. ಜೊತೆಯಾಗಿ ಆಡಿದ, ಸ್ನೇಹಿತನಾಗಿ ಒಡನಾಡಿದ ನೆನಪುಗಳನ್ನು ಮಾಜಿ ವಿಕೆಟ್‌ಕೀಪರ್–ಬ್ಯಾಟ್ಸ್‌ಮನ್ ಕಿರ್ಮಾನಿ 'ಪ್ರಜಾವಾಣಿ'ಯೊಂದಿಗೆ ಹಂಚಿಕೊಂಡಿದ್ದಾರೆ.

'ವಿಶ್ವಕಪ್ ವಿಜಯಿ ತಂಡದ ನಾವೆಲ್ಲರೂ ಇಂದಿಗೂ ಪ್ರತಿದಿನ ಸಂಪರ್ಕದಲ್ಲಿದ್ದೇವೆ. ಮುಖತಃ ಭೇಟಿಯಾಗುವ ಅವಕಾಶಗಳನ್ನು ಎಂದಿಗೂ ಬಿಟ್ಟಿಲ್ಲ. ಇವತ್ತು ಕೂಡ ಅಂತಹ ಒಂದು ಅವಕಾಶ ಇತ್ತು. ನನ್ನ ಯೂಟ್ಯೂಬ್ ವಾಹಿನಿಗೆ ಯಶಪಾಲ್ ಇಂದು (ಮಂಗಳವಾರ) ರಾತ್ರಿ 8ಕ್ಕೆ ಸಂದರ್ಶನಕ್ಕೆ ಹಾಜರಾಗಬೇಕಿತ್ತು. ನಾನು ಕಳೆದ ಕೆಲವು ದಿನಗಳಿಂದ ದೆಹಲಿಯಲ್ಲಿ ಮಗಳ ಮನೆಯಲ್ಲಿದ್ದೇನೆ. ಎರಡು ದಿನಗಳ ಹಿಂದೆ ಯಶಪಾಲ್ ಜೊತೆ ಮಾತನಾಡಿ, ಸಂದರ್ಶನ ನಿಗದಿ ಮಾಡಿದ್ದೆ. ಆದರೆ ದುರ್ವಿಧಿಯ ಆಟ ನೋಡಿ. ಇವತ್ತು ಬೆಳಿಗ್ಗೆಯೇ ಯಶ್ ನಮ್ಮನ್ನು ಅಗಲಿದರು. ಹೋದ ತಿಂಗಳು ವಿಶ್ವಕಪ್ ವಿಜಯದ ನೆನಪಿನ ಕಾರ್ಯಕ್ರಮದಲ್ಲಿ ಅವರನ್ನು ಭೇಟಿಯಾಗಿದ್ದೆ ಕೊನೆಯಾಯಿತು' ಎಂದು ಕಿರ್ಮಾನಿ ಗದ್ಗದಿತರಾದರು.

'ಅಂದು ಭಾರತ ತಂಡದ ಯಶಸ್ಸಿನಲ್ಲಿ ಯಶ್‌ಪಾಲ್ ಪಾಲು ಮಹತ್ವದ್ದು. ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಯಶ್ (61 ರನ್) ಮತ್ತು ಮೊಹಿಂದರ್ ಅಮರನಾಥ್ (46 ರನ್) ಅವರೊಂದಿಗೆ ಮೂರನೇ ವಿಕೆಟ್ ಜೊತೆಯಾಟದಲ್ಲಿ ಸೇರಿಸಿದ್ದ 92 ರನ್‌ಗಳು ಮತ್ತು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ಸಂದೀಪ್ ಪಾಟೀಲ್ (ಅಜೇಯ 51) ಅವರೊಂದಿಗಿನ ಅಮೋಘ ಆಟವು ತಂಡದ ಜಯಕ್ಕೆ ಕಾರಣವಾಯಿತು. ಅವರ ನಿರ್ಭೀತ ಬ್ಯಾಟಿಂಗ್ ಈಗಲೂ ಕಣ್ಣಿಗೆ ಕಟ್ಟಿದಂಗೆ ಇದೆ. ಆ ಕಾಲದ ಶರವೇಗದ ಬೌಲರ್ ಬಾಬ್ ವಿಲ್ಲೀಸ್ ಅವರ ಎಸೆತವನ್ನು ಸಿಕ್ಸರ್‌ಗೆ ಎತ್ತಿದ ರೀತಿ ಮನಃಪಟಲದಲ್ಲಿ ಅಚ್ಚೊತ್ತಿದಂತಿದೆ. ನಾವೂ ಗೆಲ್ಲೋದಕ್ಕೆ ಇಲ್ಲಿ ಬಂದಿರೋದು ಎಂಬ ದಿಟ್ಟ ಧೋರಣೆ ಅವರ ಆಟದಲ್ಲಿತ್ತು' ಎಂದು ಕಿರ್ಮಾನಿ ಸ್ಮರಿಸಿದರು.

'ದೇಶಿ ಕ್ರಿಕೆಟ್‌ನಲ್ಲಿ ಪರಸ್ಪರ ವಿರುದ್ಧ ತಂಡಗಳಲ್ಲಿ ಆಡಿದ್ದೇವೆ. ಭಾರತ ತಂಡದಲ್ಲಿ ಜೊತೆಯಾಗಿ ಆಡಿದ್ದೇವೆ. ಕ್ರೀಡಾಂಗಣದ ಹೊರಗೆ ಒಳ್ಳೆಯ ಸ್ನೇಹಿತ. ಯಾವುದೇ ರೀತಿಯ ದುಶ್ಚಟಗಳಿಲ್ಲ. ಸಸ್ಯಾಹಾರದ ಶಿಸ್ತಿನ ವ್ಯಕ್ತಿ. ತಂಡದ ಸಭೆಗಳಲ್ಲಿ ಉತ್ತಮ ಸಲಹೆ ಕೊಡುತ್ತಿದ್ದರು. ಎಲ್ಲರೊಂದಿಗೂ ಬೆರೆಯುತ್ತಿದ್ದರು. ಮೈದಾನದಲ್ಲಿ ಎಂತಹದೇ ಒತ್ತಡದ ಸನ್ನಿವೇಶದಲ್ಲಿಯೂ ಎಲ್ಲರನ್ನೂ ಹುರಿದುಂಬಿಸುತ್ತಿರುತ್ತಿದ್ದರು' ಎಂದು ನೆನಪಿಸಿಕೊಂಡರು.

'ನಾಲ್ಕನೇ ದಿನ ನಡೆಯಲಿರುವ ಯಶಪಾಲ್ ಗೌರವಾಂಜಲಿ ಮತ್ತು ಪೂಜಾ ಕಾರ್ಯಕ್ರಮಕ್ಕೆ ಹಾಜರಾಗುತ್ತೇನೆ. ಅಗಲಿದ ಸಹೋದರನಿಗೆ ನಮನ ಸಲ್ಲಿಸುತ್ತೇನೆ' ಎಂದರು ಕಿರ್ಮಾನಿ.

ಶರ್ಮಾ ನಿಧನ

ನವದೆಹಲಿ(ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಯಶ್‌ಪಾಲ್ ಶರ್ಮಾ (66) ಮಂಗಳವಾರ ಹೃದಯಸ್ಥಂಭನದಿಂದ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಮಗ ಇದ್ದಾರೆ.ಬಲಗೈ ಬ್ಯಾಟ್ಸ್‌ಮನ್ ಯಶಪಾಲ್ ಅವರು 37 ಟೆಸ್ಟ್ ಪಂದ್ಯಗಳನ್ನು ಆಡಿದ್ದಾರೆ. 1606 ರನ್ ಗಳಿಸಿದ್ದಾರೆ. 42 ಏಕದಿನ ಪಂದ್ಯಗಳಲ್ಲಿ ಆಡಿದ್ದು 883 ರನ್‌ಗಳನ್ನು ಗಳಿಸಿದ್ದಾರೆ. 1978ರಲ್ಲಿ ಸಿಯಾಲ್‌ಕೋಟ್‌ನಲ್ಲಿ ನಡೆದಿದ್ದ ಪಾಕಿಸ್ತಾನ ಎದುರಿನ ಏಕದಿನ ಪಂದ್ಯದಲ್ಲಿ ಅವರು ಪದಾರ್ಪಣೆ ಮಾಡಿದ್ದರು. 1979ರಲ್ಲಿ ಲಾರ್ಡ್ಸ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಮಂಗಳವಾರ ಸಂಜೆ ಲೋಧಿ ರೋಡ್ ಮುಕ್ತಿಧಾಮದಲ್ಲಿ ಯಶ್‌ಪಾಲ್ ಅಂತ್ಯಸಂಸ್ಕಾರ ನಡೆಯಿತು.

ಟಿ20: ಗೇಲ್ 14 ಸಾವಿರ ರನ್

ಕ್ರಿಸ್ ಗೇಲ್

ಬೆಂಗಳೂರು: ವೆಸ್ಟ್‌ಇಂಡೀಸ್‌ನ ಸ್ಫೋಟಕ ಶೈಲಿಯ ಬ್ಯಾಟ್ಸ್‌ಮನ್ ಕ್ರಿಸ್ ಗೇಲ್ ಹೊಸ ದಾಖಲೆ ಬರೆದಿದ್ದಾರೆ. ಟಿ20 ಕ್ರಿಕೆಟ್‌ನಲ್ಲಿ 14 ಸಾವಿರ ರನ್ ಪೂರೈಸಿದ ಏಕೈಕ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ವೆಸ್ಟ್ ಇಂಡೀಸ್ ಹಾಗೂ ವಿವಿಧ ಫ್ರಾಂಚೈಸ್‌ಗಳ ಪರ ಇದುವರೆಗೆ ಒಟ್ಟು 431 ಪಂದ್ಯಗಳ 423 ಇನಿಂಗ್ಸ್‌ಗಳಲ್ಲಿ ಬ್ಯಾಟ್ ಬೀಸಿರುವ ಗೇಲ್, 14,038 ರನ್ ಕಲೆಹಾಕಿದ್ದಾರೆ. 22 ಶತಕ ಮತ್ತು 87 ಅರ್ಧಶತಕಗಳು ಇದರಲ್ಲಿವೆ. ವಿಂಡೀಸ್‌ನವರೇ ಆದ ಕೀರನ್ ಪೊಲಾರ್ಡ್ 545 ಪಂದ್ಯಗಳಿಂದ 10,836 ರನ್ ಗಳಿಸಿ 2ನೇ ಸ್ಥಾನದಲ್ಲಿದ್ದಾರೆ.

ಗೇಲ್ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಟ್ವೀಟ್ ಮಾಡಿದೆ.

425 ಪಂದ್ಯಗಳಿಂದ 10,741 ರನ್ ಗಳಿಸಿರುವ ಪಾಕಿಸ್ತಾನದ ಶೋಯೆಬ್ ಮಲಿಕ್, 304 ಪಂದ್ಯಗಳಿಂದ 10,017 ಕಲೆಹಾಕಿರುವ ಆಸ್ಟ್ರೇಲಿಯಾದ ಡೇವಿಡ್ ವಾರ್ನರ್ ಮತ್ತು 310 ಪಂದ್ಯಗಳಿಂದ 9,922 ರನ್ ಗಳಿಸಿರುವ ಭಾರತದ ವಿರಾಟ್ ಕೊಹ್ಲಿ ಕ್ರಮವಾಗಿ 3, 4 ಮತ್ತು 5ನೇ ಸ್ಥಾನಗಳಲ್ಲಿದ್ದಾರೆ.

ವಿಂಡೀಸ್‌ಗೆ ಜಯ: ಆಸ್ಟ್ರೇಲಿಯಾ ಮತ್ತು ವೆಸ್ಟ್ ಇಂಡೀಸ್ ನಡುವಣ ಟಿ20 ಸರಣಿಯ ಮೂರನೇ ಪಂದ್ಯದಲ್ಲಿ ವಿಂಡೀಸ್, ಆಸ್ಟ್ರೇಲಿಯಾವನ್ನು 6 ವಿಕೆಟ್‌ಗಳಿಂದ ಮಣಿಸಿತು. ಪಂದ್ಯದಲ್ಲಿ ಕೇವಲ 38 ಎಸೆತಗಳನ್ನು ಎದುರಿಸಿದ ಗೇಲ್ ಅವರು 4 ಬೌಂಡರಿ 7 ಸಿಕ್ಸರ್ ಸಹಿತ 67 ರನ್ ಚಚ್ಚಿದರು.

ಯೂರೊ ಕಪ್ ಫುಟ್‌ಬಾಲ್ ಪ್ರಶಸ್ತಿ ಗೆದ್ದ ರೋಮ್ ತಂಡದ ಆಟಗಾರರು ಸೋಮವಾರ ರೋಮ್‌ನಲ್ಲಿ ಮೆರವಣಿಗೆ ನಡೆಸಿದರು– ಎಎಫ್‌ಪಿ ಚಿತ್ರ

ಷೇರುಪೇಟೆ ವಹಿವಾಟು ▲397



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,692
ಇಂದಿನ ಅಂತ್ಯ	15,812
▲	120
ದಿನದ ಗರಿಷ್ಠ	15,820

ವಿನಿಮಯ ದರ

$ ಡಾಲರ್	74.49
£ ಪೌಂಡ್	103.19
€ ಯುರೊ	88.20
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹495
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹495

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1405 (1400)
ಸೋಯಾ (ರಿಫೈನ್ಡ್)	₹1345 (1335)
ಸೂರ್ಯಕಾಂತಿ (ರಿಫೈನ್ಡ್)	₹1360(1360)
ಪಾಮೋಲಿನ್	₹1175(1170)

ಕೊಬ್ಬರಿ ಧಾರಣೆ

ಅರಸೀಕೆರೆ	₹14800-15705
ಬೆಂಗಳೂರು	₹15500-19500
ತುರುವೇಕೆರೆ	₹15500-15650

ಮಹೀಂದ್ರ 'ಬೊಲೆರೊ ನಿಯೊ' ಬಿಡುಗಡೆ

ಬೊಲೆರೊ ನಿಯೊ

ಬೆಂಗಳೂರು: ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ಏಳು ಆಸನಗಳ 'ಬೊಲೆರೊ ನಿಯೊ' ಎಸ್‌ಯುವಿ ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆ ₹ 8.48 ಲಕ್ಷದಿಂದ ಆರಂಭವಾಗುತ್ತದೆ.

'ಬೊಲೆರೊ ನಿಯೊ'ದ ಜೊತೆಯಲ್ಲೇ ಈಗ ಮಾರುಕಟ್ಟೆಯಲ್ಲಿ ಇರುವ ಬೊಲೆರೊ ಮಾರಾಟವೂ ಮುಂದುವರಿಯಲಿದೆ ಎಂದು ಕಂಪನಿಯು ತಿಳಿಸಿದೆ.

ದೇಶದಲ್ಲಿ ಮಾರಾಟ ಆಗುತ್ತಿರುವ ಪ್ರಮುಖ 10 ಎಸ್‌ಯುವಿಗಳ ಪಟ್ಟಿಯಲ್ಲಿ ಬೊಲೆರೊ ಸ್ಥಾನ ಉಳಿಸಿಕೊಳ್ಳಲು ಹೊಸ 'ಬೊಲೆರೊ ನಿಯೊ' ಬ್ರ್ಯಾಂಡ್ ನೆರವಾಗಲಿದೆ ಎಂದು ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ವಿಜಯ್ ನಕ್ರಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸ್ಟ್ಯಾಂಡರ್ಡ್ ಡ್ಯುಯಲ್ ಏರ್‌ಬ್ಯಾಗ್, ಎಬಿಎಸ್, ಎಲೆಕ್ಟ್ರಾನಿಕ್ ಬ್ರೇಕ್ ಡಿಸ್ಟ್ರಿಬ್ಯೂಷನ್ (ಇಬಿಡಿ) ಮತ್ತು ಕಾರ್ನರಿಂಗ್ ಬ್ರೇಕ್ ಕಂಟ್ರೋಲ್ (ಸಿಬಿಸಿ) ಹಾಗೂ ಐಎಸ್‌ಒಫಿಕ್ಸ್ ಚೈಲ್ಡ್ ಸೀಟ್‌ನಂತಹ ವೈಶಿಷ್ಟ್ಯಗಳನ್ನು ಹೊಸ ವಾಹನ ಒಳಗೊಂಡಿದೆ. ಬೊಲೆರೊ ನಿಯೊ ಎಸ್‌ಯುವಿಯು ಎನ್4–ಬೇಸ್, ಎನ್8–ಮಿಡ್, ಎನ್10–ಟಾಪ್ ಎಂಬ ಮೂರು ಆವೃತ್ತಿಗಳಲ್ಲಿ ಲಭ್ಯವಿದೆ ಎಂದು ಕಂಪನಿ ತಿಳಿಸಿದೆ.

ಜೂನ್‌ನಲ್ಲಿ ತಾಳೆ ಎಣ್ಣೆ ಆಮದು ಶೇ 24ರಷ್ಟು ಇಳಿಕೆ

ನವದೆಹಲಿ (ಪಿಟಿಐ): ತಾಳೆ ಎಣ್ಣೆ ಆಮದು ಮೇ ತಿಂಗಳಿಗೆ ಹೋಲಿಸಿದರೆ ಜೂನ್‌ನಲ್ಲಿ ಶೇಕಡ 24ರಷ್ಟು ಇಳಿಕೆ ಆಗಿದ್ದು 5.87 ಲಕ್ಷ ಟನ್‌ಗಳಷ್ಟಾಗಿದೆ ಎಂದು ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಟರ್ಸ್ ಅಸೋಸಿಯೇಷನ್ (ಎಸ್‌ಇಎ) ತಿಳಿಸಿದೆ.

ದೇಶಿ ಮಾರುಕಟ್ಟೆಯಲ್ಲಿ ತಾಳೆ ಎಣ್ಣೆಯ ದಾಸ್ತಾನು ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ ಆಮದು ಕಡಿಮೆ ಆಗಿದೆ ಎಂದು ಅದು ಹೇಳಿದೆ. ಮೇ ತಿಂಗಳಿನಲ್ಲಿ ಭಾರತವು 7.69 ಲಕ್ಷ ಟನ್‌ಗಳಷ್ಟು ತಾಳೆ ಎಣ್ಣೆ ಆಮದು ಮಾಡಿಕೊಂಡಿತ್ತು.

ಕಚ್ಚಾ ತಾಳೆ ಎಣ್ಣೆ ಮತ್ತು ಇತರೆ ತಾಳೆ ಎಣ್ಣೆಗಳ ಮೇಲಿನ ಆಮದು ಸುಂಕವನ್ನು ಸೆಪ್ಟೆಂಬರ್‌ವರೆಗೆ ತಗ್ಗಿಸಿರುವುದು ಹಾಗೂ ಡಿಸೆಂಬರ್‌ವರೆಗೆ ಯಾವುದೇ ನಿರ್ಬಂಧ ಇಲ್ಲದೇ ಆರ್‌ಬಿಡಿ ತಾಳೆ ಎಣ್ಣೆ ಆಮದಿಗೆ ಅವಕಾಶ ನೀಡಿರುವುದು ದೇಶಿ ಸಂಸ್ಕರಣಗಾರರು ಮತ್ತು ಎಣ್ಣೆಕಾಳುಗಳಗಳನ್ನು ಬೆಳೆಯುವವರ ಹಿತಾಸಕ್ತಿಗೆ ಹಾನಿ ಉಂಟುಮಾಡಲಿದೆ ಎನ್ನುವ ಆತಂಕವನ್ನು ಅದು ವ್ಯಕ್ತಪಡಿಸಿದೆ.

ಕಚ್ಚಾ ತಾಳೆ ಎಣ್ಣೆ ಆಮದು 5.76 ಲಕ್ಷ ಟನ್‌ಗಳಷ್ಟಾಗಿದೆ. ಹಿಂದಿನ ವರ್ಷದ ಜೂನ್‌ನಲ್ಲಿ 5.63 ಲಕ್ಷ ಟನ್‌ಗಳಷ್ಟಿತ್ತು. ಸೋಯಾಬಿನ್ ಎಣ್ಣೆ ಆಮದು 3,31,171 ಟನ್‌ಗಳಿಂದ 2,06,262 ಟನ್‌ಗಳಿಗೆ ಇಳಿಕೆ ಆಗಿದೆ. ಸೂರ್ಯಕಾಂತಿ ಎಣ್ಣೆ ಆಮದು 2,69,428 ಟನ್‌ಗಳಿಂದ 1,75,702 ಟನ್‌ಗಳಿಗೆ ಇಳಿಕೆ ಕಂಡಿದೆ. ಭಾರತವು ಇಂಡೊನೇಷ್ಯಾ ಮತ್ತು ಮಲೇಷ್ಯಾದಿಂದ ತಾಳೆ ಎಣ್ಣೆ ಆಮದು ಮಾಡಿಕೊಳ್ಳುತ್ತಿದೆ.

ಭಾರತೀಯ ಸ್ಟೇಟ್ ಬ್ಯಾಂಕ್‌ನ ಅರ್ಥಶಾಸ್ತ್ರಜ್ಞರ ವರದಿ

ತೈಲ ಬೆಲೆ ಹೆಚ್ಚಳ, ದಿನಸಿ ಖರ್ಚು ಕಡಿತ!

ಮುಖ್ಯಾಂಶಗಳು

- ಲೀಟರಿಗೆ ₹ 100ರ ಗಡಿ ದಾಟಿರುವ ಪೆಟ್ರೋಲ್ ದರ
- 'ಸರ್ಕಾರವು ತೈಲದ ಮೇಲಿನ ತೆರಿಗೆ ಕಡಿಮೆ ಮಾಡುವ ಅಗತ್ಯ ಇದೆ'
- ಹಣದುಬ್ಬರದ ಮೇಲೆಯೂ ಪರಿಣಾಮ ಸಾಧ್ಯತೆ

ಮುಂಬೈ (ಪಿಟಿಐ): ತೈಲ ಬೆಲೆಯಲ್ಲಿ ಆಗಿರುವ ಹೆಚ್ಚಳದ ಪರಿಣಾಮವಾಗಿ ಜನ ದಿನಸಿಯಂತಹ ಅಗತ್ಯ ವಸ್ತುಗಳ ಮೇಲಿನ ಖರ್ಚನ್ನು ಕಡಿಮೆ ಮಾಡಿದ್ದಾರೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ಅರ್ಥಶಾಸ್ತ್ರಜ್ಞರು ಸಿದ್ಧಪಡಿಸಿರುವ ವರದಿಯೊಂದು ಹೇಳಿದೆ.

ಸರ್ಕಾರವು ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ತೆರಿಗೆಯನ್ನು ಕಡಿಮೆ ಮಾಡುವ ಬಗ್ಗೆ ಆಲೋಚಿಸಬೇಕು ಎಂದು ಎಸ್‌ಬಿಐನ ಮುಖ್ಯ ಆರ್ಥಿಕ ಸಲಹೆಗಾರ ಸೌಮ್ಯಕಾಂತಿ ಘೋಷ್ ಸಿದ್ಧಪಡಿಸಿರುವ ವರದಿಯಲ್ಲಿ ಹೇಳಲಾಗಿದೆ. ದೇಶದ ಹಲವು ಕಡೆಗಳಲ್ಲಿ ಪೆಟ್ರೋಲ್ ಬೆಲೆಯು ಲೀಟರಿಗೆ ₹ 100ರ ಗಡಿಯನ್ನು ದಾಟಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಕುಸಿದಿದ್ದಾಗ ದೇಶಿ ಮಾರುಕಟ್ಟೆಯಲ್ಲಿ ತೈಲೋತ್ಪನ್ನಗಳ ಮೇಲಿನ ತೆರಿಗೆಯನ್ನು ಹೆಚ್ಚಿಸಲಾಯಿತು. ಆದರೆ, ಈಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಹೆಚ್ಚಳ ಆಗಿದ್ದರೂ ದೇಶಿ ಮಾರುಕಟ್ಟೆಯಲ್ಲಿ ತೆರಿಗೆ ಪ್ರಮಾಣ ಕಡಿಮೆ ಮಾಡಿಲ್ಲ.

'ಗ್ರಾಹಕರು ತೈಲೋತ್ಪನ್ನಗಳಿಗಾಗಿ ಹೆಚ್ಚು ಹಣ ವೆಚ್ಚ ಮಾಡುತ್ತಿದ್ದಾರೆ. ವಾಸ್ತವದಲ್ಲಿ, ಇದರಿಂದಾಗಿ ಇತರ ಅಗತ್ಯ ವಸ್ತುಗಳಾದ ದಿನಸಿ, ಕೆಲವು ಸೇವೆಗಳ ಮೇಲಿನ ಖರ್ಚನ್ನು ಜನ ಗಣನೀಯವಾಗಿ ಕಡಿಮೆ ಮಾಡಬೇಕಾಗಿದೆ. ಇಂತಹ ಉತ್ಪನ್ನಗಳು ಹಾಗೂ ಸೇವೆಗಳ ಬೇಡಿಕೆಯು ಗಣನೀಯವಾಗಿ ತಗ್ಗಿದೆ ಎಂಬುದನ್ನು ಎಸ್‌ಬಿಐ ಕಾರ್ಡ್ ಮೂಲಕ ಜನ ಮಾಡಿರುವ ಖರ್ಚುಗಳನ್ನು ವಿಶ್ಲೇಷಣೆಗೆ ಗುರಿಪಡಿಸಿದಾಗ ನಮಗೆ ಗೊತ್ತಾಗಿದೆ' ಎಂದು ಘೋಷ್ ಅವರು ಹೇಳಿದ್ದಾರೆ.

ತೈಲೋತ್ಪನ್ನಗಳ ಮೇಲೆ ಮಾಡಬೇಕಿರುವ ವೆಚ್ಚ ಬಹಳ ಹೆಚ್ಚಾಗಿರುವುದು ಹಣದುಬ್ಬರದ ಮೇಲೆಯೂ ಪರಿಣಾಮ ಉಂಟುಮಾಡುತ್ತದೆ ಎಂದು ಅವರು ಎಚ್ಚರಿಸಿದ್ದಾರೆ. ತೈಲೋತ್ಪನ್ನಗಳ ಬೆಲೆಯನ್ನು ಆದಷ್ಟು ಬೇಗ ತಗ್ಗಿಸಬೇಕಾದ ಅಗತ್ಯ ಇದೆ. ಇದನ್ನು ಮಾಡದಿದ್ದರೆ ಅಗತ್ಯ ವಸ್ತುಗಳ ಮೇಲೆ ಜನ ಮಾಡಬೇಕಿರುವ ಖರ್ಚುಗಳಲ್ಲಿ ಬಹಳ ವ್ಯತ್ಯಾಸ ಆಗುತ್ತದೆ. ಹಾಗೆಯೇ, ತೀರಾ ಅಗತ್ಯವಲ್ಲದ ಇತರ ವಸ್ತುಗಳ ಮೇಲಿನ ಖರ್ಚುಗಳೂ ಕಡಿಮೆ ಆಗುತ್ತವೆ ಎಂದು ಘೋಷ್ ಅವರು ಹೇಳಿದ್ದಾರೆ.

ಹಣಕಾಸು ವಲಯದ ಷೇರುಗಳ ಗಳಿಕೆ

ಷೇರುಪೇಟೆಯಲ್ಲಿ ಖರೀದಿ ಭರಾಟೆ

ಮುಂಬೈ (ಪಿಟಿಐ): ಆರು ವಾರಗಳ ಬಳಿಕ ದೇಶದ ಷೇರುಪೇಟೆಗಳಲ್ಲಿ ಮಂಗಳವಾರ ಉತ್ತಮ ವಹಿವಾಟು ನಡೆಯಿತು. ಹೂಡಿಕೆದಾರರು ಹಣಕಾಸು ವಲಯದ ಷೇರುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದ್ದು ಈ ವಹಿವಾಟಿಗೆ ಕಾರಣವಾಯಿತು.

ಆರ್ಥಿಕ ಅಂಕಿ–ಅಂಶಗಳು ಅನುಕೂಲಕರವಾಗಿರುವ ಜೊತೆಗೆ ಏಷ್ಯಾದ ಮಾರುಕಟ್ಟೆಗಳಲ್ಲಿ ನಡೆದ ಉತ್ತಮ ವಹಿವಾಟಿನ ಕಾರಣಗಳಿಂದಾಗಿ ದೇಶಿ ಷೇರುಪೇಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆಯಿತು. ಚೀನಾದ ಆರ್ಥಿಕ ಬೆಳವಣಿಗೆಯ ಅಂಕಿ–ಅಂಶವು ನಿರೀಕ್ಷೆಗಿಂತಲೂ ಉತ್ತಮವಾಗಿದೆ. ಚೀನಾದ ತಂತ್ರಜ್ಞಾನ ಷೇರುಗಳು ಮತ್ತೆ ಚೇತರಿಕೆ ಕಂಡಿದ್ದು ಏಷ್ಯಾದ ಷೇರುಪೇಟೆ ಸೂಚ್ಯಂಕಗಳ ಏರಿಕೆಗೆ ಕಾರಣವಾದವು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವೀಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಜೂನ್ ತಿಂಗಳ ಗ್ರಾಹಕ ದರ ಸೂಚ್ಯಂಕ ಆಧರಿಸಿದ ಹಣದುಬ್ಬರವು ಆರ್‌ಬಿಐನ ಹಿತಕರ ಮಟ್ಟಕ್ಕಿಂತ ಹೆಚ್ಚಿಗೆ ಇದ್ದರೂ ಮೇ ತಿಂಗಳಿನಲ್ಲಿ ಇದ್ದ ಶೇಕಡ 6.30ಗೆ ಹೋಲಿಸಿದರೆ, ಈಗ ಶೇ 6.26ಕ್ಕೆ ಇಳಿಕೆ ಕಂಡಿದೆ. ಇದು ಮಾರುಕಟ್ಟೆಗೆ ತುಸು ಸಮಾಧಾನ ತಂದುಕೊಟ್ಟಿತು ಎಂದು ಅವರು ತಿಳಿಸಿದ್ದಾರೆ.

ದಿನದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 397 ಅಂಶ ಏರಿಕೆ ಕಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 120 ಅಂಶ ಹೆಚ್ಚಾಗಿದೆ. ಬಿಎಸ್‌ಇನಲ್ಲಿ ಐಸಿಐಸಿಐ ಬ್ಯಾಂಕ್ ಷೇರು ಶೇ 2.83ರಷ್ಟು ಗರಿಷ್ಠ ಗಳಿಕೆ ಕಂಡುಕೊಂಡಿತು. ಎಚ್‌ಡಿಎಫ್‌ಸಿ, ಎಕ್ಸಿಸ್ ಬ್ಯಾಂಕ್, ಸನ್ ಫಾರ್ಮಾ, ಎನ್‌ಟಿಪಿಸಿ ಮತ್ತು ಮಹೀಂದ್ರ ಆ್ಯಂಡ್ ಮಹೀಂದ್ರ ಷೇರುಗಳು ಮೌಲ್ಯವೂ ಹೆಚ್ಚಾಗಿದೆ.

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ರಾಮಚಂದ್ರ ನಾರಾಯಣ ಹೆಗಡೆ, ಶಿರಸಿ

• ಪ್ರಶ್ನೆ: ನಾನು ಹಾಗೂ ನಮ್ಮ ಮನೆಯ ಸದಸ್ಯರು ಪ್ರತೀ ಬುಧವಾರ ನಿಮ್ಮ ಅಂಕಣ ಓದುತ್ತೇವೆ. ನಮಗೆ ಉಳಿತಾಯದ ವಿಚಾರದಲ್ಲಿ ಹೆಚ್ಚಿನ ಮಾಹಿತಿ ಇಲ್ಲ. ಹಣ ಉಳಿಸಿದರೆ ತೆರಿಗೆ ಕೊಡಬೇಕಾಗತ್ತದೆ ಎನ್ನುತ್ತಾರೆ ನಮ್ಮ ಸ್ನೇಹಿತರು. ನಮ್ಮ ಉದ್ಯೋಗ ಕೃಷಿ. ನಾಲ್ಕು ಎಕರೆ ಅಡಿಕೆ ಜಮೀನು ಇದೆ. ಮೆಣಸು, ಬಾಳೆ, ಏಲಕ್ಕಿ, ಉಪಬೆಳೆ. ಕನಿಷ್ಠ ₹ 10 ಲಕ್ಷ ವಾರ್ಷಿಕ ವರಮಾನ ಬರುತ್ತದೆ. ನಾನು, ಹೆಂಡತಿ, ಇಬ್ಬರು ಗಂಡು ಮಕ್ಕಳ ಕುಟುಂಬ ನಮ್ಮದು. ನನಗೆ 68 ವರ್ಷ ವಯಸ್ಸು. ನಮ್ಮ ಕುಟುಂಬಕ್ಕೆ ಉತ್ತಮ ಉಳಿತಾಯ ಯೋಜನೆ ತಿಳಿಸಿರಿ.

ಉತ್ತರ: ಹಣ ಉಳಿಸಿದರೆ ತೆರಿಗೆ ಕೊಡಬೇಕಾಗುತ್ತದೆ ಎನ್ನುವುದು ಉಳಿತಾಯ ಮಾಡದೇ ಇರುವವರ ಅರ್ಥರಹಿತ ವಾದ. ನಿಮ್ಮದು ಅವಿಭಕ್ತ ಕುಟುಂಬವಾದ್ದರಿಂದ ಹಾಗೂ ವರಮಾನ ಕೃಷಿ ಮೂಲದಿಂದ ಬರುವುದರಿಂದ ನೀವು ಆದಾಯ ತೆರಿಗೆಗೆ ಭಯ ಪಡಬಾರದು. ಉಳಿತಾಯ ಮಾಡುವುದನ್ನು ಎಂದಿಗೂ ಮರೆಯಬಾರದು. ನಿಮಗೆ ವಾರ್ಷಿಕವಾಗಿ ಬರುವ ₹ 10 ಲಕ್ಷ ವರಮಾನದಲ್ಲಿ ಕನಿಷ್ಠ ₹ 5 ಲಕ್ಷ ಉಳಿತಾಯ ಮಾಡಲೇಬೇಕು. ಇನ್ನುಳಿದ ₹ 5 ಲಕ್ಷವನ್ನು ಕೃಷಿ ಚಟುವಟಿಕೆ ಹಾಗೂ ಜೀವನೋಪಾಯಕ್ಕೆ ಬಳಸಿ. ಉಳಿತಾಯ ಮಾಡಲು ಸ್ವಲ್ಪ ಮಟ್ಟಿಗಿನ ತ್ಯಾಗ, ಕುಟುಂಬದ ಸದಸ್ಯರ ಸಹಮತ ಬೇಕಾಗುತ್ತದೆ. ನೀವು, ನಿಮ್ಮ ಹೆಂಡತಿ ಹಾಗೂ ಇಬ್ಬರು ಗಂಡುಮಕ್ಕಳ ಹೆಸರಿನಲ್ಲಿ ತಲಾ ₹ 1.25 ಲಕ್ಷವನ್ನು ಐದು ವರ್ಷಗಳ ಒಮ್ಮೆಲೇ ಬಡ್ಡಿ ಬರುವ ಕಾಮಧೇನು ಠೇವಣಿಯಲ್ಲಿ ಕೆನರಾ ಬ್ಯಾಂಕ್‌ನಲ್ಲಿ ಇಡಿ. ಈ ಪ್ರಕ್ರಿಯೆ ನಿರಂತರವಾಗಿ ಇರಲಿ. ಈ ರೀತಿ ನೀವು ಠೇವಣಿಯನ್ನು ಇನ್ನೂ 10–15 ವರ್ಷಗಳ ಕಾಲ ಮಾಡಿದರೂ ನಿಮ್ಮಲ್ಲಿ ಯಾರೂ ತೆರಿಗೆ ಪಾವತಿಸಬೇಕಾಗಿಲ್ಲ.

ಶಶಿಧರ ನಾಯ್ಕ್, ಕಾರವಾರ

• ಪ್ರಶ್ನೆ: ಇಸಿಎಸ್–ಸ್ಟ್ಯಾಂಡಿಂಗ್ ಇನ್‌ಸ್ಟ್ರಕ್ಷನ್ ಇವುಗಳ ನಡುವೆ ವ್ಯತ್ಯಾಸ ಹಾಗೂ ಉಪಯೋಗವೇನು? ಇವುಗಳನ್ನು ಆನ್‌ಲೈನ್‌ನಲ್ಲಿ ಪಾವತಿ ಮಾಡುವುದು ಸುಲಭ ಇದೆ. ದಯಮಾಡಿ ಮಾಹಿತಿ ನೀಡಿ.

ಉತ್ತರ: ಕಾಲಕಾಲಕ್ಕೆ ಪಾವತಿ ಮಾಡಬೇಕಾದ, ನಿಶ್ಚಿತ ಮೊತ್ತದ ಆರ್.ಡಿ. ಕಂತುಗಳು, ಸಾಲದ ಕಂತುಗಳು, ವಿಮೆ ಪ್ರೀಮಿಯಂಗೆ ಸ್ಟ್ಯಾಂಡಿಂಗ್ ಇನ್‌ಸ್ಟ್ರಕ್ಷನ್ ಉಪಯುಕ್ತ. ವಿದ್ಯುತ್, ದೂರವಾಣಿ, ನೀರು, ಕ್ರೆಡಿಟ್ ಕಾರ್ಡ್ ಇಂತಹ ಬಿಲ್‌ಗಳು ಪ್ರತೀ ತಿಂಗಳೂ ಒಂದೇ ಇರಲಾರವು. ಇವುಗಳನ್ನೆಲ್ಲ 'ಇಸಿಎಸ್' ಮುಖಾಂತರ ಪಾವತಿ ಮಾಡುವುದು ಸುಲಭ. ನೀವು ಹೇಳಿದಂತೆ ಇವುಗಳನ್ನು ಆನ್‌ಲೈನ್ ಸೌಲಭ್ಯ ಬಳಸಿಯೂ ಪಾವತಿಸಬಹುದಾದರೂ ಕೆಲಸದ ಒತ್ತಡದಿಂದ ಅಥವಾ ಮರೆವೆಯಿಂದ ಸಕಾಲದಲ್ಲಿ ತುಂಬಲಾಗದಿರುವಲ್ಲಿ ಫೋನ್, ನೀರು, ವಿದ್ಯುತ್ ಸಂಪರ್ಕ ಕಡಿತ ಆಗಬಹುದು. ಎಲ್ಲಕ್ಕೂ ಮುಖ್ಯವಾಗಿ ಕ್ರೆಡಿಟ್ ಕಾರ್ಡ್ ಪಾವತಿ ಸಮಯಕ್ಕೆ ಆಗದೇ ಇದ್ದಲ್ಲಿ ಸಿಬಿಲ್ ರೇಟಿಂಗ್ ಕಡಿಮೆಯಾಗಿ ಮುಂದೆ ಸಾಲ ಅಥವಾ ಕ್ರೆಡಿಟ್ ಕಾರ್ಡ್ ಸವಲತ್ತು ದೊರೆಯದೇ ಹೋಗಬಹುದು.

ಶಾಂಭವಿ, ಕುಂದಾಪುರ

• ಪ್ರಶ್ನೆ: ನನ್ನ ವಯಸ್ಸು 58 ವರ್ಷ. ನಾನು ಗೃಹಿಣಿ. ನನ್ನ ಮಗ ಸಾಫ್ಟ್‌ವೇರ್ ಎಂಜಿನಿಯರ್. ಅವನ ತಿಂಗಳ ಸಂಬಳ ₹ 1.25 ಲಕ್ಷ. ನನ್ನ ಮಗ ನನಗೆ ತಿಂಗಳಿಗೆ ₹ 25 ಸಾವಿರ ಕಳುಹಿಸುತ್ತಾನೆ. ಅವನ ಹೆಸರಿನಲ್ಲಿ ₹ 15 ಸಾವಿರ ಆರ್.ಡಿ ಮಾಡುತ್ತಿದ್ದಾನೆ. ನನ್ನ ಮಗ ನನಗೆ ಕೊಡುವ ₹ 25 ಸಾವಿರಕ್ಕೆ ನನಗಾಗಲಿ, ಅವನಿಗಾಗಲಿ ತೆರಿಗೆ ಬರುತ್ತದೆಯೇ? ಆರ್.ಡಿ. ಕಟ್ಟುವುದರಿಂದ ತೆರಿಗೆ ಉಳಿತಾಯ ಇದೆಯೇ? ತೆರಿಗೆ ಉಳಿಸಲು ಹಾಗೂ ಉತ್ತಮ ಉಳಿತಾಯ ಮಾಡಲು ನನ್ನ ಮಗನಿಗೆ ಮಾರ್ಗದರ್ಶನ ಮಾಡಿ.

ಉತ್ತರ: ನಿಮ್ಮ ಮಗ ನಿಮಗೆ ಕಳುಹಿಸುವ ಹಣಕ್ಕೆ ಅವರಿಗಾಗಲಿ, ನಿಮಗಾಗಲಿ ತೆರಿಗೆ ಬರುವುದಿಲ್ಲ. ಆರ್.ಡಿ. ಠೇವಣಿ ಮಾಡುವುದರಿಂದ ತೆರಿಗೆ ವಿನಾಯಿತಿ ಪಡೆಯುವಂತಿಲ್ಲ. ಇದೇ ವೇಳೆ ಅವರು, ₹ 1.5 ಲಕ್ಷವನ್ನು 5 ವರ್ಷಗಳ ಠೇವಣಿ ಮಾಡಿದಲ್ಲಿ ₹ 1.50 ಲಕ್ಷವನ್ನು ಒಟ್ಟು ಆದಾಯದಿಂದ ಕಳೆದು ತೆರಿಗೆ ಸಲ್ಲಿಸಬಹುದು (ಸೆಕ್ಷನ್ 80ಸಿ). ಇದರ ಹೊರತಾಗಿ ಸೆಕ್ಷನ್ 80ಸಿಸಿಡಿ (1ಬಿ) ಆಧಾರದ ಮೇಲೆ ಗರಿಷ್ಠ ₹ 50 ಸಾವಿರ ತುಂಬಿ, ಒಟ್ಟು ಆದಾಯದಿಂದ ಕಳೆದು ತೆರಿಗೆ ಸಲ್ಲಿಸಬಹುದು. ಉಳಿತಾಯಕ್ಕೆ ಪಿಪಿಎಫ್ ಖಾತೆ ತೆರೆಯಲು ಕೂಡ ತಿಳಿಸಿ. ಅವರ ವರಮಾನ ಪರಿಗಣಿಸಿ ಕನಿಷ್ಠ ₹ 25 ಲಕ್ಷ ಜೀವ ವಿಮೆ ಮಾಡಲು ಹೇಳಿ. ಮುಂದೆ ನಿವೇಶನ ಕೊಂಡು ಮನೆ ಕಟ್ಟಿಸುವ ಉದ್ದೇಶ ಇಟ್ಟುಕೊಂಡು ₹ 25 ಸಾವಿರದ ಆರ್.ಡಿ.ಯನ್ನು ಐದು ವರ್ಷಗಳ ಅವಧಿಗೆ ಮಾಡಿದರೆ, ಅವಧಿ ಮುಗಿಯುತ್ತಲೇ ₹ 17,28,650 ಪಡೆಯಬಹುದು. ಅವಶ್ಯವಿದ್ದಲ್ಲಿ ನನಗೆ ಕರೆ ಮಾಡಲು ತಿಳಿಸಿ.

❖

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್: businessdesk@prajavani.co.in

ಸಂಕ್ಷಿಪ್ತ ಸುದ್ದಿ

₹ 30 ಸಾವಿರ ಕೋಟಿ ವಹಿವಾಟು ನಡೆಸಿದ 'ಪತಂಜಲಿ'

ನವದೆಹಲಿ (ಪಿಟಿಐ): ರುಚಿ ಸೋಯಾ ಕಂಪನಿಯನ್ನು ಸ್ವಾಧೀನಪಡಿಸಿಕೊಂಡ ಬಳಿಕ ಪತಂಜಲಿ ಸಮೂಹದ ವಹಿವಾಟು ಮೊತ್ತವು 2020–21ನೆಯ ಹಣಕಾಸು ವರ್ಷದಲ್ಲಿ ₹ 30 ಸಾವಿರ ಕೋಟಿ ತಲುಪಿದೆ ಎಂದು ಬಾಬಾ ರಾಮ್‌ದೇವ್ ಮಂಗಳವಾರ ತಿಳಿಸಿದ್ದಾರೆ.

ಪತಂಜಲಿ ಸಮೂಹವು ದಿವಾಳಿ ಪ್ರಕ್ರಿಯೆಯ ಮೂಲಕ ರುಚಿ ಸೋಯಾ ಕಂಪನಿಯನ್ನು ಸ್ವಾಧೀನಪಡಿಸಿಕೊಂಡಿದ್ದು, ಸಮೂಹದ ಒಟ್ಟಾರೆ ವಹಿವಾಟು ಮೊತ್ತಕ್ಕೆ ಅರ್ಧಕ್ಕಿಂತಲೂ ಹೆಚ್ಚಿನ ಕೊಡುಗೆ ನೀಡಿದೆ.

ಪತಂಜಲಿ ಸಮೂಹದ ವಹಿವಾಟಿನಲ್ಲಿ ರುಚಿ ಸೋಯಾದ ಪಾಲು ₹ 16,318 ಕೋಟಿ ಎಂದು ರಾಮ್‌ದೇವ್ ಅವರು ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

₹ 880 ಕೋಟಿ ಆದಾಯ ಮುಚ್ಚಿಟ್ಟು ವಂಚನೆ

ನವದೆಹಲಿ (ಪಿಟಿಐ): ₹ 880 ಕೋಟಿ ಆದಾಯವನ್ನು ಮುಚ್ಚಿಟ್ಟಿರುವುದು ಬೆಂಗಳೂರಿನ ಮಾನವ ಸಂಪನ್ಮೂಲ ಪೂರೈಕೆ ಕಂಪನಿಯೊಂದಕ್ಕೆ ಸೇರಿದ ಸ್ಥಳಗಳಲ್ಲಿ ನಡೆಸಿದ ಪರಿಶೀಲನೆಯಿಂದ ಗೊತ್ತಾಗಿದೆ ಎಂದು ಕೇಂದ್ರ ನೇರ ತೆರಿಗೆ ಮಂಳಿಯು (ಸಿಬಿಡಿಟಿ) ಮಂಗಳವಾರ ತಿಳಿಸಿದೆ.

ಈ ಕಂಪನಿ ಯಾವುದು ಎಂಬುದು ಗೊತ್ತಾಗಿಲ್ಲ. ಕಂಪನಿಗೆ ಸೇರಿದ ಎರಡು ಸ್ಥಳಗಳಲ್ಲಿ ಇದೇ 8ರಂದು ಶೋಧ ನಡೆದಿತ್ತು. ಆದಾಯ ತೆರಿಗೆ ಕಾಯ್ದೆ 1961ರ 80ಜೆಜೆಎಎ ಸೆಕ್ಷನ್ ಅಡಿಯಲ್ಲಿ ಭಾರಿ ಮೊತ್ತದ ರಿಯಾಯಿತಿ ನೀಡಬೇಕು ಎಂದು ಕಂಪನಿಯು ಕೋರಿತ್ತು. ಹಲವು ಷರತ್ತುಗಳನ್ನು ಪೂರೈಸಿದರೆ ಮಾತ್ರ ಈ ರಿಯಾಯಿತಿ ಪಡೆಯಲು ಅವಕಾಶ ಇದೆ ಎಂದು ಸಿಬಿಡಿಟಿಯ ಹೇಳಿಕೆಯು ತಿಳಿಸಿದೆ.

ಸೀಮಾ ಸುಂಕ ಮನ್ನಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರವು ಕೋವಿಡ್ ಪರೀಕ್ಷಾ ಸಾಧನಗಳಲ್ಲಿ ಬಳಸುವ ಕಚ್ಚಾ ವಸ್ತುಗಳ ಮೇಲಿನ ಸೀಮಾ ಸುಂಕವನ್ನು ಮನ್ನಾ ಮಾಡಿದೆ. ಇದು ಸೆಪ್ಟೆಂಬರ್ ಅಂತ್ಯದವರೆಗೆ ಜಾರಿಯಲ್ಲಿ ಇರಲಿದೆ.

ಬ್ಲ್ಯಾಕ್ ಫಂಗಸ್ ಚಿಕಿತ್ಸೆಯಲ್ಲಿ ಬಳಸುವ ಆ್ಯಂಫೊಟೆರಿಸಿನ್–ಬಿ ಔಷಧಿಯ ತಯಾರಿಕೆಗೆ ಬೇಕಿರುವ ಕಚ್ಚಾ ವಸ್ತುಗಳ ಮೇಲಿನ ಸೀಮಾ ಸುಂಕವನ್ನು ಸಹ ಆಗಸ್ಟ್ ಕೊನೆಯವರೆಗೆ ಮನ್ನಾ ಮಾಡಲಾಗಿದೆ.

ಆಕ್ಸಿಮೀಟರ್, ಥರ್ಮೋಮೀಟರ್ ಬೆಲೆ ನಿಯಂತ್ರಣಕ್ಕೆ ಕ್ರಮ

ನವದೆಹಲಿ (ಪಿಟಿಐ): ಕೋವಿಡ್ ಚಿಕಿತ್ಸೆಯಲ್ಲಿ ಬಳಸುವ ಆಕ್ಸಿಮೀಟರ್, ಡಿಜಿಟಲ್ ಥರ್ಮೋಮೀಟರ್‌ನಂತಹ ಅಗತ್ಯ ವೈದ್ಯಕೀಯ ಉಪಕರಣಗಳ ತಯಾರಿಕಾ ವೆಚ್ಚ ಹಾಗೂ ಮಾರಾಟದ ಬೆಲೆಯ ನಡುವಿನ ವ್ಯತ್ಯಾಸವು ಶೇಕಡ 70ರಷ್ಟಕ್ಕಿಂತ ಜಾಸ್ತಿ ಆಗುವಂತಿಲ್ಲ ಎಂದು ಕೇಂದ್ರ ಸರ್ಕಾರ ನಿರ್ಬಂಧ ವಿಧಿಸಿದೆ.

ರಾಷ್ಟ್ರೀಯ ವೈದ್ಯಕೀಯ ಮತ್ತು ಔಷಧೀಯ ವಸ್ತುಗಳ ಬೆಲೆ ನಿಗದಿ ಆಯೋಗವು (ಎನ್‌ಪಿಪಿಎ) ಆಕ್ಸಿಮೀಟರ್, ಗ್ಲೂಕೊಮೀಟರ್, ರಕ್ತದೊತ್ತಡ ಪರೀಕ್ಷಕ, ನೆಬ್ಯುಲೈಸರ್ ಮತ್ತು ಡಿಜಿಟಲ್ ಥರ್ಮೋಮೀಟರ್ ವಿಚಾರವಾಗಿ ಈ ನಿರ್ಬಂಧಗಳನ್ನು ಜಾರಿಗೊಳಿಸಿದೆ. ಇವು ಜುಲೈ 20ರಿಂದ ಅನ್ವಯ ಆಗಲಿವೆ. ಮಾರುಕಟ್ಟೆಯಲ್ಲಿ ಈ ಉಪಕರಣಗಳ ಬೆಲೆ ನಿಯಂತ್ರಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಈಗ ಈ ವಸ್ತುಗಳ ತಯಾರಿಕಾ ವೆಚ್ಚ ಹಾಗೂ ಮಾರಾಟದ ಬೆಲೆಯ ನಡುವಿನ ವ್ಯತ್ಯಾಸವು ಶೇಕಡ 3ರಿಂದ ಶೇಕಡ 709ರವರೆಗೂ ಇದೆ ಎಂದು ಎನ್‌ಪಿಪಿಎ ಟ್ವೀಟ್‌ನಲ್ಲಿ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	385-390
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-43000
ಹಳತು	42500-52000
ಚಿತ್ರದುರ್ಗ	
ಬೆಟ್ಟೆ	35410-35879
ಕೆಂಪುಗೋಟು	28300-28700
ರಾಶಿ	41839-42269
ಸಿದ್ದಾಪುರ	
ಬಿಳಿಗೋಟು	26399-33899
ಕೋಕ	22099-31099
ಚಾಲಿ	35000-38009
ಕೆಂಪುಗೋಟು	29089-31899
ರಾಶಿ	37899-40599
ತಟ್ಟಿಬೆಟ್ಟೆ	31812-35489
ಶಿರಸಿ	
ಬೆಟ್ಟೆ	29421-38600
ಬಿಳಿಗೋಟು	16811-34799
ಚಾಲಿ	34299-38961
ರಾಶಿ	36699-41098
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	43005-45489
ಗೊರಬಲು	17000-34509
ರಾಶಿ	38650-42369
ಸರಕು	48099-75700
ಸಾಗರ	
ಬಿಳಿಗೋಟು	28899-31699
ಕೋಕ	30899-32899
ಚಾಲಿ	34099-36223
ಕೆಂಪುಗೋಟು	32399-33699
ರಾಶಿ	34739-42029
ಸಿಪ್ಪೆಗೋಟು	18379-20520
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	233-389
ದ್ವಿತಳಿ (ಬಿ.ವಿ)	289-512

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11700	11000	10850	154 ಸೆಂಟ್ಸ್
ಎಸಿ	4675	4400	4325	
ಆರ್‌ಪಿ	5550	5500	5750	
ಆರ್‌ಸಿ	3300	3200	3375	1759 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

13-7-2021

ಜಾವಾ 70/80(ಹೊಸ)	9650-9700
ಜಾವಾ 80/90(ಹೊಸ)	9100-9150
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9200-9300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1415 (1410)
ಒಂದು ವಾರದ ಡೆಲಿವರಿ	1405 (1405)
ಸೋಯಾ ಕಚ್ಚಾ	1300 (1290)
ಪಾಮ್ ವಾರದ ಡೆಲಿವರಿ	1173 (1168)
ಸೂರ್ಯಕಾಂತಿ ಎಣ್ಣೆ ಕಚ್ಚಾ	1290 (1290)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,700 (47,750)
ಬೆಳ್ಳಿ ಕೆ.ಜಿ 68,850 (68,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಅಥ್ಲೀಟ್‌ಗಳೊಂದಿಗೆ ವಿಡಿಯೊ ಸಂವಾದ: ಬ್ಯಾಡ್ಮಿಂಟನ್ ಪಟು ಸಿಂಧುಗೆ ಪ್ರಧಾನಿ ಮೋದಿ ಪ್ರಶ್ನೆ

ಈ ಬಾರಿಯೂ ಐಸ್‌ಕ್ರೀಂ ತಿನ್ನುವುದಿಲ್ಲವೇ?

ನವದೆಹಲಿ (ಪಿಟಿಐ): '2016ರ ರಿಯೊ ಒಲಿಂಪಿಕ್ಸ್ ಸಂದರ್ಭದಲ್ಲಿ ನೀವು ಐಸ್‌ಕ್ರೀಂ ತಿನ್ನದಂತೆ ಕೋಚ್ ಗೋಪಿಚಂದ್ ನಿರ್ಬಂಧಿಸಿದ್ದರು. ಈ ಬಾರಿಯೂ ಪರಿಸ್ಥಿತಿ ಹಾಗೆಯೇ ಇದೆಯೇ? ಈ ಸಲವೂ ನೀವು ಒಲಿಂಪಿಕ್ಸ್ ಮುಗಿಯುವವರೆಗೂ ಫೋನ್ ಬಳಕೆ ಮಾಡುವುದಿಲ್ಲವೇ?'–

ಪ್ರಧಾನಿ ನರೇಂದ್ರ ಮೋದಿಯವರು ಮಂಗಳವಾರ ಒಲಿಂಪಿಕ್ಸ್‌ಗೆ ಹೊರಟ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು ಅವರಿಗೆ ಕೇಳಿದ ಪ್ರಶ್ನೆಗಳಿವು. ಟೋಕಿಯೊಗೆ ಹೊರಟಿರುವ ಭಾರತದ ಕ್ರೀಡಾಪಟುಗಳೊಂದಿಗೆ ಇದೇ ರೀತಿಯ ತಿಳಿಹಾಸ್ಯಮಿಶ್ರಿತ ಧಾಟಿಯಲ್ಲಿ ಅವರು ಮಂಗಳವಾರ ವಿಡಿಯೊ ಸಂವಾದ ನಡೆಸಿದರು.

ಮೋದಿಯವರ ಪ್ರಶ್ನೆಗೆ ಉತ್ತರಿಸಿದ ಸಿಂಧು, 'ಸರ್, ನನ್ನ ಆಹಾರ ಸೇವನೆಯ ಕುರಿತು ಬಹಳ ಎಚ್ಚರಿಕೆಯಿಂದ ಇರಬೇಕು' ಎಂದರು.

ರಿಯೊ ಒಲಿಂಪಿಕ್ಸ್‌ನಲ್ಲಿ ಸಿಂಧು ಬೆಳ್ಳಿ ಪದಕ ಜಯಿಸಿದ್ದರು. ಅವರ ಸಾಧನೆ ಮತ್ತು ಕೋಚ್ ಪಿ. ಗೋಪಿಚಂದ್ ಮಾರ್ಗದರ್ಶನ ಕುರಿತು ಮೋದಿ ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಕುಸ್ತಿಪಟು ವಿನೇಶ ಪೋಗಟ್ ಕುಟುಂಬದ ಸದಸ್ಯರೊಂದಿಗೂ ಮಾತನಾಡಿದರು. 'ನಿಮ್ಮ ಹೆಣ್ಣುಮಕ್ಕಳಿಗೆ ಯಾವ ಬೀಸು-ಕಲ್ಲಿನಲ್ಲಿ ಸಿದ್ಧವಾದ ಹಿಟ್ಟಿನ ಆಹಾರ ನೀಡುತ್ತೀರಿ' ಎಂದು ಕೇಳಿದರು. ಕುಸ್ತಿ ಕ್ರೀಡೆಗೆ ತಮ್ಮ ಕುಟುಂಬದ ಹುಡುಗಿಯರ ಕೊಡುಗೆ ಅಪಾರ ಎಂದು ಶ್ಲಾಘಿಸಿದರು

'ನೀವು ಕೋವಿಡ್ ಸೋಂಕಿಗೊಳಗಾಗಿದ್ದಿರಿ. ಇದೇ ಹಂತದಲ್ಲಿನಿಮ್ಮ ತಂದೆಯ ನಿಧನದ ದುಃಖವನ್ನೂ ಅನುಭವಿಸಿದಿರಿ. ಅಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿಯೂ ಹೇಗೆ ಸ್ಥಿಮಿತ ಕಾಯ್ದುಕೊಂಡು ಒಲಿಂಪಿಕ್ಸ್ ಅರ್ಹತೆ ಪಡೆದಿರಿ' ಎಂದು ಬಾಕ್ಸರ್ ಆಶಿಶ್ ಕುಮಾರ್ ಅವರನ್ನು ಮೋದಿ ಪ್ರಶ್ನಿಸಿದರು.

ಅದಕ್ಕುತ್ತರಿಸಿದ ಆಶಿಶ್, 'ನಾನು ಸ್ಪೇನ್‌ನಲ್ಲಿದ್ದಾಗ ಕೋವಿಡ್ ಸೋಂಕು ತಗುಲಿತ್ತು. ಅಲ್ಲಿ ನನಗೆ ವಿಶೇಷ ಚಿಕಿತ್ಸಾ ಸೌಲಭ್ಯಗಳನ್ನು ನೀಡಲಾಗಿತ್ತು. ಆದರೂ ಚೇತರಿಸಿಕೊಳ್ಳಲು ಬಹಳ ಸಮಯ ಬೇಕಾಯಿತು. ಭಾರತಕ್ಕೆ ಮರಳಿದ ನಂತರ ನಮ್ಮ ತಂಡದ ನೆರವು ಸಿಬ್ಬಂದಿಯ ಉತ್ತಮ ಸಹಕಾರ ಮತ್ತು ಮಾರ್ಗದರ್ಶನದಿಂದ ಈ ಸಾಧನೆ ಸಾಧ್ಯವಾಯಿತು' ಎಂದರು.

ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಪಿತೃವಿಯೋಗದ ದುಃಖದಲ್ಲಿಯೂ ಅಂತರರಾಷ್ಟ್ರೀಯ ಪಂದ್ಯದಲ್ಲಿ ಅಮೋಘವಾಗಿ ಆಡಿ ಭಾರತ ತಂಡಕ್ಕೆ ಆಸರೆಯಾಗಿದ್ದನ್ನು ಮೋದಿ ಈ ಸಂದರ್ಭದಲ್ಲಿ ನೆನಪಿಸಿಕೊಂಡರು.

ಗಾಯಗೊಂಡರೂ ನೂತನ ದಾಖಲೆ ನಿರ್ಮಿಸಿದ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಅವರನ್ನು-ಅಭಿನಂದಿಸಿದರು.

ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್, ಕ್ರೀಡಾ ಖಾತೆಯ ರಾಜ್ಯ ಸಚಿವ ನಿಶಿತ್ ಪ್ರಾಮಾಣಿಕ್, ಕಾನೂನು ಮಂತ್ರಿ ಮತ್ತು ನಿಕಟಪೂರ್ವ ಕ್ರೀಡಾ ಸಚಿವ ಕಿರಣ್ ರಿಜಿಜು ಮತ್ತಿತರರು ಸಂವಾದದಲ್ಲಿ ಭಾಗವಹಿಸಿದ್ದರು.

ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು ಹಾಗೂ ಅವರ ತಂದೆ–ತಾಯಿಯೊಂದಿಗೆ ಪ್ರಧಾನಿ ನರೇಂದ್ರ ಮೋದಿ ವಿಡಿಯೊ ಸಂವಾದ ನಡೆಸಿದರು –ಪಿಟಿಐ ಚಿತ್ರ

ಟೋಕಿಯೊ ಒಲಿಂಪಿಕ್ಸ್ 2020 ಭಾರತದ ಕನಸಿನ ಪಯಣ

'ರೋಯಿಂಗ್ ಯೋಧ'ರ ಪದಕದ ತವಕ

ಇನ್ನು 9 ದಿನ

ನೇತ್ರಾ ಕುಮನನ್– ಫೇಸ್‌ಬುಕ್ ಚಿತ್ರ

ಒಲಿಂಪಿಕ್ಸ್‌ನಲ್ಲಿ ಭಾರತ ಪದಕದ ಬರ ಎದುರಿಸುತ್ತಿರುವ ಕ್ರೀಡೆಗಳಲ್ಲಿ ರೋಯಿಂಗ್ ಮತ್ತು ಸೇಲಿಂಗ್ ಕೂಡ ಸೇರಿವೆ. ಸ್ಪರ್ಧೆ ಮಾತ್ರ ಸಾಧ್ಯವಾಗಿರುವ ಈ ವಿಭಾಗಗಳ 'ದೋಣಿ'ಗೆ ಪದಕದ ಮೀನು ಬೀಳಬೇಕಿದೆ.

ಒಲಿಂಪಿಕ್ಸ್‌ನ ರೋಯಿಂಗ್ ಸ್ಪರ್ಧೆಯಲ್ಲಿ ಭಾರತ ಪದಾರ್ಪಣೆ ಮಾಡಿದ್ದು 2000 ಸಿಡ್ನಿ ಕ್ರೀಡಾಕೂಟದಲ್ಲಿ. ಕಸಮ್ ಖಾನ್ ಹಾಗೂ ಇಂದರ್ ಪಾಲ್ ಸಿಂಗ್ ಅವರ ಜೋಡಿಯು 'ಕಾಕ್ಸ್‌ಲೆಸ್ ಪೇರ್' ವಿಭಾಗದಲ್ಲಿ ಸ್ಪರ್ಧಿಸಿದ್ದರು. ಇದಾದ ಬಳಿಕ ನಡೆದ ಪ್ರತಿ ಒಲಿಂಪಿಕ್ಸ್‌ನಲ್ಲೂ ಭಾರತದ ಪ್ರಾತಿನಿಧ್ಯವಿದೆ. ಆದರೆ ಪದಕ ಗಳಿಕೆ ಇನ್ನೂ ಸಾಧ್ಯವಾಗಿಲ್ಲ.

2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ದತ್ತು ಬಾಬನ್ ಭೋಕನಾಳ್, ಸಿಂಗಲ್ ಸ್ಕಲ್ಸ್ ವಿಭಾಗದಲ್ಲಿ 13ನೇ ಸ್ಥಾನ ಗಳಿಸಿದ್ದೇ ಇದುವರೆಗಿನ ಶ್ರೇಷ್ಠ ಸಾಧನೆಯಾಗಿದೆ.

ಈ ಬಾರಿ ಅರ್ಹತೆ ಗಿಟ್ಟಿಸಿರುವ ಅರ್ಜುನ್ ಲಾಲ್ ಜಾಟ್, ಅರವಿಂದ್ ಸಿಂಗ್ ಹೆಚ್ಚಿನ ಸಾಮರ್ಥ್ಯ ತೋರುವ ನಿರೀಕ್ಷೆಯಿದೆ. ಟೋಕಿಯೊದಲ್ಲಿ ಮೇನಲ್ಲಿ ನಡೆದ ಏಷ್ಯಾ ಒಷಿನಿಯಾ ಅರ್ಹತಾ ಲೈಟ್‌ವೇಟ್ ಡಬಲ್ ಸ್ಕಲ್ಸ್ ವಿಭಾಗದಲ್ಲಿ ಎರಡನೇ ಸ್ಥಾನ ಗಳಿಸಿ ಅವರು ಕ್ರೀಡಾಕೂಟಕ್ಕೆ ಪ್ರವೇಶ ಗಿಟ್ಟಿಸಿದ್ದಾರೆ. ಭಾರತೀಯ ಸೇನೆಯಲ್ಲಿ ಯೋಧರಾಗಿರುವ ಇವರಿಬ್ಬರಿಗಿರುವುದು ರೈತ ಕುಟುಂಬದ ಹಿನ್ನೆಲೆ. ರಾಜಸ್ಥಾನದ ಅರ್ಜುನ್ ಮತ್ತು ಉತ್ತರ ಪ್ರದೇಶದ ಅರವಿಂದ್ ಅವರು ಸೈನ್ಯ ಸೇರ್ಪಡೆಯಾದವರು. ಅಲ್ಲಿಯೇ ರೋಯಿಂಗ್ ಕುರಿತು ಆಸಕ್ತಿ ಬೆಳೆಸಿಕೊಂಡವರು.

ದಕ್ಷಿಣ ಕೊರಿಯಾದ ಚುಂಗ್‌ಜುನಲ್ಲಿ ನಡೆದ 2019ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಈ ಜೋಡಿ ಬೆಳ್ಳಿ ಪದಕ ಮುಡಿಗೇರಿಸಿಕೊಂಡಿತ್ತು. ಹೀಗಾಗಿ ಈ ಯೋಧರು ಟೋಕಿಯೊ ಕೂಟದಲ್ಲಿ ಪದಕಗಳಿಗೆ ಗುರಿ ಇಡುವ ನಿರೀಕ್ಷೆ ಗರಿಗೆದರಿದೆ.

ಅರ್ಜುನ್ ಲಾಲ್ ಜಾಟ್ ಮತ್ತು ಅರವಿಂದ್ ಸಿಂಗ್– ಎಎಫ್‌ಪಿ ಚಿತ್ರ

ವಿಷ್ಣು ಸರವಣನ್– ಪಿಟಿಐ ಚಿತ್ರ

ಈ ಬಾರಿಯ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿದವರು:
ರೋಯಿಂಗ್: ಅರ್ಜುನ್ ಲಾಲ್ ಜಾಟ್, ಅರವಿಂದ್ ಸಿಂಗ್.
ಸೇಲಿಂಗ್: ನೇತ್ರಾ ಕುಮನನ್ (ಲೇಸರ್ ರೇಡಿಯಲ್ ಕ್ಲಾಸ್ ವಿಭಾಗ), ವಿಷ್ಣು ಸರವಣನ್ (ಲೇಸರ್ ಸ್ಟ್ಯಾಂಡರ್ಡ್ ಕ್ಲಾಸ್), ಗಣಪತಿ ಚೆಂಗಪ್ಪ– ವರುಣ್ ಥಕ್ಕರ್ (49ಇಆರ್ ಕ್ಲಾಸ್)

ಸೇಲಿಂಗ್‌ನಲ್ಲಿ ಭರವಸೆಯ ನೇತ್ರಾ: ಸೇಲಿಂಗ್ ವಿಭಾಗದಲ್ಲಿ ಭಾರತ ಮೊದಲ ಬಾರಿ ಸ್ಪರ್ಧಿಸಿದ್ದು 1972ರ ಮ್ಯೂನಿಕ್ ಒಲಿಂಪಿಕ್ಸ್‌ನಲ್ಲಿ. ಸೋಲಿ ಕಾಂಟ್ರ್ಯಾಕ್ಟರ್ ಮತ್ತು ಅಹಮದ್ ಅಬ್ದುಲ್ ಬಾಸಿತ್ ಅವರು ಆ ಕ್ರೀಡಾಕೂಟದಲ್ಲಿ ಫ್ಲೈಯಿಂಗ್ ಡಚ್‌ಮನ್ ಕ್ಲಾಸ್ ವಿಭಾಗದಲ್ಲಿ 29ನೇ ಸ್ಥಾನ ಗಳಿಸಿದ್ದರು. ಬಳಿಕ ಹೆಚ್ಚಿನ ಸ್ಪರ್ಧಿಗಳು ಒಲಿಂಪಿಕ್ಸ್ ಅರ್ಹತೆ ಗಳಿಸಿಲ್ಲ.

ಈ ಬಾರಿಯ ವಿಶೇಷವೆಂದರೆ ಭಾರತದಿಂದ ಮೊದಲ ಬಾರಿ ಮಹಿಳಾ ಸ್ಪರ್ಧಿಯೊಬ್ಬರು ಕಣಕ್ಕಿಳಿಯುತ್ತಿದ್ದಾರೆ. ಅಲ್ಲದೆ ದೇಶ ನಾಲ್ವರು ಸ್ಪರ್ಧಿಗಳು ಸ್ಪರ್ಧಿಸಲಿರುವುದು ಇದೇ ಮೊದಲು. ಲೇಸರ್ ರೇಡಿಯಲ್ ಕ್ಲಾಸ್ ವಿಭಾಗದಲ್ಲಿ ಅರ್ಹತೆ ಗಿಟ್ಟಿಸಿರುವ ನೇತ್ರಾ ಕುಮನನ್ ಮೇಲೆ ನಿರೀಕ್ಷೆ ಇದೆ. ಕರ್ನಾಟಕದ ಗಣಪತಿ ಚೆಂಗಪ್ಪ, ವಿಷ್ಣು ಸರವಣನ್, ಮತ್ತು ವರುಣ್ ಠಕ್ಕರ್ ಟೋಕಿಯೊಗೆ ತೆರಳಿರುವ ಇನ್ನುಳಿದ ಸೇಲಿಂಗ್ ಸ್ಪರ್ಧಿಗಳು.

ಇದುವರೆಗೆ ಸ್ಪರ್ಧಿಸಿದವರು (ರೋಯಿಂಗ್)

ಸ್ಪರ್ಧಿ	ಒಲಿಂಪಿಕ್ ಕೂಟ
ಕಸಮ್ ಖಾನ್–ಇಂದ್ರಪಾಲ್ ಸಿಂಗ್	ಸಿಡ್ನಿ (2000)
ಪೌಲೋಸ್ ಪಂಡರಿ ಕುನೆಲ್	ಅಥೆನ್ಸ್ (2004)
ಬಜರಂಗ್ ಲಾಲ್ ಥಾಕರ್	ಬೀಜಿಂಗ್ (2008)
ಮಂಜೀತ್ ಸಿಂಗ್	ಬೀಜಿಂಗ್, ಲಂಡನ್ (2008, 2012)
ದೇವೇಂದ್ರಕುಮಾರ್ ಖಿಂಡ್ವಾಲ್	ಬೀಜಿಂಗ್ (2008)
ಸಂದೀಪ್ ಕುಮಾರ್	ಲಂಡನ್ (2012)
ಸ್ವರಣ್ ಸಿಂಗ್	ಲಂಡನ್ (2012)
ದತ್ತು ಭೋಕನಾಳ್	ರಿಯೊ ಡಿ ಜನ್ಯೆರೊ (2016)

ಹಿಂದೆ ಸರಿದ ಫೆಡರರ್

ಲಾಸೆನ್, ಸ್ವಿಟ್ಜರ್‌ಲೆಂಡ್ (ಪಿಟಿಐ): ಟೆನಿಸ್ ಕ್ರೀಡೆಯ ದಿಗ್ಗಜ ಆಟಗಾರ ರೋಜರ್ ಫೆಡರರ್ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವುದಿಲ್ಲ.

ತಮ್ಮ ಮೊಣಕಾಲಿನ ಗಾಯ ದಿಂದಾಗಿ ಈ ನಿರ್ಧಾರ ಕೈಗೊಂಡಿರುವುದಾಗಿ ಫೆಡರರ್ ಮಂಗಳವಾರ ತಿಳಿಸಿದ್ದಾರೆ.

'ನನಗೆ ಅತೀವ ಬೇಸರವಾಗುತ್ತಿದೆ. ದೇಶದ ಪ್ರತಿನಿಧಿಯಾಗಿ ವಿಶ್ವದ ಬಹುದೊಡ್ಡ ಕ್ರೀಡಾಕೂಟದಲ್ಲಿ ಆಡುವ ಅವಕಾಶವನ್ನು ತಪ್ಪಿಸಿಕೊಳ್ಳುತ್ತಿದ್ದೇನೆ. ಹುಲ್ಲಿನಂಕಣದ ಋತುವಿನಲ್ಲಿ ಮಂಡಿ ನೋವು ಕಾಡಿತು. ಅದರಿಂದಾಗಿ ಹಿನ್ನಡೆಯನ್ನೂ ಅನುಭವಿಸಿದೆ' ಎಂದು 39 ವರ್ಷದ ಫೆಡರರ್ ಟ್ವೀಟ್ ಮಾಡಿದ್ದಾರೆ.

2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಅವರು ಬೆಳ್ಳಿ ಪದಕ ಜಯಿಸಿದ್ದರು.

ಜಿಮ್ನಾಸ್ಟಿಕ್ಸ್ ನಿರ್ಣಾಯಕರಾಗಿ ದೀಪಕ್

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನ ಜಿಮ್ನಾಸ್ಟಿಕ್ಸ್ ಸ್ಪರ್ಧೆಯಲ್ಲಿ ಭಾರತದ ದೀಪಕ್ ಕಾಬ್ರಾ ಅವರು ನಿರ್ಣಾಯಕರಾಗಿ ಕಾರ್ಯನಿರ್ವಹಿಸಲಿದ್ದಾರೆ. ಈ ಕಾರ್ಯಕ್ಕೆ ಆಯ್ಕೆಯಾದ ಮೊದಲ ಭಾರತೀಯ ದೀಪಕ್ ಆಗಿದ್ದಾರೆ. ಪುರುಷರ ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್‌ನಲ್ಲಿ ಅವರು ಕಾರ್ಯನಿರ್ವಹಿಸಲಿದ್ದಾರೆ.

2010ರಲ್ಲಿ ಭಾರತದಲ್ಲಿ ನಡೆದಿದ್ದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಅವರು ಭಾಗವಹಿಸಿದ್ದರು.

2014ರಲ್ಲಿ ಏಷ್ಯನ್ ಗೇಮ್ಸ್ ಮತ್ತು ಯೂತ್ ಒಲಿಂಪಿಕ್ಸ್‌ನಲ್ಲಿ ನಿರ್ಣಾಯಕರಾಗಿ ಕಾರ್ಯನಿರ್ವಹಿಸಿದರು. 2018ರ ಏಷ್ಯನ್ ಮತ್ತು ಕಾಮನ್‌ವೆಲ್ತ್ ಕೂಟಗಳಲ್ಲಿಯೂ ಅವರು ನಿರ್ಣಾಯಕರಾಗಿದ್ದರು. ಅದೇ ವರ್ಷ ಯೂತ್ ಒಲಿಂಪಿಕ್ಸ್ ನಲ್ಲಿಯೂ ಅವರು ಕೆಲಸ ಮಾಡಿದ್ದರು.

ಭಾರತದಿಂದ 228 ಮಂದಿಯ ತಂಡ: ಬಾತ್ರಾ



ನರಿಂದರ್ ಬಾತ್ರಾ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ಗೆ ಭಾರತದಿಂದ 228 ಮಂದಿಯ ಬಲಿಷ್ಠ ತಂಡ ತೆರಳಲಿದೆ. ಅದರಲ್ಲಿ 119 ಮಂದಿ ಕ್ರೀಡಾಪಟುಗಳು ಎಂದು ಭಾರತ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ (ಐಒಎ) ನರಿಂದರ್ ಬಾತ್ರಾ ತಿಳಿಸಿದ್ದಾರೆ.

'119 ಅಥ್ಲೀಟ್‌ಗಳಲ್ಲಿ 67 ಪುರುಷ ಮತ್ತು 52 ಮಹಿಳೆಯರಿದ್ದಾರೆ. 85 ಪದಕಗಳ ವಿಭಾಗಗಳಲ್ಲಿ ನಾವು ಸ್ಪರ್ಧಿಸಲಿದ್ದೇವೆ' ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರೊಂದಿಗೆ ಮಂಗಳವಾರ ನಡೆದ ವರ್ಚುವಲ್ ಸಂವಾದದಲ್ಲಿ ಬಾತ್ರಾ ಮಾಹಿತಿ ನೀಡಿದರು.

'ಭಾರತದಿಂದ 90 ಮಂದಿಯ ಅಥ್ಲೀಟ್‌ಗಳು ಮತ್ತು ಅಧಿಕಾರಿಗಳನ್ನೊಳಗೊಂಡ ಮೊದಲ ತಂಡವು ಇದೇ 17ರಂದು ಟೋಕಿಯೊಗೆ ಪ್ರಯಾಣ ಬೆಳೆಸಲಿದೆ' ಎಂದು ಬಾತ್ರಾ ನುಡಿದರು.

ಟೋಕಿಯೊಗೆ ಸೇಲಿಂಗ್ ತಂಡ: ಭಾರತದ ಸೇಲಿಂಗ್ ಪಟುಗಳ ತಂಡವು ಮಂಗಳವಾರ ಟೋಕಿಯೊಗೆ ಕಾಲಿಟ್ಟಿತು. ಇದರೊಂದಿಗೆ ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲು ತೆರಳಿದ ದೇಶದ ಮೊದಲ ತಂಡ ಎನಿಸಿಕೊಂಡಿತು.

ಕರ್ನಾಟಕದ ಗಣಪತಿ ಚೆಂಗಪ್ಪ, ವರುಣ್ ಥಕ್ಕರ್, ವಿಷ್ಣು ಸರವಣನ್ ಮತ್ತು ನೇತ್ರಾ ಕುಮನನ್ ಮತ್ತು ಕೋಚ್‌ಗಳನ್ನೊಳಗೊಂಡ ತಂಡವು ಜಪಾನ್‌ನ ಹನೆಡಾ ವಿಮಾನ ನಿಲ್ದಾಣ ತಲುಪಿದೆ.

72198 21111 | BAJAJ FINANCE LTD - AF

*Terms and Conditions apply. Down payment for Pulsar 150 Single Disc variant. DCC charges and processing fees extra as applicable. Finance at sole discretion of the financer. Bajaj Auto reserves the right to withdraw any or all offers without prior notice.

Scan to know more

Authorised Dealers for Bajaj Auto Ltd.: Bangalore • Bommanahalli AMBA BAJAJ: 9535411100 • HSR Layout AMBA BAJAJ: 8884333732 • Sarjapur AMBA BAJAJ: 7406688884• BTM Layout AMBA BAJAJ: 7441690413• Madiwala AMBA BAJAJ: 9945000048• Electronic City AMBA BAJAJ: 8971711118• Nayandahalli Mysore Rd RV BAJAJ: 7259186162 • Chandra Layout Moodalapalya RV BAJAJ: 7353763301 • Kengeri RV BAJAJ: 7353763305 • Giri Nagar RV BAJAJ: 6361211128• Vijaynagar RV BAJAJ: 7353763307• Banashankari POPULAR BAJAJ: 9945111874 • Rajajinagar POPULAR BAJAJ : 6366554001 • Koramangala POPULAR BAJAJ: 9845589079 • Konankunte POPULAR BAJAJ: 7760967834 • Ramnagara POPULAR BAJAJ: 7760967832 • Kanakpura POPULAR BAJAJ: 9972533890 • POPULAR BAJAJ Channapatna 9901947666 • POPULAR BAJAJ Uttarahalli 9972095890 • POPULAR BAJAJ Gottigere 7760996891 • Mekhri Circle KALYANI BAJAJ: 8884413595 • Yelahanka KALYANI BAJAJ: 9449849618 • Mathikere KALYANI BAJAJ: 8884430126 • Chickbellapur KALYANI BAJAJ: 8884413594 • Devenhalli KALYANI BAJAJ: 9449849624 • Marathahalli KHIVRAJ BAJAJ: 9036091986 • Kasturba Rd KHIVRAJ BAJAJ: 9035060140 • Indiranagar KHIVRAJ BAJAJ: 9035060139 • Hennur KHIVRAJ BAJAJ: 9742155225 • Banaswadi KHIVRAJ BAJAJ: 9035060147 • Hesargatta KHIVRAJ BAJAJ: 9035060148 • Whitefield KHIVRAJ BAJAJ: 8618840097 • Hoskote KHIVRAJ BAJAJ: 9035005075 • Magadi Rd ANANT BAJAJ: 9902934455 • Laggere ANANT BAJAJ: 7022984402 • Hubli CHANNAMMA BAJAJ: 9620614106 • Arvind Nagar branch 8884771881 Gadag CHANNAMMA BAJAJ: 9620747153 • Sirsi CHANNAMMA BAJAJ: 8884645609 • Haveri CHANNAMMA BAJAJ: 8151884422 • Belgaum JAGAJAMPI BAJAJ: 988690116, JAGASHREE BAJAJ: 7349773962. • Chikodi JAGAJAMPI BAJAJ: 9449736406 • Gokak JAGAJAMPI BAJAJ: 7022425616 • Bellary AADI BAJAJ: 9606050246• Raichur SHREE BALAJI AUTOMOBILES: 9964626515• Koppal I A BAJAJ: 8123712938• Hospet AADI BAJAJ:9731361414 • Hagaribommanahalli AADI BAJAJ: 9900363010• SIRUGUPPA AADI BAJAJ: 9110217558 • Bijapur BIJJARGI BAJAJ (BLDE Road): 6362877793 •(Bus Stand Road) 8884000970 • Bagalkot BIJJARGI BIKES: 9148448324 • Sindagi BIJJARGI BAJAJ 8861946802• Bidar SINDOL BAJAJ 9513226555 • Chitradurga BTV BAJAJ: Ph: 7349247162 • Hiriyur BTV BAJAJ: Ph: 7349247168 • Challakere BTV BAJAJ 8296199371 • Davangere JAIN BAJAJ: Ph: 9343636805 • Harihara JAIN BAJAJ: Ph: 9632300444 • Gulbarga VKG BAJAJ: 9632018700 • Yadgir VKG BAJAJ: 8722182492 • Humnabad VKG BAJAJ 8050889160 • Shimoga SUPREME BAJAJ: 8105000999 • Sagar SUPREME BAJAJ: • Bhadravathi SUPREME BAJAJ: 9008352799 • Chikkamagalur SUPREME BAJAJ: 9008379799 • Tarikere SUPREME BAJAJ: 9008569799 • Hosanagar SUPREME BAJAJ 9731767799 • Anandpura SUPREME BAJAJ 9663501499 • Hassan ARPITA BAJAJ: 9902439255, Arsikere ARPITA BAJAJ: 9964094535 • Kolar SHREE KAMAKSHI BAJAJ: 9845784351 • Malur SHREE KAMAKSHI BAJAJ: 9665524409 • KGF SHREE KAMAKSHI BAJAJ: 9900235758 • Mulbagalu SHREE KAMAKSHI BAJAJ: 8892616586 • BANGARAPET SHREE KAMAKSHI BAJAJ: 8970688361 • Tumkur AKSHAYA BAJAJ: 7259040253• Tiptur AKSHAYA BAJAJ: 7259040226 • Sira AKSHAYA BAJAJ: 7259040328 • Kunigal AKSHAYA BAJAJ: 7338662706 • Madhugiri AKSHAYA BAJAJ: 7338662681 • BH Road: 7338662687 • Mysore Saraswathipuram POPULAR BAJAJ: 9148101113 • Chamarajapuram POPULAR BAJAJ: 7259786271 • Vontikoppal STAR BAJAJ: 9739549252 • Mandya POPULAR BAJAJ: 7760967900 • Chamarajanagara PATEL BAJAJ: 8722067560 • Hunsur STAR BAJAJ: 9916833072 • Kushalnagar POPULAR BAJAJ: 7259786276 • Nanjangud STAR BAJAJ: 9742100252 • NR Mohalla STAR BAJAJ: 8095777706 • Balmatta SUPREME BAJAJ: 9606973192 • Kuloor SUPREME BAJAJ: 9606237547 • Surathkal SUPREME BAJAJ: 9606973193 • Thokottu 9606702429 • B C Road 7618715273 • Bidar SINDOL BAJAJ 9513226555 • UDUPI SAANVI BAJAJ 7259678777